ನಿಷ್ಕಾಮ ... ಮಾಡುವಂ
ಇಡಿಯ ಬಾಳು ... ಳ್ಳೈವರು
ರಂಗಬಹಿರಂಗಗ... ಸಹಕ
ಮುಂತಾದವುಗಳನ್ನು

ತ್ರೈಮಾಸಿಕ








ಸಿದ್ಧಗಂಗಾ

ಜಾತ್ರಾ ವಿಶೇಷಾಂಕ

1974



ತ್ರೈಮಾಸಿಕ

ಸಿದ್ಧಗಂಗಾ

ಜಾತ್ರಾ ವಿಶೇಷಾಂಕ

1974











'ನಿಷ್ಕಾಮ ... ಾಡುವಂ
ಇಡಿಯ ಬಾಳು ಯ... ಶೈವರು
ರಂಗಬಹಿರಂಗಗ... ಳ ... ಸಹಕ
... ಕ್ಕುಂತಾದವುಗಳನ್ನು

ಸಿದ್ಧಗಂಗಾ

(ತ್ರೈಮಾಸಿಕ)

ಸಂಪುಟ - ೧೦ ಸಂಚಿಕೆ - ೧

ವೈಭವಪೂರ್ಣ ಶ್ರೀ ತೋಂಟದ ಸಿದ್ಧಲಿಂಗೇಶ್ವರ

ಜಾತ್ರಾ ವಿಶೇಷಾಂಕ

ಮತ್ತು

೧೯ನೆಯ ವೀರಶೈವ ಮಹಾಸಭಾ ಸ್ಮಾರಕಾಂಕ.

ಫೆಬ್ರುವರಿ

೧೯೭೪

ಸಿದ್ಧಗಂಗಾ [ತ್ರೈಮಾಸಿಕ

ಸಂಪಾದಕ ಮಂಡಳಿ :

ಚನ್ನಪ್ಪ ಎರೇಸೀಮೆ
(ಪ್ರಧಾನ ಸಂಪಾದಕ)
ಹಿ. ಚಿ. ಶಾಂತವೀರಯ್ಯ, ಎಂ. ಎ. ಬಿ.ಇಡಿ,
ಟಿ. ಆರ್. ಮಹದೇವಯ್ಯ, ಎಂ ಎ.
ಆರ್. ರಾಚಪ್ಪ, ಎಂ. ಎ.
ಪಿ. ಆರ್. ತಿಪ್ಪೇಸ್ವಾಮಿ, ಬಿ. ಎ.
ಎಂ. ರೇಣುಕಾರಾಧ್ಯ.



ಪ್ರಕಾಶಕರು :

ಹಳೆಯ ವಿದ್ಯಾರ್ಥಿಗಳ ಸಂಘ,
ಶ್ರೀ ಸಿದ್ಧಗಂಗಾ ಕ್ಷೇತ್ರ,
ಪರವಾಗಿ,
ಶ್ರೀ ಹೆಚ್. ಬಿ. ಗಂಗಾಧರಯ್ಯ, ಬಿ. ಎಸ್‌ಸಿ. ಬಿ. ಇಡಿ.



ಮುದ್ರಕರು :

ಶ್ರೀಮತಿ ಹೆಚ್. ಸಿ. ಗೌರಮ್ಮ
ಶ್ರೀ ನಿರಂಜನ ಪ್ರಿಂಟರ್ಸ್,
ಶ್ರೀ ಶಿವಕುಮಾರ ಕೃಪಾ,
411, 6ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10.



ಪತ್ರಿಕೆ ಪ್ರಕಟವಾಗುವ ಸ್ಥಳ :
ಶ್ರೀ ಸಿದ್ಧಗಂಗಾ ಕ್ಷೇತ್ರ

ಪತ್ರಿಕೆ ಹೊ
ಮಾರ್ಚ್, ಜೂನ್, ಸ

ಚಂದಾ ವಿವರ :

ಆಜೀವ ಸದಸ್ಯತ್ವಕ್ಕೆ	101	00
ಬಿಡಿ ಸಂಚಿಕೆ	1	50
ವಾರ್ಷಿಕ ಚಂದಾ	6	00

ಬಿಡಿ ಸಂಚಿಕೆಗಳಿಗೆ ಅಂಚೆವೆಚ್ಚ ಪ್ರತ್ಯೇಕ
ಚಂದಾದಾರರಿಗೆ ಅಂಚೆವೆಚ್ಚವಿಲ್ಲ.



ಮಾನ್ಯ ಚಂದಾದಾರರಲ್ಲಿ ವಿನಂತಿ,

ಈ ಸಾಲಿನ ಚಂದಾ ಹಣ ಕೊಡಬೇಕಾದವರು M. O. ಮೂಲಕ,
ಪ್ರಕಾಶಕರು,
ಸಿದ್ಧಗಂಗಾ (ತ್ರೈಮಾಸಿಕ,)
ಸಿದ್ಧಗಂಗಾಮಠ
ತುಮಕೂರು ಜಿಲ್ಲಾ,
ಇವರಿಗೆ ಕಳುಹಿಸಿ ಪತ್ರಿಕೆಯ ಸರ್ವತೋಮುಖ ಪ್ರಗತಿಗೆ ನೆರವಾಗಬೇಕಾಗಿ ಪ್ರಾರ್ಥನೆ.

ರಾಜ್ಯ ಸರಕಾರದ ವಿದ್ಯಾ ಇಲಾಖೆಯ ಡೈರೆಕ್ಟರ್ ಅವರು CL 417-4/65-66, ತಾರೀಖು 29-4-66 ನೆಯ ಆರ್ಡರ್ ಪ್ರಕಾರ ಪ್ರಾಥಮಿಕಶಾಲೆ, ಪ್ರೌಢಶಿಕ್ಷಣ ಶಾಲೆಗಳು, ಹಾಗೂ ಸಾರ್ವಜನಿಕ ಗ್ರಂಥ ಭಂಡಾರಗಳು ಕೊಂಡುಕೊಳ್ಳಬಹುದೆಂದು ಆಜ್ಞೆ ಹೊರಡಿಸಿದ್ದಾರೆ.



ಈ ಸಂಚಿಕೆಯಲ್ಲಿ



*ಶ್ರೀ ಸಿದ್ಧಗಂಗೆಯು ಶ್ರೀಚರಣ

— ಡಾ|| ಜಿ. ಎಸ್‌ ಕೆ ಹೊ

ಹರನ ಕರುಣೋದಯದ ತೆರದಲಿ ಬೆಳಗು ತೆರೆಯುವ ಹೊತ್ತಿಗೆ ।
ವೇದ ಘೋಷದ ದಿವ್ಯ ಲಹರಿಯು ಮನವ ತೊಳೆಯಲು ಮೆಲ್ಲಗೆ ।
ಬರುವ ಶ್ರೀಗುರು ಪಾದುಕೆಯ ದನಿ ಅನುರಣಿತವಾಗಲು ಮೌನಕೆ ।
ಸಿದ್ಧಗಂಗೆಯ ನೆಲವು ಜಲವೂ ನಮಿಸಿ ನಿಲುವುದು ಸುಮ್ಮಗೆ ||೧||

ಬೆಟ್ಟ ಬಂಡೆಯ ನಡುವೆ ಗಿಡ ಮರ ಹೂವನೆತ್ತಿರೆ ಪೂಜೆಗೆ ।
ದೇಗುಲದ ಪೂಜಾರತಿಯ ಗಂಟೆಯ ಮೊಳಗು ಮುಟ್ಟಲು ಬಾನಿಗೆ ।
ಧೂಪಗಂಧವು ಮಂದಮಂದಾನಿಲನ ಜೊತೆಯೊಳು ಮನಸಿಗೆ ।
ಸಂಭ್ರಮವನುಕ್ಕಿಸೆ ಬೆಳಗು ಇಳಿವುದು ಸಿದ್ಧಗಂಗೆಯ ಕ್ಷೇತ್ರಕೆ । ||೨||


ಇಲ್ಲಿ ಇಲ್ಲ ಪವಾಡದದ್ಭುತ ಅಥವ ಉತ್ಸವದಬ್ಬರ ।
ಮುಡಿಯನೆತ್ತಿದೆ ಸರಳ ಸಾಧಾರಣದ ಬದುಕಿನ ಗೋಪುರ ।
ಅದರ ಮೇಲಿದೆ ತ್ಯಾಗ ಧ್ವಜ ಕೈಬೀಸಿ ಕರೆವುದು ಪಥಿಕರ ।
ಪರಮ ನಿರಪೇಕ್ಷೆಯಲಿ ದಿನವೂ ಸೇವೆಗಾಗಿದೆ ಸರ್ವರ । ||೩||

ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ ಲಕ್ಷ ಜನಗಳ ಪೊರೆದಿದೆ ।
ತೀರ್ಥವಾಗಿದೆ ಭಕ್ತರಿಗೆ ಜೊತೆಗೇ ಸ್ಫೂರ್ತಿಯಾಗಿದೆ ಬುದ್ಧಿಗೆ ।
ಬಂದ ಹಣತೆಗೆ ಎಣ್ಣೆ-ಬತ್ತಿಯ-ದೀಪ್ತಿ ದಾನವ ಮಾಡಿದೆ ।
ರಕ್ಷೆಯಾಗಿದೆ ಮುಗಿಲನೇರಿದ ಎಷ್ಟೊ ರೆಕ್ಕೆಯ ಹಾದಿಗೆ ॥ ||೪||

ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ ।
ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ ।
ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ ।
ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ ॥ ||೫||

*ಸಮರ್ಪಣೆ ಗ್ರಂಥದಿಂದ.


'ನಿಷ್ಕಾಮ ... ಾಡುವಂ
ಇಡಿಯ ಬಾಳು ಯ... ಶೈವರು
ರಂಗಬಹಿರಂಗಗ... ಸಹಕ
...ಮುಂತಾದವುಗಳನ್ನು



ಹರದನಹಳ್ಳಿ ಶೂನ್ಯ ಸಿಂಹಾಸನಾಧೀಶ್ವರರಾದ ತಮ್ಮ ಪೂಜ್ಯ ಗುರು ಪರಂಪರೆಯ ಗೋಸಲ ಸಿದ್ಧೇಶ್ವರರು, ದಿವ್ಯಾನಂದರು, ಗುಬ್ಬಿಯ ಚೆನ್ನಬಸವೇಶ್ವರರೇ ಮೊದಲಾದವರ ತಪೋಭೂಮಿಯಾದ ಶ್ರೀ ಸಿದ್ಧಗಂಗಾ ಕ್ಷೇತ್ರಕ್ಕೆ 15 ನೇ ಶತಮಾನದಲ್ಲಿ ದಯಮಾಡಿಸಿ ದೀರ್ಘ ಕಾಲ ಶಿವಯೋಗಾನುಷ್ಠಾನ ಮಾಡಿ ಗಂಗೋದ್ಭವ ಪವಾಡವನ್ನೆಸಗಿ ಭಕ್ತೋದ್ಧರಣ ಕ್ರಿಯಾಮುಖದಿಂದ ಎಡೆಯೂರಿಗೆ ದಯಮಾಡಿಸಿ ಅಲ್ಲಿ ಶಿವಯೋಗ ಸಮಾಧಿಸ್ಥರಾದ ಶ್ರೀ ಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರ ಮಹಾ ಯತೀಶ್ವರರು



ಶ್ರೀ ಕ್ಷೇತ್ರಾಧಿಪತಿ ನಿರಂಜನ ತೋಂಟದ ಸಿದ್ಧಲಿಂಗೇಶ್ವರರ ವೈಭವಪೂರ್ಣ ರಥೋತ್ಸವ (1909 ರಿಂದ ಶ್ರೀ ಮ. ನಿ. ಪ್ರ. ಶ್ರೀ ಉದ್ಧಾನ ಶಿವಯೋಗಿಗಳವರು ಕ್ಷೇತ್ರಾಧಿಪತಿಗಳಾದ ದಿನದಿಂದ ಮೊದಲ್ಗೊಂಡು) ಮಹಾ ಶಿವರಾತ್ರಿಯ ಸಮಯದಲ್ಲಿ ಆಚರಿಸಲಾಗುತ್ತಿರುವ ಭಕ್ತಿ ಪ್ರತೀಕ



ಪೂಜ್ಯ ಶ್ರೀ ಶ್ರೀಗಳವರು ಇತ್ತೀಚೆಗೆ ಬೆಂಗಳೂರಿನಲ್ಲಿ ಸಮಾವೇಶಗೊಂಡಿದ್ದ ವಿಜೃಂಭಣೆಯ ತರಳಬಾಳು ಹುಣ್ಣಿಮೆಯ ಮಹೋತ್ಸವ ಸಂದರ್ಭದಲ್ಲಿ ಅಖಿಲ ಭಾರತ ಮಠಾಧಿಪತಿಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವುದು. ಚಿತ್ರದಲ್ಲಿ ಉಪಸ್ಥಿತರಿರುವ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರುಗಳು ಇತರ ಹರ-ಚರ-ಗುರುಮೂರ್ತಿಗಳನ್ನೂ ಕಾಣಬಹುದು

ತುಮಕೂರಿನಲ್ಲಿ ಪ್ರಥಮ ಬಾರಿಗೆ ನಾಲ್ಕನೆ ರೊಟೇರಿಯನ್ ಜಿಲ್ಲಾ ಸಮ್ಮೇಳನವು ಡಿಸೆಂಬರ್ 7 ರಂದು ನಡೆದಾಗ ಶ್ರೀ ಸಿದ್ಧಗಂಗಾ ಕ್ಷೇತ್ರಾಧಿಪತಿಗಳಾದ ಡಾ|| ಶ್ರೀ ಶ್ರೀ ಶಿವಕುಮಾರಸ್ವಾಮಿಗಳವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಸಮ್ಮೇಳನಾಧ್ಯಕ್ಷ ಶ್ರೀ ಎನ್. ಎಲ್. ಅಮಿರ್ ವಾಸಿಯಾ, ತುಮಕೂರು ರೋಟರಿ ಕ್ಲಬ್ ಅಧ್ಯಕ್ಷ ಶ್ರೀ ವೆಂಕಟನಂಜಪ್ಪ, ರೋಟರಿ ಗವರ್ನರ್ ಶ್ರೀ ಎಂ. ಚಿಕ್ಕಣ್ಣಯ್ಯಪ್ಪ ಮತ್ತು ಮುಖ್ಯ ಅತಿಥಿ ಹಾಗೂ ರೋಟರಿ ಅಂತರರಾಷ್ಟ್ರೀಯ ಅಧ್ಯಕ್ಷರ ಪ್ರತಿನಿಧಿ ಥಾಯ್ಲೆಂಡಿನ ಬಿಟಾಯ್ ರಟ್‌ಕುಲ್‌ರನ್ನು ನೋಡಬಹುದು



[illegible] ಳೂರಿನಲ್ಲಿ 'ನಿಷ್ಕಾಮ [illegible] ನಾಡುವಂತ [illegible] ಖಿಲ ಭಾರತ ಇಡಿಯ ಬಾಳು ಯ [illegible] ಶೈವರು [illegible] ದೃಶ್ಯಗಳು ರಂಗಬಹಿರಂಗಗ [illegible] ಸಹಕ [illegible] ಮುಂತಾದವುಗಳನ್ನು [illegible] ಯುತ್ತಿ [illegible] ನ್ಯ ರಾಜ್ಯಪಾಲ ಶ್ರೀ [illegible] ಲಾಲ್ ಸುಖಾಡಿಯಾ ಅವರನ್ನು 18 ನೇ ಅಖಿಲ [illegible] ತ ವೀರಶೈವ ಸಭೆಯ ಅಧ್ಯಕ್ಷರಾದ ಪೂಜ್ಯ ಶ್ರೀ [illegible] ಶ್ರೀಗಳವರನ್ನು 19 ನೇ ಅಧಿವೇಶನದ ನೂತನ ಅಧ್ಯಕ್ಷ ಶ್ರೀ ಜೆ. ಬಿ. ಮಲ್ಲಾರಾಧ್ಯರವರನ್ನು ಮತ್ತು ರಾಜ್ಯದ ಮುಖ್ಯಮಂತ್ರಿ ಮಾನ್ಯ ಶ್ರೀ ಡಿ. ದೇವರಾಜ ಅರಸ್‌ರವರು ಸ್ಮರಣಸಂಚಿಕೆಯನು, ಬಿಡುಗಡೆಮಾಡಿ ಮಾತನಾಡುತ್ತಿರುವುದನ್ನು ಕಾಣಬಹುದು



ಯುವಜನ ಸಮ್ಮೇಳವನ್ನು ಉದ್ಘಾಟಿಸುತ್ತಿರುವ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರನ್ನು ಉಪಸ್ಥಿತರಿರುವ ಶ್ರೀಯುತ ವಿಶ್ವನಾಥ ರೆಡ್ಡಿ ಮುದ್ನಾಳ್ (ಎಂ. ಎಲ್. ಎ.) ರವರನ್ನು, ಅಧ್ಯಕ್ಷತೆ ವಹಿಸಿದ್ದ ಶ್ರೀ ಶರಣ ಬಸಪ್ಪ ಅಪ್ಪ ಅವರನ್ನು ಮತ್ತು ನೂತನ ಅಧ್ಯಕ್ಷ ಶ್ರೀ ಜೆ. ಬಿ. ಮಲ್ಲಾರಾಧ್ಯ ಅವರನ್ನು ಕಾಣಬಹುದು

ಮಹಿಳಾ ಗೋಷ್ಠಿಯ ಅಧ್ಯಕ್ಷಣೆ ಶ್ರೀಮತಿ ಎಸ್. ಎಸ್. ಮಳೀಮಠ ರವರು ಮಾತನಾಡುತ್ತಿರುವ ಸಂದರ್ಭದಲ್ಲಿ ಉಪಸ್ಥಿತರಿರುವ ಗೋಷ್ಠಿಯನ್ನು ಉದ್ಘಾಟಿಸಿದ ವಿಧಾನಸಭಾ ಅಧ್ಯಕ್ಷಣಿಯರಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮತ್ತು ನೂತನ ಅಧ್ಯಕ್ಷರಾದ ಶ್ರೀ ಜೆ. ಬಿ. ಮಲ್ಲಾರಾಧ್ಯ ಹಾಗೂ ಇತರರನ್ನೂ ಕಾಣಬಹುದು





[illegible] ಗ ಸನ [illegible]
ವಿರುವ ಬೆಳ್ಳಿಯ [illegible]
ವನ್ನು ಅರ್ಪಿಸುತ್ತಿ[illegible]
ವುದು. ಸಂಘದ ಅಧ್ಯಕ್ಷ[illegible]
ಶ್ರೀ ದೊಡ್ಡಪ್ಪ ಅಪ್ಪ
ಅವರನ್ನು ಕಾಣ
ಬಹುದು



ಪೂಜ್ಯ ಶ್ರೀ ಶ್ರೀಗಳವರು ಬೆಂಗಳೂರು ನಗರದಲ್ಲಿ ಜನಪ್ರಿಯತೆ ಗಳಿಸಿ ಕಿಕ್ಕಿರಿದು ಪ್ರದರ್ಶಿಸಲ್ಪಡುತ್ತಿರುವ ಮಾಸ್ಟರ್ ಹಿರಣ್ಣಯ್ಯ ಮಿತ್ರಮಂಡಲಿಯವರ 'ನಡು ಬೀದಿ ನಾರಾಯಣ' 203 ನೇ ನಾಟಕದ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡುತ್ತಿರುವುದು. ಮಿತ್ರಮಂಡಲಿಯ ಮಾಲೀಕರು ಮತ್ತು ನಾಟಕದಲ್ಲಿ ಶೀರ್ಷರೂಪು ಪಾತ್ರವಹಿಸುವ ಮಾಸ್ಟರ್ ಶ್ರೀ ಹಿರಣ್ಣಯ್ಯನವರನ್ನೂ ಕಾಣಬಹುದು



ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಜಾತ್ರೆಯ ಅಂಗವಾಗಿ ಏರ್ಪಡಿಸಿದ್ದ ವ್ಯವಸಾಯ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದ ಉದ್ಘಾಟನೆಯನ್ನು ಪೂಜ್ಯ ಶ್ರೀ ಶ್ರೀಗಳವರ ದಿವ್ಯ ಸಮ್ಮುಖದಲ್ಲಿ ರಾಜ್ಯದ ಆರೋಗ್ಯ ಮಂತ್ರಿಗಳಾದ ಶ್ರೀ ಹೆಚ್. ಸಿದ್ಧವೀರಪ್ಪನವರು ನೆರವೇರಿಸುತ್ತಿರುವುದು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಮಲ್ಲಣ್ಣ, ಎಂ.ಪಿ.. ವಸ್ತು ಪ್ರದರ್ಶನದ ಕಾರ್ಯದರ್ಶಿಗಳಾದ ಶ್ರೀ ಡಿ. ಚಂದ್ರಶೇಖರಯ್ಯ ಮತ್ತು ಸದಸ್ಯರುಗಳನ್ನೂ ಕಾಣಬಹುದು

'ನಿಷ್ಕಾಮ [illegible] ಮಾಡುವಂ[illegible]
ಇಡಿಯ ಬಾಳು ಯ[illegible] ಶೈವರು
ರಂಗಬಹಿರಂಗಗ[illegible]
[illegible] ಸಹಕ[illegible]

ಶ್ರೀವಾಣಿ

[...ಮುಂತಾದವುಗಳನ್ನು [illegible] 6-2-74ರವರೆಗೆ ಅತ್ಯದ್ಭುತವಾಗಿ ಸುಭಾಸನಗರದ ಮೈದಾನದಲ್ಲಿ ನಿರ್ಮಿಸಿದ 'ಕ್ರಾಂತಿಕವಿ [illegible] ದಲ್ಲಿ "ತರಳಬಾಳು ಹುಣ್ಣಿಮೆ" ಮಹೋತ್ಸವವು ಸಿರಿಗೆರೆಯ ಜಗದ್ಗುರು ಶ್ರೀಶ್ರೀ ಶಿವ[illegible]ಕುಮಾರ ಶಿವಾಚಾರ್ಯಸ್ವಾಮಿಗಳವರ ಸಮ್ಮುಖದಲ್ಲಿ ನೆರವೇರಿತಷ್ಟೆ. ಏತತ್ಸಮಯದಲ್ಲಿ ತಾ|| 4-2-74ನೆಯ ಸೋಮವಾ[illegible]ರ ಮಠಾಧಿಪತಿಗಳ ರಾಷ್ಟ್ರೀಯ ಸಮ್ಮೇಲನವೊಂದನ್ನು ಸಂಘಟಿತಗೊಳಿಸಲಾಗಿತ್ತಷ್ಟೆ. ವಿಖ್ಯಾತ ತಜ್ಞ ಶ್ರೀ ಆರ್. ಆರ್. ದಿವಾಕರ ಅವರಿಂದ ಉದ್ಘಾಟಿತವಾದ ಈ ಮಹಾಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದ ಶ್ರೀ ಶ್ರೀ ( )ಗಳವರು ಅಪ್ಪಣೆ ಕೊಡಿಸಿದ ಭಾಷಣದ ಸಾರ ಸಂಗ್ರಹವನ್ನಿಲ್ಲಿ ಕೊಡಲಾಗಿದೆ.]

ಮಾನವನ ಅಜ್ಞಾನವನ್ನು ಹೋಗಲಾಡಿಸಿ ಅವನಲ್ಲಿ ಸುಜ್ಞಾನವನ್ನುಂಟುಮಾಡಿ ಅಭ್ಯುದಯ ನಿಃಶ್ರೇಯಸ್ಸುಗಳನ್ನುಂಟುಮಾಡುವುದು ಧರ್ಮದ ಮುಖ್ಯ ಲಕ್ಷಣ. ಧರ್ಮವು ಮನುಷ್ಯನನ್ನು ಪರಸ್ಪರ ಕೂಡಿಬಾಳುವಂತೆ ಮಾಡುವ ಬಂಧುರ ಸೂತ್ರವಿದ್ದಹಾಗೆ. ರಾಷ್ಟ್ರಧರ್ಮಕ್ಕೆ ಪೋಷಕವಾಗುವಂತೆ ಪರಸ್ಪರ ಕೂಡಿಬಾಳುವುದು, ಆಸ್ತಿಕ್ಯಭಾವವನ್ನು ಹೊಂದಿ ಶ್ರದ್ಧಾಭಕ್ತಿ ವಿಶ್ವಾಸಗಳಿಂದ ಪರಮಾತ್ಮನನ್ನು ನಂಬಿ, ನಾವೆಲ್ಲ ಪರಮಾತ್ಮನ ಮಕ್ಕಳು ಎಂಬ ವಿಶ್ವಾತ್ಮ ಭಾವಕ್ಕೆ ತಕ್ಕಹಾಗೆ ಜನತೆಯನ್ನು ರೂಪಿಸುವುದು ಮಠಾಧಿಪತಿಗಳ ಕರ್ತವ್ಯ. ಈ ಕರ್ತವ್ಯವನ್ನು ಮಠಾಧಿಪತಿಗಳು ಸಂಘಟಿತರಾಗಿ ನಿರ್ವಹಿಸಬೇಕಾದ ಕಾಲವೀಗ ಅತ್ಯಂತ ಮುಖ್ಯವಾಗಿದೆ. ಮನುಷ್ಯನಿಗೆ ಸುಖಶಾಂತಿಗಳು ಲಭ್ಯವಾಗಿ ಅವನ ಜೀವನ ಸಮೃದ್ಧಗೊಳ್ಳಬೇಕಾದರೆ ಮುಖ್ಯವಾಗಿ ಬೇಕಾದುದು ಆರ್ಥಿಕ ಬಲವಲ್ಲ; ಆಧ್ಯಾತ್ಮಿಕ ಬಲ, ನೈತಿಕ ಬೆಂಬಲ ಮತ್ತು ಧಾರ್ಮಿಕ ಶ್ರದ್ಧೆ. ಇಂದು ಸಮಾಜದಲ್ಲಿ ಅವು ಶಿಥಿಲಗೊಳ್ಳುತ್ತಿವೆ. ಹೀಗೆ ಶಿಥಿಲಗೊಳ್ಳುತ್ತಿರುವಾಗಲೇ ಅವಕ್ಕೆ ತಕ್ಕ ಪ್ರತೀಕಾರೋಪಾಯ ಕಂಡು ಜನತೆಯನ್ನು ತಿದ್ದಿ ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡುವ ಹೊಣೆಗಾರಿಕೆ ಮಠಾಧಿಪತಿಗಳ ಮೇಲಿದೆ. ರಾಜಕೀಯ ಪೈಪೋಟಿ, ಅಧಿಕಾರ ದಾಹಗಳನ್ನು ಬೆನ್ನಟ್ಟಿ ಜನತೆ ಇಂದು ತಮ್ಮ ಹೃದಯ ಶಕ್ತಿಯನ್ನು ಬೆಳಸಿಕೊಳ್ಳುವತ್ತ ಉದಾಸೀನ ತೋರಿಸುತ್ತಿರುವಂತೆ ಭಾಸವಾಗುತ್ತಿದೆ. ಇದು ಸಲ್ಲದು. ರಾಷ್ಟ್ರದ ಅಭ್ಯುದಯ ಶ್ರೇಯಸ್ಸುಗಳನ್ನು ಸಾಧಿಸಬೇಕೆನ್ನುವವರು ನೈತಿಕ ಮೂಲ್ಯಗಳನ್ನು ಕಾಪಾಡಿಕೊಂಡು, ಪರಮಾತ್ಮನಲ್ಲಿ ಅಪಾರ ನಂಬಿಕೆಯನ್ನಿಟ್ಟು ಸಕಲ ಜೀವಾತ್ಮರಿಗೆ ಲೇಸಾಗುವಂತಹ ಕಾರ್ಯ ಚಟುವಟಿಕೆಯಲ್ಲಿ ನಿರತರಾಗಬೇಕು. ಭಾರತ ಸಹಸ್ರ ಸಹಸ್ರ ವರ್ಷಗಳಿಂದ ತನ್ನ ಅಪಾರ ಆಧ್ಯಾತ್ಮಿಕ ಶಕ್ತಿಯ ಬಲದಿಂದ ಜಾಗತಿಕ ಶ್ರೇಯಸ್ಸನ್ನು ಗಳಿಸಿದೆ. ಇಂದು ವಿಶ್ವಕಲ್ಯಾಣವನ್ನು ವಿಶ್ವದ ಸಮಸ್ತ ರಾಷ್ಟ್ರಗಳೂ ಆಡುತ್ತಿವೆ. ವಿಶ್ವದ ಕಲ್ಯಾಣವಾಗಬೇಕಾದರೆ ಆಧ್ಯಾತ್ಮಿಕ ಬಲದಿಂದಲೇ ಸಾಧ್ಯವಲ್ಲದೆ ತಮೋರಜೋಗುಣದಿಂದಲ್ಲ. ಶಸ್ತ್ರಹಿಡಿದು ಜನತೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವ ಕಾಲ ಮುಗಿಯಿತು. ಮಾನಸಿಕ ಪರಿವರ್ತನೆ ಸಕಲಜೀವಾತ್ಮರಲ್ಲಿ ತನ್ನನ್ನು ಕಾಣುವ ವಿಶ್ವ ವಿಶಾಲ ಭಾವವನ್ನು ಜನತೆಯಲ್ಲಿ ಬೆಳೆಸಿದಲ್ಲದೆ ವಿಶ್ವಕಲ್ಯಾಣವಾಗದು. ಇದಕ್ಕಾಗಿ ಆಧ್ಯಾತ್ಮಿಕ ತಳಹದಿಯಮೇಲೆ ಮಾನವ ಜನಾಂಗವನ್ನು ರೂಪಿಸಬೇಕು. ಈ ಕಾರ್ಯವನ್ನು ಸರ್ವಧರ್ಮದ ಮಠಾಧೀಶರು ಒಂದೆಡೆ ಕಲೆತು ರಚನಾತ್ಮಕ ಕಾರ್ಯಕ್ರಮಗಳನ್ನು ಯೋಜನಾಬದ್ಧಗೊಳಿಸಿದರೆ ಸಾಧ್ಯ. ಶ್ರೀ ಶ್ರೀ ತರಳಬಾಳು ಜಗದ್ಗುರುಗಳವರು ಈ ತರಳಬಾಳು ಹುಣ್ಣಿಮೆಯ ಮಹೋತ್ಸವ ಸಂದರ್ಭದಲ್ಲಿ ಈ ಕಾರ್ಯಕ್ರಮಕ್ಕೆ ಅಂಕುರಾರ್ಪಣೆ ಮಾಡಿರುವುದು ತುಂಬಾ ಸಂತೋಷವುಂಟುಮಾಡುವ ವಿಚಾರ. ವಿಶ್ವವಿಖ್ಯಾತ ತಜ್ಞರೂ, ರಾಜಕಾರಣಪಟುಗಳೂ, ಪತ್ರಿಕಾವ್ಯಾವಸಾಯಿಗಳೂ ಆದ ಶ್ರೀ ರಂಗನಾಥ ದಿವಾಕರರು ಈ ಸಭೆಯನ್ನು ಉದ್ಘಾಟಿಸಿ ಶೋಭೆಯುಂಟುಮಾಡಿದ್ದಾರೆ. ಈ ಸಮ್ಮೇಲನ ಉತ್ತರೋತ್ತರ ಯಶಸ್ಸುಗಳಿಸಿ ವಿಶ್ವವ್ಯಾಪಕ ಅಶಾಂತಿಯನ್ನು ನಿವಾರಿಸುವ ಮಹಾಕಾರ್ಯದಲ್ಲಿ ಗುರಿಮುಟ್ಟಲೆಂದು ಹಾರೈಸುತ್ತೇವೆ.

ಊರ್ಧ್ವಬಾಹು ರ್ವಿರೌಮ್ಯೇಷ ನಚಕಶ್ಚಿತ್ ಶೃಣೋತಿಮೇ |
ಧರ್ಮಾದರ್ಥ ಕಾಮಶ್ಚ ಸಕಿಮರ್ಥಂ ನಸೇವ್ಯತೇ ||

— ವೇದವ್ಯಾಸರು

ಶ್ರೀಕ್ಷೇತ್ರದ ವತಿಯಿಂದ ನಡೆಯುತ್ತಿರುವ ವಿದ್ಯಾ[illegible]

1 ಶ್ರೀ ಸಿದ್ಧಲಿಂಗೇಶ್ವರ ಉಚಿತ ವಿದ್ಯಾರ್ಥಿನಿಲಯ, ಶ್ರೀ ಸಿದ್ಧಗಂಗಾ ಗುರುಕುಲ. [illegible]
2 ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ.
3 ಶ್ರೀ ಸಿದ್ಧಲಿಂಗೇಶ್ವರ ರೆಸಿಡೆನ್ಷಿಯಲ್ ಮಿಡಲ್ ಸ್ಕೂಲ್, ಶ್ರೀ ಸಿದ್ಧಗಂಗಾ. 1[illegible]
4 ಶ್ರೀ ಸಿದ್ಧಗಂಗಾ ಹೈಸ್ಕೂಲ್, ತುಮಕೂರು. .... 194[illegible]
5 ಶ್ರೀ ಸಿದ್ಧಲಿಂಗೇಶ್ವರ ರೆಸಿಡೆನ್ಷಿಯಲ್ ಹೈಸ್ಕೂಲ್, ಶ್ರೀ ಸಿದ್ಧಗಂಗಾ, ... 1955
6 ಶ್ರೀ ಸಿದ್ಧಗಂಗಾ ಟ್ರೈನಿಂಗ್ ಕಾಲೇಜು, ತುಮಕೂರು. 1956
7 ಶ್ರೀ ಸಿದ್ಧಲಿಂಗೇಶ್ವರ ರೆಸಿಡೆನ್ಷಿಯಲ್ ಟ್ರೈನಿಂಗ್ ಕಾಲೇಜು, ಶ್ರೀ ಸಿದ್ಧಗಂಗಾ. 1961
8 ಶ್ರೀ ವಿನಾಯಕ ರೂರಲ್ ಹೈಸ್ಕೂಲ್, ನಿಟ್ಟೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲಾ 1962
9 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ತರೂರು, ಸಿರಾ ತಾಲ್ಲೂಕು, ತುಮಕೂರು ಜಿಲ್ಲಾ. 1962
10 ಶ್ರೀ ಸಿದ್ಧಗಂಗಾ ಪ್ರಾಕ್ಟೀಸಿಂಗ್ ಎಲಿಮೆಂಟರಿ ಸ್ಕೂಲ್, ತುಮಕೂರು. 1962
11 ಶ್ರೀ ಸಿದ್ಧಗಂಗಾ ಬಾಲೋದ್ಯಾನ, ತುಮಕೂರು. 1962
12 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಬಂಡೇಮಠ, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲಾ 1962
13 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಬೂದಿಗೆರೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಜಿಲ್ಲಾ 1963
14 ಶ್ರೀ ಬಸವೇಶ್ವರ ರೂರಲ್ ಹೈಸ್ಕೂಲ್, ಸೋಲೂರು, ಮಾಗಡಿ ತಾಲ್ಲೂಕು, ಬೆಂಗಳೂರು ಜಿಲ್ಲಾ 1963
15 ಶ್ರೀ ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜು, ತುಮಕೂರು. 1964
16 ಶ್ರೀ ಸಿದ್ಧಗಂಗಾ ಸೈನ್ಸ್ ಕಾಲೇಜು, ತುಮಕೂರು. 1964
17 ಶ್ರೀ ಸಿದ್ಧಲಿಂಗೇಶ್ವರ ರೆಸಿಡೆನ್ಷಿಯಲ್ ಹೈಯರ್ ಸೆಕೆಂಡರಿ ಸ್ಕೂಲ್, ಶ್ರೀ ಸಿದ್ಧಗಂಗಾ. 1965
18 ಶ್ರೀ ಸಿದ್ಧಗಂಗಾ ಸಂಜೆ ಕಾಲೇಜು, ತುಮಕೂರು. 1968
19 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಗುಡೇಮಾರನಹಳ್ಳಿ, ಮಾಗಡಿ ತಾ. ಬೆಂಗಳೂರು ಜಿಲ್ಲಾ 1968
20 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಪುರುಷನಹಳ್ಳಿ, ದೊಡ್ಡಬಳ್ಳಾಪುರ ತಾ., ಬೆಂ.–ಜಿಲ್ಲಾ
21 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಕಲ್ಲೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲಾ.
22 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಕಂದಿಕೆರೆ, ಚಿಕ್ಕನಾಯಕನಹಳ್ಳಿ ತಾ., ತುಮಕೂರು ಜಿಲ್ಲಾ
23 ಶ್ರೀ ಮಲ್ಲಿಕಾರ್ಜುನ ರೂರಲ್ ಹೈಸ್ಕೂಲ್, ದೊಡ್ಡಗುಣಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲಾ.
24 ಶ್ರೀ ಗಣೇಶ ರೂರಲ್ ಹೈಸ್ಕೂಲ್, ಗೂಳೂರು, ತುಮಕೂರು ಜಿಲ್ಲಾ.
25 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಅರಿಯೂರು, ತುಮಕೂರು ತಾಲ್ಲೂಕು.
26 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಹಿರೇಹಳ್ಳಿ, ತುಮಕೂರು ತಾಲ್ಲೂಕು.
27 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಹಾಲನೂರು, ತುಮಕೂರು ತಾಲ್ಲೂಕು.
28 ಶ್ರೀ ಮಾರುತಿ ರೂರಲ್ ಹೈಸ್ಕೂಲ್, ಹೊಸಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲಾ.
29 ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್, ಅದಲಗೆರೆ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲಾ.
30 ಶ್ರೀ ಗಂಗಾಧರೇಶ್ವರ ರೂರಲ್ ಹೈಸ್ಕೂಲ್, ಆನೆಕೆರೆ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲಾ.
31 ಶ್ರೀ ಸಾಲಿವಾಹನ ಹೈಸ್ಕೂಲ್, ತಂಡಗ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲಾ.
32 ಶ್ರೀ ಸಿದ್ಧಲಿಂಗೇಶ್ವರ ವಾಣಿಜ್ಯ ವಿದ್ಯಾಶಾಲೆ, ಶ್ರೀ ಸಿದ್ಧಗಂಗಾ.
33 ಕನ್ನಡ ಪಂಡಿತರ ಶಿಕ್ಷಣಶಾಲೆ, ಶ್ರೀ ಸಿದ್ಧಗಂಗಾ.
34 ಶ್ರೀ ಸಿದ್ಧಗಂಗಾ ಹಾಸ್ಟೆಲ್, ಸಕಲೇಶಪುರ, ಹಾಸನ ಜಿಲ್ಲಾ.
35 ಶ್ರೀ ಸಿದ್ಧಗಂಗಾ ಹಾಸ್ಟೆಲ್, ಹಿಂದೂಪುರ, ಅನಂತಪುರ ಜಿಲ್ಲಾ.
36 ಶ್ರೀ ಸಿದ್ಧಗಂಗಾ ಹಾಸ್ಟೆಲ್, ಬೇಲೂರು, ಹಾಸನ ಜಿಲ್ಲಾ.
37 ಸಾರ್ವಜನಿಕ ವಿದ್ಯಾರ್ಥಿನಿಲಯ, ನಾಗವಲ್ಲಿ, ತುಮಕೂರು ಜಿಲ್ಲಾ.

(ಇತ್ತೀಚಿಗೆ ಇನ್ನೂ 3–4 ಸಂಸ್ಥೆಗಳು ಉದಯವಾಗಿವೆ.)

‘ನಿಷ್ಕಾಮ [illegible]ಾಡುವಂತೆ
ಇಡಿಯ ಬಾಳು ಯ[illegible]ಶೈವರು
ರಂಗಬಹಿರಂಗ[illegible]
ಸಹಕ[illegible]

ಸಂಪಾದಕೀಯ

[illegible]ಮುಂತಾದವುಗಳನ್ನು [illegible], ಧರ್ಮಸ್ಯಮೂಲಮರ್ಥಃ, ಅರ್ಥಸ್ಯಮೂಲಂ ರಾಜ್ಯಂ, ರಾಜ್ಯಸ್ಯಮೂಲಮಿಂದ್ರಿಯ [illegible]ಮೂಲಂ ವಿನಯಃ, ವಿನಯಸ್ಯ ಮೂಲಂ ವೃದ್ಧೋಪಸೇವಾ– ಹೀಗೆ ಕೌಟಿಲ್ಯಮಹರ್ಷಿಯು [illegible] ಅರಸು [illegible] ತನ್ನ ಅರ್ಥಶಾಸ್ತ್ರದಲ್ಲಿ ಕೊಡುತ್ತಾನೆ. ಸುಖಬೇಕೆನ್ನುವವನು ಕೊನೆಗೆ ತನ್ನಲ್ಲಿಯೇ ತಾನಿದ್ದ ಸ್ಥಿತಿಯಲ್ಲೇ ಪಡೆಯುತ್ತಾನೆ. ಸುಖಕ್ಕೆ ಬಹಿರುಪಾಧಿಗಳು ಕಾರಣವಲ್ಲ. ಅದು ಧರ್ಮಬುದ್ಧಿಯಿಂದ ಮನುಷ್ಯನಿಗೆ ಲಭ್ಯವಾಗುವ ಮನಸ್ಸಿನ ಸ್ಥಿತಿಯೇ ಆಗಿದೆ. ಆದರೆ ಧರ್ಮವೆಂಬುದು ಅದೇ ಕೌಟಿಲ್ಯನೇ ಹೇಳುವಂತೆ “ವ್ಯವಹಾರಾನು ಲೋಮೋಧರ್ಮಃ” ಅಂದರೆ ಧರ್ಮವು ವ್ಯವಹಾರಕ್ಕೆ ಅನುಗುಣವಾಗಿರಬೇಕು. ಧರ್ಮಬಿಟ್ಟು ವ್ಯವಹಾರವಿಲ್ಲ; ವ್ಯವಹಾರಬಿಟ್ಟು ಧರ್ಮವಿಲ್ಲ. ಇವೆರಡಕ್ಕೂ ಇಂದು ಮಹದಂತರ ಕಂಡುಬರುತ್ತಿರುವುದೇ ಜನತೆಯಲ್ಲಿ ದ್ವೇಷಾಸೂಯೆ, ಪಕ್ಷಪಾತ ಮೊದಲಾದ ಪಾಶವೀವೃತ್ತಿಯು ಉಂಟಾಗಲು ಕಾರಣೀಭೂತವಾಗಿದೆ. ಧರ್ಮವೆಂಬುದು ಕೇವಲ ಮಠಮಾನ್ಯಗಳಲ್ಲಿರುವವರು ಕೆಲವರು ಆಚರಿಸಬೇಕಾದ ಕ್ರಿಯೆಯೆಂದೂ ರಾಜಕೀಯ ಜೀವನಕ್ಕೂ ಅದಕ್ಕೂ ಸಂಬಂಧವಿಲ್ಲವೆಂದೂ ಅನ್ನುವಷ್ಟರಮಟ್ಟಿಗೆ ಮಹದಂತರವು ಬೆಳೆದುಹೋಗಿ ಧರ್ಮಶ್ರದ್ಧೆಯಿಂದ ಜನತೆ ದೂರ ಸರಿದು ವಿನಾಶ ಮಾರ್ಗದತ್ತ ಅಡಿಯಿಡುತ್ತಿದೆ. ಇಂಥ ಸಮಯದಲ್ಲಿ ಜನತೆಯನ್ನು ತಿದ್ದಿ ರಾಷ್ಟ್ರಧರ್ಮವನ್ನು ಉದ್ಧರಿಸಿ, ಜನತೆಗೆ ಮಾನಸಿಕ ನೆಮ್ಮದಿಯನ್ನು ಪರಸ್ಪರಾವಲಂಬನದಿಂದ ಬಾಳುವಿಕೆಯನ್ನು ಕಲಿಸುವ ಹೊಣೆಗಾರಿಕೆ ಮಠಾಧಿಪತಿಗಳ ಆದ್ಯ ಕರ್ತವ್ಯವಾಗಿದೆ. ಧರ್ಮಗುರುಗಳು ಈ ಸಮಯದಲ್ಲಿ ಸಂಘಟಿತರಾಗಿ ಜನತೆಯ ಆಸ್ತಿಕ್ಯಭಾವವನ್ನು ಅಭಿವೃದ್ಧಿಪಡಿಸಿ ದೈವೀಸಂಪತ್ತಿನಿಂದ ಅವರು ಬಾಳುವಂತೆ ಮಾಡುವ ಗುರುತರ ಹೊಣೆಗಾರಿಕೆಯನ್ನು ಹೊಂದಿದ್ದರೆ ವಿಧಿಯಿಲ್ಲವೆಂಬಂತಾಗಿದೆ. ಮೊನ್ನೆತಾನೆ ಬೆಂಗಳೂರಿನಲ್ಲಿ ತರಳಬಾಳು ಜಗದ್ಗುರುಗಳವರು ಆಚರಿಸಿದ ತರಳಬಾಳು ಹುಣ್ಣಿಮೆಯ ಸಮಯದಲ್ಲಿ ಶ್ರೀ ಸಿದ್ಧಗಂಗಾ ಮಠಾಧೀಶ ಶ್ರೀ ಶ್ರೀ (   ) ಗಳವರ ಅಧ್ಯಕ್ಷತೆಯಲ್ಲಿ ಒಂದು ಮಠಾಧಿಪತಿಗಳ ಸಂಘವನ್ನು ಸ್ಥಾಪಿಸಿದುದು ಬಹು ಸಮಯೋಚಿತವಾದ ದೂರದರ್ಶಿತ್ವದ ಸಂತೋಷಕರ ಪ್ರಸಂಗ. ಅಭ್ಯುದಯ ನಿಃಶ್ರೇಯಸಗಳು ಮಾನವಕೋಟಿಗೆ ಸಂಬಂಧಿಸಿದ ಹಕ್ಕುಬಾಧ್ಯತೆಗಳು. ಅವುಗಳನ್ನು ಜನತೆಗೆ ದೊರಕಿಸಿ ಕೊಡುವ ಮಹಾಮಣಿಹವನ್ನು ಮಠಾಧಿಪತಿಗಳೆಲ್ಲ ನೆರವೇರಿಸಿ ಭಾರತ ರಾಷ್ಟ್ರಧರ್ಮವನ್ನು ಉದ್ಧರಿಸುವ ಅವಶ್ಯಕತೆಯು ಎಂದಿಗಿಂತ ಇಂದು ಹೆಚ್ಚಾಗಿದೆ. ಸಮಸ್ತ ರಾಷ್ಟ್ರವು ಅನೇಕ ಸಮಸ್ಯೆಗಳಲ್ಲಿ ಮುಳುಗಿ ದಿಕ್ಕು ತೋರದಂತೆ ಆಗಿದೆ. ಚಾಣಕ್ಯನು ಮೌರ್ಯರಿಗೆ, ವಿದ್ಯಾರಣ್ಯರು ವಿಜಯನಗರದ ಅರಸುಗಳಿಗೆ, ಸಮರ್ಥರಾಮದಾಸರು ಶಿವಾಜಿಗೆ ಮಾರ್ಗದರ್ಶನ ಮಾಡಿದಂತೆ ಇಂದಿನ ರಾಜಕೀಯಕ್ಕೆ ಹೊಂದಿಕೊಳ್ಳುವ ಮನೋಭಾವವನ್ನು ಜನತೆಗೆ ಉಂಟುಮಾಡಿ ಮಾರ್ಗದರ್ಶನ ಮಾಡುವತ್ತ ಜನತೆಯಲ್ಲಿನ ದ್ವೇಷಾಸೂಯೆಗಳನ್ನು ಹೊಗಲಾಡಿಸುವ ಮಹಾಕಾರ್ಯವನ್ನು ಸಂಘಟಿತ ಮಠಾಧಿಪತಿಗಳು ಮಾಡಿ ರಾಷ್ಟ್ರೋತ್ಥಾನ ಕಾರ್ಯದಲ್ಲಿ ಜನತೆಗೆ ಆಶೀರ್ವಾದ ಕವಚ ತೊಡಿಸಿ, ಯಶಸ್ವಿಗಳಾಗಬೇಕೆಂದು ಹಾರೈಸುತ್ತೇವೆ.

ಎಂದಿನಂತೆ ಈ ವರ್ಷವೂ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರ ಯಾತ್ರಾಮಹೋತ್ಸವವು ಸಿದ್ಧಗಂಗಾ ಕ್ಷೇತ್ರದಲ್ಲಿ ವೈಭವೋಪೇತವಾಗಿ ನೆರವೇರಲಿದೆ. ಜಾತ್ರೆಯಲ್ಲಿ ಪ್ರತಿವರ್ಷದಂತೆ ವಸ್ತುಪ್ರದರ್ಶನ, ದನಗಳ ಪರಿಷೆ, ತೋಂಟದ ವಿದ್ಯಾವರ್ಧಿನೀಸಭೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಮಹಾಕ್ಷೇತ್ರಕ್ಕೆ ಆಗಮಿಸಿ ಸರ್ವರೂ ಸ್ವಾಮಿಯ ದರ್ಶನಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ. ಪತ್ರಿಕೆ ಸರ್ವಾಂಗಸುಂದರವಾಗಿ ಹೊರಬರಲು ನೆರವಾದ ಲೇಖಕರು, ಮತ್ತಿತರ ಸರ್ವ ಮಹನಿಯರಿಗೂ ಮಾನಸಾರ ಅಭಿನಂದಿಸುತ್ತೇವೆ.

— ಸಂ.

ಶ್ರೀ ಸಿದ್ಧಲಿಂಗೇಶ್ವರರ

ಸಿದ್ಧಗಂಗೋದ್ಭವ ಲೀಲೆ

ಸುಲಲಿತ ಪುಂಗವಾಚಲಕೆ ವಾಯುವ್ಯದೊ ।
ಳೊಲುಮೆಯೊಳ್ ಯೋಜನಾಂತರದಿ ।
ಚೆಲುವೆತ್ತ ಕ್ಷೇತ್ರಸಮುದ್ರದ ಗ್ರಾಮದೆಡೆಯೊಂದು ।
ಬೆಳೆದು ಕಲ್ಲರೆ ಬಂಡೆಯಿಹುದು ॥ ॥೧॥

ಆಗ ಕಲ್ಲರೆ ಬಂಡೆಗೀಶನು ನಡೆತರ ।
ಲಾಗ ಶರಣರೆಲ್ಲ ನೋಡಿ ।
ಯಿಗಲಗ್ಗಣಿ ಬಂದದೀಶನೆ ಮಜ್ಜನ ।
ವಾಗ ಗೈ ಬಹುದೆಂದವರು । ॥೨॥

ಭಜಕರ ನುಡಿಕೇಳಿ ಹರತನ್ನ ಪಾದಪಂ ।
ಕಜವಕಲ್ಲೊಳಗೂರಲಾಗಿ ।
ತ್ರಿಜಗತ್ಪಾವನ ತೀರ್ಥವುದ್ಭವಿಸಿತು ।
ನಿಜಸಿದ್ಧಗಂಗೆಯೆಂದೆನಿಸಿ ॥ ॥೩॥

ಗುರುಸಿದ್ಧಲಿಂಗನು ಕಲ್ಲುಬಂಡೆಯಮೇಲೆ ।
ಚರಣಾಂಕಿತಗೆಯ್ಯಲಲ್ಲಿ ।
ದುರಿತನಾಶನ ಸಿದ್ಧಗಂಗೆಯೆನ್ನುವ ತೀರ್ಥ ।
ಸುರುತದಿಂದುಸಿತಾಕ್ಷಣದಿ ॥ ॥೪॥

ವರಪುಣ್ಯಕರ ಸಿದ್ಧಗಂಗಾತೀರ್ಥವಕಂಡು ।
ಪಿರಿಯರು ಸಹ ಲಿಂಗಾರ್ಚನೆಯ ॥
ನೆರೆಗೆಯ್ಯುತಿರಲಭ್ರದೊಳು ದುಂದುಭಿಯನಾದ ।
ಕರಗೈದರ ಮರರುತ್ಸಹದಿ ॥ ॥೫॥

— **ಹೇರಂಬಕವಿ** (ಕ್ರಿ.ಶ. ೧೬೦೦)

ನಿ ಷ್ಕಾ ಮ [illegible] ಾಡುವಂ[illegible]
ಇಡಿಯ ಬಾಳು ಯೆ[illegible] ಶೈವರು
ರಂಗಬಹಿರಂಗದ[illegible] ಸಹಕ[illegible]
[illegible] ಸ್ತುಂತಾದವುಗಳನ್ನು [illegible]
[illegible] ಸಾಜ ಅರಸು [illegible]

ಒಂದು ಮನವಿ

[illegible] ಹಾಗೂ ಶೈಕ್ಷಣಿಕ ಕೇಂದ್ರ [illegible] ಪುಣ್ಯಕ್ಷೇತ್ರ "ಸಿದ್ಧಗಂಗಾ" ಎಂಬ ತ್ರೈಮಾಸಿ[illegible]ರಿಕೆ ಕಳೆದ ಹತ್ತು ವರ್ಷಗಳಿಂದ ಪ್ರಕಟವಾಗುತ್ತಿರುವುದು ಕರ್ನಾಟಕದಲ್ಲಿ ಬಹುತೇಕ ಎಲ್ಲರಿಗೂ ತಿಳಿದಿದೆಯೆಂದು ಭಾವಿಸುತ್ತೇವೆ.

ಸಿದ್ಧಗಂಗಾ ಗುರುಕುಲದ ಆಶ್ರಯದಲ್ಲಿ ಕಲಿತ ಹಳೆಯ ವಿದ್ಯಾರ್ಥಿಗಳ ಸಂಘ ಇದುವರೆಗೂ ಸಿದ್ಧಗಂಗಾ ಪತ್ರಿಕೆಯನ್ನು ನಿರಂತರವಾಗಿ ನಡೆಸಿಕೊಂಡುಬರುವ ಸಾಹಸಮಾಡಿದೆ. ಅದನ್ನು ಉಳಿಸಿಕೊಂಡು ಮತ್ತಷ್ಟು ಉಜ್ವಲವಾಗಿ ಬೆಳೆಸಬೇಕೆಂಬ ಮತ್ತು ಮಾಸಿಕವಾಗಿ ಹೊರತರುವ ಹಂಬಲ ಪ್ರಕಾಶಕರದು. ಆದರೆ ಈ ಹಂಬಲ ತುಂಬಬೇಕಾದರೆ ಅಗತ್ಯ ಸಂಪನ್ಮೂಲ ಬೇಕೆಂಬುದನ್ನು ಬೇರೆಹೇಳಬೇಕಾಗಿಲ್ಲ. ಅದಕ್ಕಾಗಿ ಈ ಮನವಿ ಪತ್ರ.

ಸಿದ್ಧಗಂಗಾ ಪುಣ್ಯಕ್ಷೇತ್ರ ಕನ್ನಡ ನಾಡಿಗೆ ಸಲ್ಲಿಸುತ್ತಿರುವ ಸೇವೆ ಅವರ್ಣನೀಯ. ಶ್ರೀ ಕ್ಷೇತ್ರದ ಅಧ್ಯಕ್ಷರಾದ ಪರಮಪೂಜ್ಯ ಡಾ॥ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಕೈಗೊಂಡಿರುವ ಮಹಾಜ್ಞಾನ ಮತ್ತು ಅನ್ನದಾಸೋಹ ಕಾರ್ಯಗಳು ರಾಷ್ಟ್ರದಲ್ಲೇ ಹೆಸರಾಗಿವೆ. ಧರ್ಮಶ್ರದ್ಧೆ ಮತ್ತು ದಾಸೋಹಂಭಾವಗಳು ಕ್ರಮೇಣ ಅಳಿದುಹೋಗುತ್ತಿರುವ ಈ ಕಾಲದಲ್ಲಿ ಪೂಜ್ಯಗುರುಗಳು ಒಂದು ಆಶಾಜ್ಯೋತಿಯಾಗಿ ಜಾತಿ ಮತ, ಪಂಥಪಂಗಡಗಳ ಭೇದವಿಲ್ಲದೆ ಜನಕೋಟಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಸಿದ್ಧಗಂಗೆಯಂತಹ ಪುಣ್ಯಕ್ಷೇತ್ರವನ್ನು ಇಂದಿನ ವಿಶಾಲಮಟ್ಟಕ್ಕೆ ತಂದ ಪೂಜ್ಯಸನ್ನಿಧಿಯವರ ಸೇವೆಯ ನಿತ್ಯನೆನಪಿನ ಸಂಕೇತವಾಗಿ "ಸಿದ್ಧಗಂಗಾ" ಚಿರಂಜೀವಿಯಾಗಬೇಕಾಗಿದೆ. ಈ ದೃಷ್ಟಿಯಿಂದ ಅಪಾರ ಶ್ರಮೆ ವಹಿಸಬೇಕಾಗಿದೆ. ಎಷ್ಟೋಸಾರಿ ಜಾಹೀರಾತುಗಳ ಭಿಕ್ಷೆಬೇಡಿ ಅದನ್ನು ಜೀವಂತಮಾಡುವ ಪ್ರಯತ್ನ ನಡೆದಿರುವುದೂ ಉಂಟು. ಆ ಎಲ್ಲ ಕೊರತೆಗಳನ್ನೂ ತಪ್ಪಿಸಿ "ಸಿದ್ಧಗಂಗಾ" ಸ್ವಾವಲಂಬನೆಯ ಸ್ತಂಭದಂತೆ ವಿರಾಜಿಸುವಂತೆ ಮಾಡಲು ಪತ್ರಿಕೆಗೆ ಸಾಕಷ್ಟು ಸಂಖ್ಯೆಯಲ್ಲಿ ಆಜೀವ ಸದಸ್ಯರನ್ನು ಸಂಗ್ರಹಿಸಲು ಯೋಜಿಸಿದೆ. ಆದುದರಿಂದ "ಸಿದ್ಧಗಂಗಾ" ಪ್ರಕಟಣೆಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯ ಮತ್ತು ಧರ್ಮಾಭಿಮಾನಿಗಳಲ್ಲಿ ದಯವಿಟ್ಟು 101 ರೂ. ನೀಡಿ ಆಜೀವ ಸದಸ್ಯತ್ವ ಪಡೆಯಬೇಕೆಂದು ಕೋರುತ್ತೇವೆ.

ಹೀಗೆ ಸಂಗ್ರಹವಾಗುವ ನಿಧಿಯ ಪ್ರತಿಯೊಂದು ಅಂಶವೂ ಸಹಸ್ರ ಸಹಸ್ರ ಜನಕ್ಕೆ ಧರ್ಮದ ಸಂದೇಶ ಒಯ್ಯಲು ಮತ್ತು ಪರಮಪೂಜ್ಯ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳನ್ನು ನಿತ್ಯನೆನೆಯಲು ಬಹಳ ಉಪಯೋಗವಾಗುತ್ತದೆಂದು ಅತ್ಯಂತ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇವೆ.

ಜ್ಞಾನಪ್ರಸಾರ ಮತ್ತು ಪೂಜ್ಯಗುರುಗಳ ವಿಚಾರಧಾರೆಯ ಪ್ರಸಾರದ ದೀಕ್ಷೆವಹಿಸಿರುವ ಉದ್ದೇಶ ಸಿದ್ಧಗಂಗಾ ಮಾಸಿಕವನ್ನು ಉಳಿಸಿ ಬೆಳೆಸಲು ಸಮಸ್ತ ಕನ್ನಡಿಗರಲ್ಲೂ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇವೆ.

ಆಜೀವ ಸದಸ್ಯತ್ವದ ಕೊಡುಗೆ 101 ರೂ. ಗಳನ್ನು ಪ್ರಕಾಶಕರು, ಸಿದ್ಧಗಂಗಾ (ತ್ರೈಮಾಸಿಕ) ಸಿದ್ಧಗಂಗಾಮಠ, ತುಮಕೂರು ಜಿಲ್ಲೆ," ಈ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಬಿನ್ನಹ.

ಸಿದ್ಧಗಂಗಾ (ತ್ರೈಮಾಸಿಕ) ಪತ್ರಿಕೆಯ ಆಜೀವ ಸ[illegible]

1 ಶ್ರೀ ಮ॥ ನಿ॥ ಪ್ರ॥ ಸ್ವಾ॥ ಶ್ರೀ ಶ್ರೀ ಚನ್ನವೀರದೇಶಿಕೇಂದ್ರ ಸ್ವಾಮಿಗಳವರು, [illegible]

2 ಶ್ರೀ ರಂಗಪ್ಪನವರು, ಮಾಜಿ ಪುರಸಭಾಧ್ಯಕ್ಷರು, ಭದ್ರಾವತಿ.
3 ಶ್ರೀ ಬಿ. ಆರ್. ರೇಣುಕ, ಬಿ. ಯಸ್‌ಸಿ., ಮಂಡಿ ವರ್ತಕರು, ಚಾಮರಾಜಪೇ[illegible]
4 ಶ್ರೀ ಬಿ. ಟಿ. ರಂಗಧಾಮಯ್ಯ, ಬಾಣವಾಡಿ, ಸೋಲೂರು ಹೋಬಳಿ, ಮಾಗಡಿ [illegible]
5 ಶ್ರೀ ಎಂ. ಮರಿದೇವರು, ಜಿಲ್ಲಾ ಎಕ್ಸೈಜ್ ಆಫೀಸರ್‌ರವರು, ರಾಜಾಜಿನಗರ, ಬೆ[illegible]
6 ಶ್ರೀ ಎ[illegible]. ಬಸವರಾಜಯ್ಯ, ಪ್ರಾಥಮಿಕ ಶಾಲಾ ಉಪಾಧ್ಯಾಯರು, ಬೆಂಗಳೂರು.
7 ಶ್ರೀ ಸಿ. ಬಿ. ಶಂಕರಪ್ಪ, ಉಪಾಧ್ಯಾಯರು, ದೇವನಹಳ್ಳಿ, ಬೆಂಗಳೂರು ಜಿಲ್ಲಾ.
8 ಶ್ರೀ ಶಿವಪ್ರಸಾದ್, ಸಿರಸಿ ರೋಡು, ಬೆಂಗಳೂರು.
9 ಶ್ರೀ ಡಿ. ಚಂದ್ರಶೇಖರಯ್ಯ, ಕಂಟ್ರ್ಯಾಕ್ಟರ್, ಬೆಂಗಳೂರು.
10 ಶ್ರೀ ಬಿ. ಎಸ್. ಕೆಂಪರಾಜ್, ಸುಧಾ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು.
11 ಶ್ರೀ ಚಂದ್ರಶೇಖರಯ್ಯ. ಶಿವಾನಂದ ಸ್ಟುಡಿಯೋ, ದೊಡ್ಡಬಳ್ಳಾಪುರ.
12 ಶ್ರೀ ರಾಚೂಟಪ್ಪನವರು, ವರ್ತಕರು, ದೊಡ್ಡಬಳ್ಳಾಪುರ.
13 ಶ್ರೀ ಬಿ. ಸಿ. ಪುಟ್ಟರುದ್ರಪ್ಪನವರು, ಬಸವೇಶ್ವರ ಬ್ರೆಡ್ ಮತ್ತು ಬೇಕರಿ ಸ್ಟೋರ್ಸ್, ಬಸ್ ನಿಲ್ದಾಣ, ದೊಡ್ಡಬಳ್ಳಾಪುರ.
14 ಶ್ರೀ ಜಿ. ಎಸ್. ಬಸವರಾಜು, ಮುನಿಸಿಪಲ್ ಪ್ರೆಸಿಡೆಂಟ್, ದೊಡ್ಡಬಳ್ಳಾಪುರ.
15 ಶ್ರೀ ಕೆ. ಸಿ. ಎನ್. ಗೌಡರು, ರೇಷ್ಮೆ ವ್ಯಾಪಾರಿಗಳು, ಮತ್ತು ಕೆ. ಸಿ. ಎನ್. ಮೂವೀಸ್ ಮಾಲೀಕರು, ದೊಡ್ಡಬಳ್ಳಾಪುರ.
16 ಶ್ರೀ ಬಿ. ವಿ. ಸೋಮಶೇಖರ್, ವರ್ತಕರು, ದೊಡ್ಡಬಳ್ಳಾಪುರ.
17 ಶ್ರೀ ಕಿಚಿಡಿ ನರಸಿಂಹಪ್ಪನವರು, ಜವಳಿ ವರ್ತಕರು, ದೊಡ್ಡಬಳ್ಳಾಪುರ.
18 ಶ್ರೀ ಎಲ್. ರಾಜಪ್ಪನವರು, ಕಂಟ್ರ್ಯಾಕ್ಟರ್, ರಾಜಾಜಿನಗರ, ಬೆಂಗಳೂರು.
19 ಶ್ರೀ ಡಿ. ರೇವಣಸಿದ್ದಪ್ಪನವರು, ಕಂಟ್ರ್ಯಾಕ್ಟರ್, ರಾಜಾಜಿನಗರ, ಬೆಂಗಳೂರು.
20 ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು, ಅಸಿಸ್ಟೆಂಟ್ ಡೈರೆಕ್ಟರ್, ಕನಾಟಕ ತಾಂತ್ರಿಕ ಇಲಾಖೆ, (ಆಡಳಿತ ವಿಭಾಗ) ಬೆಂಗಳೂರು.
21 ಶ್ರೀ ಎಸ್. ಆರ್. ಸಿದ್ಧಲಿಂಗಯ್ಯನವರು, ಜಿಲ್ಲಾ ಸರ್ಜನ್, ಜನರಲ್ ಆಸ್ಪತ್ರೆ, ತುಮಕೂರು.
22 ಶ್ರೀ ಬಿ. ಎಸ್. ದೊಡ್ಡವೀರಯ್ಯ, (ಅಕೌಂಟ್ಸ್ ಸೂಪರಿಂಟೆಂಡೆಂಟ್, ರೇಷ್ಮೆ ಇಲಾಖೆ), ಗಣೇಶ ಮೈನೇಜ್, ಮೈ್ಸ ರೋಡು. ಕನಕಪುರ.
23 ಶ್ರೀ ಹೆಚ್. ಜಿ. ಸಿದ್ದಪ್ಪನವರು, ಹರ್ತಿಗ್ರಾಮ, ಮಾಗಡಿ ತಾಲ್ಲೂಕ್.
24 ಶ್ರೀ ಸಾಹುಕಾರ್ ರೇವಣ್ಣನವರು, ಹೊನ್ನಾರಾಯನಹಳ್ಳಿ, ನೆಲಮಂಗಲ.
25 ಶ್ರೀ ಸಿ. ವಿ. ಮರಿಮಲ್ಲಪ್ಪನವರು, ಕೋಡಿಹಳ್ಳಿ, ತ್ಯಾಮಗೊಂಡ್ಲು ಹೋಬಳಿ.
26 ಶ್ರೀ ಬಿ. ಶಿವಲಿಂಗಯ್ಯನವರು, ಎಲ್. ಸಿ. ಇ., ಸೂಪರ್‌ವೈಸರ್, ನೆಹರು ನಗರ, ಬೆಂಗಳೂರು.
27 ಶ್ರೀ ಎಂ. ಮುದ್ದಣ್ಣ ಅಂಡ್ ಸನ್ಸ್‌ರವರು, ಸೀತಕಲ್ಲು, ತುಮಕೂರು ತಾಲ್ಲೂಕ್.
28 ಶ್ರೀ ಕೆ. ಎಸ್. ಶಂಕರಯ್ಯನವರು, ಬಿ. ಎ., ಮ್ಯಾನೇಜರ್, ಸಿದ್ಧಗಂಗಾ ಸೈನ್ಸ್ ಕಾಲೇಜ್, ತುಮಕೂರು.
29 ಶ್ರೀ ಡಿ. ಚಂದ್ರಪ್ಪ, ಎಂ. ಎ., ಕನ್ನಡ ಅಧ್ಯಾಪಕರು, ಜೂನಿಯರ್ ಕಾಲೇಜ್, ಸಿದ್ಧಗಂಗಾ.
30 ಶ್ರೀ ಕೆ. ಎನ್. ಶಿವರಾಜು, ಎಂ. ಎ., ಸಂಸ್ಕೃತ ಅಧ್ಯಾಪಕರು, ಜೂನಿಯರ್ ಕಾಲೇಜ್, ಸಿದ್ಧಗಂಗಾ.
31 ಶ್ರೀ ಜಿ. ಎಸ್. ಜಗದೀಶ್‌ರವರು, ವರ್ತಕರು. ದೊಡ್ಡಬಳ್ಳಾಪುರ.
32 ಶ್ರೀ ಚನ್ನಬಸವಯ್ಯನವರು, ಉಪಾಧ್ಯಾಯರು, ಎನ್. ರಾಂಪುರ, ಗುಬ್ಬಿ ತಾಲ್ಲೂಕ್.
33 ಶ್ರೀ ಕೆ. ಸಿ. ಶಿವಗಂಗಯ್ಯ, ಬಿ. ಎಸ್‌ಸಿ, ಬಿ. ಇಡಿ., ಹೆಡ್‌ಮಾಸ್ಟರ್, ಸಿದ್ಧಗಂಗಾ ರೂರಲ್ ಹೈಸ್ಕೂಲ್, ಪುರುಷನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕ್.
34 ಶ್ರೀ ಎನ್. ಸಚ್ಚಿದಾನಂದಮೂರ್ತಿ, ಬಿ. ಎ. ಬಿ: ಇಡಿ., ಉಪಾಧ್ಯಾಯರು, ಸಿದ್ಧಗಂಗಾ ರೂರಲ್ ಹೈಸ್ಕೂಲ್ ಪುರುಷನಹಳ್ಳಿ. ದೊಡ್ಡಬಳ್ಳಾಪುರ ತಾಲ್ಲೂಕ್.

'ನಿಷ್ಠಾಮ [illegible] ಡುವಂ[illegible]. [illegible] ಎಂದು ಹೇಳು ಇಡಿಯ ಬಾಳು ಯ[illegible] ಶೈವರು [illegible] ಹತಪೋಧನರಾದ ರಂಗಬಹಿರಂಗ[illegible] ಸಹಕ[illegible] ಅಂತಃಕರಣಗ್ರಂಥಿ [illegible] ಕುಂತಾದವುಗಳನ್ನು [illegible] ಸುರಿದು ಅವರೆಲ್ಲರನ್ನು [illegible] ಗಿಸಿದರು. ಶ್ರೀಸಿದ್ಧಲಿಂಗೇ [illegible] ವರಾಜ ಅರಸು ಅ[illegible] ಭಣೆಯಿಂದ ನಡೆಯಬೇಕೆಂಬ ಸಂ[illegible] ಮಾಡಿದವರು ಉದ್ದಾನೇಶ್ವರರೇ; ಇದು ಪ್ರಾರಂಭವಾದುದು 1909ರಲ್ಲಿ– ಇಂದಿಗೆ 66 ವರ್ಷಗಳ ಹಿಂದೆ. ಈಗ ನಡೆಯುತ್ತಿರುವ [illegible] ನೆಯ ಇಸ್ಸಿಯ ಜಾತ್ರೆ, 66ನೆಯದು., ಈ ಸಿದ್ಧಲಿಂಗೇಶ್ವರರ ಯಾತ್ರಾ ಮಹೋತ್ಸವವೂ, ಶ್ರೀ ಸಿದ್ಧಲಿಂಗೇಶ್ವರರ ಉತ್ಸವಾದಿಗಳೂ ಅಂದು ಬೀಜ ರೂಪ– ಇಂದು ವೃಕ್ಷ ರೂಪ– ಎಲ್ಲವೂ ಶ್ರೀ ಶಿವಯೋಗಿ ಉದ್ದಾನೇಶ್ವರರ ಕೃಪೆಯಿಂದ ಶತಾಧಿಕವಾಗಿ ಬೆಳೆದುಬಂದಿವೆ, ಬೆಳೆಯುತ್ತಿವೆ. ಉದ್ದಾನೇಶ್ವರರ ಕಾರುಣ್ಯದಿಂದ ಸಾಕ್ಷಾತ್ ಸಿದ್ಧಲಿಂಗೇಶ್ವರರಂತೆ ಹಲವು ಮುಖಗಳಲ್ಲಿ ಸರ್ವಲೋಕೋಪಕಾರಾರ್ಥವಾಗಿ ಸವೆಯುತ್ತಿರುವ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ತಪಸ್ಸು ವೃದ್ಧಿಗೊಳ್ಳಲಿ, ಅವರೊಬ್ಬ ಮರೀಚಿ ಮಾಲಿನಿಯಂತೆ. ಅವರ ಈ ಚಾಚಿನಿಂತ ಸಹಸ್ರ ಕಿರಣಗಳು ಎಲ್ಲಲ್ಲೂ ಬೆಳಕನ್ನೀಯಲಿ ಅಥವಾ ಆ ಪ್ರಕಾಶದಲ್ಲಿ ಲೋಕ ತಮ್ಮನ್ನು ನೋಡಿಕೊಳ್ಳಲಿ.

ಶ್ರೀ ಸಿದ್ಧಗಂಗಾ ಮಹಿಮ್ನಃ ಸ್ತೋತ್ರಾಷ್ಟಕ

— ಆಸ್ಥಾನವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

ಶರಣ ಮಾನಸಹಂಸ ಸುಗುಣಾ- ।
ಭರಣ ಸುಜನೋತ್ತಂಸಭಕುತರ ।
ದುರಿತಕುಲ ವಿಧ್ವಂಸ ಬುಧಜನವಿನುತ ಪರಹಂಸ ॥
ವರನಿರಂಜನ ಪರತರಾಮಯ ।
ಹರನು ಜಂಗಮ ಚಿತ್ಸ್ವರೂಪನು ।
ಗುರುವು ಗೋಸಲ ಸಿದ್ಧದೇಶಿಕನೀಗೆಮಂಗಲವ ॥೧॥

ಸುಮನಸಾರ್ಚಿತ ಪಾದಪಂಕಜ ।
ಸುಮಶರಾಂತಕ ದೇವಭಾಕ್ತಿಕ ।
ಸುಮಗಳಿಂದರ್ಚಿಸುವ ಭಕುತರ ಪೊರೆಯೆತಿರೆಯೊಳಗೆ॥
ಸುಮನದಿಂ ವರಸಿದ್ಧಗಂಗಾ ।
ಶ್ರಮದೆ ನೆಲಸಿಹಯೋಗಿಪುಂಗವ ।
ವಿಮಲಮತಿ ಗುರುಸಿದ್ಧಲಿಂಗನು ಪೊರೆಗೆಮೂಜಗವ॥೨॥

ಸಿದ್ಧಜನ ಸುಜ್ಞಾನದಾಯಿನಿ ।
ಶುದ್ಧಮಾನಸ ವಿಬುಧ ಪೋಷಿಣಿ ।
ಸಿದ್ಧಗೋಸಲ ಮೌನಿಹೃದಯಾಂಭೋಜ ಸಂಜನನಿ ॥
ಸಿದ್ಧವಂದಿತೆ ವಿಬುಧವಾಹಿನಿ ।
ಶುದ್ಧವಿದ್ಯಾರಸಿಕ ತೋಷಿಣಿ ।
ಸಿದ್ಧಗಂಗಾಮಾತೆರಕ್ಷಿಕೆ ಜಗವನನವರತ ॥೩॥

ಪರಮಪಾವನ ಚರಿತ ವರಗುಣ ।
ಭರಿತನನುಪಮ ನಿತ್ಯಸುಖಕರ ।
ಶರಣ ಜನಮಂದಾರ ಮುಕ್ತಿ ವಿಹಾರ ಭವದೂರ ॥
ಧರೆಯುಪಾವನ ಸಿದ್ಧಗಂಗೆಯ ।
ನಿರುಪಮಿತ ದಾಸೋಹ ಮೂರುತಿ ।
ನಿರಯಹರನಟವೀಶ ಯತಿವರನೀಗೆ ಸಂಪದವ ॥೪॥

ವೇಷಭೂಷಣ ವಿಷಯಪಟುತರ ।
ದಾಸೆಯಾಮಿಷತೊರೆದು ಭಕುತರ ।
ಪಾಶಬಂಧನಪರಿದು ಪರಶಿವನಡಿಯ ಸಂಗೊಳಿಸಿ ॥
ದೇಶಿಗರಿಗುಣಬಡಿಪ ಕಾಯಕ ।
ವೀಶಸೇವೆಯಿದೆನುತೆ ಸಲಿಸಿದ- ।
ನೀಶನುದ್ದಾನೇಶ ಯತಿವರನೀಗೆ ಮಂಗಲವ ॥೫॥

ಧರೆಯ ಕಲ್ಪಲತೆಕಳೆಯೆ ಬುಧನುತ ।
ಚರಣ ಸರಸಿಜ ಸಿದ್ಧಲಿಂಗನ ।
ಕರುಣೆಯಿಂವರ ಸಿದ್ಧಗಂಗಾ ಕ್ಷೇತ್ರ ಪತಿಯೆನಿಸಿ ॥
ತೆರೆದು ವಿದ್ಯಾಲಯಗಳನುದಿನ ।
ಹರುಷದಿಂ ವಿದ್ಯಾರ್ಥಿ ವೃಂದವ ।
ಪೊರೆವ ಶಿವಕುವರೇಶ ಕುಲಪತಿಗಕ್ಕೆ ಮಂಗಲವು ॥೬॥

ಅರಿವೆಪೈವದ ಪೈಯ ಬೆಳಗೆಂ ।
ದರಿದು ಮತಕೋಮುಗಳನೆಣಿಸದೆ ।
ನಿರುತ ವಿದ್ಯಾರ್ಥಿಗಳ ಪೋಷಿಪ ಗುರುವಿನಡಿಗೆರಗಿ ॥
ಕರೆಕರೆದು ಜನತತಿಯ ನಿರುತವು ।
ಪರಿಪರಿಯ ಸಾಹ್ಯವನು ನೀಡುತೆ ।
ಪರತರೋತ್ಸಾಹದಲಿ ಗೌರವವಿತ್ತು ಸೇವಿಪುದು ॥೭॥

ಜಯಕೆ ಪಾವನ ಪುಣ್ಯ ಮೂರುತಿ ।
ಜಯಕೆ ಪುಣ್ಯಾರಣ್ಯ ದೀಧಿತಿ ।
ಜಯಕೆ ಶ್ರೀಕರ ಸಿದ್ಧಗಂಗಾ ಪೂತಮಹಿತಯತಿ ।
ಜಯಕೆ ವರದಾಸೋಹ ಸನ್ಮತಿ ।
ಜಯಿಕೆ ವಿದ್ಯಾದಾನ ಹಿತಮತ ।
ಜಯಿಕೆ ಶಿವಕುವರೇಶಮುನಿಪತಿ ವಿಹಿತ ಧೀವಿತತಿ ॥೮॥

ಬೆಂಗಳೂರಿನಲ್ಲಿ ನೆರವೇರಿದ

ವೈ ಭ ವ ಪೂ ರ್ಣ

ತರಳಬಾಳು ಹುಣ್ಣಿಮೆ ಮ...

ಬೆಂಗಳೂರು ಸುಬಾಸನಗರ ಮೈದಾನದಲ್ಲಿ ಈ ವರ್ಷ ಮಾಘ ಶುದ್ಧ ಪೂರ್ಣಿಮಾ ದಿನದಂದು ಮುಕ್ತಾಯಗೊಂಡ ತರಳಬಾಳು ಹುಣ್ಣಿಮೆಯ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧಾಭಕ್ತಿ ವಿಶ್ವಾಸಗಳಿಂದ ಶ್ರೀ ಶ್ರೀ




ವಾರಣಾಸಿಯ ತಮ್ಮ ಪೂರ್ವಾಶ್ರಮದ ಗುರುಗಳೊಡನೆ ತರಳಬಾಳು ಶ್ರೀಗಳು

ಸಿರಿಗೆರೆಯ ಜಗದ್ಗುರುಶಿವಕುಮಾರಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ನೆರವೇರಿಸಿದ ಸಮಸ್ತ ಭಕ್ತಕೋಟಿಗೆ ಹೃದಯಾರ ಅಭಿನಂದನೆ ಸಲ್ಲಿಸಬೇಕಾದುದು ಸೂಕ್ತವಾದುದು. ಅನೇಕ ಮಹನಿಯರ ತನುಮನಧನಕೃತವಾದ ಈ ಸೇವೆಯಿಂದ ನಗರದ ಮತ್ತು ರಾಷ್ಟ್ರದ ವಿವಿಧ ಭಾಗದಿಂದ ಆಗಮಿಸಿದ ಭಕ್ತ ಭಾವುಕರಿಗೆ, ಆಧ್ಯಾತ್ಮ ಪಿಪಾಸುಗಳಿಗೆ, ಸಾಹಿತಿಗಳಿಗೆ, ಧರ್ಮಾಧಿಕಾರಿಗಳಿಗೆ ಅನೇಕ ಬಗೆಯಲ್ಲಿ ರಸದೌತಣವಾಗಿ ಪರಿಣಮಿಸಿತು. ಇಂಥ ಸುಂದರ ಸನ್ನಿವೇಶವನ್ನು ಒದಗಿಸಿಕೊಟ್ಟ ಶ್ರೀ ಶ್ರೀ ತರಳಬಾಳು ಜಗದ್ಗುರುಗಳವರಿಗೆ ಶ್ರದ್ಧಾಭಕ್ತಿ ವಿಶ್ವಾಸಪೂರ್ಣ ಅಭಿನಂದನೆಗಳನ್ನು ಸಲ್ಲಿಸದಿರಲಾರೆವು. ತಾರೀಖು ೨೮–೧–೭೪ರ ಪ್ರಾತಃಕಾಲ ೬ ಘಂಟೆಯಿಂದ ... ರ ಸಂಜೆ ೧೧ ಘಂಟೆಯವರೆ... ಮಂಟಪದಲ್ಲಿ ನಡೆದ ಕಾರ್ಯಕ್ರ...ಲ್ಲಿ ರಾಷ್ಟ್ರಾಂಧ್ರಗಳ ವಿದ್ವಾಂಸ ವಿದುಷಿಯರೂ, ...ನ್ನಡ ನಾಡಿನ ಅನೇಕ ಮಠಮಾನ್ಯಗಳ ಹರಗುರುಚರಮೂರ್ತಿಗಳೂ ಭಾರತ ಮತ್ತು ಕರ್ನಾಟಕ ಸರಕಾರಗಳ ಅಧಿಕಾರಿ, ಮಂತ್ರಿ ಮಹೋದಯರೂ, ಪ್ರತಿಷ್ಠಿತ ಹಿರಿಯರೂ ಭಾಗವಹಿಸಿ ಸಭಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದರ ಜೊತೆಗೆ ಅನೇಕ ಸಾಮಾಜಿಕ, ರಾಜಕೀಯ, ಸಾಹಿತ್ಯಕ, ಧಾರ್ಮಿಕ ಸಮಸ್ಯೆಗಳ ಸಮಾಲೋಕನ ಮಾಡಿದುದು ನಿಜಕ್ಕೂ ಪ್ರಯೋಜನಕಾರಿಯಾಗಿದ್ದಿತು. ಕಾರ್ಯಕ್ರಮಗಳ ಮಧ್ಯೇ ಮಧ್ಯೇ ಸಿರಿಗೆರೆ ಅಕ್ಕನ ಬಳಗದ ಕಲಾವಿದ ಕಲಾವಿದೆಯರಿಂದ ನಡೆಯುತ್ತಿದ್ದ ವಚನಗಾನ ತತ್ತ್ವದ ಪದಗಳ ಮನರಂಜನೆ ಸಭ್ಯರ ವಿಶೇಷಾಕರ್ಷಣೆಗೆ ಕಾರಣವಾಗಿತ್ತು. ಪ್ರತಿದಿನದ – "ಹಚ್ಚೇವು ಕನ್ನಡದ ದೀಪ" ಪದ್ಯದ ನೃತ್ಯ ರೂಪಕ ಮತ್ತು ರಾತ್ರಿ ಸಭೆ ಮುಗಿದಮೇಲೆ ಪ್ರದರ್ಶಿಸುತ್ತಿದ್ದ ಮರಣವೇ ಮಹಾನವಮಿ, ಕಂಬಳಿನಾಗಿದೇವ, ವಿಶ್ವಬಂಧು ಮರುಳಸಿದ್ಧ ನಾಟಕಗಳು ನಿಜಕ್ಕೂ ಕಲಾತ್ಮಕವಾಗಿದ್ದವು. ಇಷ್ಟೆಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಅಖಂಡ ಹತ್ತುದಿನಗಳ ಪರ್ಯಂತ ತರಳಬಾಳು ಹುಣ್ಣಿಮೆ ಬೆಂಗಳೂರಿನಲ್ಲಿ ಜರುಗಿದುದೊಂದು ವಿಶೇಷವೆಂದೇ ಹೇಳಬೇಕು. ಈ ಕಾರ್ಯಕ್ರಮಕ್ಕಾಗಿ ರಚಿಸಿದ ಕ್ರಾಂತಿಕವಿ ಸರ್ವಜ್ಞ ನಾಮಾಂಕಿತ ಮಂಟಪ ಅದರ ಅಲಂಕರಣದ ಬಗೆ ಶ್ಲಾಘ್ಯವಾಗಿತ್ತು.

ಪ್ರಥಮತಃ ತರಳಬಾಳು ಜಗದ್ಗುರುಗಳವರು ೨೮–೧–೭೪ರಂದು ಮಧ್ಯಾಹ್ನಾತ್ಪರ ಸಿರಿಗೆರೆಯಿಂದ ಪ್ರಯಾಣ ಬೆಳಸಿ ತಮ್ಮ ಅನೇಕ ಭಕ್ತಬಾಂಧವರೊಡನೆ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಶಿವಯೋಗಿಗಳವರ ಪುಣ್ಯ ಭೂಮಿಯೂ, ಭೌತಿಕಪಾರಲೌಕಿಕ ವಿದ್ಯಾವೈದುಷ್ಯಗಳ ಪ್ರಮುಖ ಕೇಂದ್ರವೂ ಶ್ರೀಮದುದ್ದಾನ ಶಿವಯೋಗಿಗಳ ಕರಕಂಜ ಸಂಜಾತರಾದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ದಿವ್ಯತಪೋಕ್ಷೇತ್ರವೂ ಆದ ಸಿದ್ಧಗಂಗೆಯ ಸಂದರ್ಶನ ಪಡೆದು ಬೆಂಗಳೂ

'ನಿಷ್ಕಾಮ ... ಾಡುವಂ...ಸು.
ಇಡಿಯ ಬಾಳು ಯೆ... ...ಶೈವರು ವಿ...
ರಂಗಬಹಿರಂಗಗ... ಸಹಕ... ...
...ಮುಂತಾದವುಗಳನ್ನು ...
...ವರಾಜ ಅರಸು ಅ...

'ನಿಷ್ಠಾಮ [illegible] ಾಡುವಂತ[illegible]ು. ಜಗದ್ಗುರುಗಳವ ಇಡಿಯ ಬಾಳು ಯ[illegible] ಶೈವರು ವಿದ್ಯಾರ್ಥಿ ನಿಲಯದ ರಂಗಬಹಿರಂಗಗ[illegible] ಸಹಕ[illegible] ಶ್ರದ್ಧಾ ಭಕ್ತಿ ವಿಶ್ವಾಸ [illegible]ಮುಂತಾದವುಗಳನ್ನು [illegible] ಸರ್ವಜ್ಞ ಮಹಾ ಮಂಟ[illegible] [illegible]ರ್ನಾಟಕದ ಮುಖ್ಯಮಂತ್ರಿ [illegible]ವರಾಜ ಅರಸು ಅವರು ಮಂಟಪದ ಉದ್ಘಾಟನೆ



ಸರ್ವಜ್ಞ ಮಂಟಪ

ಮಾಡಿದರು. ಶ್ರೀ ಹೆಚ್. ದೇವೀರಪ್ಪನವರು ಕ್ರಾಂತಿ ಕವಿ ಸರ್ವಜ್ಞನ ಹೆಸರನ್ನು ಮಹಾ ಮಂಟಪಕ್ಕೆ ಇಟ್ಟುದರ ಔಚಿತ್ಯ ಕುರಿತು ಉಪನ್ಯಾಸಮಾಡಿದರು. ಮಾಜಿ ಶಾಸಕ ನಾಟಕ ಕರ್ತೃ ಶ್ರೀ ಮಹದೇವ ಬಣಕಾರ ಅವರು "ತರಳಬಾಳು" ಹುಣ್ಣಿಮೆಯ ಆಚರಣೆಯ ಬಗೆಗೆ ಸುದೀರ್ಘವೂ ಬೋಧಪ್ರದವೂ ಆದ ಉಪನ್ಯಾಸ ಮಾಡಿದರು. ಮರುದಿನ ತಾ. ೨೯–೧–೭೪ರಂದು ಸಾಯಂಕಾಲ ೬ ಘಂಟೆಗೆ ಕರ್ನಾಟಕ ರಾಜ್ಯಪಾಲರಾದ ಮೋಹನಲಾಲ್ ಸುಖಾಡಿಯಾರವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯ ನಂತರ ಪ್ರತಿದಿನದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಕಾರ್ಯಕ್ರಮದ ಸವಿನೆನಪನ್ನು ಸಾರುವ ಶ್ರೀ ಹೆಚ್. ದೇವೀರಪ್ಪನವರ ಅಧ್ಯಕ್ಷತೆಯಲ್ಲಿ ರೂಪಗೊಂಡು ಮಹಾದೇವ ಬಣಕಾರರ ಸಂಪಾದಕತ್ವದಲ್ಲಿ ಹೊರಬಂದ ಸ್ಮರಣ ಸಂಚಿಕೆ, ಶ್ರೀ ಹೆಚ್. ದೇವೀರಪ್ಪನವರ ಸಂಪಾದಕತ್ವದಲ್ಲಿ ಹೊರಬಂದ ವಿಶ್ವಬಂಧು ಮರುಳಸಿದ್ಧ, ಹೆಚ್. ದೇವೀರಪ್ಪ ಮತ್ತು ಆರ್. ರಾಚಪ್ಪನವರು ಸಂಪಾದಿಸಿದ ಜೇಡರ ದಾಸಿಮಯ್ಯನ ವಚನಗಳು ಸಂಗ್ರಹಯೋಗ್ಯ ಪುಸ್ತಕಗಳಾಗಿವೆ.

ಮಠಾಧಿಪತಿಗಳ ರಾಷ್ಟ್ರೀಯ ಸಮ್ಮೇಲನ

ಈ ತರಳಬಾಳು ಹುಣ್ಣಿಮೆಯ ಅಂಗವಾಗಿ ಶ್ರೀ ಜಗದ್ಗುರುಗಳವರು ಮಠಾಧಿಪತಿಗಳ ರಾಷ್ಟ್ರೀಯ ಸಮ್ಮೇಲನವೊಂದನ್ನು ಕರೆದುದು ಔಚಿತ್ಯಪೂರ್ಣವಾಗಿತ್ತು. ವಿಶ್ವವಿಖ್ಯಾತ ವೇದಾಂತ ವಿದ್ವಾಂಸ ಶ್ರೀ ರಂಗನಾಥ ದಿವಾಕರರಿಂದ ಉದ್ಘಾಟಿಸಲ್ಪಟ್ಟ ಈ ಮಹಾಸಮ್ಮೇಲನದ ಅಧ್ಯಕ್ಷತೆಯನ್ನು ತ್ರಿವಿಧ ದಾಸೋಹಿಗಳಾದ ಶ್ರೀಶಿವಕುಮಾರ ಸ್ವಾಮಿಗಳವರು ವಹಿಸಿದ್ದರು. ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಮಟ್ಟದಲ್ಲಿ ಮಠಾಧಿಪತಿಗಳು ಸಂಘಟಿತರಾಗಿ ಮಾನವಕುಲದ ಅಭ್ಯುದಯ ನಿಃಶ್ರೇಯಸಗಳಿಗಾಗಿ ಶ್ರಮಿಸಬೇಕೆಂದು ತೀರ್ಮಾನ ಕೈಕೊಂಡುದು ಬಹುಮಹತ್ವದ ಅಂಶವಾಗಿದೆ. ಈ ಸಮ್ಮೇಲನಕ್ಕೆ ಸುತ್ತೂರು ಜಗದ್ಗುರು ಶಿವರಾತ್ರೀಶ್ವರ ಮಹಾಸ್ವಾಮಿಗಳು, ಶ್ರೀಶೈಲ ಜಗದ್ಗುರು ಚರಪಟ್ಟಾಧ್ಯಕ್ಷ ಲೀಲಾ ಪ್ರಸನ್ನ ಭಿಕ್ಷಾವರ್ತಿ ಸಾರಂಗ ಮಠದ ದೇಶಿಕೇಂದ್ರರು, ನಿಡುಮಾಮಿಡಿ ಸೂರ್ಯಸಿಂಹಾಸನಾಧೀಶ ಜ.ಚ.ನಿ. ಅವರು ಸರ್ಪಭೂಷಣ ಮಠಾಧ್ಯಕ್ಷ ಶಿವಕುಮಾರ ಸ್ವಾಮಿಗಳು. ಇವರೇ ಮೊದಲಾದ ನೂರಾರು ಜನ ಹರಗುರುಚರ ಪಟ್ಟಾಧ್ಯಕ್ಷರು ಆಗಮಿಸಿ ಸಮಾಜದಲ್ಲಿ ಧಾರ್ಮಿಕ ಜಾಗೃತಿಗಾಗಿ ಹೇಗೆ ಶ್ರಮಿಸಬೇಕು. ಪ್ರಜಾಧರ್ಮ, ರಾಷ್ಟ್ರಧರ್ಮ ರಕ್ಷಣೆಯನ್ನು ಹೇಗೆ ಮಾಡಬೇಕೆಂಬ ಬಗೆಗೆ ಸುದೀರ್ಘಚರ್ಚೆಮಾಡಿದರು. ಗೊತ್ತುವಳಿಗಳು ಆದವು. ಈ ಸಂಘಕ್ಕೆ ಸಿದ್ಧಗಂಗಾ ಶಿವಯೋಗಿಗಳು ಅಧ್ಯಕ್ಷರಾಗಿರುವಂತೆ ತೀರ್ಮಾನ ಕೈ ಕೊಂಡರು.

ಶಿವಶರಣ ಸಾಹಿತ್ಯ ಕೃತಿಗಳ ಮೆರವಣಿಗೆ

ತಾ. ೫–೨–೭೪ರಂದು ಸಾಲಂಕೃತ ಶ್ರೀ ಸಿರಿಗೆರೆ ಸಂಸ್ಥಾನಕ್ಕೆ ಸೇರಿದ ಅಕ್ಕಮಹಾದೇವಿ ನಾಮಾಂಕಿತ ಆನೆಯ ಮೇಲಿನ ಮೆರವಣಿಗೆಯ ವೈಶಿಷ್ಟ್ಯ ನಿಜಕ್ಕೂ ಹೆಮ್ಮೆತರುವಂತಹುದಾಗಿತ್ತು. ಸಾಹಿತ್ಯ ಕೃತಿಗಳ ಶ್ರೇಷ್ಠತೆಗೆ ಮಾರು ಹೋಗಿದ್ದ ಪ್ರಾಚೀನ ರಾಜಮಹಾರಾಜರುಗಳ ಕಾಲದಲ್ಲಿನ ಇತಿಹಾಸದ ನೆನಪನ್ನು ಮರುಕೊಳಿಸುವಂತಿದ್ದ ಈ ಮೆರವಣಿಗೆ ಕರ್ನಾಟಕದ ರಾಜ

(68ನೇ ಪುಟದಲ್ಲಿ ಮುಂದುವರಿದಿದೆ)

ಕ್ರಾಂತಿಕವಿ ಸರ್ವಜ್ಞ ಮಹಾ[illegible]

— [illegible]

ಸಿರಿಗೆರೆಯ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶರಾದ ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳವರು ಪ್ರತಿ ವರ್ಷವೂ ನಾಡಿನ ಪ್ರಮುಖ ಸ್ಥಳಗಳಲ್ಲಿ ಶ್ರೀ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಸುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿ.



ಶ್ರೀ ಹೆಚ್. ದೇವೀರಪ್ಪನವರು.

ಈ ವರ್ಷ ಈ ಮಹಾ ಸಮಾರಂಭವು ನವಕರ್ನಾಟಕದ ರಾಜಧಾನಿಯಾದ ಬೆಂಗಳೂರು ಮಹಾನಗರದಲ್ಲಿ ಅತ್ಯಂತ ವೈಭವೋಪೇತವಾಗಿ ನಡೆದು ಬೆಂಗಳೂರಿನ ನಾಗರಿಕರ, ಅಷ್ಟೇ ಅಲ್ಲ, ಕರ್ನಾಟಕಾಂಧ್ರ ದೇಶಗಳ ಲಕ್ಷಾಂತರ ಧರ್ಮಪ್ರೇಮಿಗಳ ಸಾಹಿತ್ಯಾರಾಧಕರ ಕಣ್ಮನಗಳನ್ನು ಸೂರೆಗೊಂಡಿತು.

ಬೆಂಗಳೂರು ನಾಗರಿಕರು ಹಿಂದೆಂದೂ ಕಾಣದ ಆ ಭವ್ಯ ಸುಂದರ ಮಹಾ ಮಂಟಪಕ್ಕೆ ಕ್ರಾಂತಿಕವಿ ಸರ್ವಜ್ಞ ಮಹಾ ಮಂಟಪವೆಂದೂ ಮಂಟಪದ ಮಹಾದ್ವಾರಕ್ಕೆ ಮಡಿವಾಳ ಮಾಚಿದೇವರ ಮಹಾಮಂಟಪವೆಂದೂ ಹೆಸರಿಡಲಾಗಿತ್ತು. ಪ್ರೇಕ್ಷಕರು ಮಹಾದ್ವಾರವನ್ನು ಸಮೀಪಿಸುತ್ತಿದ್ದಂತೆಯೇ ವೀರಭದ್ರನ ಅವತಾರವೆಂಬ ಹೊಗಳಿಕೆಗೆ ಪಾತ್ರನಾಗಿರುವ, ಕಟ್ಟುನಿಟ್ಟಾದ ನಡೆ ನುಡಿ ಆಚಾರ ವಿಚಾರಗಳಿಗೆ ಪ್ರಸಿದ್ಧಿಪಡೆದ ಮಡಿವಾಳ ಮಾಚಿದೇವನು ವಿಶ್ವಾಸದಿಂದ ಎದುರುಗೊಂಡು ನಿಮ್ಮ ಮೈ ಮನಗಳನ್ನ[illegible] ದ್ದೀರಾ ಎಂದು ಎಚ್ಚರಿಸುತ್ತ[illegible] ದ್ದಿತು. ಮಹಾದ್ವಾರವನ್ನು ನೋಡಿದೊಡನೆಯೇ ಜ[illegible] ವರ ಮನಸ್ಸಿನಲ್ಲಿದ್ದ ಅಮಂಗಲ ಗುಣ, ಶೀಲ ಸ್ವಭಾವಗಳು ಮಾಯವಾಗಿ ಅವರಲ್ಲಿ ಸದ್ಭಕ್ತಿ ಸೌಜನ್ಯ ಸೌಮನಸ್ಯಗಳು ಉದಯವಾಗುತ್ತಿದ್ದುವು.

ಮಹಾಮಂಟಪದ ಆವರಣದ ಎಡಪಾರ್ಶ್ವದಲ್ಲಿ ಬಾನಿನಲ್ಲಿ ಬೆಳಗುತ್ತಿರುವ ಶರಣಧ್ವಜ, 'ಸರ್ವಂ ಶಿವಮಯಂಜಗತ್' 'ಯತ್ರ ಜೀವಸ್ತತ್ರಶಿವಃ' ಎಂದು ಸಾರುತ್ತಿದ್ದಿತು. ಮಹಾಮಂಟಪವನ್ನು ಪ್ರವೇಶಿಸಿದೊಡನೆ ಕಂಬಕಂಬಗಳಲ್ಲಿ ರಾರಾಜಿಸುತ್ತಿದ್ದ ವಿಶ್ವದ ಪ್ರಸಿದ್ಧ ಸಂತ, ಸಿದ್ಧ, ಪ್ರವಾದಿ, ಮಾತಾಚಾರ್ಯ, ವೈರಾಗ್ಯಮೂರ್ತಿ, ಶಿವಶರಣ, ಕಾಯಕದಕಲಿ, ರಾಷ್ಟ್ರಭಕ್ತರೇ ಮೊದಲಾದವರ ಚಿತ್ರಪಟಗಳು ನೋಟಕರಲ್ಲಿ ವಿಶ್ವಬಂಧುತ್ವದ ವಿಶಾಲ ಭಾವವನ್ನು ಅಂಕುರಿಸುತ್ತಿದ್ದವು. 'ಶಿವ' ನಾಮಕ ತೋರಣ ಪಂಕ್ತಿಗಳು ಮಂಟಪದುದ್ದಗಲಕ್ಕೂ "ಶಿವ" ಜಪದ ದಿವ್ಯ ಸಂದೇಶವನ್ನು ಸ್ಸಾರಿ, ಎಲ್ಲರ ಹೃದಯಗಳನ್ನು ಶಿವಭಾವಾಪನ್ನಗೊಳಿಸುತ್ತಿದ್ದವು. ಕಣ್ಣಿಟ್ಟಲ್ಲಿ ಮುದ್ದಾದ ಅಕ್ಷರಗಳಲ್ಲಿ ಬರೆದು ಅಂಟಿಸಿದ್ದ ಶರಣರ ಸೊಳ್ನುಡಿಗಳು ಮಂಟಪದುದ್ದಗಲಕ್ಕೂ ಭಾವುಕರ, ಸಾಹಿತಿಗಳ, ಭಕ್ತರ ಅಂತರಂಗಗಳನ್ನು ಪದೇ ಪದೇ ಬಡಿದೆಚ್ಚರಿಕೆ ಕೊಡುತ್ತಿದ್ದವು. ಮಂಟಪದ ಒಳಹೊರಗೆ ಅಳವಡಿಸಿದ್ದ ವಿವಿಧ ವರ್ಣರಂಜಿತ ವಿವಿಧಾಕಾರದ ವಿದ್ಯುದ್ದೀಪಾಲಂಕಾರವು ಜನಮನದ ಕತ್ತಲೆಯನ್ನೋಡಿಸುವ ಬೆಡಗಿನಿಂದ ಕಂಡವರನ್ನು ಬೆಗಡುಗೊಳಿಸುವಂತೆ ಶೋಭಿಸುತ್ತಿತ್ತು. ಪ್ರತಿ ದಿನವೂ ವೇದಿಕೆಯು ಶಿವಯೋಗಿಗಳಿಂದ ಅನೇಕ ಹರಗುರುಚರಮೂರ್ತಿಗಳಿಂದ ಕೂಡಿ ಕಲ್ಯಾಣದ ಶಿವಶರಣರ ಶಿವಾನುಭವ ಗೋಷ್ಠಿಯ ಸವಿನೆನಪನ್ನುಂಟುಮಾಡುತ್ತಿತ್ತು. ವೇದಿಕೆಯ ಹಿಂಭಾಗದಲ್ಲಿ ಭವ್ಯವಾದ ಎರಡಾಳೆತ್ತರದ ಫಲಕದಲ್ಲಿ ಕಲಾತ್ಮಕವಾಗಿ ಬರೆಯಲ್ಪಟ್ಟ ವಿಶ್ವಬಂಧು ಮರುಳಸಿದ್ಧ, ವಿಶ್ವಬಂಧು ಬಸವಣ್ಣ, ಕ್ರಾಂತಿಕವಿ, ಜ್ಞಾನದಾಸೋಹಿ ಸರ್ವಜ್ಞ, ಶರಣ ಜನರ ಮೈಯ ಮೈಲಿಗೆ ನಿವಾರಿಸಿದ ವೀರಭದ್ರಾವತಾರಿ ಮಡಿವಾಳ ಮಾಚಿದೇವರ ತೈಲ ಚಿತ್ರಪಟವು ಎಂಥವನ ಹೃದಯ

'ನಿ ಷ್ಕಾ ಮ [illegible] ಾಡುವಂತಗೊಳ್ಳುವಂತೆ ಮಾಡು ಇಡಿಯ ಬಾಳು ಯ[illegible] ಶೈವರು ರಂಗಬಹಿರಂಗ[illegible] ಸಹಕ[illegible] ೋಹರವಾದ ಸುವಿಶಾಲ [illegible] ವಿ ಸರ್ವಜ್ಞನ ಹೆಸರನ್ನು [illegible] ಮುಂತಾದವುಗಳನ್ನು [illegible] ಯುತ್ತ[illegible] ದರ ಔಚಿತ್ಯವನ್ನು ಕುರಿತು [illegible] ವು ಮಾತುಗಳನ್ನು ಹೇಳಲೇಬೇಕು.

ಕನ್ನಡಿಗರೆಲ್ಲರೂ "ಇವನೆಮ್ಮವ ಇವನೆಮ್ಮವ" ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಹಿರಿಯ ಮಹಾನುಭಾವ. ಸರ್ವಕಾಲದಲ್ಲಿಯೂ ಸಲ್ಲುವವನಾತ; ಮತಗೊತ್ತಿಲ್ಲ, ಸರ್ವ ಮತದವರ ಮನ್ನಣೆಯನ್ನೂ ಪಡೆದವನು! "ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ? ಜಾತಿವಿಜಾತಿಯೆನಬೇಡ ದೇವನೊಲಿದಾತನೇ ಜಾತ" ಎಂಬ ಉದಾತ್ತ ಭಾವನೆಯನ್ನು ತಳೆದ ಆ ಮಹಾದಾರ್ಶನಿಕನನ್ನು ಮಹಾಯೋಗಿಯನ್ನು ಇಂತಹ ಜಾತಿಗೆ ಸೇರಿದವನು ಎಂದು ಎತ್ತಿ ಆಡುವುದು ಆತನ ತೇಜೋವಧೆ ಮಾಡಿದಂತೆ. ಆತನು ಹುಟ್ಟು ಶರಣ, ನಿಜ. ಆದರೆ ಎಲ್ಲಿಯೂ ತಾನು ವೀರಶೈವ ಜಾತಿಯವನೆಂದು ಹೇಳಿಕೊಳ್ಳಲಿಲ್ಲ. ಸರ್ವಜ್ಞನಾದವನಲ್ಲಿ ಆ ಜಾತಿ ಈ ಜಾತಿ ಎಂಬ ಸಣ್ಣ ಆಲೋಚನೆಗಳು ಸುಳಿಯುವುದೇ ಇಲ್ಲ. ಈತನು ಸದಾಚಾರಶೀಲರಾದ ಅಚ್ಚ ಲಿಂಗೈಕ್ಯರ ಉದರದಲ್ಲಿ ಜನಿಸಿದವನೆಂಬುದು ನಿಸ್ಸಂಶಯ. ಕೂಲಂಕಷವಾದ ಸಂಶೋಧನೆಯಿಂದ ಈ ವಿಷಯ ನಿರ್ಣಯಿಸಲ್ಪಟ್ಟಿದೆ.

ಬಸವಣ್ಣನವರು ತಮ್ಮ ಒಂದು ವಚನದಲ್ಲಿ ತಮ್ಮ ಪೂರ್ವಜನ್ಮದ ವೃತ್ತಾಂತವನ್ನು ಹೇಳಿರುವುದುಂಟು. ಹಾಗೆಯೇ ಸರ್ವಜ್ಞನೂ

> ಅಂದು ಜೇಡರದಾಸ ಹಿಂದೆ ನಾ ವರರುಚಿಯು
> ಇಂದು ಸರ್ವಜ್ಞ ನಾ ನಿಮ್ಮ ಕರುಣದ
> ಕಂದ ಕಾಣಯ್ಯ ಸರ್ವಜ್ಞ

ಎಂದು ಹೇಳಿ ತನ್ನ ಪೂರ್ವಜನ್ಮವೃತ್ತಾಂತವನ್ನಲ್ಲದಿದ್ದರೂ ತಾನು ಜೇಡರ ದಾಸಿಮಯ್ಯನಂತೆ ಜ್ಞಾನಿಯೂ ವರರುಚಿಯಂತೆ ವೈರಾಗ್ಯಶೀಲನೂ ಅಹುದೆಂದು ಹೇಳುತ್ತಾನೆ. ತಾನು ಯಾರಾರ ಪ್ರಭಾವಕ್ಕೆ ಒಳಗಾಗಿರುವನೆಂಬುದೂ ಈ ವಚನದಿಂದ ಸುವಿದಿತವಾಗುತ್ತದೆ. ಬಸವಣ್ಣನವರ ಬಗೆಗೆ ಈತನಿಗೆ ಅತಿಶಯವಾದ ಪೂಜ್ಯಭಾವವಿದ್ದಿತೆಂಬುದೂ ಅವರನ್ನು ಈತ ಎಷ್ಟು ಮೆಚ್ಚಿಕೊಂಡಿದ್ದನೆಂಬುದೂ,

> ಹಸಿವಿಗಂಬಲಿ ಮುದ್ದು ಬಿಸಿಲಿಗೆ ಕೊಡೆಮುದ್ದು
> ಬಸಿರೀಲಿ ಬಂದ ಮಗ ಮುದ್ದು ಲೋಕಕ್ಕೆ
> ಬಸವಣ್ಣ ಮುದ್ದು ಸರ್ವಜ್ಞ॥

ಎನ್ನುತ್ತಾನೆ. ತುಂಬಾ ಹಸಿವಾಗಿದ್ದಾಗ ಅಂಬಲಿ ಕೊಡುವಷ್ಟು ತೃಪ್ತಿಸಮಾಧಾನವನ್ನು ಮತ್ತಾವ 'ಅಮೃತ'ವೂ ನೀಡಲಾರದು; ಸುಡುಬಿಸಿಲಿನಲ್ಲಿ ಏಕಾಂಗಿಯಾಗಿ ಹೋಗುತ್ತಿರುವವನಿಗೆ ಕೊಡೆಯ ನೆಳಲು ಅತ್ಯಂತ ಹಿತಕರವಾಗುತ್ತದೆಯೆಂಬುದು ಅನುಭವಿಸಿದವರಿಗೇ ಗೊತ್ತು. 'ಹೆತ್ತವರಿಗೆ ಹೆಗ್ಗಣ ಮುದ್ದು' ಎಂಬಂತೆ ಬಸಿರೀಲಿಬಂದ ಮಗ ಮುದ್ದು; ಇದು ತೀರ ಸಹಜ. ಆದರೆ ಬಸವಣ್ಣ ಲೋಕಕ್ಕೆ ಮುದ್ದು ಹೇಗೆ? ಸುಜ್ಞಾನದ ಹಸಿವಿನಿಂದ ಕೊರಗುತ್ತಿದ್ದವರಿಗೆ ಬಸವಣ್ಣನವರು ಸದ್ಭಕ್ತಿಯ ಪ್ರಸಾದವನ್ನು ನೀಡಿದರು, ಜ್ಞಾನವೆಂಬ ಅಂಬಲಿಯನ್ನು ನೀಡಿದರು. ಸಾಮಾಜಿಕ ಅನ್ಯಾಯಕ್ಕೆ ಬಲಿಯಾಗಿ ಬೆಂದು ಬೇಗುದಿಗೊಂಡ ಜನತೆಗೆ ಬಸವಣ್ಣನವರು ನೆಲೆ ನೆಳಲುಗಳನ್ನು ಕೊಟ್ಟರು. ಬಸವಣ್ಣನವರ ನಡೆ ನುಡಿ ನಯ ವಿನಯಗಳು ಎಷ್ಟು ಹಿತವಾಗಿದ್ದುವೆಂದರೆ ಮಹಾಜ್ಞಾನಿಯೂ, ವೈರಾಗ್ಯಚಕ್ರವರ್ತಿಯೂ ಆಗಿದ್ದ ಅಲ್ಲಮಪ್ರಭುವಿನಂಥವರು ಕೂಡ, ತಾಯಿಯು ಪ್ರೀತಿವಾತ್ಸಲ್ಯಗಳಿಂದ ತನ್ನ ಮಗುವನ್ನು ಮುದ್ದಾಡುವಂತೆ ಮುದ್ದು ಮಾಡಿದರು. ಈ ಲೋಕಕ್ಕೆ ಆ ಲೋಕಕ್ಕೆ ಮಾತ್ರವಲ್ಲ; ಈ ಕಾಲಕ್ಕೆ ಆ ಕಾಲಕ್ಕೆ ಅಲ್ಲ; ಎಲ್ಲ ಕಾಲದ ಎಲ್ಲ ಲೋಕಕ್ಕೂ ಬಸವಣ್ಣನವರು ಅತ್ಯಂತ ಪ್ರೀತಿಪಾತ್ರರಾದವರು. ಆದುದರಿಂದಲೇ ನಾವು ಬಹು ಸಲಿಗೆಯಿಂದ ಅವರನ್ನು 'ಅಣ್ಣ' ಎಂದು ಕರೆಯುತ್ತೇವೆ. ಮೇಲಿನ ತ್ರಿಪದಿ ಇಷ್ಟು ಅರ್ಥವನ್ನು ಹೊತ್ತು ಮೆರೆಯುತ್ತಿದೆಯೆಂದು ತೋರುತ್ತದೆ. ನಾಡೋಜನಾದ ಸರ್ವಜ್ಞನು 'ಮುದ್ದು' ಎಂಬ ಮಾತನ್ನು ಎಷ್ಟು ಚೆನ್ನಾಗಿ ಬಳಸಿಕೊಂಡಿದ್ದಾನೆ!

ಸರ್ವಜ್ಞನು ಯಾವ ಶಾಲೆಯಲ್ಲಿ ಕಲಿತನೋ ತಿಳಿಯದು. "ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೆ ಆದೆ" ಎಂದಿದ್ದಾನೆ ಆತ. ಗರ್ವದಿಂದ ಬೀಗುತ್ತಿರುವವನ ಅಂತರಂಗದಲ್ಲಿ ಜ್ಞಾನಕ್ಕೆ ಎಡೆಯೆಲ್ಲಿರುತ್ತದೆ? ಅಹಂಕಾರವೇ ತುಂಬಿ ತುಳುಕುತ್ತಿರುವಾಗ? ಆದುದರಿಂದಲೇ "ಸರ್ವಜ್ಞನೆಂಬುವನು ಗರ್ವದಿಂದಾದವನೆ"? ಎಂದು ಪ್ರಶ್ನಿಸುತ್ತಾನೆ.

ಈತನು ಶಿವಭಕ್ತ, ಶಿವಯೋಗಿ; ಶಿವಕೃಪೆಯಿಂದಲೇ ಸರ್ವವಿಷಯಗಳನ್ನೂ ತಿಳಿಯಬಲ್ಲ ಶಕ್ತಿಯನ್ನು ಪಡೆದಿದ್ದ. ಇದಿಲ್ಲದೆ ಸರ್ವರೊಳೊಂದೊಂದು ನುಡಿಗಲಿತು ಸರ್ವಜ್ಞನಾಗುವುದು ಸಾಧ್ಯವಿಲ್ಲ. ಈತ ಹೇಳದಿರುವ ವಿಷಯವೇ ಇಲ್ಲ; ನಡೆದಾಡುವ ವಿಶ್ವಕೋಶವಿದ್ದಂತೆ. ಭಕ್ತಿ, ಜ್ಞಾನ, ವೈರಾಗ್ಯ, ಎಲ್ಲ ಲೌಕಿಕ ವಿದ್ಯೆಗಳು, ಜ್ಯೋತಿಷ, ಭೈಷಜ್ಯ, ನೀತಿ ಒಂದೊಂದು

ಮತದವರ ಗುಣದೋಷ ವೈಲಕ್ಷಣ್ಯಗಳು, ದೇಶದ ವರ್ಣನೆ— ಹೀಗೆ ನೂರಾರು ವಿಷಯಗಳನ್ನು ಕುರಿತು ಹಾಡಿದ್ದಾನೆ. ಇಷ್ಟೆಲ್ಲ ಹೇಳಿದರೂ ವಿದ್ಯೆಯ ಪ್ರಯೋಜನ ಕೇವಲ ಸೀಮಿತವೆಂಬುದನ್ನು ಸೂಚಿಸಲು ಮರೆತಿಲ್ಲ.

'ಅಕ್ಕರವು ಲೆಕ್ಕಕ್ಕೆ ತರ್ಕ ತಾ ವಾದಕ್ಕೆ
ಮಿಕ್ಕ ಓದುಗಳೆಲ್ಲ ತಿರುಪೆಗೆ, ಮೋಕ್ಷಕ್ಕೆರ
ಡಕ್ಕರವೆ ಸಾಕು ಸರ್ವಜ್ಞ'

—ಎಂಬುದು ಈತನ ಖಚಿತ ಸುಸ್ಪಷ್ಟ ಅಭಿಪ್ರಾಯ. ಅಂತಿಮದಲ್ಲಿ ಪ್ರಯೋಜನಕ್ಕೆ ಬರುವುವು ಎರಡು ಅಕ್ಷರಗಳೆ– ಹರ, ಶಿವ, ಹರಿ, ರಾಮ, ಕೃಷ್ಣ, ಅಲ್ಲಾ, ಜಿನ, ದಮ್ಮ ಇತ್ಯಾದಿ. ಹರನಾಮವನ್ನೋ ಹರಿನಾಮವನ್ನೋ ಜಪಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗುವರು. ತಾವು ಕಂಡು ಉಂಡ ಆನಂದವನ್ನು ಬಣ್ಣಿಸುವಾಗ ಬಹು ಎಚ್ಚರಿಕೆಯಿಂದಿರಬೇಕೆಂದು ಈತನ ಅಭಿಪ್ರಾಯ, ಅದು ಅನಿರ್ವಚನೀಯವಾದುದಾಗಿರುವುದರಿಂದ, ಆದುದರಿಂದಲೇ

"ಬೊಮ್ಮವನು ಅರಿತಿಹರೆ ಸುಮ್ಮನೇ ಇರಬೇಕು
ಬೊಮ್ಮವನು ಅರಿತು ಉಸುರಿದರೆ ಕಳಹೋಗಿ
ಕೆಮ್ಮಿ ಸತ್ತಂತೆ ಸರ್ವಜ್ಞ"

ಎಂದು ಎಚ್ಚರಿಸಿದ್ದಾನೆ.

ಕಾಯಕತತ್ತ್ವವನ್ನು ಕುರಿತು ಈತನಾಡಿರುವ ಮಾತುಗಳು ಇಂದಿಗೂ ಮನನೀಯವಾಗಿರುತ್ತವೆ. ಗುಂಡುಹೊಡೆದಂತೆ ಈತನ ಮಾತುಗಳು.

ಖಂಡಿಸದೆ ಕರಣವನು ದಂಡಿಸದೆ ದೇಹವನು
ಉಂಡುಂಡು ಸ್ವರ್ಗಕ್ಕೈದಲ್ಕೆ ಅದನೇನು
ರಂಡೆಯಾಳುವಳೆ ಸರ್ವಜ್ಞ

ಮೈಮನಗಳನ್ನು ದಣಿಸದೆ, ಸತ್ಯಶುದ್ಧ ಕಾಯಕವನ್ನು ಮಾಡದೆ ಮೈಗಳ್ಳತನವನ್ನೇ ತಮ್ಮ ಉದ್ಯೋಗವನ್ನಾಗಿ ಮಾಡಿಕೊಂಡು ಮೈಬೆಳೆಸಿಕೊಳ್ಳುತ್ತಿರುವ ಬೂರ್ಜ್ವಾಗಳಿಗೆ ಇದು ತಕ್ಕಂತಹ ಛಾಟಿ ಏಟು. ಇದೇ ತಾತ್ಪರ್ಯವನ್ನುಳ್ಳ ಇನ್ನೊಂದು ಪದ್ಯವಿದೆ.

ಕಯ್ಯೆತ್ತಿ ಕೊಡಲಿಲ್ಲ ಮೈಯ್ಯ ದಂಡಿಸಲಿಲ್ಲ
ಅಯ್ಯಗಳೆಲ್ಲ ಹರಿಯಲ್ಕೆ ಕೈಲಾಸ
ಕೆಯ್ಯ ಮಂಚಿಕೆಯೆ ಸರ್ವಜ್ಞ

ಕಯ್ಯೆತ್ತಿ ದಾನಮಾಡಬೇಕು, ಮೈಮುರಿಯೆ ದುಡಿಯಬೇಕು ಎಂಬುದು ಈ ಪದದ ಸಾರ. 'ಕೆಯ್ಯ ಮಂಚಿಕೆಯೆ' ಎಂಬ ಉಪಮಾನವನ್ನು ಎಷ್ಟು ಔಚಿತ್ಯಪೂರ್ಣವಾಗಿ ಬಳಸಿದ್ದಾನೆ ಈತ ! ಬೆಳೆದ ಹೊಲಗಳಲ್ಲಿ ಹಕ್ಕಿಗಳನ್ನು ಓಡಿಸುವುದಕ್ಕಾಗಿ ಕಳ್ಳಕಾಕರಿಂದ ಹೊಲದ ಪೈರುಗಳನ್ನು ರಕ್ಷಿಸು... ಹಾಕಿಕೊಳ್ಳುವುದುಂಟು. ... ಇಷ್ಟುಚೆನ್ನಾಗಿ ಅರಿತಿರುವ ...

ಈತನು ದೊರೆಗಳಿಗೆ ಹೇಳುವ ... ಇಂದಿಗೂ ಮುಂದಿನ ಕಾಲಕ್ಕೂ ಕೂಡ ಅನ್ವಯವಾ...ತ್ತಿದೆ—

ಒಕ್ಕಲನು ನಲುಗಿಸದೆ, ಲೆಕ್ಕವನು ಸೆಕ್ಕಿಸದೆ
ಕಕ್ಕುಲತೆಯಿಂದ ನಡೆಯಿಸುವ ಅರಸು ತಾ
ಚಕ್ಕಂದ ವಿರುವ ಸರ್ವಜ್ಞ.

ಒಕ್ಕಲು ಎಂದರೆ ಇಲ್ಲಿ, ಪ್ರಜೆಗಳು ಎಂದರ್ಥ. ಅವರಿಗೆ ಕಿರುಕುಳ ಕೊಡಬಾರದು. ಹಿಂಸಿಸಬಾರದು ಎಂದು 'ನಲುಗಿಸದೆ' ಎಂಬುದಕ್ಕೆ ಅರ್ಥೈಸಬೇಕು. 'ಲೆಕ್ಕವನು ಸೆಕ್ಕಿಸದೆ' ಅಷ್ಟೇ ಅರ್ಥಪೂರ್ಣವಾದುದು. ಪ್ರಜೆಗಳಮೇಲೆ ವಿಪರೀತ ತೆರಿಗೆಯನ್ನು ಹಾಕುವುದುಹೊಲ್ಲ. ಅವರನ್ನು ಕಕ್ಕುಲತೆಯಿಂದ, ಎಂದರೆ ಬಹುವಾದ ವಾತ್ಸಲ್ಯದಿಂದ ನಡೆಯಿಸಿಕೊಳ್ಳುವ ಅರಸನನ್ನು ಯಾವ ಚಿಂತೆಯೂ ಬಾಧಿಸುವುದಿಲ್ಲ. ಅಂತಹ ಅರಸನು 'ಚಕ್ಕಂದ'ದಲ್ಲಿರುವನು. ಮೂರೇ ಮೂರು ಪಾದಗಳಲ್ಲಿ ಎಂತಹ ಹಿರಿದಾದ ಅರ್ಥವನ್ನು ಹುದುಗಿಸಿಟ್ಟಿದ್ದಾನೆ ನೋಡಿ.

ಸರ್ವಜ್ಞ ವಚನಗಳು ಗುರುಪದ್ಧತಿ ಲಿಂಗಪದ್ಧತಿ, ಜ್ಞಾನಪದ್ಧತಿ, ದಾನಪದ್ಧತಿ ಲೇಸುಪದ್ಧತಿ ಎಂದು ಮುಂತಾಗಿ ವಿಂಗಡಿಸಲ್ಪಡುತ್ತಾ ಇದೆ. 'ಪದ್ಧತಿ' ಎಂಬ ಮಾತು ಈ ಅರ್ಥದಲ್ಲಿ ಹೇಗೆ ಮತ್ತು ಏಕೆ ಬಳಕೆಗೆ ಬಂದಿತು ಎಂಬುದು ವಿಚಾರಣೀಯವಾಗಿದೆ.

ಒಟ್ಟಿನಲ್ಲಿ ಸರ್ವಜ್ಞನು ಹಿಂದುಮುಂದುಗಳ ದೃಷ್ಟಿಯನ್ನು ಹೊಂದಿದ್ದ ದ್ರಷ್ಟಾರ. ಆತನ ಒಂದೊಂದು ಪದ್ಯವೂ ಅನುಭವದ ಅಮೃತವನ್ನು ಹೊರಸೂಸುತ್ತಿದೆ. ಆತನಂತೆ ನಿಜವಾಗಿಯೂ ವಿಶಾಲ ಹೃದಯವುಳ್ಳ ಕವಿಗಳು ಅಪರೂಪ. ಆತನ ಒಂದು ಪದ್ಯ,

ಊರೆಲ್ಲ ನಂಟರು ಕೇರಿಯೆಲ್ಲವು ಬಳಗ
ಧಾರಿಣಿಯು ಎಲ್ಲ ಕುಲದೈವವಾಗಿನ್ನು
ಯಾರನ್ನು ಬಿಡಲೊ ಸರ್ವಜ್ಞ

—ಇಂತಿದೆ. ಇಂತಹ ಮಹಾನುಭಾವನ ಹೆಸರನ್ನು ತರಳಬಾಳು ಹುಣ್ಣಿಮೆ ಮಹೋತ್ಸವದ ಭವ್ಯಮಂಟಪಕ್ಕೆ ಇಟ್ಟಿರುವುದು ಅರ್ಥಪೂರ್ಣವಾಗಿದೆ; ಶ್ರೀ ಸಿರಿಗೆರೆಯ ಸದ್ಧರ್ಮ ಸಿಂಹಾಸನಾಧೀಶರಾದ ಶ್ರೀ ತರಳಬಾಳು ಜಗದ್ಗುರುಗಳವರ ಧ್ಯೇಯಧೋರಣೆಗಳಿಗೆ ಒಪ್ಪುವಂತಹುದಾಗಿರುತ್ತದೆ.

…ಗಳೂರಿನಲ್ಲಿ ಜರುಗಿದ

ಅಖಿಲಭಾರತವೀರಶೈವಮಹಾಸಭೆಯ
ಅಧ್ಯಕ್ಷಭಾಷಣಸಾರಾಂಶ

— ಜಿ. ಬಿ. ಮಲ್ಲಾರಾಧ್ಯ (ನಿವೃತ್ತ ಐ.ಎ.ಎಸ್.)

ವೀರಶೈವ ಮಹಾಸಭೆಯು ಮಹೋನ್ನತ ಉದ್ದೇಶವನ್ನಿಟ್ಟುಕೊಂಡು ಉದಯವಾಗಿದೆ. ಬುದ್ಧದೇವನ ನಂತರ ಬೌದ್ಧದರ್ಮ ಸಮಾಜಗಳನ್ನು ಸುವ್ಯವಸ್ಥಿತವಾಗಿ ಸಂಘಟಿಸಲು ಬೌದ್ಧ ಮತಾವಲಂಭಿಗಳಾದ ಅನೇಕ ಮಹನೀಯರೂ ಹಾಗೂ ರಾಜಮಹಾರಾಜರೂ ಸಾರ್ವಭೌಮರೂ ಮಹಾಸಭೆಗಳನ್ನು ಏರ್ಪಡಿಸಿದರು. ಈ ಬೌದ್ಧ ಮಹಾ ಸಭೆಗಳ ಸಾಲಿನಲ್ಲಿ ನಮ್ಮ ವೀರಶೈವ ಮಹಾಸಭೆ ನಿಲ್ಲುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ವಿಜಯನಗರ ಸಾಮ್ರಾಜ್ಯ, ಕೆಳದಿ, ಬೀಳಗಿ ಮುಂತಾದ ಸಂಸ್ಥಾನಗಳ ಪತನಾನಂತರ ಅಖಂಡ ಕರ್ನಾಟಕ ನಿಶೆಯ ನೀರವತೆಯಲ್ಲಿ ಮುಳುಗಿ, ತನ್ನ ಉಜ್ವಲ ಪರಂಪರೆಯನ್ನು ಮರೆತಿದ್ದಿತು. "ಕನ್ನಡ ನಾಡೆಂದರೆ ವೀರಶೈವರ ನಾಡು", "ಕನ್ನಡ ಸಾಹಿತ್ಯವೆಂದರೆ ವೀರಶೈವ ಸಾಹಿತ್ಯ" ಎಂಬಷ್ಟರ ಮಟ್ಟಿಗೆ ಈ ನಾಡಿನ ಮಹತ್ವಪೂರ್ಣ ಘಟಕವಾಗಿರುವ ವೀರಶೈವ ಸಮಾಜಕ್ಕೂ ಇಂಥ ದಾರುಣ ಪರಿಸ್ಥಿತಿ ಸಹಜವಾಗಿಯೇ ಒದಗಿತು. ಎರಡು ಶತಮಾನಗಳವರೆಗೆ ನಡೆದು ಬಂದ ಈ ಪರಿಸ್ಥಿತಿ ಮುಂದುವರಿದರೆ ಕನ್ನಡನಾಡಿಗೆ "ಪ್ರಾಚೀನ ಪರಂಪರೆ ಇದ್ದರೂ ಕೂಡ ಹೇಳಹೆಸರಿಲ್ಲ" ಎಂಬ ಸ್ಥಿತಿ ಪ್ರಾಪ್ತವಾಗಬಹುದೆಂದು ಕನ್ನಡನಾಡಿನ ಉದ್ಧಾರ ಪ್ರಜ್ಞೆಯಿಂದ ಅಂದಿನ ವೀರಶೈವ ದ್ರಷ್ಟಾರರು ಈ ಶತಮಾನದ ಆದಿಭಾಗದಲ್ಲಿ ವೀರಶೈವ ಮಹಾಸಭೆಯ ದರ್ಶನವನ್ನು ಕಂಡರಿದರು. ಲೋಕ ಸಂಗ್ರಹ ಸಂಕಲ್ಪದ ಸಾಕಾರರೂಪ ಈ ವೀರಶೈವ ಮಹಾಸಭೆ.

ಮಹಾ ಮನೆಯ ಆದ್ಯ ಶಿಲ್ಪಿಗಳು

ಈ ಮಹಾಮನೆಯ ಆದ್ಯ ಶಿಲ್ಪಿಗಳೆಂದರೆ ಲಿಂಗೈಕ್ಯ ಹಾನಗಲ್ಲ ಕುಮಾರಸ್ವಾಮಿಗಳು, ತ್ಯಾಗವೀರ ಸಿರಸಂಗಿ ಲಿಂಗರಾಜರು, ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟರು, ವಾರದ ಮಲ್ಲಪ್ಪನವರು, ನನ್ನ ವಂಶಕ್ಕೆ ಸೇರಿದ ನನ್ನ ಸಮೀಪ ಬಂಧುಗಳಾದ ಲಿಂಗೈಕ್ಯ ಬೀಚನಹಳ್ಳಿ ಬಸವಾರಾಧ್ಯರು ಮೊದಲಾದವರು. ಅವರು ಕೈಗೆತ್ತಿಕೊಂಡ ಮಹಾಮಣಿಹವನ್ನು ಪೂರೈಸಲು ಮುಂದೆ ಬಂದ ಹಿಂದಿನ ಅಧ್ಯಕ್ಷರುಗಳು ಅನೇಕರು ಪ್ರಾತಃಸ್ಮರಣೀಯರು. ಹಿಂದಿನ ಮಹಾಸಭೆಗಳು ಅಂದಂದಿನ ಅವಶ್ಯಕತೆಗಳನ್ನು ಅರಿತು ಆ ಕೊರತೆಗಳನ್ನು ತುಂಬುತ್ತ ಸಮಾಜವನ್ನು ಮುನ್ನಡೆಸಿದವು.

ಇಂದು ಈ ಮಹಾಸಭೆಯ ಮುಂದೆ ಎಂದಿಗಿಂತಲೂ ದೊಡ್ಡ ಸಮಸ್ಯೆಗಳು ಪೆಡಂಭೂತವಾಗಿ ನಿಂತಿವೆ. ಪ್ರಾಯಶಃ ಕಲ್ಯಾಣ ಕ್ರಾಂತಿಯ ಕೊನೆಯ ದಿನ ವೀರಶೈವ ಸಮಾಜ ಅನುಭವಿಸಿದ ಸಂಕಟಗಳನ್ನು ಇಂದು ನಮ್ಮ ಸಮಾಜ ಅನುಭವಿಸುತ್ತಲಿದೆ. ಈ ಸಂದರ್ಭದಲ್ಲಿ ವೀರಶೈವ ಸಮಾಜದ ಉಜ್ವಲ ಇತಿಹಾಸ, ಉದಾತ್ತ ಧ್ಯೇಯಧೋರಣೆ, ನಾಡಿಗೆ ನೀಡಿದ ಕಾಣಿಕೆ, ಲೋಕಕ್ಕೆ ಕೊಟ್ಟ ಸಂದೇಶ ಇವುಗಳ ಸ್ಮರಣೆ ನಮ್ಮ ನೆನಪಿನಲ್ಲಿ ಸ್ಥಿರವಾಗಿ ನಿಂತು ನೆಲೆಯೂರಿದರೆ ಮುನ್ನಡೆಗೆ ಮಹಾಶಕ್ತಿಯಾಗಿ ಪರಿಣಮಿಸುತ್ತದೆ. ತೂಗಾಡುವ ಉಯ್ಯಾಲೆ ಹಿಂದೆ ಹೋದಷ್ಟೂ ಮುಂದೆ ಬಹಳಷ್ಟು ವೇಗದಲ್ಲಿ ಸಾಗುತ್ತದೆ. ಬೇರು ಕೆಳಗೆ ಇಳಿದಷ್ಟೂ ಮರ ಮೇಲೇರುತ್ತದೆ.

ವೀರಶೈವದ ಕಾಲವು ಶಿವಾಗಮಗಳಷ್ಟು ಪ್ರಾಚೀನವಾದುದೆಂಬುದಕ್ಕೆ ಕಾಮಿಕಾದಿ ವಾತುಲಪರ್ಯಂತವಾದ ಆಗಮಗಳಲ್ಲಿ ಕಂಡುಬರುವ ಷಟ್‌ಸ್ಥಲ ಇಷ್ಟಲಿಂಗ ಮೊದಲಾದುವುಗಳ ಕಲ್ಪನೆಯೇ ಸಾಕ್ಷಿ. ತಾತ್ವಿಕ ಕ್ಷೇತ್ರದಲ್ಲಿ, ಧಾರ್ಮಿಕ ವಿಚಾರದಲ್ಲಿ, ಸಾಮಾಜಿಕ ರೀತಿ ನೀತಿಗಳಲ್ಲಿ ಕಾಲಕಾಲಕ್ಕೆ ಮಾರ್ಪಡುತ್ತ ಹೋಗುವುದು ವೀರಶೈವದ ಲಕ್ಷಣ.

ವೀರಶೈವ ಒಂದು ಸಹಜ ಧರ್ಮ

ವೀರಶೈವ ಒಂದು ಜಾತಿಯಲ್ಲ. ಪ್ರಪಂಚದಲ್ಲಿ ಇದ್ದು ತನ್ನ ದೈನಂದಿನ ವ್ಯವಹಾರವನ್ನೆಲ್ಲ ದೈವೀ ವ್ಯವಹಾರವಾಗಿಸಿ ಬದುಕಬಲ್ಲ, ಅಂದರೆ ಅಂಗ ಕ್ರಿಯೆಗಳನ್ನು ಲಿಂಗ ಕ್ರಿಯೆಯನ್ನಾಗಿ ಮಾಡಬಲ್ಲವರೆಲ್ಲ ವೀರಶೈವರು. ವೀರಶೈವದ ಲಿಂಗಪೂಜೆಯ ದಿವ್ಯದರ್ಶನ

ಮಾಡಿಕೊಳ್ಳಬೇಕಾದರೆ ಪ್ರಭುದೇವರ ಈ ವಚನವನ್ನು ನೋಡಿ :

"ಅನಾದಿ ಶರಣನ ಹೃತ್ಕಮಲ ಮಧ್ಯದ ತೇಜೋಮಯವನೇನೆಂದುಪಮಿಸುವೆ ? ಜಲವೆ ಪದಶಿಲೆ, ಪೃಥ್ವಿಯೆ ಪಿಂಡಿಗ, ಆಕಾಶವೇ ಲಿಂಗ, ಸಪ್ತಸಮುದ್ರಗಳೆ ಪಂಚಾಮೃತ, ಮೇಘವೆ ಅಗ್ಗವಣಿಯ ಬಿಂದಿಗೆ, ಮಳೆಗಾಲವೆ ಮಜ್ಜನ, ಚಂದ್ರಮನೆ ನೊಸಲ ಗಂಧ, ನಕ್ಷತ್ರವೆ ಅಕ್ಷತೆ, ತರುಮರಾದಿಗಳೆ ಪತ್ರೆಪುಷ್ಪ' ಮೊಳಗೆ ಪಂಚಮಹಾಶಬ್ದ, ಮಾಗಿಯೆಂಬ ಪರಿಯಾಣವ ಬೆಳಗಿ, ಬೇಸಗೆಯೆಂಬ ಓಗರವ ಗಡಣಿಸಿ, ಸರ್ವ ಪರಿಮಳದ ತುಪ್ಪವ ನೆರೆದು, ಪರವೆಂಬ ಮೇಲೋಗರವನಿಕ್ಕಿ......"

ಇಂತಹ ಸಿದ್ಧಿಗಾಗಿ ಬೇಕು ಷಟ್‌ಸ್ಥಲ ಅಷ್ಟಾವರಣ ಮತ್ತು ಪಂಚಾಚಾರ. ಷಟ್‌ಸ್ಥಲವೇ ಆತ್ಮ, ಪಂಚಾಚಾರವೇ ಪ್ರಾಣ, ಅಷ್ಟಾವರಣವೇ ದೇಹ ಎನ್ನುವಷ್ಟರಮಟ್ಟಿಗೆ ಇವು ಪರಿಪೂರ್ಣವಾಗಬೇಕೆನ್ನುವವನಿಗೆ ಅವಶ್ಯ. ಇವು ವೀರಶೈವಕ್ಕೆ ಮಂತ್ರ; ಪ್ರಜಾಪ್ರಭುತ್ವ ಅದರ ತಂತ್ರ.

ವೀರಶೈವ ಪ್ರತ್ಯೇಕವಾಗಿ ನಿಲ್ಲುವ ಧರ್ಮವಲ್ಲ. ಎಲ್ಲರನ್ನೂ ಒಳಗುಮಾಡಿಕೊಳ್ಳುವ ಧರ್ಮ. ರಾಜಾಶ್ರಯ, ಅಧಿಕಾರ, ಸಿರಿಸಂಪತ್ತುಗಳ ಹಂಗಿಗೆ ಜೋತುಬಿದ್ದ ಧರ್ಮವಲ್ಲ. ಆಡಂಬರ, ಪ್ರತಿಷ್ಠೆ, ಕೀರ್ತಿಗಳಿಗಾಗಿ ಮಾಡುವಕರ್ಮ ಇಲ್ಲಿಲ್ಲ. ಇದು ಸಹಜ ಧರ್ಮ.

ನಡೆ-ನುಡಿಗಳಲ್ಲಿ ಕ್ರಿಯಾಜ್ಞಾನಗಳಲ್ಲಿ ಸಾಮರಸ್ಯವನ್ನು ಕಾಣುವ ಸಹಜ ಧರ್ಮ. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಈ ಧರ್ಮದಲ್ಲಿ ಮೇಲು-ಕೀಳು ಗಂಡು-ಹೆಣ್ಣು, ಬಡವ-ಬಲ್ಲಿದ ಮುಂತಾದ ಕೃತ್ರಿಮ ಭೇದಗಳಿಗೆ ಎಡೆಯಿಲ್ಲ. ವೀರಶೈವರಿಗೆ ಸಮಾಜವಾದ ಹೊಸದಲ್ಲ. ಅದರ ಕಲ್ಪನೆ ನೂರಾರು ವರ್ಷಗಳಿಂದ ಬಂದ ವಿಶೇಷ ಅನುಭವ. ಸಮಾಜವಾದವನ್ನು ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತಂದ ಕೀರ್ತಿ ಭರತಖಂಡದಲ್ಲಿ ವೀರಶೈವರಿಗೆ ಸಲ್ಲಬೇಕು. ಸಮಾಜವಾದದ ನಿಜ ಸ್ವರೂಪವನ್ನು ನಿದರ್ಶನಪೂರ್ವಕವಾಗಿ ಸಿದ್ಧಾಂತಗೊಳಿಸಿದವರು ವೀರಶೈವರು.

ಬಸವಣ್ಣನವರ ಜನರು

ಭಾರತೀಯ ಸಮಾಜದಲ್ಲಿ ಗುಣಕರ್ಮವನ್ನು ಆಧರಿಸಿ ಹುಟ್ಟಿದ ಚಾತುರ್ವರ್ಣ್ಯ ವ್ಯವಸ್ಥೆ ಕಾಲಾಂತರದಲ್ಲಿ ಜಾತಿನಿಷ್ಟವಾದು[illegible] ಸಂಖ್ಯೆ ಮಿತಿಮೀರಿ ಬೆಳೆ[illegible] ಕೀಳೆಂಬ ಭಾವನೆ ಮೂಡಿ[illegible] ಸ್ಪೃಶ್ಯಾಸ್ಪೃಶ್ಯತೆಯಲ್ಲಿ [illegible]ರುವ ಅಂತ್ಯಜ, ಅನಾಮಿಕ ಎಂಬ ಕೃತ್ರಿಮ ವರ್ಗಗಳನ್ನು ಕುಲಜರು ತಮ್ಮ ಸ್ವಾರ್ಥಕ್ಕಾಗಿ ಕಲ್ಪಿಸಿದರು. ಪಶುಪಕ್ಷಿಗಳನ್ನು ಮುಟ್ಟಬಹುದಾದವರು. ಸ್ವಜ ಬಂಧುಗಳೇ ಆದ ಈ ವರ್ಗವನ್ನು ಮುಟ್ಟಿದರೆ ಮೈಲಿಗೆಯೆಂಬ ಮಡಿವಂತಿಕೆಯ ಮನೋಭ್ರಾಂತಿಯನ್ನು ಬೆಳೆಸಿದರು. ಸಾವಿರಾರು ವರ್ಷಗಳವರೆಗೆ ಈ ಪತಿತವರ್ಗ ಉನ್ನತವರ್ಗದವರ ಹಿಂಸೆಯನ್ನು ಸಹಿಸಿ ಅವರಿಗಾಗಿ ದುಡಿದು ಮಡಿಯುತ್ತಿದ್ದಿತು. ಇವರ ಆರ್ತಧ್ವನಿಯನ್ನು ಕೇಳಿ ಹುಟ್ಟಿಬಂದರು ಬುದ್ಧ, ಬಸವ, ಗಾಂಧೀಜಿ. ಇವರಲ್ಲಿ ಬಸವಣ್ಣನವರ ಜನನ ಇವರಿಗಾಗಿಯೇ; ಇವರೇ ಬಸವಣ್ಣನವರ ಜನರು.

"ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ" ಎಂಬ ಮಾತು ಬಸವಣ್ಣನವರ ಬದುಕು.

"ಹರನು ಮೂಲಿಗನಾಗಿ ಪುರಾತರೊಳಗಾಗಿ
ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯ
ಕಳೆದ ಹೊಲೆಯ ಜಾತಿ ಸೂತಕವನೆಮ್ಮಯ್ಯ,
ಮಾದಾರನ ಮಗ ನಾನಯ್ಯ
ಪನ್ನಗಭೂಷ ಕೂಡಲ ಸಂಗಯ್ಯ
ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯ"

ಇದು ಅವರ ನಂಬಿಕೆ. ಹೊಲೆಯ, ಮಾದಿಗ, ಡೋಹರ ಮೊದಲಾದ ಅಂತ್ಯಜರು ಮತ್ತು ಅಗ್ರಜರು ಇವರೆಲ್ಲ ಒಂದೇ ಎಂದು ಭಾವಿಸಿ ಸಕಲ ಜೀವಾತ್ಮರಗೆ ಲೇಸನೇ ಬಯಸಲು ಹುಟ್ಟಿದ ಈ ಸಮಾಜದ ಆದರ್ಶಗಳ ಕಲ್ಪನೆ ನಮ್ಮ ಜನತೆಗೆ ಆಗಿರಲು ಸಾಕು.

ಭದ್ರ ಬುನಾದಿ

ವರ್ಣಾಶ್ರಮಗಳ ವೈಷಮ್ಯ ಜಾತಿ-ಜಾತಿಗಳ ಹೋರಾಟಗಳನ್ನು ಉಚ್ಚಾಟನೆಗೊಳಿಸಿ, ಸಮತೆ, ಸ್ವಾತಂತ್ರ್ಯ, ಬಾಂಧವ್ಯಗಳಂತಹ ವಿಶ್ವಮಾನ್ಯತತ್ತ್ವಗಳ ಮೇಲೆ ನಿಂತ ವೀರಶೈವಸಮಾಜಮಂದಿರದ ಬುನಾದಿಯ ಭದ್ರತೆಯು ಎಷ್ಟೆಂಬುದು ಸ್ಪಷ್ಟವಾಗುತ್ತದೆ.

'ನಿಷ್ಕಾಮ[illegible]ಮಾಡುವಂತೆ[illegible]ಳನಾದ,
ಇಡಿಯ ಬಾಳು ಯೆ[illegible]ಶೈವರು [illegible]ವೇದವನೋದಿ ಹಾರುಹ
ರಂಗಬಹಿರಂಗದ[illegible] ನಾದ..."
[illegible] ಸಹಕಾ[illegible]

[illegible]ಮುಂತಾದವುಗಳನ್ನು [illegible]ಜಾತಿ ವೃಕ್ಷದ ಬೇರನ್ನು [illegible]ತ್ತಿ [illegible]ಜಾತ್ಯತೀತ[illegible] ಸಮಾಜವನ್ನು ಜಾತ್ಯತೀತ ರಾಷ್ಟ್ರದ ದರ್ಶನವನ್ನು ಕಂಡ ಬಸವಣ್ಣನ ಸಮಾಜ ಯಾವುದೇ ಕಾಲದ ರಾಜಕೀಯ ಗಲಭೆಗೆ ಸಿಕ್ಕು ಸಾಯುವುದಿಲ್ಲ. ಈಗಿನ ರಾಜಕೀಯ ವಿಚಾರಧಾರೆಗಳೇ ವೀರಶೈವದ ಮೌಲ್ಯಗಳಾಗಿರುವುದರಿಂದ ವೀರಶೈವವನ್ನು ಹತ್ತಿಕ್ಕುವುದೆಂದರೆ ಮಾನವ ಜೀವನದ ಮೌಲ್ಯಗಳನ್ನು ಹತ್ತಿಕ್ಕಿದಂತೆ. ಇಂದು ಹರಿಜನೋದ್ಧಾರದ ಹಾಗೂ ಅಸ್ಪೃಶ್ಯತಾ ನಿವಾರಣೆಯ ಮಾತುಗಳು ಎಲ್ಲೆಲ್ಲೂ ಕೇಳಿಬರುತ್ತಿವೆ. ಈ ಉದ್ಧಾರ ಕಾರ್ಯವನ್ನೂ ನಿವಾರಣಾ ಕ್ರಮವನ್ನೂ ಮೊದಲು ಕೈಗೆತ್ತಿಕೊಂಡವರು 12ನೆಯ ಶತಮಾನದ ಶರಣರು. ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಕಂಬಳಿ ನಾಗಿದೇವ ಮೊದಲಾದ* ಶರಣರು ಜನ್ಮತಃ 'ಅಸ್ಪೃಶ್ಯ'ರು. ಆದರೆ ಶಿವಶರಣರ ಸಮಾಜದಲ್ಲಿ ಅವರು ಬಸವಣ್ಣ, ಪ್ರಭುದೇವ ಮೊದಲಾದವರಿಗೆ ವಂದ್ಯರಾದರು.

ಕಕ್ಕಯ್ಯನವರ ಪ್ರಸಾದದಿಂದ ಬದುಕಿದೆನೆಂದು ಬಸವಣ್ಣ ಹೇಳಬೇಕಾದರೆ ಆ ಶರಣರು ಯಾವ ಹಂತದಲ್ಲಿದ್ದರೆಂಬುದನ್ನು ಗಮನಿಸಬೇಕು. ಅಂತೆಯೇ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಮೊದಲಾಧವರನ್ನು 'ಹಿರಿಯ ಮಾಹೇಶ್ವರ'ರೆಂದು ವೀರಶೈವ ಶರಣರೂ ಕವಿಗಳೂ ಕರೆದು ಗೌರವಿಸುವರು. ಅದೇ ಕವಿಗಳು ಮಿಕ್ಕ ಶರಣರನ್ನು ಮಾಹೇಶ್ವರರೆಂದು ಮಾತ್ರ ಸಂಬೋಧಿಸಿರುವುದು ಗಮನಾರ್ಹವಾಗಿದೆ.

ಸತ್ಯ ಘಟನೆ

ವೀರಶೈವವು ಸರ್ವಜೀವದಯಾಪರತೆಯಿಂದ ಸರ್ವಸಮಾಜದವರಿಗೂ ತನ್ನಲ್ಲಿ ಸ್ಥಾನವನ್ನು ಕಲ್ಪಿಸಿಕೊಟ್ಟಿತು. ಅಂತ್ಯಜರಿಗೆ ಆಗ ಅಗ್ರಪೂಜೆಯನ್ನು ಸಲ್ಲಿಸಿ, ಉನ್ನತ ಸ್ಥಾನವನ್ನಿತ್ತ ಹಿರಿಮೆ ಭರತಖಂಡದಲ್ಲಿ ವೀರಶೈವ ಸಮಾಜಕ್ಕೆ ಮಾತ್ರ ಸಲ್ಲುತ್ತದೆ. ಒಟ್ಟಿನಲ್ಲಿ ಪತಿತರ ಉದ್ಧಾರಕ್ಕಾಗಿಯೇ ವೀರಶೈವ ಸಮಾಜದ ಉದಯವಾಗಿದೆ. ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಹೆಂಡದ ಮಾರಯ್ಯ, ಸೂಳೆ ಸಂಕವ್ವೆ ಮೊದಲಾದವರು ಶಿವಶರಣರ ಮಧ್ಯದಲ್ಲಿ ಶರಣಶಿಖಾಮಣಿಗಳಾಗಿ ವಿರಾಜಿಸಿರುವುದು ಕೇವಲ ಕಲ್ಪನೆಯಲ್ಲ.

ಈ ಪರಂಪರೆ ಎಂದೋ ಒಂದು ಕಾಲಕ್ಕೆ ಮಾತ್ರ ಸೀಮಿತವಾದುದಲ್ಲ. ಇಂದಿಗೂ ನಮ್ಮ ಹಳ್ಳಿ ಪಟ್ಟಣಗಳಲ್ಲಿ ವೀರಶೈವ ಮತ್ತು ಇತರ ನಿಮ್ನವರ್ಗಗಳ ಆಚಾರ ವಿಚಾರ, ಭಾಷೆ, ಸಂಸ್ಕೃತಿ, ಆರ್ಥಿಕ ಸ್ಥಿತಿಗತಿಗಳಲ್ಲಿ ಕಂಡುಬರುವ ಸಾಮ್ಯತೆ ಮತ್ತು ಸಾಮರಸ್ಯ ಈ ಎಲ್ಲ ಸಮಾಜಗಳು ಬಸವಣ್ಣನವರ ಬಳುವಳಿಯೆಂಬುದನ್ನು ಸ್ಪಷ್ಟಪಡಿಸುತ್ತದೆ. ನಮ್ಮ ಹಳ್ಳಿಗಳಲ್ಲಿ ಎಲ್ಲ ಸಮಾಜಗಳೂ ಅಪ್ಪ, ಅಣ್ಣ, ಅಕ್ಕ, ತಮ್ಮ ಎಂಬ ಭಾವನೆಯನ್ನು ಬಲಿಸಿ ಒಂದು ಕುಟುಂಬವಾಗಿ ಬಾಳುತ್ತವೆ. ಬಸವಣ್ಣನವರು ಕೇವಲ ವೀರಶೈವರಿಗೆ ಮಾತ್ರ ಮಂತ್ರಮೂರ್ತಿಯಾಗಿರದೆ ಈ ಎಲ್ಲ ಸಮಾಜಗಳ ಉಸಿರಾಗಿದ್ದಾರೆ.

ಜಗತ್ತಿನ ಇತಿಹಾಸದಲ್ಲೇ ಅಪೂರ್ವ

ಭರತಖಂಡದ ಸಮಾಜಗಳಲ್ಲಿ ಸಾವಿರಾರು ವರ್ಷಗಳಿಂದ ಸ್ತ್ರೀಯೂ ಪತಿತವರ್ಗದಲ್ಲಿಯೇ ಪರಿಗಣಿಸಲ್ಪಟ್ಟಿದ್ದಳು. ಆಕೆಗೆ ಧಾರ್ಮಿಕ ಸಾಮಾಜಿಕ ಸ್ವಾತಂತ್ರ್ಯಗಳಿರಲಿಲ್ಲ. ಪತಿಯ ಪುಣ್ಯಪಾಪಗಳಿಗೆ ಪಾಲುಗಾರಳಾಗಿ ಅವನ ನೆರಳಾಗಿ ಬದುಕುವದೇ ಅವಳ ಕರ್ತವ್ಯವಾಗಿದ್ದಿತು. ಪತಿತರನ್ನೆತ್ತಲು ಉದಯವಾದ ವೀರಶೈವ ಸಮಾಜ "ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಸಾರಿತು. ಆಕೆಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟು "ತನ್ನ ತಾನರಿದಡೆ ತನ್ನರಿವೆ ಗುರು" ಎಂಬ ಮಾತನ್ನು ಸ್ಥಿರಗೊಳಿಸಿತು. ಮಹಾದೇವಿಯಕ್ಕ ಮುಕ್ತಾಯಕ್ಕನಂಥವರ ಜೊತೆಗೆ ಸತ್ಯಕ್ಕ, ಕದಿರೆ ರೆಮ್ಮವ್ವ, ಸೂಳೆ ಸಂಕವ್ವೆ ಮೊದಲಾದ ನಿಮ್ನವರ್ಗದಿಂದ ಬಂದ ಶರಣೆಯರು ಸಾಮಾಜಿಕ ಹಾಗೂ ಆಧ್ಯಾತ್ಮ ಪ್ರಪಂಚದಲ್ಲಿ ಸರಿಸಮಾನರಾಗುವುದಷ್ಟೇ ಅಲ್ಲ, ಆದರ್ಶರಾಗಿ ಪರಿಣಮಿಸಿರುವುದು ವೀರಶೈವ ಸಮಾಜದ ಘನತೆಯನ್ನು ಸೂಚಿಸುತ್ತದೆ. ಸ್ತ್ರೀ ಸಮಾ

* ಧೂಳಯ್ಯ, ಉರಿಲಿಂಗಪೆದ್ದಿ, ಕಾಳವ್ವೆ, ಮೇದಾರ ಕೇತಯ್ಯ, ಹರಳಯ್ಯ ಇನ್ನೂ ಅನೇಕರು ನಿಮ್ನವರ್ಗದವರೇ ಆಗಿದ್ದರು. — ಸಂ.

ಜಕ್ಕೆ 20ನೆಯ ಶತಮಾನದಲ್ಲಿಯೂ ಕಾಣಲಾರದಂತಹ ವಿಚಾರ ಆಚಾರ, ವ್ಯಕ್ತಿಸ್ವಾತಂತ್ರ್ಯಗಳನ್ನು ತಂದುಕೊಟ್ಟಿತು ವೀರಶೈವ. "ನಾಮದಲ್ಲಿ ಹೆಂಗುಸಾದರೇನು ಭಾವಿಸಲು ಗಂಡುರೂಪ;" "ಒಳಗೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ;" "ಕೂಟಕ್ಕೆ ಸತಿ-ಪತಿಯಲ್ಲದೆ ಜ್ಞಾನಕ್ಕೆ ಸತಿಪತಿಯೇ ?" ಎಂಬ ಶರಣವಾಣಿ ಇಂದು ವಿಶ್ವಸತ್ಯವಾಗಿ ಸಂಚರಿಸುತ್ತಲಿದೆ. ಈ ಸ್ತ್ರೀ ಸಮಾಜಕ್ರಾಂತಿ ಜಗತ್ತಿನ ಇತಿಹಾಸದಲ್ಲೇ ಅಪೂರ್ವ.

ಕಾಯಕಕ್ಕೆ ಕೊಟ್ಟ ಮಹತ್ವ

ವರ್ಣರಹಿತ ಸಮಾಜದಂತೆ ವರ್ಗರಹಿತ ಸಮಾಜದ ಆದರ್ಶವನ್ನೂ ವೀರಶೈವರು ಕಂಡಿದ್ದಾರೆ. ಈ ಆದರ್ಶದಂತೆ ಪ್ರತಿಯೊಬ್ಬ ವೀರಶೈವನ ಕಾಲ ಕಾಯಕಕ್ಕೆ ಮೀಸಲು. ಮಂತ್ರಿಯಾಗಿ ರಾಜ್ಯಭಾರ ಮಾಡಬಹುದು, ಮೇದನಾಗಿ ಬುಟ್ಟಿಯನ್ನು ಹೆಣೆಯಬಹುದು. ಕಾಯಕದಲ್ಲಿ ಇಬ್ಬರೂ ಸಮಾನರು. "ಗುರುವಾದಡೆಯೂ ಕಾಯಕದಿಂದ ಜೀವಿಸಬೇಕು." "ಶಿವಯೋಗಿಯ ಶರೀರ ವೃಥಾ ಸವೆಯಲಾಗದು. ಅನುಗೊಂಬನಿತು ಕಾಯಕ ನಡೆಯುತ್ತಿರಬೇಕು." ಇದು ವೀರಶೈವರು ಮಾಡಿದ ಕಾಯಕದ ಅರ್ಥ. ಈ ಕಾಯಕ ಕರ್ಮವಲ್ಲ; ಇದೊಂದು ಆರಾಧನೆ. ಕಾಯಕದಲ್ಲಿ ನಿರತರಾದವರು "ಗುರುದರ್ಶನವನ್ನಾದರೂ ಮರೆಯಬೇಕು. ಜಂಗಮ ಮುಂದಿದ್ದರೂ ಹಂಗು ಹರಿಯಬೇಕು" ಎಂಬ ಮಾತುಗಳು ಗುರುಲಿಂಗಜಂಗಮಕ್ಕಿಂತ ಕಾಯಕ ಮಹತ್ವವೆಂಬುದನ್ನು ಸ್ಪಷ್ಟಪಡಿಸುತ್ತವೆ. 'ಕಾಯಕವೇ ಕೈಲಾಸ'ವೆಂದು ವೀರಶೈವರು ಸಾರಿದುದು ಈ ಅರ್ಥದಲ್ಲಿ. ಕಾಯಕದ ಈ ಕಲ್ಪನೆ ಜಗತ್ತಿನ ಯಾವ ಜ್ಞಾನಕೋಶದಲ್ಲಿಯೂ ದೊರೆಯದು. ವೀರಶೈವರು **ಜಗತ್ತಿ**ಗೆ ನೀಡಿದ ಅಪೂರ್ವ ಕಾಣಿಕೆಗಳಲ್ಲಿ ಒಂದು. 'ಆರಾಮ್ ಹರಾಮ್ ಹೈ' ಎಂಬುದು ಈ ಕಾಯಕವೆಂಬುವ ಬೃಹದ್ದರ್ಶನದ ಒಂದು ಸಣ್ಣ ತುಣುಕು.

ಕಾಯಕದಿಂದ ಬಂದ ಫಲವನ್ನು ಉಪಭೋಗಿಸುವಾಗ ವೀರಶೈವನಿಗೆ ಸಾಮಾಜಿಕ ಮತ್ತು ಸಮಷ್ಟಿ ದರ್ಶನಗಳಿವೆ. 'ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಕುಲವೆಲ್ಲವ." ಕಾಯಕದಿಂದ ಬಂದ ಸಂಪತ್ತನ್ನು ಸಮಾಜಕ್ಕೆ ಅರ್ಪಿಸಬೇಕೆಂಬ ವೀರಶೈವದ ಆದರ್ಶ ಇಂದಿನ ಸಮ[illegible] ನಮ್ಮ ನಾಡಿನಲ್ಲಿ ಇಂಥ[illegible] ಶೈವ ಕುಟುಂಬಗಳು [illegible] ಸಿಗುತ್ತವೆ. ಇಂದಿನದು [illegible] ಶೈವ ಮಂತ್ರ, ಸಂಗ್ರಹಣ ಶಿ[illegible] ಸಮಾಜಕ್ಕೆ ತಾರ[illegible] ಮಂತ್ರವಾಗಬಲ್ಲದು. 'ಗರಹೊಡೆದವರ ನುಡಿಸಬಹುದು, ಸಿರಿಗರ ಹೊಡೆದವರ ನುಡಿಸಲು ಬಾರದು ....' ವೀರಶೈವ ಸಮಾಜದಲ್ಲಿ ಬಡತನ ಸಿರಿತನಗಳ ಸ್ಥಾನಮಾನವೇನೆಂಬುದನ್ನು ಕಂಡುಕೊಳ್ಳಬಹುದು.

ವೀರಶೈವದ ಇನ್ನೊಂದು ಮಹತ್ಸಾಧನೆ ಬಹುಕಾಲದಿಂದ ಬಂದ ಮೂಢನಂಬಿಕೆಗಳನ್ನು ತೊಡೆದು ನೈಜ ಜೀವನದ ಅರ್ಥ ಮಾಡಿಕೊಟ್ಟುದು. ವೀರಶೈವನಿಗೆ ಬೇರೆ ಸ್ವರ್ಗ-ನರಕಗಳು ಇಲ್ಲ. ಆಚಾರವೇ ಸ್ವರ್ಗ ಅನಾಚಾರವೇ ನರಕ. ದೇವಲೋಕಮರ್ತ್ಯಲೋಕ ಬೇರಿಲ್ಲ. 'ಸತ್ಯವ ನುಡಿವುದೆ ದೇವಲೋಕ, ಮಿಥ್ಯವ ನುಡಿವುದೆ ಮರ್ತ್ಯಲೋಕ.' ವೀರಶೈವನಿಗೆ ಮಡಿಕೆ ದೈವವಲ್ಲ, ಮಣ್ಣು ದೈವವಲ್ಲ........... ಅವನಿಗೆ ವಾರ ತಿಥಿ ನಕ್ಷತ್ರಗಳ ಹಂಗಿಲ್ಲ. 'ಆಯಿತ್ತೇ ಉದಯಮಾನ ಹೋಯಿತ್ತೇ ಅಸ್ತಮಾನ' ಎಂಬ ವೀರಶೈವ ಸಮಾಜ ಎಂದಿಗೂ ನಿಂತ ನೀರಾಗದೆ ಹರಿವ ಪ್ರವಾಹವಾಗಿದೆ. ಯಾವ ಕಾಲದಲ್ಲಿಯೂ ಬರುವ ಹೊಸ ಮೌಲ್ಯಗಳನ್ನು ಸ್ವೀಕರಿಸಿ ಅವುಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿ ಅದಕ್ಕಿದೆ. ಹೀಗಾಗಿ ಈ ಕಾಲದ ವೀರಶೈವಕ್ಕೆ ಇಂದಿನ ಹೊಸ ಮೌಲ್ಯಗಳು ಹೊಸತೇನಲ್ಲ. ಹೊಸತಾಗಿದ್ದರೂ ಸ್ವೀಕರಿಸುವುದು ಅಸಾಧ್ಯವೂ ಅಲ್ಲ.

ವೀರಶೈವರ ಶ್ರೀಮಂತಿಕೆ

ವೀರಶೈವ ಭರತಖಂಡಕ್ಕೆ ಕೊಟ್ಟ ಕಾಣಿಕೆ ಅಪೂರ್ವವಾಗಿದೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಷಟ್‌ಸ್ಥಲವೂ ಒಂದು ಅಪೂರ್ವ ತತ್ತ್ವ ವಿವೇಚನೆ. ಈ ತತ್ತ್ವ ಈಶ್ವರನ ಪಂಚಮುಖಗಳಿಂದು ಭಾವಿಸಲ್ಪಟ್ಟಿರುವ ಪಂಚ ಪೀಠಗಳ ಅಧೀಶ್ವರರಾದ ರೇವಣಸಿದ್ಧಾದಿ ಆಚಾರ್ಯರುಗಳು' ಗಣಾವತಾರಿಗಳಾದ ಬಸವಣ್ಣನವರು, ನಿಜಗುಣ ಶಿವಯೋಗಿಗಳು, ತೋಂಟದಾರ್ಯರು, ಮುಪ್ಪಿನ ಷಡಕ್ಷರಿಗಳು, ಸರ್ಪಭೂಷಣ ಶಿವಯೋಗಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು, ಗೌರಿಶಂಕರ ಸ್ವಾಮಿಗಳು, ಅಥಣಿ ಶಿವಯೋಗಿಗಳು, ಚಿತ್ರದುರ್ಗದ 'ನಿಷ್ಕಾಮ[illegible] ನಾಡುವಂತ[illegible]ರಗೋಡದ ಮಹಾಂತ ಇಡಿಯ ಬಾಳು ಯ[illegible] ಶೈವರು [illegible]ವ ಮೃತ್ಯುಂಜಯ ಶಿವ ರಂಗಬಹಿರಂಗ[illegible] ಸಹಕಾನುಭಾವಿಗಳ ಪರಂಪರೆ ಈ [illegible]ಮುಂತಾದವುಗಳನ್ನು [illegible] ಮುಂದುವರಿಯುತ್ತಲಿದೆ. [illegible]ದು ಅಲ್ಲಲ್ಲಿ ಹಚ್ಚಿಟ್ಟ ಅನುಭಾವ ಜ್ಯೋತಿಯಾಗಿದ್ದಾರೆ. ಇಂತಹ ಜೀವಂತಿಕೆಯೇ ವೀರಶೈವದ ಶ್ರೀಮಂತಿಕೆ.

ನಮ್ಮ ಹೆಮ್ಮೆಯ ಸಾಹಿತ್ಯ

ಆಧ್ಯಾತ್ಮಿಕ, ಸಾಮಾಜಿಕ ರಂಗಗಳಲ್ಲಿ ಕ್ರಾಂತಿಯನ್ನೆಸಗಿದ ವೀರಶೈವರು ಸಾಹಿತ್ಯದ ದೃಷ್ಟಿಯಿಂದಲೂ ವಿನೂತನ ಯುಗವನ್ನು ಪ್ರಾರಂಭಿಸಿದ್ದಾರೆ. ಕನ್ನಡ, ತೆಲುಗು, ತಮಿಳು, ಮರಾಠಿ ಮತ್ತು ಸಂಸ್ಕೃತ ಭಾಷೆಗಳ ಮೂಲಕ ಸಾಧಿಸಿದ ಸಾಹಿತ್ಯಪ್ರಗತಿ ನೆಲದ ಮಕ್ಕಳ ಮೂಲ ಸಂವೇದನೆಗಳನ್ನೇ ಅಭಿವ್ಯಕ್ತಪಡಿಸುತ್ತವೆ.

ಸಾಹಿತ್ಯವು ಸಮಾಜದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದುದು ವೀರಶೈವ ಯುಗದಲ್ಲಿ. ಇಲ್ಲಿ ಕಥಾವಸ್ತು ದೂರದ ರಾಮಾಯಣ ಮಹಾಭಾರತಗಳಿಂದ ತಂದುದಲ್ಲ. ಅಂತರಂಗದಲ್ಲಿ ನಡೆದ ತುಮುಲ, ಕಣ್ಣೆದುರು ಬದುಕಿನ ಪುಣ್ಯಪುರುಷರ ಜೀವನಗಳೇ ಈ ಸಾಹಿತ್ಯದ ವಸ್ತು; ಸಾಮಗ್ರಿ. ವಚನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದ ಕೀರ್ತಿಯುಳ್ಳದ್ದಾಗಿದೆ. ತೆಲುಗಿನ ಪಾಲ್ಕುರಿಕೆ ಸೋಮನಾಥನ ಜಾನುಲುಗು ತೆಲುಗು ಸಾಹಿತ್ಯದಲ್ಲಿಯೇ ಹೊಸ ಮನ್ವಂತರವನ್ನು ಪ್ರತಿಷ್ಠಾಪಿಸಿದೆ. 800 ವರ್ಷ ಕಳೆದರೂ ಹರಿಹರನನ್ನು ಮೀರಿಸುವ ಭಕ್ತ ಕವಿ ಇನ್ನೂ ಹುಟ್ಟಿಬಂದಿಲ್ಲ. ಶೂನ್ಯ ಸಂಪಾದನೆಯಂತಹ ದಾರ್ಶನಿಕ ಕೃತಿಗಳ ರಚನೆ ಈಗ ಅಸಾಧ್ಯವೇನೋ ಎನಿಸುತ್ತದೆ. ರಾಘವಾಂಕ, ಚಾಮರಸ, ಷಡಕ್ಷರಿ, ಸರ್ವಜ್ಞ ಮೊದಲಾದ ಮಹಾಕವಿಗಳು ವೀರಶೈವಕ್ಕೆ ಗೌರವ. ಈ ಪರಂಪರೆಯನ್ನು ಬಸವಪ್ಪ ಶಾಸ್ತ್ರಿ, ಗಂಗಾಧರ ಮಡಿವಾಳೇಶ್ವರ ತುರಮರಿ, ಎಸ್. ಎಸ್. ಬಸವನಾಳ ಹಾಗೂ ಹಳಕಟ್ಟಿ, ಹರ್ಡೇಕರ ಮಂಜಪ್ಪ ಮೊದಲಾದವರು ಮುಂದುವರಿಸಿದ್ದಾರೆ. ಬಿ. ಶಿವಮೂರ್ತಿಶಾಸ್ತ್ರಿ ಆರ್. ಸಿ. ಹಿರೇಮಠ, ಶಿ. ಚಿ. ನಂದೀಮಠ, ಭೂಸನೂರ ಮಠ, ಚನ್ನವೀರ ಕಣವಿ, ತಿಪ್ಪೇರುದ್ರಸ್ವಾಮಿ, ಮಾಳವಾಡ, ಎಂ. ಎಸ್. ಸುಂಕಾಪೂರ, ಬಿ. ಪುಟ್ಟಸ್ವಾಮಯ್ಯ, ಜಯದೇವಿತಾಯಿ ಲಿಗಾಡೆ, ವೈ. ನಾಗೇಶಶಾಸ್ತ್ರಿ, ಟಿ. ಎಸ್. ಮಲ್ಲಪ್ಪ, ಎಂ. ಜಿ. ನಂಜುಂಡಾರಾಧ್ಯ, ಸಿಂಪಿ ಲಿಂಗಣ್ಣ, ಶ್ರೀಗಳಾದ ನವಕಲ್ಯಾಣ ಮಠದ ಕುಮಾರಸ್ವಾಮಿಗಳು, ಲಿಂಗಾನಂದ ಸ್ವಾಮಿಗಳು, ಮಾತೆ ಮಹಾದೇವಿ, ಡಾ|| ಜ. ಚ. ನಿ.[2] ಮೊದಲಾದವರು ಸಮರ್ಥವಾಗಿ ಮುಂದುವರಿಸುತ್ತಲಿದ್ದಾರೆ. ಮುಂಬರುವ ವೀರಶೈವ ಸಾಹಿತ್ಯ ಜಗದಗಲ ಮುಗಿಲಗಲವಾಗಿ ಬೆಳೆಯಬಲ್ಲುದೆಂಬ ಭರವಸೆ ನೀಡುತ್ತಲಿದ್ದಾರೆ.

ಲಲಿತಕಲೆಗಳ ಅಮೃತ ಪ್ರವಾಹ

ವೀರಶೈವ ಸಮಾಜದಲ್ಲಿ ಲಲಿತ ಕಲೆ, ವೈಭವ ಸಂಪನ್ನವಾಗಿ ಬೆಳೆದುಬಂದಿದೆ. "ಕಲಾಸುಗಾನಂ" ಎಂಬಂತೆ ಸಂಗೀತ ಲಲಿತಕಲೆಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಶರಣರ ವಚನಗಳನ್ನು ಗೀತ ರೂಪದಲ್ಲಿ ಹಾಡುತ್ತ ಬಂದ ನಿದರ್ಶನಗಳುಂಟು. ವೀರಶೈವ ಕಾವ್ಯ ಪುರಾಣಗಳನ್ನು ಮನೆ–ಮಠಗಳಲ್ಲಿ ರಾಗಬದ್ಧವಾಗಿ ಹಾಡಿ, ಅರ್ಥೈಸುವ ಸಂಪ್ರದಾಯ ಇಂದಿನವರೆಗೂ ನಡೆದು ಬಂದಿದೆ. ಸಕಲೇಶಮಾದರಸ, ರಾಗದ ಸಂಕಣ್ಣ, ಬಸವಪುರಾಣದ ಮಲ್ಲಣಾರ್ಯ ಮೊದಲಾದವರು ಸಂಗೀತಕಲೆಯನ್ನು ಪ್ರಾಚೀನ ಕಾಲದಲ್ಲಿ ಪ್ರತಿನಿಧಿಸಿದ ವೀರಶೈವರು. ನಿಜಗುಣ ಶಿವಯೋಗಿಗಳು ಕರ್ನಾಟಕ ಸಂಗೀತ ಶಾಸ್ತ್ರ ಪಿತಾಮಹರೆಂಬುದು ಇತಿಹಾಸ ಒಪ್ಪಿದ ಮಾತು. ಕೆಳದಿ ಬಸವರಾಜನ "ಸಂಗೀತ ರತ್ನಾಕರ" ಕೃತಿಯನ್ನೂ ಇಲ್ಲಿ ಸ್ಮರಿಸಬೇಕು. ಈ ಪರಂಪರೆಯಲ್ಲಿ ಪಂಚಾಕ್ಷರಿ ಗವಾಯಿಗಳು, ಮಲ್ಲಿಕಾರ್ಜುನ ಮನ್ಸೂರ್, ಪುಟ್ಟರಾಜ ಗವಾಯಿ, ಕುಮಾರ ಗಂಧರ್ವ, ಬಸವರಾಜ ರಾಜಗುರು ಮೊದಲಾದವರ ಮೂಲಕ ಲಲಿತ ಕಲೆಯು ಅಮೃತ ಪ್ರವಾಹವಾಗಿ ಹರಿಯುತ್ತಲಿದೆ; ವೀರಶೈವದ ಸುಸಂಸ್ಕೃತ ಜೀವನದ ಕುರುಹಾಗಿ ಮೆರೆಯುತ್ತಿದೆ.

ಚಿತ್ರಕಲೆಯು ಇದೇ ಸಾಲಿನಲ್ಲಿ ನಿಲ್ಲತಕ್ಕುದು.

---

1 ಸಿದ್ಧಗಂಗೆಯ ಉದ್ದಾನ ಶಿವಯೋಗಿ, ಹಾನಗಲ್ಲು ಕುಮಾರಸ್ವಾಮಿಗಳು, ಹುಬ್ಬಳ್ಳಿ ಗಂಗಾಧರಯೋಗೀಂದ್ರರು, ಹಾವೇರಿ ಶಿವಬಸವಸ್ವಾಮಿಗಳು ಮುಂತಾದವರೂ ಈ ಪಟ್ಟಿಯಲ್ಲಿ ಸೇರಲರ್ಹರು.

2 ಈ ಪಟ್ಟಿಯಲ್ಲಿ ಹೆಚ್. ದೇವೀರಪ್ಪ, ಗೌರೀಶಂಕರ ಸ್ವಾಮಿಗಳು, ಗುಂಜಾಳ, ಯಾದಗಿರಿ ಚಂದ್ರಶೇಖರಶಾಸ್ತ್ರಿ, ಉಮಾಪತಿಶಾಸ್ತ್ರಿ, ಹುಣಶ್ಯಾಳ್ ಮುಂತಾದವರೂ ಸೇರಲರ್ಹರು.

—ಸಂ.

ವೀರಶೈವರಲ್ಲಿ ಈ ಪ್ರಜ್ಞೆ ಸ್ಪಷ್ಟವಾಗಿ ಒಡೆದು ಕಾಣುತ್ತದೆ. ಪಠಣ ಯೋಗ್ಯವಾದ ತಾಳೆಗ್ರಂಥ ಉದ್ಧರಣೆಗಳನ್ನು ಬಿಡಿಸಿ ನೋಡಿ ವೀರಶೈವ ಕಾವ್ಯಗಳಲ್ಲಿ ಕಂಡು ಬರುವ ಚಿತ್ರಕಲೆಯ ವಿಶೇಷ ವಿವರಗಳನ್ನು ಗಮನಿಸಿದರೆ ವೀರಶೈವ ಮನೆ ಮಠಗಳಲ್ಲಿ ಬಿಡಿಸಿದ ಪ್ರಾಚೀನ ಚಿತ್ರಗಳನ್ನು ಅವಲೋಕಿಸಿದರೆ ಈ ಪರಂಪರೆಯ ಶ್ರೀಮಂತಿಕೆ ಅರ್ಥವಾಗುತ್ತದೆ. ಈ ಪರಂಪರೆಯನ್ನು ಕುಂಚಬ್ರಹ್ಮ ಮಿಣಜಿಗಿ, ಕಲಾಗುರು ದಂಡಾವತಿಮಠ, ಹಾಲಭಾವಿ, ಮುರಿಗೆಪ್ಪಚೆಟ್ಟಿ, ಅಕ್ಕಿ, ರುಮಾಲೆ ಚೆನ್ನಬಸವಯ್ಯ ಮೊದಲಾದವರು ಸಮರ್ಥ ರೀತಿಯಲ್ಲಿ ಮುಂದುವರಿಸಿಕೊಂಡು ಬಂದಿದ್ದಾರೆ.

ಕರ್ನಾಟಕದ ಕ್ಷಾತ್ರತೇಜ ಭಾರತದಲ್ಲಿಯೇ ಖ್ಯಾತವಾದುದು. ಆ ಕ್ಷಾತ್ರತೇಜಕ್ಕೆ ವೀರಶೈವರ ಕೊಡುಗೆ ಸಾಮಾನ್ಯವಾದುದಲ್ಲ. ವೀರಶೈವದ ಪೂರ್ವಭಾವಿಯಾದ ಕಾಳಾಮುಖ ಸ್ಥಾನಾಚಾರ್ಯರು ಅನೇಕ ರಾಜಮನೆತನಗಳಿಗೆ ಗುರುಗಳಾಗಿ ಅವರ ಕ್ರಿಯಾಶಕ್ತಿಗೆ ತಮ್ಮ ತಪಶ್ಶಕ್ತಿಯನ್ನಿತ್ತು ಆ ರಾಜ್ಯಗಳನ್ನು ಸಂವರ್ಧಿಸಿರುವರು. ಓರಂಗಲ್ಲಿನ ಕಾಕತೀಯ ರಾಜಗುರು, ವಿಜಯನಗರ ಸಾಮ್ರಾಜ್ಯ ಪ್ರತಿಷ್ಠಾಪನಾಚಾರ್ಯ, ಕಾಶೀವಿಲಾಸ ಕ್ರಿಯಾಶಕ್ತಿ ಮೊದಲಾದವರನ್ನು ಇಲ್ಲಿ ಸಂಸ್ಮರಿಸಬಹುದು.

ಕಲ್ಯಾಣ ಚಾಲುಕ್ಯ ಜಯಸಿಂಹ, ಸುಗ್ಗಲೆ, ಕಾಕತೀಯ ಪ್ರತಾಪರುದ್ರ ರುದ್ರಮದೇವಿ ಮೊದಲಾದವರು, ವಿಜಯನಗರದ ಸಂಗಮ ವಂಶದ ಪ್ರೌಢದೇವರಾಯ, ಮಲ್ಲಿಕಾರ್ಜುನರು ವೀರಶೈವ ದೊರೆಗಳಾಗಿ ರಾಜ್ಯಭಾರ ಮಾಡಿದರು.

ಕುರುಗೋಡ, ಕೆಳದಿ, ಬೀಳಗಿ, ಇಕ್ಕೇರಿ, ಬಿದನೂರು, ಕಿತ್ತೂರು, ತೋರಗಲ್ಲು, ಹದಿನಾಡು, ಕೊಡಗು ರಾಜಮನೆತನಗಳು ವೀರಶೈವಮಾರ್ಗಾನುಯಾಯಿಗಳು.

ಆಡಳಿತ ಮುಖಂಡರು

ಗುರುವಾಗಿ ನಿಂತು ರಾಜ್ಯ ಸ್ಥಾಪನೆಗೆ ಆಶೀರ್ವದಿಸಿದ, ದೊರೆಯಾಗಿ ನಾಡನ್ನಾಳಿದ ಇವರಲ್ಲಿ ದೇದೀಪ್ಯಮಾನವಾಗಿ ಬೆಳಗಿದ ಮಂತ್ರಿಗಳು ಅನೇಕರು, ವೀರಶೈವ ನಿರ್ಣಯ ಪರಮಾವತಾರರಾದ ಭಕ್ತಿಭಂಡಾರಿ ಬಸವಣ್ಣನವರು, ಕಲಚೂರ್ಯ ಮನೆತನದ ಮಹಾಮಂತ್ರಿ. ದಕ್ಷಿಣ ಸಮುದ್ರಾಧಿಪನೆಂದು ಪ್ರಖ್ಯಾತನಾದ ಕೆರೆಯ ಪದ್ಮರಸ; ನಾನು ಆ ಮಹಾಮಂತ್ರಿ ಪದ್ಮರಸರ ವಂಶಕ್ಕೆ ಸೇರಿದವನೆಂದು ಈ ಸಂ[illegible] ಸಂತೋಷವೆನಿಸುತ್ತದೆ. [illegible] ದಂಡೇಶ, ಕಳಲೆಯ [illegible] ಶ್ರೀಗಳಾದ ನಿಜಲಿಂಗಪ್ಪ, [illegible] ಕಂಠಿ, ವೀರೇಂದ್ರಪಾಟೀಲ್ [illegible] ಮುಖ್ಯ ಮಂತ್ರಿಗಳು, ಸರ್. ಸಿದ್ದಪ್ಪ ಕಂಬಳಿ, ಹೆಚ್. ಸಿದ್ದಯ್ಯ, ಎಂ. ಪಿ. ಪಾಟೀಲ್, ಕೆ. ಎಫ್. ಪಾಟೀಲ್, ರಾಜಶೇಖರಮೂರ್ತಿ, ಪಿ. ಎಂ. ನಾಡಗೌಡ, ಹೆಚ್. ಎಂ. ಚನ್ನಬಸಪ್ಪ, ಹೆಚ್. ಸಿದ್ದವೀರಪ್ಪನವರವರೆಗೆ ಅನೇಕ ಮಂತ್ರಿಗಳನ್ನು ಈ ಸಮಾಜ ನೀಡಿದೆ. ಜೊತೆಗೆ ಡಿ. ಸಿ. ಪಾವಟೆ, ಬಿ. ಡಿ. ಜತ್ತಿಯವರಂಥ ರಾಜ್ಯಪಾಲರನ್ನು ಕೊಟ್ಟ ಕೀರ್ತಿ ವೀರಶೈವಕ್ಕೆ ಸಲ್ಲುತ್ತದೆ.

ಲೋಕ ಸಂಗ್ರಹ ವೀರಶೈವದ ಪರಮೋದ್ದೇಶ. ಜನ ಬದುಕಬೇಕೆಂಬ ಭಾವನೆಯಿಂದ ಈ ಸಮಾಜದ ವ್ಯಕ್ತಿಗಳು ಪ್ರತಿಯೊಂದು ಕ್ಷೇತ್ರದಲ್ಲಿ ಕಾರ್ಯಮಾಡಿರುವರು. ಎರಡು ಶತಮಾನಗಳ ಕಾಲ ಪರಕೀಯರ ದಬ್ಬಾಳಿಕೆಗೆ ತುತ್ತಾಗಿ ಆತ್ಮಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದ ವೀರಶೈವ ಸಮಾಜವನ್ನು ಎಚ್ಚರಿಸಿದ ಕೀರ್ತಿ ಹಲವು ಮಹನೀಯರಿಗೆ ಸಲ್ಲುತ್ತದೆ. ಸಿರಸಂಗಿ ಲಿಂಗರಾಜರು, ಸರ್. ಪುಟ್ಟಣ್ಣಶೆಟ್ಟರು, ಅರಟಾಳ ರುದ್ರಗೌಡರು, ನನ್ನ ಸಮೀಪ ಬಂಧುಗಳಾದ ನ್ಯಾಯಮೂರ್ತಿ ಬಿ. ಬಸವಾರಾಧ್ಯರು, ಕೆ. ಶಾಂತವೀರಪ್ಪನವರು, ಹರಡೇಕರ ಮಂಜಪ್ಪನವರು, ಹಳ್ಳಿಕೇರಿ ಗುದ್ಲೆಪ್ಪನವರು, ಅಂಬಲಿ ಚನ್ನಬಸಪ್ಪನವರು, ನ್ಯಾಯಮೂರ್ತಿ ಪಿ. ಮಹದೇವಯ್ಯನವರು ಮೊದಲಾದವರು ಪ್ರಾತಃ ಸ್ಮರಣೀಯರು.

ಶಿಕ್ಷಣ ಕ್ಷೇತ್ರಕ್ಕೆ ಸಂದ ಕಾಣಿಕೆ

ಕರ್ನಾಟಕದಲ್ಲಿ ಎಂದಿನಿಂದಲೂ ಶಿಕ್ಷಣದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದವು ವೀರಶೈವ ಮಠಗಳು. ಅನೇಕ ವೀರಶೈವ ಮಠಗಳು ಪುರಾತನ ಮಠಗಳು. ಅಗ್ರಹಾರ ಘಟಿಕಾ ಸ್ಥಾನಗಳಂತೆ, ಜೈನ ಬೌದ್ಧ ವಿಹಾರಗಳಂತೆ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಕಾರ್ಯವನ್ನೆಸಗಿವೆ. ಬ್ರಿಟಿಷರ ಆಳ್ವಿಕೆಯಲ್ಲಿ ಪಾಶ್ಚಾತ್ಯ ಪದ್ಧತಿಯ ಶಾಲೆಗಳು ಪ್ರಾರಂಭವಾಗುವ ಮೊದಲು ವೀರಶೈವ ಮಠಗಳೇ ಶಿಕ್ಷಣದ ಕಾರ್ಯ ಮಾಡುತ್ತಿದ್ದುವೆಂದು ರಸೆಲ್ ಅವರು ಹೇಳಿದ್ದಾರೆ. ಈಗಲೂ ರೂಢಿಯಲ್ಲಿರುವ ಓದುಮಠ, ಸಾಲಿಮಠ 'ನಿಷ್ಕಾಮ [illegible] ಾಡುವಂತಿದ್ದುದರ ಸಂಕೇತಗಳು. ಇಡಿಯ ಬಾಳು ಯ[illegible] ಶೈವರು ಭವಾದ ಮೇಲೆ ಬಡ ರಂಗಬಹಿರಂಗ[illegible] ಸಹಕ್ರಾಗಬೇಕೆಂಬ ಘನವಾದ [illegible]ಮುಂತಾದವುಗಳನ್ನು [illegible]ಠಾಧೀಶರು, ಸಮಾಜದ ಮುಖಂಡರು ಅಲ್ಲಲ್ಲಿ ಪ್ರಸಾದನಿಲಯಗಳು, ವಿದ್ಯಾರ್ಥಿ ವಸತಿಗೃಹಗಳನ್ನು ನಿರ್ಮಿಸಿದರು. ಚಿತ್ರದುರ್ಗದ ಜಯದೇವ ಜಗದ್ಗುರುಗಳು, ಧಾರವಾಡದ ಮೃತ್ಯುಂಜಯ ಸ್ವಾಮಿಗಳು, ಸಿದ್ಧಗಂಗಾ ಮಠಾಧೀಶರು, ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು, ಶ್ರೀ ತರಳಬಾಳು ಜಗದ್ಗುರುಗಳು, ನಾಗನೂರು ಶ್ರೀಗಳು* ಮೊದಲಾದ ಮಹಾಸ್ವಾಮಿಗಳು ಈ ಪವಿತ್ರಕಾರ್ಯಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟಿರುವರು. ಅಲ್ಲದೆ ಹೈಸ್ಕೂಲು ಕಾಲೇಜುಗಳನ್ನು ಅಧಿಕವಾಗಿ ಪ್ರಾರಂಭಿಸಿ ಆಧುನಿಕ ವಿದ್ಯೆ ಸಕಲರಿಗೂ ಸುಲಭವಾಗಿ ದೊರೆಯುವಂತೆ ಮಾಡಿದ ಶ್ರೇಯಸ್ಸು ವೀರಶೈವರಿಗೆ ಸಲ್ಲುತ್ತದೆ. ಬೆಳಗಾವಿಯ ಕೆ. ಎಲ್. ಇ. ಸೊಸೈಟಿ, ಬಿಜಾಪುರದ ಬಿ. ಎಲ್. ಡಿ. ಅಸೋಸಿಯೇಶನ್, ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರ್ಗಿಯ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಮತ್ತು ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ, ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘ, ಜಗದ್ಗುರು ಶಿವರಾತ್ರೀಶ್ವರ ವಿದ್ಯಾಸಂಸ್ಥೆ, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ, ಶ್ರೀ ತರಳಬಾಳು ಜಗದ್ಗುರು ವಿದ್ಯಾಪೀಠ ಮೊದಲಾದ ವೀರಶೈವ ವಿದ್ಯಾಸಂಸ್ಥೆಗಳು ಒಂದೊಂದೂ ವಿಶ್ವವಿದ್ಯಾಲಯದಷ್ಟು ವ್ಯಾಪಕವಾಗಿ ಬೆಳೆದಿವೆ. ಈ ಸಂಸ್ಥೆಗಳನ್ನು ಕಟ್ಟಿದವರು, ಬೆಳೆಸಿದವರು ವೀರಶೈವರಾದರೂ ಅಲ್ಲಿರುವ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಎಲ್ಲ ಸಮಾಜದವರು. ಹೀಗಾಗಿ ಇಡೀ ಕರ್ನಾಟಕದಲ್ಲಿ ಶಿಕ್ಷಣ ಪ್ರಸಾರದ ಗುರುತರ ಹೊಣೆಯನ್ನು ಪೂರೈಸಿದ ಕೀರ್ತಿ ಸರಕಾರಕ್ಕಿಂತಲೂ ವೀರಶೈವ ವಿದ್ಯಾಸಂಸ್ಥೆಗಳಿಗೇ ಹೆಚ್ಚು ಸಲ್ಲುತ್ತದೆ. ಅರ್ಧ ಶತಮಾನದಲ್ಲಿ ಅಖಂಡ ಕರ್ನಾಟಕದೊಳಗೆ ಶಿಕ್ಷಣದ ಪ್ರಗತಿ ತೀವ್ರವಾಗಿ ಬೆಳೆದುದು ಈ ಸಂಸ್ಥೆಗಳಿಂದಲೇ. ತತ್ಪರಿಣಾಮವಾಗಿ ವೀರಶೈವ ಸಮಾಜದಲ್ಲಿ ಅನೇಕ ಶಿಕ್ಷಣವೇತ್ತರು ಭಾರತೀಯ ಮಟ್ಟದಲ್ಲಿ ಬೆಳೆದುಬಂದರು. ಶ್ರೀ ಬಿ. ಎಲ್. ಮಂಜುನಾಥ, ಶ್ರೀ ಸಿ. ಸಿ. ಹುಲಕೋಟಿ, ರ್‍ಯಾಂಗ್ಲರ್ ಪಾವಟೆ, ಡಾ|| ಎ. ಎಸ್. ಅಡಕೆ ಅವರಂಥ ಕುಲಪತಿಗಳು ವೀರಶೈವ ಸಮಾಜದ ಶಿಕ್ಷಣ ಸೌಧಕ್ಕೆ ಕಳಸಪ್ರಾಯರು.

ಒಕ್ಕಲುತನ ವಾಣಿಜ್ಯ ಕ್ಷೇತ್ರದಲ್ಲಿ

ಸಾಮಾಜಿಕ ರಂಗದಂತೆ ಒಕ್ಕಲುತನ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ವೀರಶೈವರ ದುಡಿಮೆ ಗುರುತರ. ವಾಸ್ತವವೆಂದರೆ ವೀರಶೈವ ಸಮಾಜಕ್ಕೆ ಒಟ್ಟಿನಲ್ಲಿ ಕರ್ನಾಟಕಕ್ಕೆ ಇವೇ ಎರಡು ಕಣ್ಣುಗಳಿದ್ದಂತೆ. ವೀರಶೈವ ಜನಾಂಗ ನೇಗಿಲಯೋಗಿಗಳಾಗಿ ಉತ್ತು-ಬಿತ್ತಿ ಕರ್ನಾಟಕ ಸಂಪದಭಿವೃದ್ಧಿಗೆ ಕಾರಣರಾಗಿರುವರು. ವೀರಶೈವ ದೇಸಾಯಿ, ದೇಶಮುಖ, ಇನಾಂದಾರರು, ಪಾಟೀಲ ಮೊದಲಾದ ಸಾವಿರಾರು ಮನೆತನಗಳು ಕೃಷಿ ಕ್ಷೇತ್ರದಲ್ಲಿ ಘನವಾದ ಕಾರ್ಯವನ್ನೆಸಗಿದ್ದಾರೆ; ಕಾಲಕ್ಕೆ ತಕ್ಕಂತೆ ಕೃಷಿ ಕ್ಷೇತ್ರದಲ್ಲಿ ತಲೆದೋರಿದ ಹೊಸ ಸಂಶೋಧನೆಗಳನ್ನು ಅಳವಡಿಸಿಕೊಂಡು ಇಂದಿನವರೆಗೆ ಅದನ್ನು ಪ್ರಾಥಮಿಕವೂ ಪ್ರಮುಖವೂ ಆದ ವೃತ್ತಿಯನ್ನಾಗಿ ಪಾಲಿಸಿಕೊಂಡು ಬಂದಿದ್ದಾರೆ. ಒಕ್ಕಲುತನದಷ್ಟೇ ಮುಖ್ಯವಾದ ಇನ್ನೊಂದು ಉದ್ಯೋಗವೆಂದರೆ ವಾಣಿಜ್ಯ. ಪ್ರಾಚೀನ ಕಾಲದಿಂದಲೂ ರಾಜ್ಯ ಶ್ರೇಷ್ಠಿಗಳಾಗಿ, ಪಟ್ಟಣ ಶ್ರೇಷ್ಠಿಗಳಾಗಿ ನಡೆದು ಬಂದ ವೀರಶೈವ ವಣಿಕರು ಇನ್ನೂ ಆ ಕ್ಷೇತ್ರದಲ್ಲಿ ಉತ್ತರೋತ್ತರ ಪ್ರಗತಿ ತೋರಿಸುತ್ತಲಿದ್ದಾರೆ. ಹೀಗೆಯೇ ಔದ್ಯೋಗಿಕ ಕ್ಷೇತ್ರದಲ್ಲಿಯೂ ಮುಂದುಬಂದ ಮಹನೀಯರು ಕೆಲವರುಂಟು. ಶ್ರೀಯುತ ಭೂಮರೆಡ್ಡಿ ಬಸಪ್ಪ, ಕಲ್ಯಾಣ ಎಳಮಲೆ ಶಾಂತಪ್ಪ, ಗುಂಡಿ ಮಹಾದೇವಪ್ಪ, ಚಿಗಟೇರಿ ಮುರಿಗೆಪ್ಪ, ಮುಳಗುಂದ ಚೆನ್ನಪ್ಪ ಮೊದಲಾದವರ ಹೆಸರುಗಳನ್ನು ಇಲ್ಲಿ ಸೇರಿಸಬಹುದು.

ಇದುವರೆಗೆ ವೀರಶೈವ ಸಮಾಜದ ಹಿಂದಿನ ಚರಿತ್ರೆ. ಇದಕ್ಕಿಂತ ಮಹತ್ವವಾದುದು ಅದರ ಇಂದಿನ ಸ್ಥಿತಿ-ಗತಿ ಮತ್ತು ಅದರ ಮುಂದಿನ ಗುರಿ ಗಮ್ಯಗಳು.

ಸ್ವಾತಂತ್ರ್ಯ ಪೂರ್ವದಲ್ಲಿ ವೀರಶೈವ ಸಮಾಜ ಸಮರ್ಥರಾದ ನೇತಾರರನ್ನು ಪಡೆದು ಅವರಿಂದ ತನ್ನ

---

* ಕನಕಪುರ ದೇಗುಲಮಠದ ಶ್ರೀಗಳು, ಕಬ್ಬಳ್ಳಿ ಚನ್ನಬಸಪ್ಪನವರು, ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀಗಳು, ಸರ್ಪಭೂಷಣ ಮಠದ ಶ್ರೀ( )ಗಳೇ ಮೊದಲಾದವರೂ ಈ ಪಟ್ಟಿಯಲ್ಲಿ ಸೇರಬೇಕಾದವರು. — ಸಂ.

ಉದ್ಧಾರವನ್ನು ಮಾಡಿಕೊಂಡಿತು. ಮುಂಬೈ ಪ್ರಾಂತ್ಯದಲ್ಲಿ ಸರ್ ಸಿದ್ದಪ್ಪ ಕಂಬಳಿ, ಶ್ರೀ ಹೊಸಮನಿ ಸಿದ್ದಪ್ಪ, ಶ್ರೀ ಷಣ್ಮುಖಪ್ಪ ಅಂಗಡಿ, ಹೆಚ್. ಸಿದ್ದಯ್ಯ ಅವರಂಥ ಒಬ್ಬೊಬ್ಬ ಮುಖಂಡರು ದೂರದರ್ಶಿಗಳಾಗಿ ಸಮಾಜದ ಏಳ್ಗೆಗೆ ಕಾರಣರಾದರು. ಅವರ ಮುಖಂಡತ್ವದಲ್ಲಿ ಸಮಾಜ ಪ್ರಗತಿ ಸಾಧಿಸಿ ಹೊಸರೂಪ ಧರಿಸಿತು. ಇದೇ ಕಾಲದಲ್ಲಿ ನಡೆದ ರಾಷ್ಟ್ರೀಯ ಆಂದೋಲನದಲ್ಲಿ ವೀರಶೈವರು ಧುಮುಕಿ ಬಲಿದಾನ ಮಾಡಿದುದುಂಟು. ಧನಶೆಟ್ಟಿ ಮಲ್ಲಪ್ಪ, ಮೈಲಾರ ಮಹಾದೇವರಂಥ ಅನೇಕ ಹುತಾತ್ಮರು ಸ್ವಾತಂತ್ರ್ಯ ನಂದಾದೀಪಕ್ಕೆ ರಕ್ತತೈಲ ನೀಡಿದರು.

ವೀರಶೈವರು ಹಿಂದುಳಿದವರು

ಸ್ವಾತಂತ್ರ್ಯಪೂರ್ವದಲ್ಲಿ ವೀರಶೈವ ಕಾರ್ಯಕರ್ತರು ಕಾಂಗ್ರೆಸ್ ಸಂಸ್ಥೆಯಲ್ಲಿ ಬಹುಸಂಖ್ಯಾತರಾಗಿ ಸೇವೆ ಸಲ್ಲಿಸಿದರು. ಕರ್ನಾಟಕ ಏಕೀಕರಣ ವಾಗುವವರೆಗೆ 22 ಕಡೆಗೆ ಹಂಚಿ ಹೋಗಿದ್ದ ಪ್ರದೇಶಗಳಲ್ಲಿ ವೀರಶೈವರು ಹೋರಾಡುತ್ತ ತಮ್ಮ ಕಾರ್ಯವನ್ನು ಮುಂದುವರಿಸಿದ್ದರು. ಈ ದುಡಿಮೆಯ ಫಲವಾಗಿ ನವ ಮೈಸೂರು ರಾಜ್ಯದ ಉದಯದೊಡನೆ ವೀರಶೈವ ಸಮಾಜಕ್ಕೆ ಹೊಸ ಚೈತನ್ಯ ಪ್ರಾಪ್ತವಾಯಿತು. ತಾವು ಹಿಂದುಳಿದವರಾಗಿದ್ದರಿಂದ ಹಿಂದುಳಿದ ಎಲ್ಲ ವರ್ಗಗಳನ್ನೂ ತಮ್ಮೊಡನೆ ಸೇರಿಸಿಕೊಂಡು 1956 ರಿಂದ 70 ರವರೆಗೆ ಎಲ್ಲರ ಏಳ್ಗೆಗಾಗಿ ದುಡಿದಂತಹ ವೀರಶೈವ ಮುಖಂಡರು ರಾಜಕೀಯ ಕರ್ಣಧಾರತ್ವ ವಹಿಸಿದರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವುದು ಉಸಿರಾದ ವೀರಶೈವರು ಎಲ್ಲರ ಹಿತಾಸಕ್ತಿಗಳನ್ನೂ ನೋಡುತ್ತಾ ಬಂದಿರುವರು. ಆದರೆ ದುರ್ದೈವದಿಂದ ನಮ್ಮ ಕರ್ನಾಟಕ ರಾಜಕೀಯ ಇದಕ್ಕೆ ಇನ್ನೊಂದು ಬಣ್ಣ ಬಳಿಯಿತು. ವೀರಶೈವ ಸಮಾಜದ ಗಾತ್ರ ಮತ್ತು ಅದಕ್ಕೆ 1956 ರಿಂದ 70ರ ಅವಧಿಯಲ್ಲಿ ದೊರೆತ ರಾಜಕೀಯ ಹಾಗೂ ಇತರ ಸೌಲಭ್ಯಗಳನ್ನು ಗಮನಿಸಿದರೆ ಈ ಬಣ್ಣ ದುರುದ್ದೇಶಪೂರಿತವೆಂದು ಸ್ಪಷ್ಟ. ಒಟ್ಟು ವೀರಶೈವ ಜನಸಂಖ್ಯೆಯು ಪ್ರತಿ ಶತ 10 ರಷ್ಟು ಜನ ಸುಶಿಕ್ಷಿತರಾಗಿದ್ದಾರೆ; 90 ರಷ್ಟು ಜನ ನಿರಕ್ಷರಕುಕ್ಷಿಗಳು ಹಳ್ಳಿಗಳಲ್ಲಿ ಇದ್ದಾರೆ. ಈ ಗ್ರಾಮೀಣ ಪ್ರದೇಶದ ಬಹು ಸಂಖ್ಯೆಯ ವೀರಶೈವರನ್ನು ನೋಡಿದಾಗ **ಅವರಿಗೂ** ಹಿಂದುಳಿದ ವರ್ಗಗಳೆನಿಸಿ[illegible] ಕಂಡುಬರುವುದಿಲ್ಲ. [illegible] ಜಿಕ ವ್ಯವಹಾರದಲ್ಲಿ, [illegible] ಲ್ಲರೂ ಒಂದೇ ಹಡಗಿನಲ್ಲಿ [illegible] ಅವರಲ್ಲೆಲ್ಲ ಯಾರು ಹೆಚ್ಚು ಯಾರು ಕಡಿಮೆಯೆನ್ನುವಂತಿಲ್ಲ. ಅಂತೆಯೇ ಅವರೆಲ್ಲ ಒಂದೇ ಕುಟುಂಬದವರಾಗಿ ಅಪ್ಪ, ಅಣ್ಣ, ಅಕ್ಕ, ತಂಗಿ ಎಂಬ ಒಂದು ಭಾವದಲ್ಲಿ ಬದುಕುತ್ತಿದ್ದಾರೆ. ವೀರಶೈವ ಸಮಾಜ ಹಿಂದುಳಿದ ವರ್ಗಗಳಲ್ಲಿ ಸೇರಬೇಕೆಂಬ ವಾದಕ್ಕೆ ಸಾಕ್ಷಿ ಸಾಹಿತ್ಯ ಒದಗಿಸಬಹುದು.

ಮಾಡಿದ ಅಪರಾಧನೇನು ?

ನಮ್ಮ ಇಂದಿನ ನೂತನ ರಾಜಕೀಯ ಇಂಥ ಅಭೇದ್ಯವಾದ ಬಾಂಧವ್ಯವನ್ನು ಒಡೆಯಿತು. ಎಲ್ಲ ಸೌಲಭ್ಯಗಳನ್ನು ಭಾರತದ ಬಹು ಸಂಖ್ಯಾತ ಸಮಾಜಗಳು ಪಡೆದವೆಂಬ ಆರೋಪವನ್ನು ಹೊರಿಸಿ ಹಿಂದುಳಿದ ವರ್ಗಗಳನ್ನು ಬಹು ಸಂಖ್ಯಾತರಿಂದ ತಮ್ಮ ರಾಜಕೀಯ ದಾಹಕ್ಕಾಗಿ ಬೇರ್ಪಡಿಸಿ ಹೊಸ ತಂತ್ರವನ್ನೇ ಹೂಡಿದರು. ಈ ತಂತ್ರದ ತಾಂಡವಕ್ಕೆ ತುತ್ತಾಯಿತು ನಿರಪರಾಧಿ ವೀರಶೈವ ಸಮಾಜ. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಡೆದು, ಆಳುವಕಾಂಗ್ರೆಸ್ಸು ಅಧಿಕಾರ ವಹಿಸಿಕೊಳ್ಳುವುದಕ್ಕಾಗಿ ವೀರಶೈವ ಸಮಾಜವನ್ನು ಸೇಡಿನ ಮನೋಭಾವನೆಯಿಂದ ಎಲ್ಲ ಹಂತಗಳಲ್ಲಿ ಹತ್ತಿಡುತ್ತ ನಡೆದಿದೆ. ಚುನಾವಣೆಯ ಟಿಕೆಟ್ ಕೊಡುವಲ್ಲಿ ವೀರಶೈವ ಜನಸಂಖ್ಯೆಯ ಪ್ರಮಾಣವನ್ನು ಕಡೆಗಣಿಸಿತು. ಪ್ರತಿಸ್ಪರ್ಧಿ ವೀರಶೈವ ಹುರಿಯಾಳುಗಳನ್ನು ಸೋಲಿಸಲು ಸರ್ವಶಕ್ತಿಯನ್ನು ಉಪಯೋಗಿಸಿತು. ಮಂತ್ರಿಮಂಡಳವನ್ನು ರಚಿಸುವಾಗ ವೀರಶೈವದ ಗಂಡುಮೆಟ್ಟಾದ ಉತ್ತರ ಕರ್ನಾಟಕದಿಂದ ಕ್ಯಾಬಿನೆಟ್ ದರ್ಜೆಯ ಒಬ್ಬ ಮಂತ್ರಿಯನ್ನೂ ಆಯ್ದುಕೊಳ್ಳಲಿಲ್ಲ. ಇಂದಿನ ಸಚಿವ ಸಂಪುಟಕ್ಕೆ ಆರಿಸಿಕೊಂಡವರ ಸಂಖ್ಯೆ ಕೇವಲ ಕಡಿಮೆ ಎಂದೂ ಹೇಳದೆ ಗತ್ಯಂತರವಿಲ್ಲ. ವೀರಶೈವರು ಮಾಡಿರುವ ಅಪರಾಧವಾದರೂ ಏನು ? ದಕ್ಷರಾದ ಪ್ರಾಮಾಣಿಕರಾದ, ಸಚಿವ ಸ್ಥಾನಕ್ಕೆ ಯೋಗ್ಯರಾದ, ಜನರಿರಲಿಲ್ಲವೆ ? ಪ್ರಾತಿನಿಧ್ಯದ ತತ್ವವಾದರೂ ಏನು ? ಈ ಅವಧಿಯಲ್ಲಿ ದೊಡ್ಡ ಹುದ್ದೆಗಳಿಗೆ ಆಯ್ಕೆಯಾದವರಲ್ಲಿ ವೀರಶೈವರು ಇಲ್ಲವೇ ಇಲ್ಲ. ಅಧಿಕಾರ

'ನಿಷ್ಕಾಮ [illegible] ಾಡುವಂತೆ
ಇಡಿಯ ಬಾಳು ಯ[illegible] ಶೈವರು [illegible]
ರಂಗಬಹಿರಂಗ[illegible] ಸಹಕಾ[illegible]
[illegible]ಮುಂತಾದವುಗಳನ್ನು
ಇಲ್ಲಿ[illegible]

WITH BEST COMPLIMENTS F...



MYSORE PORCELAINS LIMITED

India's largest manufacturers of

HIGH TENSION & LOW TENSION ELECTRO-PORCELAIN INSULATORS & HARDWARES & MAJOR SUPPLIERS OF SOLID CORE INSULATORS FOR RAILWAY ELECTRIFICATION SCHEMES IN INDIA

WITH BEST COMPLIMENTS FROM

THE MYSORE ACETATE AND CHEMICALS CO. LTD.

'MYSUGAR' BUILDINGS, POST BOX No. 6772
SRI JAYACHAMARAJA WADIYAR ROAD
BANGALORE-2

Telegram: MYACETATE Telex: 236 Telephone: 74011-3

Manufacturers of:

* CELLULOSE ACETATE MOULDING GRANULES
* CELLULOSE TRIACETATE
* CELLULOSE SECONDARY ACETATE
* ACETIC ANHYDRIDE
* ETHYL ACETATE
* BLEACHED COTTON LINTER PULP

...h best compliments from



VISIT WHILE AT BANGALORE

MESSRS

SRI LAKSHMI LODGE

IV MAIN ROAD, GANDHINAGAR
BANGALORE-9
(BEHIND SYNDICATE BANK LTD.)

AIRY-SPACIOUS ROOMS AVAILABLE

PROPRIETOR:
T. S. SHANKARAPPA

With

best compliments

from



BENGAL ELECTRICALS CO.

BANGALORE-1 * MADRAS-17 * TRIVANDRUM-14

ದಿ ಮೈಸೂರು ಸ್ಟೇಟ್ ಕೋ-ಆಪರೇಟಿವ್ ಯೂನಿಯನ್ ಲಿಮಿಟೆಡ್

32, "ಶಾಂತಿ ಕುಟೀರ", ರೇಸ್‌ಕೋರ್ಸ್ ರೋಡ್, ಬೆಂಗಳೂರು-1

ಸಹಕಾರಿ ಚಳವಳಿಯ ಯಶಸ್ಸಿಗೆ ಸಹಕಾರಿ ಶಿಕ್ಷಣ— ತರಬೇತಿ ಅಗತ್ಯ

ಸಹಕಾರಿ ಪ್ರಚಾರ— ಶಿಕ್ಷಣ— ತರಬೇತಿ ರಾಜ್ಯ ಸಹಕಾರಿ ಯೂನಿಯನ್ನಿನ ಮುಖ್ಯೋದ್ದೇಶ

ಕಾರ್ಯ ಚಟುವಟಿಕೆಗಳು:

* ರಾಜ್ಯಾದ್ಯಂತ ಸಹಕಾರಿ ಶಿಕ್ಷಣ ಕೇಂದ್ರಗಳ ಏರ್ಪಾಡು — ಮೇಲ್ವಿಚಾರಣೆ
* ಸಹಕಾರಿ ಸಾಹಿತ್ಯ — ಪ್ರಕಟನೆ
* ಸಮ್ಮೇಳನ, ಚರ್ಚಾಗೋಷ್ಠಿಗಳ ಏರ್ಪಾಡು
* "ಮೈಸೂರು ಸಹಕಾರ ಪತ್ರಿಕೆ" ಎಂಬ ಮಾಸ ಪತ್ರಿಕೆ ಮತ್ತು "ಸಹಕಾರ" ಎಂಬ ವಾರ ಪತ್ರಿಕೆಗಳ ಪ್ರಕಟನೆ
* ಸಹಕಾರಿ ಸಮಸ್ಯೆಗಳ ಬಗೆಗೆ ಸಂಶೋಧನೆ

ಯೂನಿಯನ್ನಿನ ಶಕ್ತಿಯೇ ಚಳವಳಿಯ ಶಕ್ತಿ

ಸಹಕಾರಿ ಶಿಕ್ಷಣ ನಿಧಿ ಸಲ್ಲಿಸಿ ಯೂನಿಯನ್ನಿನ ಶಕ್ತಿ ಬೆಳೆಸಿರಿ

ವಾರ ಪತ್ರಿಕೆ ಮತ್ತು ಮಾಸ ಪತ್ರಿಕೆಗಳ ವಾರ್ಷಿಕ ಚಂದಾ ರೂ. 10

ಬಿ. ವೈ. ಸಾಂಬ್ರಾಣಿ
ಕಾರ್ಯದರ್ಶಿ

ಎಚ್. ವಿ. ವೀರೇಗೌಡ
ಉಪಾಧ್ಯಕ್ಷ

ಎ. ಎಸ್. ಪಾಟೀಲ್
ಅಧ್ಯಕ್ಷ

S[illegible]E BANK OF MYSORE

welcomes you

to avail

of its

extensive

BANKING SERVICES

'ನಿಷ್ಕಾಮ [illegible]ಾಡುವಂತೆ ಸ್ಥಾನಪಲ್ಲಟಗೊಳಿ ಇಡಿಯ ಬಾಳು ಯೆ[illegible]ಶೈವರು ಸಮಸ್ತ ಜನಾಂಗದ ರಂಗಬಹಿರಂಗ[illegible] ಸಹಕಾರ ಬ್ಯಾಂಕ್, ವಿದ್ಯಾ [illegible] ಮುಂತಾದವುಗಳನ್ನು ಗುರಿಯಿಟ್ಟು ಕಬಳಿಸುತ್ತ ನಡೆದಿರುವರು. ಇಲ್ಲಿಯವರೆಗೆ ಯಾವ ಹಿಂದುಳಿದ ವರ್ಗಗಳ ಉದ್[illegible]ಕ್ಕಾಗಿ ತನ್ನ ಜನ್ಮದಾರಭ್ಯ ದುಡಿಯಿತೋ ಆ ಸಮಾಜಕ್ಕೆ ಅದೇ ಹಿಂದುಳಿದವರನ್ನು ಮುಂಧೆ ಮಾಡಿಕೊಂಡು ಮಾಡುತ್ತಿರುವ ಅನ್ಯಾಯವಿದು. ಇದರಿಂದ ಹಿಂದುಳಿದವರ ಏಳ್ಗೆಯಿಲ್ಲ. ವೀರಶೈವರ ಕಲ್ಯಾಣವಿಲ್ಲ. ನಾಡಿನ ಉದ್ಧಾರವಿಲ್ಲ. ಇದೇ ರೀತಿ ವೀರಶೈವರನ್ನು ಹತ್ತಿಕ್ಕುತ್ತ ನಡೆದರೆ ನಾಡದೇವಿಯ ಮೂರರಲ್ಲೊಂದು ಪಾಲು ದೇಹವನ್ನು ನಿರ್ಜೀವಗೊಳಿಸಿದಂತೆ. ಈ ಉತ್ಕಟ ಸನ್ನಿವೇಶದಲ್ಲಿ ರಾಜ್ಯದ 50 ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆಯುಳ್ಳ ವೀರಶೈವರು ನಿಸ್ಸಹಾಯಕರಾಗಿ ಹೇಡಿಗಳಂತೆ ತಾಟಸ್ಥ್ಯನೀತಿಯನ್ನು ಅನುಸರಿಸುವರೋ ಗಂಡುಗಲಿಗಳಾಗಿ ಕಾರ್ಯೋನ್ಮುಖರಾಗಿ ತಮಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನಮಾನಗಳನ್ನು ದೊರಕಿಸಿಕೊಳ್ಳುವಲ್ಲಿ ಉದ್ಯುಕ್ತರಾಗುವರೋ ಕಾದು ನೋಡಬೇಕಾಗಿದೆ. 800 ವರ್ಷಗಳ ಹಿಂದೆ ಕಲ್ಯಾಣದಲ್ಲಿ ನಡೆದ ಕ್ರಾಂತಿ ಅವರನ್ನು ಸ್ಫೂರ್ತಿಗೊಳಿಸಬೇಕು; ಚೇತನಗೊಳಿಸಬೇಕು. ಅವರಲ್ಲಿ ಕ್ರಿಯಾಶಕ್ತಿಯನ್ನು ಹುಟ್ಟಿಸುವಂತಾಗಬೇಕು. ಇದೇ ನನ್ನ ಮಹತ್ವಾಕಾಂಕ್ಷೆ. ಈ ಮಹಾಸಭೆಯ ಪರಮ ಧ್ಯೇಯ.

ಈ ಮಾತುಗಳನ್ನು ಯಾವ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ ಎನ್ನುವುದನ್ನು ಮಹಾಜನ ಅರ್ಥಮಾಡಿಕೊಳ್ಳಬೇಕು. ಯಾವ ಸರಕಾರವೇ ಬರಲಿ, ಅದಕ್ಕೆ ನಿಷ್ಠೆಯಿಂದ ನಡೆದುಕೊಂಡು ಬಂದಿದೆ ಸಮಾಜ. ಶಾಸನಬದ್ಧವಾಗಿ ಶಾಂತವಾಗಿ ಸರಕಾರದೊಡನೆ ಸಹಕರಿಸುವುದು ವೀರಶೈವರ ಸತ್ಪರಂಪರೆ ಆದರೆ ಆತ್ಮಗೌರವ ಬಲಿಕೊಟ್ಟು ತನ್ನ ಅಸ್ತಿತ್ವವನ್ನೇ ಕೀಳು ಮಾಡಲು ಅದೆಂದೂ ಬಯಸದು. ಎಲ್ಲವನ್ನು ಸಹನೆಯಿಂದ ಒಳಗೊಂಡು ಹೋಗುವ ಧರ್ಮದ ನಮ್ಮ ಜನಾಂಗ ಇತ್ತೀಚೆಗೆ ಕಟು ಅನುಭವಗಳನ್ನು ಕಂಡಿದೆ. ಅನ್ಯಾಯದ ದುಷ್ಟ ಶಕ್ತಿಗಳ ಬಗ್ಗೆ ಹೊಸ ದೃಷ್ಟಿ ತಾಳಬೇಕಾಗಿದೆ. ಏನೇ ಆದರೂ ನಾವು ಸಾಮಾಜಿಕ ಶಾಂತಿಗೆ ಧಕ್ಕೆ ಬಾರದಂತೆ ನ್ಯಾಯಬದ್ಧ, ಸಂವಿಧಾನಬದ್ಧ ಹೋರಾಟಕ್ಕೆ ಸಿದ್ಧರಾಗಬೇಕಾಗಿದೆ.

ಏಕೀಕೃತವಾಗಿ ಬದುಕಬೇಕು

ವೀರಶೈವ ಸಮಾಜ ಈಗ ಎಚ್ಚರವಾಗಬೇಕು. ಏಳಬೇಕು; ಎದ್ದು ಮುನ್ನಡೆಯಬೇಕು. ತನ್ನನ್ನು ಎದುರಿಸುತ್ತಿರುವ ಪ್ರತಿಗಾಮೀ ಶಕ್ತಿಗಳನ್ನು ಜಾಣ್ಮೆಯಿಂದ ಜಯಿಸಬೇಕು. ಬಸವಣ್ಣನವರ ಕಾಲದಿಂದ ಸೋದರರಂತೆ ನಡೆದುಕೊಂಡು ಬಂದ ಅಲ್ಪ ಸಂಖ್ಯಾತ ಅನೇಕ ಸಮಾಜಗಳನ್ನು ಎಂದಿನಂತೆ ತಮ್ಮ ಮಧುರ ಬಾಂಧವ್ಯದಲ್ಲಿ ಬೆಸೆಯಲು ಪ್ರಯತ್ನ ಮಾಡಬೇಕು. ಅವರಿಗುಂಟಾದ ತಪ್ಪು ಭಾವನೆಯನ್ನು ನಿರ್ಮೂಲನಗೊಳಿಸಬೇಕು. ಇದರಿಂದ ಬಸವಣ್ಣನವರ ತತ್ವ ಅರ್ಥ ಪಡೆಯುತ್ತದೆ; ಆತ್ಮ ಸಮಾಧಾನ ಹೊಂದುತ್ತದೆ. ಇದು ನೆರೆಹೊರೆಯ ಸಮಾಜಗಳೊಡನೆ ನಡವಳಿಯಾದರೆ, ಇದರಷ್ಟೆ ಮಹತ್ವವಾಗಿದೆ ವೀರಶೈವ ಒಳಪಂಗಡ ಏಕೀಕರಣ; ಅಂಗದ ಮೇಲೆ ಲಿಂಗವಿದ್ದವರೆಲ್ಲರೂ ಸಂಗಮನಾಥಸ್ವರೂಪರೆಂದ ಸಮಾಜದಲ್ಲಿ ವೃತ್ತಿ ಮೂಲಕವಾಗಿ ಅನೇಕ ಒಳಪಂಗಡಗಳು ತಲೆದೋರಿವೆ. ಪ್ರತಿಯೊಂದು ಪಂಗಡ ತಾನೇ ಒಂದು ಸ್ವತಂತ್ರ ಜಾತಿಯೇನೋ ಎಂಬಂತೆ ಭ್ರಮಿಸಿ, ಅಖಂಡ ಸಮಾಜ ಪ್ರಜ್ಞೆಯನ್ನೇ ಮರೆತಿದೆ. ಎಲ್ಲ ಪಂಗಡಗಳೂ ಪರಸ್ಪರ ಹೋರಾಡಿ ಸಮಾಜವನ್ನೇ ಬಲಿಕೊಡುತ್ತಿವೆ. ಇದರ ಪರಿಣಾಮ ಸಮಾಜದ ಅಧೋಗತಿ, ಅಪಕೀರ್ತಿ, ಅನೈಕ್ಯತೆ, ಧೂರ್ತರಿಗೆ ಸದ್ಗತಿ ಈ ಯಾದವೀಕಲಹ ಹೋಗದೆ ವೀರಶೈವದ ಉದ್ಧಾರವಿಲ್ಲ. ಈ ದುರ್ಧರ ಪ್ರಸಂಗವಲ್ಲಿ ವೀರಶೈವರ ಕೃತಕ ಒಳಪಂಗಡಗಳು ಏಕೀಕೃತವಾಗಿ ಬದುಕಬೇಕು, ಇಲ್ಲವೆ ಅನೈಕ್ಯತೆಯಿಂದ ಸಾಯಬೇಕು.

ಮಠಾಧಿಪತಿಗಳು ಮತ್ತು ಮುಖಂಡರ ಪಾತ್ರ

ಈ ಸಂದರ್ಭದಲ್ಲಿ ವೀರಶೈವ ಮಠಾಧೀಶರು, ರಾಜಕೀಯ ಮುಖಂಡರು, ಸಾಮಾಜಿಕ ಕಾರ್ಯಕರ್ತರು ದೊಡ್ಡಪಾತ್ರವನ್ನು ವಹಿಸಬೇಕಾಗಿದೆ. ಮಠಾಧೀಶರು ಗುರುಮನೆಯಿಂದ ಹೊರಗೆ ಬರಬೇಕು. ತಮ್ಮ ಮೇಲೆ ಭಕ್ತಿವಿಶ್ವಾಸಗಳನ್ನಿಟ್ಟ ಎಲ್ಲ ಪಂಗಡದವರನ್ನೂ ಒಂದುಗೂಡಿಸಬೇಕು. ಒಂದು ಬಗೆಯ ಸತ್ಯಾಗ್ರಹವನ್ನು ಹೂಡಿಯಾದರೂ ಈ ಕಾರ್ಯವನ್ನು ಪೂರೈಸಬೇಕು. ವೀರಶೈವ ಮಠಗಳಿಲ್ಲದ ಊರಿಲ್ಲ. ಅವರು

ಮನಸ್ಸುಮಾಡಿದರೆ ತಿಂಗಳೊಪ್ಪತ್ತಿನಲ್ಲಿ ಕ್ಷಣಾರ್ಧದಲ್ಲಿ ಈ ಕಾರ್ಯವನ್ನು ಸಾಧಿಸಬಲ್ಲರು. ವೀರಶೈವ ಸಮಾಜವನ್ನು ಗಂಡಾಂತರದಿಂದ ತಪ್ಪಿಸಬಹುದು. ಈ ಕಾರ್ಯಕ್ಕೆ ಅವರು ಮುಂದೆ ಬಾರದಿದ್ದರೆ ಕರ್ತವ್ಯಚ್ಯುತರೆಂಬ ದೋಷಾರೋಪಣೆಗೆ ಗುರಿಯಾಗಬೇಕಾದೀತು. ಇದರಿಂದ ವೀರಶೈವ ಮಠಗಳ ಅಸ್ತಿತ್ವವೂ ಅಳಿಯಬಹುದು. ಒಂದು ಸಮಾಜ ರಾಜಕೀಯ ಸೂತ್ರಗಳನ್ನು ಕಳೆದುಕೊಂಡರೆ ಗುರುಗಳು, ರಾಜಗುರುಗಳಂತೆ ಸಮಾಜ ಶಿಶುವನ್ನು ಕಾಪಾಡಬೇಕು. ಇದನ್ನು ಬಿಟ್ಟು ಆಡಂಬರ, ಅಭಿಮಾನ, ಪಕ್ಷ-ಪಂಗಡಗಳಲ್ಲಿಯೇ ಕಾಲ ಕಳೆದರೆ, ಅವರು ಸಮಾಜ ಶಿಶುವನ್ನು ತಬ್ಬಲಿಮಾಡಿದ ಅಪಕೀರ್ತಿ ಹೊರಬೇಕಾಗುತ್ತದೆ.

ಸಮಾಜದ ಹೃದಯ

ವೀರಶೈವ ಒಳಪಂಗಡಗಳ ಏಕೀಕರಣಕ್ಕಾಗಿ ಹೋರಾಡಬೇಕಾದ ಮಠಾಧೀಶರು ಮೊಟ್ಟಮೊದಲು ತಮ್ಮೊಳಗಿನ ಸಮಯಭೇದ, ಸಂಪ್ರದಾಯ ಭೇದ, ಅಭಿಪ್ರಾಯ ಭೇದಗಳನ್ನು ಕಿತ್ತುಹಾಕಬೇಕು. ಈ ದಿಸೆಯಲ್ಲಿ ಮೊದಲು ಬಾಳೆಹಳ್ಳಿ, ಉಜ್ಜಯಿನಿ, ಶ್ರೀಶೈಲ ಕಾಶಿ, ಕೇದಾರ ಈ ಪಂಚಾಚಾರ್ಯ ಜಗದ್ಗುರುಗಳು, ಚಿತ್ರದುರ್ಗ, ಸಿರಿಗೆರೆ, ಸಿದ್ಧಗಂಗಾ, ಸುತ್ತೂರು, ಹುಬ್ಬಳ್ಳಿ ಈ ಮಹಾಪೀಠಗಳ ಜಗದ್ಗುರುಗಳು— ಈ ಹತ್ತುಜನ ಜಗದ್ಗುರುಗಳು ಒಟ್ಟುಗೂಡಬೇಕು. ಸಾಮರಸ್ಯ ಹೊಂದಬೇಕು. ಸಮಾಜಕಾರ್ಯಕ್ಕೆ ಮುಂದಾಗಬೇಕು. ಇನ್ನುಳಿದ ಅಸಂಖ್ಯಾತ ಮಠಗಳು ಈ ದೃಷ್ಟಿಯಲ್ಲಿ ಒಂದುಗೂಡಬೇಕು. ಎಷ್ಟೋ ಮಠಗಳು ದಕ್ಷರಾದ ಸ್ವಾಮಿಗಳಿಲ್ಲದೆ ಹಾಳಾಗುತ್ತಿವೆ; ಸಮಾಜವನ್ನೂ ಹಾಳುಮಾಡುತ್ತಲಿವೆ. ಇದಕ್ಕೆ ಕಾರಣವೆಂದರೆ ಅಂತರಂಗಬಲ್ಲ ಪರ ಹಾಗೂ ಅಪರ ವಿದ್ಯೆಗಳಲ್ಲಿ ಬಲ್ಲಿದರಾದ ಮಠಾಧೀಶರನ್ನು ಸಿದ್ಧಗೊಳಿಸದೆ ಇರುವುದು. ಈ ಪವಿತ್ರಕಾರ್ಯಕ್ಕಾಗಿಯೇ ಉದಯಗೊಂಡ ಶಿವಯೋಗಮಂದಿರದಂಥ ಸಂಸ್ಥೆಗಳ ಜೀರ್ಣೋದ್ಧಾರವಾಗಬೇಕು. ಪ್ರತಿಯೊಂದು ಮಠಗಳು ಸಮಾಜದ ನಾಯಕರನ್ನು ಸಿದ್ಧಗೊಳಿಸುವ ಕಮ್ಮಟವಾಗಬೇಕು. ಇದರಿಂದ ಸಮಾಜ ಸಂಪತ್ತು ಪರಿವರ್ಧಿಸುತ್ತದೆ. ಮಠಗಳೇ ಸಮಾಜದ ಹೃದಯವಾದುದರಿಂದ ಅವುಗಳೊಡನೆ ಸಮಾಜ ಬೆಳೆಯುವುದರಲ್ಲಿ ಸಂದೇಹವಿಲ್ಲ. ಜನಾಂಗದ[illegible] ವಾದುದು ರಾಜಕೀಯ. ಮಠ[illegible] ಮುಖಂಡರು, ಸಾಮಾಜಿಕ ಕಾ[illegible] ಬೇಕು. ಸಮಾಜವನ್ನು ಕಟ್[illegible] ಬೇಕು. ತಮ್ಮ ಕರ್ತೃತ್ವಶಕ್ತಿಯನ್ನು ಅನೇಕ [illegible] ಗಳಲ್ಲಿ ತಲೆದೋರುವ ವೈಷಮ್ಯಗಳನ್ನು ತೊಡೆದುಹಾಕಲು ವಿನಿಯೋಗಿಸಬೇಕು. ತಮ್ಮ ರಾಜಕೀಯ ಆದರ್ಶವೇನೇ ಇರಲಿ ಸಮಾಜದ ವಿಷಯ ಬಂದಾಗ ಒಂದಾಗಬೇಕು. ನಮ್ಮ ಮುಖಂಡರು ಇದರಲ್ಲಿ ತಪ್ಪಿದ ಫಲವಾಗಿ ಸಮಾಜ ಗುರುವಿಲ್ಲದ ಮಠವಾಗಿದೆ. ಹಿರಿಯರಿಲ್ಲದ ಮನೆಯಾಗಿದೆ. ಸಂಕಟದಲ್ಲಿ ಸಿಲುಕಿ ಸಾಯುತ್ತಲಿದೆ. ಜಾಗೃತ ಸಮಾಜದ ಲಕ್ಷಣವೆಂದರೆ ನಾಯಕತ್ವದ ಪರಂಪರೆ, ತಲತಲಾಂತರದಿಂದ ನಡೆದು ಬಂದ ನಮ್ಮ ಸಮಾಜದ ನಾಯಕ ಪರಂಪರೆ ಇಂದು ತಟ್ಟನೆ ನಿಂತಂತಾಗಿದೆ. ಇಡೀ ಸಮಾಜವನ್ನು ಮೇಲಕ್ಕೆತ್ತಬಲ್ಲ ಕಾರಣಪುರುಷನ ಅವಶ್ಯಕತೆ ಇಂದು ಅತಿಶಯವಾಗಿದೆ.

ಸಮಾಜ ಪ್ರತಿಭೆಯ ಸಂರಕ್ಷಣೆ

ಉನ್ನತಮಟ್ಟದ ವಿಜ್ಞಾನಿಗಳನ್ನು, ಕಲಾವಿದರನ್ನು ಬುದ್ಧಿಜೀವಿಗಳನ್ನು, ರಾಜಕೀಯಧುರೀಣರನ್ನು ಮತ್ತು ಕುಶಲ ಆಡಳಿತಗಾರರನ್ನು ರೂಪಿಸುವ ಕಾರ್ಯ ಗುರುತರವಾದುದು. ಬಾಲ್ಯದಲ್ಲಿಯೇ ಈ ಶಕ್ತಿಗಳನ್ನು ಗುರುತಿಸಬೇಕಾಗುತ್ತದೆ. ಬುದ್ಧಿವಂತ ವಿದ್ಯಾರ್ಥಿಗಳಿಗಾಗಿ ಉನ್ನತ ಮಟ್ಟದ ಶಿಕ್ಷಣದ ವ್ಯವಸ್ಥೆ, ವಸತಿ ಸೌಕರ್ಯಗಳನ್ನು ನೀಡಿ ಅವರಲ್ಲಿ ಆದರ್ಶ ಮನೋಭಾವ ಅಂಕುರಿಸಿ ಪಲ್ಲವಿಸುವಂತೆ ಮಾಡಬೇಕು. ಇಂಥ ನೂರು ವ್ಯಕ್ತಿಗಳು ಸಿದ್ಧವಾದರೆ ಸಮಾಜದ ಉದ್ಧಾರವಾದೀತು. ಇಷ್ಟು ದೊಡ್ಡ ಸಮಾಜದಲ್ಲಿ ಐ.ಏ.ಎಸ್., ಐ.ಎಫ್.ಎಸ್ ಆದವರೆಷ್ಟು ಜನ? ಎಂದು ಎಣಿಸಿ ನೋಡಿದಾಗ ನಾವು ಮರುಗಬೇಕಾಗುತ್ತದೆ. ಆ ಸ್ಥಾನಗಳೇ ನಾಡಿನ ಸೂತ್ರಗಳು. ಸಮಾಜದ ನಿಜವಾದ ಏಳಿಗೆಯಾಗಬೇಕಾದರೆ ಆ ಸ್ಥಾನಗಳನ್ನು ಪಡೆಯುವ ಸಮರ್ಥ ವ್ಯಕ್ತಿಗಳನ್ನು ಅಣಿಗೊಳಿಸಬೇಕಾದುದು ಮಹತ್ವದ ಕೆಲಸ. ಇದುವರೆಗೆ ನಮ್ಮ ವಿದ್ಯಾಸಂಸ್ಥೆಗಳು ಸಂಖ್ಯಾದೃಷ್ಟಿಯಿಂದ ಶಿಕ್ಷಣ ಪ್ರಸಾರವನ್ನು ಮಾಡಿವೆ. ಇನ್ನು ಸತ್ವದ ದೃಷ್ಟಿಯಿಂದ ಮಾಡಬೇಕಾಗಿದೆ. ಇಲ್ಲಿಯವರೆಗೆ ಸಾಮಾನ್ಯ ಹುದ್ದೆಗಳಿಗೆ ಅರ್ಹ

'ನಿಷ್ಕಾಮ [illegible] ಇಡಿಯ ಬಾಳು ಯ[illegible] ಸಿದ್ಧಗೊಳಿಸ[illegible]ವೆ. ಇನ್ನು ರಂಗಬಹಿರಂಗದ[illegible]ಳಿವ ಹುದ್ದೆಗಳಿಗೆ ಯೋಗ್ಯವಾದ [illegible]ಗೊಳಿಸಬೇಕು. ಐ. ಎ. ಎಸ್. [illegible]ಮೊದಲಾದವುಗಳ ತರಬೇತಿಗಾಗಿಯೇ [illegible]ಸಂಸ್ಥೆಗಳನ್ನು ಕಟ್ಟಬೇಕು; ಸಮಾಜದ ಪ್ರತಿಭೆಯನ್ನು ಸಂರಕ್ಷಿಸಬೇಕು.

ಈ ಉನ್ನತ ಮಟ್ಟದ ಸಂಸ್ಥೆಗಳಷ್ಟೇ ಮಹತ್ವಪೂರ್ಣವಾದವುಗಳೆಂದರೆ ಮಕ್ಕಳ ಶಿಕ್ಷಣ ಸಂಸ್ಥೆಗಳು. ರಾಮಕೃಷ್ಣಾಶ್ರಮ, ಕ್ರೈಸ್ತಸಂಸ್ಥೆಗಳ ಮಾದರಿಯಲ್ಲಿ ನಮ್ಮ ಮಠಗಳು ಮಕ್ಕಳಿಗಾಗಿ ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ನೈತಿಕ ಹಾಗೂ ಬೌದ್ಧಿಕ ಮಟ್ಟಗಳು ಸಮಸಮವಾಗಿಯೇ ಬೆಳೆದು ಪರಿಪೂರ್ಣ ವ್ಯಕ್ತಿತ್ವ ವಿಕಾಸವಾಗುತ್ತದೆ.

ಸಾಹಿತ್ಯ ಪ್ರಸಾರ – ಸಂಶೋಧನೆ

ವೀರಶೈವ ತಾತ್ವಿಕ, ಧಾರ್ಮಿಕ ಮತ್ತು ಸಾಹಿತ್ಯಕ ಪರಂಪರೆ ಬಹು ದೊಡ್ಡದು. ಈ ಕ್ಷೇತ್ರಗಳಲ್ಲಿ ನಮ್ಮ ಪೂರ್ವಜರು ವಿಶ್ವಮಾನ್ಯವಾದ ಕೃತಿಗಳನ್ನು ರಚಿಸಿರುವರು. ಇವು ನಮ್ಮ ದೇಶ ಭಾಷೆಗಳಲ್ಲಿಯೇ ಇರುವುದರಿಂದ ಇವುಗಳ ಪರಿಜ್ಞಾನ ಭಾರತ ದೇಶದ ಇತರರಿಗೂ, ಜಾಗತಿಕ ಜನಾಂಗಕ್ಕೂ ಆಗದಂತಾಗಿದೆ. ಉಪನಿಷತ್ತು, ಭಗವದ್ಗೀತೆಯಂಥ ಗ್ರಂಥಗಳು ಆಂಗ್ಲ ಭಾಷೆಗೆ ತರ್ಜುಮೆ ಹೊಂದಿ ವಿಶ್ವವೇ ಭಾರತದ ಕಡೆಗೆ ಹೊರಳಿ ನೋಡುವಂತೆ ಮಾಡಿದವು. ವಚನ ಸಾಹಿತ್ಯ ಹಾಗೂ ವೀರಶೈವದ ತಾತ್ವಿಕ ಹಾಗೂ ಸಾಹಿತ್ಯಕ ಕೆಲವು ಕೃತಿಗಳು ಜಗತ್ತಿನ ಬೇರೆ ಬೇರೆ ಭಾಷೆಗಳಿಗೆ ಪರಿವರ್ತನ ಹೊಂದುವುದು ತೀರ ಅವಶ್ಯವಿದೆ. ಇದರಿಂದ ವೀರಶೈವವು ಜಗತ್ತನ್ನೇ ತನ್ನ ಕಡೆಗೆ ಆಕರ್ಷಿಸಬಲ್ಲದು.

ವೀರಶೈವತತ್ವಜ್ಞಾನ ಜಗತ್ತಿನ ಶ್ರೇಷ್ಠತತ್ವ ಪ್ರಣಾಲಿಗಳ ಸಾಲಿನಲ್ಲಿ ನಿಲ್ಲುತ್ತದೆ. ಈ ತೌಲನಿಕ ಅಧ್ಯಯನಕ್ಕಾಗಿ ಒಂದು 'ಕಾಲೇಜ್ ಆಫ್ ಡಿವಿನಿಟಿ' ಸ್ಥಾಪಿಸುವದು ಅವಶ್ಯವಿದೆ. ಮಠಾಧೀಶರಾಗತಕ್ಕ ವ್ಯಕ್ತಿಗಳಿಗೂ, ತತ್ವ ಜಿಜ್ಞಾಸುಗಳಿಗೂ ಇದು ಅಧ್ಯಯನ ಕೇಂದ್ರವಾಗಬೇಕು.

ಇಂತಹುದೇ ಅತ್ಯಾವಶ್ಯಕವಾದ ಇನ್ನೊಂದು ಕೇಂದ್ರವೆಂದರೆ, ವೀರಶೈವ ಸಂಶೋಧನೆ ಸಂಸ್ಥೆ. ಪುಣೆಯ ಭಂಡಾರಕರ್ ಸಂಶೋಧನಾ ಸಂಸ್ಥೆಯ ಮಾದರಿಯಲ್ಲಿ ಇದು ತಲೆಯೆತ್ತಬೇಕು. ವೀರಶೈವ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣ, ಸಂಸ್ಕರಣ, ಪ್ರಕಟಣ, ಸಂಶೋಧನ ಕಾರ್ಯ ನಡೆಯಬೇಕು. ವೀರಶೈವ ವಿಶ್ವಕೋಶ, ಚರಿತ್ರೆ ಮತ್ತು ಇತಿಹಾಸ ರಚನಾಕಾರ್ಯ ನಿರಂತರ ಸಾಗಬೇಕು. ಹಳ್ಳಿ ಹಳ್ಳಿಗಳಲ್ಲಿ ಕೇಳಿಬರುವ ವೀರಶೈವ ಸಮಗ್ರ ಸಾಹಿತ್ಯವನ್ನೊಳಗೊಂಡ ಪುಸ್ತಕ ಭಂಡಾರ, ವೀರಶೈವ ಜನಜೀವನವನ್ನು ಪ್ರತಿನಿಧಿಸುವ ವಸ್ತು ಭಂಡಾರಗಳಿರಬೇಕು. ಈ ಸಂಸ್ಥೆ ಮಾಡಬೇಕಾದ ಇನ್ನೊಂದು ಮುಖ್ಯ ಕಾರ್ಯವೆಂದರೆ ವೀರಶೈವ ಪ್ರಮುಖರ ಪರಿಚಯ ಗ್ರಂಥ ಸಿದ್ಧಪಡಿಸುವುದು.

ವೀರಶೈವ ವಿಶ್ವಮಾನ್ಯ ತತ್ವಗಳನ್ನೊಳಗೊಂಡು ದಕ್ಷಿಣ ಭಾರತಕ್ಕೆ ವಿಶೇಷವಾಗಿ ಕರ್ನಾಟಕದಲ್ಲಿ ಕೇಂದ್ರೀಕೃತವಾಗಿದೆ. ಆಧುನಿಕ ಯುಗಕ್ಕೆ ತಕ್ಕಂತೆ ಇದನ್ನು ಪರಿಷ್ಕರಿಸುವುದು ಸುಲಭ. ಏಕೆಂದರೆ ಇದು ಪರಿವರ್ತನಶೀಲವಾದುದು. ಹೀಗೆ ಕೊಂಚ ಮಟ್ಟಿಗೆ ವ್ಯವಸ್ಥೆಗೊಳಿಸಿದರೆ ಇದನ್ನು ಜಗತ್ತಿನ ಯಾವ ಭಾಗದಲ್ಲಿಯಾದರೂ ಬಿತ್ತಬಹುದು. ಈ ದೃಷ್ಟಿಯಿಂದ ರಾಮಕೃಷ್ಣಾಶ್ರಮದ ಮಾದರಿಯಲ್ಲಿ ಭಾರತದಲ್ಲಿಯೂ ಜಗತ್ತಿನ ಬೇರೆ ಭಾಗಗಳಲ್ಲಿಯೂ ವೀರಶೈವ ಆಶ್ರಮಗಳನ್ನು ಸ್ಥಾಪಿಸಬೇಕು.

ವೀರಶೈವ ಸಮಾಜ ಜಗತ್ತಿನ ಕಣ್ಣನ್ನು ತನ್ನತ್ತ ಸೆಳೆಯಬೇಕಾದರೆ ಜಗತ್ತಿನ ಲಕ್ಷ್ಯವನ್ನು ತನ್ನತ್ತ ಸೆಳೆಯುವ ಘಟ್ಟದಲ್ಲಿ ಕಾಲೂರಬೇಕು. ಭಾರತದ ಮಟ್ಟಿಗೆ ಇಂಥ ಪಟ್ಟಣಗಳೆಂದರೆ ದಿಲ್ಲಿ, ಮುಂಬೈ, ಮದ್ರಾಸು, ಕಲ್ಕತ್ತಾ ಈ ಪಟ್ಟಣಗಳಲ್ಲೆಲ್ಲ ವೀರಶೈವವನ್ನು ಪ್ರತಿನಿಧಿಸುವ ವೀರಶೈವ ಭವನಗಳು ನಿರ್ಮಾಣವಾಗಬೇಕು.

ವೀರಶೈವ ಬ್ಯಾಂಕಿನ ಅಗತ್ಯ

ಈ ಎಲ್ಲ ಕಾರ್ಯಕೋಟಿಗೆ ತಳಹದಿ ಆರ್ಥಿಕ ರಂಗ. ನಮ್ಮ ಸಮಾಜದ ಆರ್ಥಿಕ ಸ್ಥಿತಿ ಭದ್ರವಾಗದೆ ಹೋದರೆ ಇವೆಲ್ಲ ಕನಸಿನ ಮಾತಾಗುತ್ತವೆ. ಆರ್ಥಿಕ ಸ್ಥಿತಿ ಸುಭದ್ರವಾಗಬೇಕಾದರೆ ನಮ್ಮ ವ್ಯವಸಾಯ ವಾಣಿಜ್ಯ ಉದ್ದಿಮೆಗಳನ್ನು ಆಧುನೀಕರಣಗೊಳಿಸಬೇಕು. ಇಲ್ಲದಿದ್ದರೆ ನಮಗೆ ಜಗತ್ತಿನ ಸ್ಪರ್ಧೆಯಲ್ಲಿ ಸ್ಥಾನವಿಲ್ಲ. ಕೃಷಿ ಪ್ರಧಾನವಾದ ಈ ಸಮಾಜ ಆಧುನಿಕ ವ್ಯವಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಹುಟ್ಟುವಳಿಗಳನ್ನು ಹೆಚ್ಚಿಸಬೇಕು. ಕೇವಲ ವಂಶಪಾರಂಪರ್ಯ

ಉದ್ಯೋಗಗಳಿಗೆ ಅಂಟಿಕೊಳ್ಳದೆ ಆಧುನಿಕ ವಿವಿಧ ಉದ್ಯೋಗಗಳಲ್ಲಿ ತೊಡಗಬೇಕು. ನಮ್ಮ ವಾಣಿಜ್ಯ ಬಹುಮುಖಗೊಳ್ಳಬೇಕು. ಸಮುದ್ರದ ಆಚೆ ಈಚೆಗಳನ್ನು ಮುಟ್ಟಬರಬೇಕು. ನಮ್ಮವರು ಸಾಹಸಪ್ರಿಯರಾಗಿ ದೊಡ್ಡ ಉದ್ದಿಮೆಗಳನ್ನು ಪ್ರಾರಂಭಿಸಬೇಕು. ಇಂದು ದುರ್ದೈವದ ಸಂಗತಿಯೆಂದರೆ ಕರ್ನಾಟಕದ ದೊಡ್ಡ ವಾಣಿಜ್ಯ ಉದ್ದಿಮೆಗಳು ಕನ್ನಡಿಗರ ಕೈಯಲ್ಲಿಲ್ಲ. ವಾಣಿಜ್ಯ ಪ್ರಧಾನವಾದ ವೀರಶೈವ ಸಮಾಜದ ಕೈಯಲ್ಲಿಲ್ಲ. ಇವೆಲ್ಲವನ್ನೂ ಸಾಧಿಸಬೇಕಾದರೆ 'ವೀರಶೈವ ಬ್ಯಾಂಕ್' ಬೇಕು. ಇದರ ಕೊರತೆ ನಮಗೆ ಬಹುದಿನಗಳಿಂದ ಅನಿಸಿದ್ದರೂ ಅದು ಇನ್ನೂ ಸಾಧ್ಯವಾಗದೆ ಇರುವುದು ಶೋಚನೀಯ. ಸಮಾಜದ ಸಿರಿವಂತರು ಹಿತೈಷಿಗಳು ಬೇಗನೆ ಈ ಕಾರ್ಯಕ್ಕೈಗೆತ್ತಿಕೊಳ್ಳಬೇಕು.

ಈ ಎಲ್ಲ ಯೋಜನೆಗಳನ್ನು ಹೇಗೆ ಕಾರ್ಯಗತಗೊಳಿಸಬೇಕೆಂಬುದಕ್ಕೆ ಒಂದು ಮಾದರಿಯ ಸಮಾಜದತ್ತ ನಿಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ. ಪ್ರಮಾಣ ದೃಷ್ಟಿಯಿಂದ ಸಿಕ್ ಸಮಾಜ ವೀರಶೈವಕ್ಕಿಂತ ತೀರ ಚಿಕ್ಕದು. ಆದರೆ ಸಾಹಸ ಮನೋಭಾವ, ಧರ್ಮಶ್ರದ್ಧೆ, ಕರ್ತೃತ್ವ ಶಕ್ತಿ, ಸಮಾಜ ಪ್ರೇಮ ಇವುಗಳ ಮೂಲಕ ಒಂದು ಶಕ್ತಿಯುತ ಸಮಾಜವಾಗಿ ಬೆಳಗುತ್ತಲಿದೆ. ಹೀಗಿರುವಾಗ ಮನಸ್ಸು ಮಾಡಿದರೆ ಅಧಿಕ ಪ್ರಜಾಶಕ್ತಿಯನ್ನು ಪಡೆದ ವೀರಶೈವಕ್ಕೆ ಇದು ಅಸಾಧ್ಯವೇನಲ್ಲ.

ತಮ್ಮೆದುರು ನನ್ನ ಭಾವನೆಗಳನ್ನು, ವಿಚಾರಗಳನ್ನು ನಿವೇದಿಸುವ ಭಾಗ್ಯ ಮಹಾಸಭೆಯ ಅಧ್ಯಕ್ಷ ಭಾಷಣದ ಮೂಲಕ ಸಾಧ್ಯವಾಗಿದೆ. ಇವಲ್ಲದೆ. ವೀರಶೈವೋದ್ಧಾರ ದೃಷ್ಟಿಯ ಇನ್ನೂ ಅನೇಕ ವಿಚಾರಗಳು ಇಲ್ಲಿ ಉಕ್ತವಾಗದೆ ಉಳಿದಿರಬಹುದು. ಮಹಾ ಜನರು ಇವನ್ನೆಲ್ಲ ಪರಿಶೀಲಿಸಿ ಬೇಗನೆ ಕಾರ್ಯ ಪ್ರವೃತ್ತರಾಗುವುದು ಅವಶ್ಯವಿದೆ. ಎಡುವುತ್ತಿರುವಾಗಲೇ ಎಚ್ಚರಗೊಳ್ಳಬೇಕು. ಬಿದ್ದಮೆಲೆ ಎದ್ದು ನಿಲ್ಲುವುದು ಕಷ್ಟ. ಇಂದಿನ ಅತ್ಯಂತ ಸಂಕ್ರಮಣ ಕಾಲದಲ್ಲಿ ಪ್ರತಿಯೊಬ್ಬ ವೀರಶೈವನ ಮೇಲೆ ಗುರುತರವಾದ ಹೊಣೆಯಿದೆ. ಇದನ್ನು ಅರ್ಥಮಾಡಿಕೊಂಡು ನಾವೆಲ್ಲ ಒಂದಾಗಬೇಕು ಮುಂದಾಗಬೇಕು, ಕಾರ್ಯಶೀಲರಾಗಬೇಕು. ವೀರಶೈವ ಜ್ಯೋತಿ ಉತ್ತರೋತ್ತರ ಜಾಜ್ವಲ್ಯಮಾನವಾಗಿ ಬೆಳಗಬೇಕು. ಇದು ನನ್ನ ಹಾರೈಕೆ ಮಹಾಸಭೆಯ ಧ್ಯೇಯೋದ್ದೇಶ. ಇದು ಸಾ[illegible]ವಂತಾಗಬೇಕು.

ಇಪ್ಪತ್ತು ಅಂಶಗಳ ಕಾ[illegible]

ಮಹಾ ಸಭೆಯ ಇಡೀ ಸಮ[illegible] ಅನೇಕ [illegible] ಆಧಾರವಾಗಿ ತನ್ನ ಸ್ಥಾನವನ್ನು ಬಲೊಡೆದುಹಾಬೇಕಾಗಿದೆ ; ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಮುಂದಿನ ಕೆಲವು ವರ್ಷಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಯೋಜನೆಯೇನೆಂಬುದನ್ನು ಈಗ ನಾನು ತಮ್ಮ ಮುಂದಿಡಬಯಸುತ್ತೇನೆ.

ಮುಖ್ಯವಾಗಿ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿರುವ ಈ ಕಾರ್ಯಕ್ರಮವನ್ನು ಅಧಿಕ ಸಂಖ್ಯೆಯಲ್ಲಿ ವೀರಶೈವರು ನೆಲೆಸಿರುವ ಇತರ ಯಾವುದೇ ರಾಜ್ಯ ಅಥವಾ ಪ್ರದೇಶಕ್ಕೂ ಅಷ್ಟೇ ನಿಷ್ಕೃಷ್ಟವಾಗಿ ಅನ್ವಯಿಸಬೇಕು.

ನಾನು ಸೂಚಿಸಿರುವ ಕಾರ್ಯಯೋಜನೆಯ ಇಪ್ಪತ್ತು ಅಂಶಗಳು ಹೀಗಿವೆ:

(1) ಸಮಾಜದ ಸರ್ವತೋಮುಖ ಜೀವನಕ್ಕೆ ಸಂಬಂಧಿಸಿದಂತಹ ಮತ್ತು ವಿಶೇಷವಾಗಿ ಕೆಳಗೆ ಪ್ರಸ್ತಾಪಿಸಿರುವ ಅಂಶಗಳಿಗೆ ಅನ್ವಯಿಸುವಂತಹ ವಿಸ್ತೃತ ಪಂಚವಾರ್ಷಿಕ ಯೋಜನೆಯೊಂದರ ಸಿದ್ಧತೆ;

(2) ಕರ್ನಾಟಕದಲ್ಲಿರುವ ವೀರಶೈವರ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಒಂದು ವಿವರಪೂರ್ಣ ಅರ್ಥಿಕ ಸಮೀಕ್ಷೆ;

(3) ಅರ್ಥಿಕ ಸಮೀಕ್ಷೆಗೆ ಹೊಂದಿಕೊಂಡು, ಒಟ್ಟು ಜನಸಂಖ್ಯೆ ಮತ್ತು ಸಾಕ್ಷರತೆಗೆ ಸಂಬಂಧಿಸಿದಂತೆ ಒಂದು ಜನಗಣತಿ.

(4) ರಾಜ್ಯ ಹಾಗೂ ರಾಷ್ಟ್ರದ ಸೇವೆಗಾಗಿ ದೈಹಿಕ ಸಾಮರ್ಥ್ಯ, ಮಾನಸಿಕ ಜಾಗೃತಿ ಹಾಗೂ ಭಾವೈಕ್ಯ ಸ್ಥಿರತೆಯನ್ನು ತುಂಬಲು ವೀರಶೈವರಿಗೆ ತರಬೇತಿ ನೀಡಿ, ಅವರನ್ನು ಸುಶಿಕ್ಷಿತರನ್ನಾಗಿ ಮಾಡಿ ಸನ್ನದ್ಧಗೊಳಿಸಲು 'ವೀರಶೈವ ಯುವಜನ ದಳ' ವೊಂದರ ಸ್ಥಾಪನೆ (Veerasaiva Youth Brigade for National Service).

(5) ವಿಶ್ವ ಸಮಾಜಕ್ಕೆ ವೀರಶೈವ ವಿಚಾರಧಾರೆಯನ್ನು ಪರಿಚಯಮಾಡಿಕೊಡಲು ಆಕ್ಸಫರ್ಡ್ ಅಥವಾ ಕೇಂಬ್ರಿಡ್ಜ ಮತ್ತು ಅಮೇರಿಕಾದಲ್ಲಿ ವೀರಶೈವ ದರ್ಶನದ ವಿದ್ವತ್ ಪೀಠಗಳ ಸ್ಥಾಪನೆ.

'ನಿಷ್ಕಾಮ

ಇಡಿಯ ಬಾಳು ಯೆ[illegible]ವ ಧರ್ಮವನ್ನು ಭಾರತದ ಉತ್ತರ ರಂಗಬಹಿರಂಗದ[illegible]ಳಲ್ಲೂ ಜನಪ್ರಿಯಗೊಳಿಸಲು ಪರಿ[illegible]ರ್ಯಕ್ರಮ ಹಾಗೂ ಪ್ರಚಾರ ವ್ಯವಸ್ಥೆ[illegible]ಸುವುದು.

[illegible](7) ಸ್ಥಳೀಯ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ. ಕನಿಷ್ಠ ಕಾಲಾವಧಿ ಕಾರ್ಯಕ್ರಮ ನಿರ್ವಹಣೆಗೆ ಪ್ರತಿಯೊಂದು ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರದಲ್ಲೂ ಮಹಾ ಸಭೆಯ ಶಾಖೆಗಳ ಸ್ಥಾಪನೆ.

(8) ರಾಜ್ಯದ ಕೈಕಾರಿಕಾ ಇಲಾಖೆ ತಯಾರಿಸುವ ಸಾಧ್ಯತಾವರದಿಗಳ ಆಧಾರದ ಮೇಲೆ ಸಣ್ಣ ಕೈಗಾರಿಕಾಘಟಕಗಳ ಸ್ಥಾಪನೆಗೆ ಕ್ರಮ ಕೈಗೊಳ್ಳುವುದು.

(9) ವಿಶ್ವ ಮಾನವ ಧರ್ಮವನ್ನು ಪ್ರತಿಪಾದಿಸುವ ವೀರಶೈವ ಸಿದ್ಧಾಂತದ ಸಂದೇಶವನ್ನು ಸಾರಲು, ಸಾಕಷ್ಟು ಸಂಸ್ಕೃತ ಜ್ಞಾನದೊಂದಿಗೆ, ವೀರಶೈವ ತತ್ವ ಶಾಸ್ತ್ರದಲ್ಲಿ ಪರಿಣತಿ ಇರುವ ವಿದ್ವಾಂಸರ ಸೌಹಾರ್ದ ನಿಯೋಗವೊಂದನ್ನು ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲಿ ಪ್ರವಾಸಕ್ಕಾಗಿ ಕಳಹಿಸುವುದ.

(10) ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಮತ್ತು ತಮಿಳುನಾಡು, ಕೇರಳ, ಆಂಧ್ರಪ್ರದೇಶ. ಮಹಾರಾಷ್ಟ್ರ ಮೊದಲಾದ ರಾಜ್ಯಗಳ ರಾಜಧಾನಿಗಳಲ್ಲಿ ಮತ್ತು ವೀರಶೈವ ಮಠಗಳ ಶಾಖೆಗಳಿರುವ ವಾರಣಾಸಿ. ಕೇದಾರನಾಥ ಮುಂತಾದ ಪ್ರಮುಖ ಕೇಂದ್ರಗಳಲ್ಲೂ ಆಗಿಂದಾಗ ವೀರಶೈವರ ಸಮ್ಮೇಳನಗಳನ್ನು ಏರ್ಪಡಿಸುವುದು.

(11) ಇಂಗ್ಲೀಷ್ ಮತ್ತು ಕನ್ನಡದಲ್ಲಿ ಭಾರತದ ಆದ್ಯಂತ ಅಧಿಕ ಪ್ರಸಾರ ಪಡೆಯುವಂತೆ ದಿನಪತ್ರಿಕೆಯೊಂದರ ಪ್ರಕಟಣೆ.

(12) ವೀರಶೈವರು ದೇಶದ ಯಾವ ಭಾಗದಲ್ಲೇ ಆಗಲಿ, ವಿದೇಶಗಳಲ್ಲಾಗಲಿ ಕೈಗಾರಿಕೆ ಮತ್ತು ವಾಣಿಜ್ಯ ವ್ಯವಹಾರವನ್ನು ಪ್ರಾರಂಭಿಸಲು ಮತ್ತು ಅಭಿವೃದ್ಧಿ ಪಡಿಸಲು ಉತ್ತೇಜನ ನೀಡುವ ಸಲುವಾಗಿ ಬೆಂಗಳೂರಿನಲ್ಲಿ ಕೇಂದ್ರ ಹಣಕಾಸು ಸಂಸ್ಥೆಯೊಂದನ್ನು ಸ್ಥಾಪಿಸುವುದು ಮತ್ತು ಅಗತ್ಯ ಕಂಡುಬಂದಂತೆ ಅದರ ಶಾಖೆಗಳನ್ನು ತೆರೆಯುವುದು ;

(13) ಪ್ರಗತಿಪರ ರಾಜಕೀಯ ಪಕ್ಷಗಳ ಸಹಕಾರದೊಂದಿಗೆ ಸ್ಥಳೀಯ ಸಂಸ್ಥೆಗಳು ಗ್ರಾಮ ಪಂಚಾಯತಿಗಳು, ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಜಿಲ್ಲಾ ಪರಿಷತ್ತುಗಳು, ಪುರಸಭೆಗಳು, ವಿಧಾನಸಭೆ-ವಿಧಾನ ಪರಿಷತ್ತುಗಳು ಮತ್ತು ಲೋಕಸಭೆ ಚುನಾವಣೆಗಳಲ್ಲಿ ಪಾಲುಗೊಂಡು ಸಾರ್ವಜನಿಕ ವ್ಯವಹಾರಗಳಲ್ಲಿ ಮಹತ್ತರ ಪಾತ್ರ ವಹಿಸುವುದು.

(14) ಬಸವ ಸಮಿತಿಯ ಸಹಕಾರದೊಂದಿಗೆ ವೀರಶೈವ ಸಾಹಿತ್ಯದ ಕೇಂದ್ರ ಹಾಗೂ ಜಿಲ್ಲಾ ಪುಸ್ತಕ ಭಂಡಾರಗಳ ಸ್ಥಾಪನೆ; ವೀರಶೈವಕವಿಗಳ, ಲೇಖಕರ ಹಾಗೂ ಸಾಹಿತಿಗಳ ಪ್ರಾಚೀನಕೃತಿಗಳ ಸಂಗ್ರಹ ಮತ್ತು ಪ್ರಕಟಣೆ. ನಮ್ಮಲ್ಲಿ ಇದುವರೆಗೆ ಪ್ರಕಟವಾಗದಿರುವ ತಾಳೆಗರಿ ಸಾಹಿತ್ಯದ ಶ್ರೀಮಂತ ನಿಧಿಯೇ ಇದೆ. ಇದನ್ನು ಪತ್ತೆಮಾಡಿ, ಪ್ರಕಟಣೆಯ ಅವಕಾಶ ಕಲ್ಪಿಸುವ ದೃಢಪ್ರಯತ್ನ ಈಗ ನಡೆಯಬೇಕಾಗಿದೆ. ಈ ಕಾರ್ಯದಿಂದ ಇಡೀ ಭಾರತಕ್ಕೆ ಮಾತ್ರವಲ್ಲದೆ ವಿಶ್ವಸಾಹಿತ್ಯ ಕ್ಷೇತ್ರಕ್ಕೇ ಲಾಭವಾಗಲಿದೆ.

(15) ಜನಸಮುದಾಯದ ಉದ್ಧಾರದ ಮೊದಲ ಹೆಜ್ಜೆಯಾಗಿ ಅತ್ಯಂತ ಹೆಚ್ಚಿನ ಪ್ರಾಶಸ್ತ್ಯ ನೀಡಿ, ನಿರಕ್ಷರತೆಯ ನಿರ್ಮೂಲನಕ್ಕಾಗಿ ರಾಜ್ಯಾದ್ಯಂತ ಒಂದು ಸಾಕ್ಷರತಾ ಚಳವಳಿ ನಡೆಸುವುದು.

(16) ಹರಿಜನರು, ಗಿರಿಜನರು ಮತ್ತು ಅಲ್ಪಸಂಖ್ಯಾತರೂ ಸೇರಿದಂತೆ ಸಮಾಜದ ದುರ್ಬಲ ವರ್ಗದವರ ಉದ್ಧಾರ ಕಾರ್ಯದಲ್ಲಿ ಅಪೂರ್ವಸೇವಾ ದಾಖಲೆ ಪಡೆದಿರುವ ಮಹಾಸಭೆಯು ಅಸ್ಪೃಶ್ಯತಾ ನಿವಾರಣೆಗೆ ಕರ್ತವ್ಯನಿಷ್ಠೆ ಹಾಗೂ ಶ್ರದ್ಧಾದೃಷ್ಟಿಯಿಂದ ತನ್ನ ಗಮನವನ್ನು ಕೇಂದ್ರೀಕರಿಸಬೇಕು; ಮತ್ತು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತಿತರ ರೀತಿಯಲ್ಲಿ ಈ ಜನರ ಅಭಿವೃದ್ಧಿಗೆ ಸರಕಾರ ನಡೆಸುವ ಎಲ್ಲ ಪ್ರಯತ್ನಗಳಿಗೂ ಸಂಪೂರ್ಣ ಬೆಂಬಲ ನೀಡಬೇಕು.

(17) ಎಲ್ಲ ಹಂತಗಳಲ್ಲೂ ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ವಿಶೇಷ ಗಮನ ನೀಡಲು ಮಹಾಸಭೆಗೆ ಬಸವಣ್ಣನವರ ಆದರ್ಶ ಸ್ಫೂರ್ತಿಯಾಗಬೇಕು; ಸಮಾಜ ಸೇವೆಯ ಬೃಹತ್ ಪ್ರಯತ್ನದಲ್ಲಿ ತಾವೂ ಗೌರವಪೂರ್ಣ ಪಾಲುದಾರರೆಂಬ ಭಾವನೆ ಮಹಿಳೆಯರಲ್ಲಿ ಬೆಳೆಯುವಂತೆ ಮಹಾಸಭೆ ಶ್ರಮಿಸಬೇಕು. ವರದಕ್ಷಿಣೆ ನಿಷೇಧ ಹಾಗೂ ನಿರ್ಮೂಲನ ಕ್ರಮವನ್ನು ಈ ಕಾರ್ಯದೊಂದಿಗೆ ಸೇರಿಸಬೇಕು.

(18) ವೀರಶೈವರ ನೈತಿಕ ಮತ್ತು ಆಧ್ಯಾತ್ಮಿಕ ಪುನರುತ್ಥಾನಕಾರ್ಯದಲ್ಲಿ ರಾಷ್ಟ್ರಾದ್ಯಂತ ಇರುವ ನಾನಾ ವೀರಶೈವ ಮಠಗಳೊಂದಿಗೆ ಸಹಕರಿಸುವುದು. ಹಲವು ಮಠಾಧಿಪತಿಗಳು ಹಿಂದೆ ಈ ದಿಶೆಯಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಸದ್ಭಾವನೆ, ಪರಸ್ಪರ ತಿಳಿವಳಿಕೆ ಮತ್ತು ಭ್ರಾತೃತ್ವ ದೃಷ್ಟಿಯಿಂದ ನಾನಾ ಮಠಗಳು ಒಟ್ಟುಗೂಡಿದರೆ, ಸಮಾಜದ ಶಾಶ್ವತ ಕ್ಷೇಮಕ್ಕಾಗಿ ಇನ್ನೂ ಮಹತ್ವಪೂರ್ಣ ಕೊಡುಗೆ ನೀಡಲು ಧಾರಾಳವಾಗಿ ಅವಕಾಶವಿದೆ. ಈ ಕಷ್ಟ ಹಾಗೂ ಕ್ಲಿಷ್ಟ ಕಾರ್ಯದಲ್ಲಿ ಮಹಾಸಭೆಯ ಕ್ರಿಯಾಸಮಿತಿಯು ಅತ್ಯಂತ ನಮ್ರತೆಯಿಂದ ಮಠಾಧಿಪತಿಗಳ ಮನವೊಲಿಸುವ ಪ್ರಯತ್ನ ನಡೆಸಬೇಕು; ಶತಮಾನಗಳಿಂದ ಬಾಳಿ ಬದುಕಿರುವ ವೀರಶೈವ ಸಮಾಜ, ಮುಖ್ಯವಾಗಿ ಆಧ್ಯಾತ್ಮಿಕ ಹಾಗೂ ನೈತಿಕ ಬುನಾದಿಯ ಮೇಲೆ ನಿರ್ಮಿಸಲ್ಪಟ್ಟ ಮಹಾಮಂದಿರ. ಈ ಭವ್ಯ ಮಂದಿರದ ರಚನೆಯನ್ನು ಯಾವ ರೀತಿಯಿಂದಲೂ ಬದಲಾಯಿಸಲಾಗದು; ನಮ್ಮ ಧೈರ್ಯಪೂರ್ಣ ಕಾರ್ಯದ ಪ್ರತಿಯೊಂದು ಕ್ಷೇತ್ರದಲ್ಲೂ ಮಠಾಧಿಪತಿಗಳ **ಆಶೀರ್ವಾದ**, ಮಾರ್ಗದರ್ಶನ ಹಾಗೂ ಸೇವಾವ್ಯಾಪೀಪ್ರಭಾವ ನಮಗೆ ಅಗತ್ಯ; ಧರ್ಮ ನಾಶವಾದರೆ ಸರ್ವನಾಶ; ವೀರಶೈವವೆಂದರೆ ಸಾಮಾನ್ಯ ಅರ್ಥದ ಜಾತಿ ಅಥವಾ ಮತವಲ್ಲ; ಅದೊಂದು ಮಹಾ ದರ್ಶನ. ಸಮಾಜದ ಸರ್ವತೋಮುಖ ಪ್ರಗತಿಗಾಗಿ ನಾವು ಕೈಕೊಳ್ಳುವ ಎಲ್ಲ ಕಾರ್ಯಚಟುವಟಿಕೆಗಳಲ್ಲೂ ಈ ಭಾವನೆ ಸಂಪೂರ್ಣವಾಗಿ ಅಭಿವ್ಯಕ್ತಗೊಳ್ಳಬೇಕು :

(19) ಮಹಾಸಭೆಯ ಎಲ್ಲ ಕಾರ್ಯಚಟುವಟಿಕೆಗಳಿಗೂ ಕೇಂದ್ರವಾಗಿರುವ ಮತ್ತು ಎಲ್ಲ ಕಾರ್ಯನಿರ್ವಹಣೆಗೂ ನೆಲೆಯಾಗಿರುವ ಕೇಂದ್ರ ಕಾರ್ಯಾಲಯವೊಂದರ ಸ್ಥಾಪನೆ ಈಗಿನ ಜರೂರು ಅಗತ್ಯ. ಮಹಾಸಭೆಯ ಕ್ರಿಯಾಸಮಿತಿ ಆಗಿಂದಾಗ ಅಂಗೀಕರಿಸುವ ವ್ಯಾಪಕ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಮತ್ತು ನಡೆದ ಕಾರ್ಯಗಳ ವರದಿ ಪ್ರಕಟಿಸುವುದು ಈ ಕೇಂದ್ರ ಕಾರ್ಯಾಲಯದ ಮುಖ್ಯ ಕಾರ್ಯವಾಗಿರುತ್ತದೆ; ಮಹಾಸಭೆಯ ಕ್ರಿಯಾಸಮಿತಿಯು ತನ್ನ ಉದ್ದೇಶ ಸಾಧನೆಯಲ್ಲಿ ಪಾಲುಗೊಳ್ಳುವ ಕಾರ್ಯ ಘಟಕಗಳಿಗೆ ಮಾರ್ಗದರ್ಶನ ನೀಡಲು ಮತ್ತು ಅವುಗಳ ಕಾರ್ಯ ಸಾಧನೆಯನ್ನು ಪರಿಶೀಲಿಸಲು ನಾನಾ ಜಿಲ್ಲಾ ಘಟಕಗಳ ಕಾರ್ಯಕಲಾಪಗಳಿಗೆ ಉತ್ತೇಜ[illegible] ಶಕ್ತಿಯಾಗಬೇಕು :

(20) ಖಾಸಗಿ ಪ್ರಯತ್ನದ[illegible]ಳಲ್ಲಿ ರಾಜಕೀಯ ಆಧಾರವನ್ನು ದೃಢಗೆ[illegible] ಅನೇಕ [illegible]ನ್ಯಯ ಪ್ರಯತ್ನಕ್ಕೆ ಎಲ್ಲ ಹಿಂದುಳಿದ ವರ್ಗಗಳೊ[illegible]ಸಂಖ್ಯಾತರು, ಪರಿಶಿಷ್ಟ ಜಾತಿಯವರು ಮತ್ತು ಪರಿಶಿಷ್ಟ [illegible] ಬುಡಕಟ್ಟಿನವರ ಸಾರ್ವತ್ರಿಕ ಬೆಂಬಲ ಪಡೆಯುವುದು ಮುಖ್ಯವಾದುದು; ಇದಕ್ಕಾಗಿ ಅತ್ಯುಚ್ಚಮಟ್ಟದಲ್ಲಿ ಪರಿಣಾಮಕಾರಿಯಾದ ಕಾರ್ಯ ನಿಯೋಗವೊಂದಿರಬೇಕು; ಇದು ಕೇಂದ್ರಕಾರ್ಯಾಲಯದಲ್ಲಿ ಸ್ಥಾಪಿತವಾಗುವುದು ಉತ್ತಮ. ಪ್ರಜಾಪ್ರಭುತ್ವದಲ್ಲಿ ಯಾವುದೇ ಸಮಾಜ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ಪ್ರಯತ್ನಿಸಿದರೆ ಅದರ ರಾಜಕೀಯ ವರ್ಚಸ್ಸು ನಿರರ್ಥಕವಾಗುತ್ತದೆಂಬುದನ್ನು ಮರೆಯಬಾರದು; ಪ್ರತ್ಯೇಕತೆ, ಗುಂಪುಗಾರಿಕೆ ಅಥವಾ **ಪ್ರಾದೇಶಿಕ** ಸಂಕುಚಿತತೆ ಇವು ಜನ ಸಾಮಾನ್ಯರ ಎಲ್ಲ ವರ್ಗಗಳೊಂದಿಗೂ ಪ್ರಗತಿಪರ ಮುನ್ನೋಟದಿಂದ ಹೃತ್ಪೂರ್ವಕ ಸಹಕಾರ ಭಾವನೆಯಿಂದ ದುಡಿಯುತ್ತ ಬಂದಿರುವ ವೀರಶೈವ ಚಾರಿತ್ರಿಕ ಪರಂಪರೆಗೆ ಭಿನ್ನವಾದವು; ಸಮಾನತೆ, ಸಮಗ್ರತೆಗಳು ವೀರಶೈವರ ಜೀವನ ಸೂತ್ರ.

ಇದೊಂದು ಮಹಾತ್ವಾಕಾಂಕ್ಷೆಯ ಕಾರ್ಯಕ್ರಮವೆಂಬಂತೆ ಕಂಡುಬರಬಹುದು. ಆದರೆ ವೀರಶೈವ ಮಹಾಸಮಾಜದ ಮೇಲ್ಮೆಗೆ ಇದು ಎಷ್ಟು ಅಗತ್ಯವೆಂಬುದು ಆಳವಾಗಿ ನೋಡಿದರೆ ಅರ್ಥವಾಗುತ್ತದೆ. ಇದು ಒಮ್ಮೆಲೇ ಆಗುವ ಕಾರ್ಯವಲ್ಲ; ಐದು ವರ್ಷಗಳ ಅವಧಿಯಲ್ಲಿ ಆದ್ಯತೆಯ ಆಧಾರದ ಮೇಲೆ ಹಂತಹಂತವಾಗಿ ಕಾರ್ಯರೂಪಕ್ಕೆ ಬರಬೇಕಾದರೆ ಸಕ್ರಿಯ ಪ್ರಯತ್ನದ ಸಾರ್ಥಕ ಯೋಜನೆ.

ಪ್ರತಿಯೊಂದು ಅಭಿವೃದ್ಧಿ ಪ್ರಯತ್ನದಲ್ಲೂ ಸರಕಾರಕ್ಕಾಗಲೀ, ವೃತ್ತಿ ಅಥವಾ ಸಂಘಸಂಸ್ಥೆಗಳಾಗಲೀ ಎದುರಾಗುವ ದೊಡ್ಡ ಸಮಸ್ಯೆಯೆಂದರೆ ಹಣದ ಪ್ರಶ್ನೆ. ವೀರಶೈವ ಜನಾಂಗ ಅಪೇಕ್ಷಿತ ಮಟ್ಟದಲ್ಲಿ ಪ್ರಗತಿ ಹೊಂದಬೇಕಾದರೆ ಬಹುಮಟ್ಟಿಗೆ ಸ್ವಾವಲಂಬನೆ ಒಂದೇ ಮಾರ್ಗ. ಸರಕಾರವನ್ನೇ ಅತಿಯಾಗಿ ಅವಲಂಬಿಸುವುದರಿಂದ ನಿರಾಶೆ ಮತ್ತು ಅಸಮಾಧಾನಕ್ಕೆ ಕಾರಣವಾಗುತ್ತದೆ. ಆದರೆ ಆರ್ಥಿಕ ಅಭಿವೃದ್ಧಿ ಹಾಗೂ ಸಮಾಜ ಸೇವೆಗೆ ಸಂಬಂಧಿಸಿದ ಕಷ್ಟಕರವಾದ ಮತ್ತು ಹೆಚ್ಚಿನ

'ನಿಷ್ಕಾಮ [illegible]ರ್ಗಗಳು ರಾಜ್ಯ ಸರಕಾರದ ಹೊಣೆ ಇಡಿಯ ಬಾಳು ಯ[illegible]ತ್ತದೆ. ಆದರೂ, ಸಮಾಜ ಪ್ರಗತಿಯ ರಂಗಬಹಿರಂಗಗ[illegible]ಗಳಿಗೆ ಸಂಬಂಧಿಸಿದಂತೆ ಮೇಲೆ ಪ್ರಸ್ತಾ[illegible]ಕಾರ್ಯಕ್ರಮಗಳಿಗೆ ಅವಶ್ಯವಿರುವ ಸಂಪ[illegible]ವನ್ನು ವೀರಶೈವರು ಸ್ವಪ್ರಯತ್ನದಿಂದ ಕೂಡಿಸಿಕೊಳ್ಳಲೇಬೇಕಾಗುತ್ತದೆ. ಈ ಉದ್ದೇಶ ಸಾಧನೆಗೆ ನನ್ನದೊಂದು ಸಲಹೆ ಇದೆ.

ರೂಪಾಯಿ ನಿಧಿ

ರಾಜ್ಯದಲ್ಲಿರುವ ಪ್ರತಿಯೊಂದು ವೀರಶೈವ ಕುಟುಂಬದ ಪ್ರತಿವ್ಯಕ್ತಿಯೂ ವರ್ಷಕ್ಕೆ ಒಂದು ರೂಪಾಯಿನಂತೆ ಮಹಾಸಭೆಗೆ ಕಡ್ಡಾಯವಾಗಿ ದೇಣಿಗೆ ನೀಡಬೇಕು. ಈ ಕ್ರಮ ನಿರಂತರವಾಗಿ ಮುಂದುವರಿದುಕೊಂಡು ಹೋಗಬೇಕು. ಈ ದೇಣಿಗೆಯಲ್ಲಿ ಎಂದಿಗೂ ಬಡವರು ಅಥವಾ ಸಿರಿವಂತರೆಂಬ ಭೇದಭಾವ ಇರಕೂಡದು. ಐವತ್ತು ಲಕ್ಷಕ್ಕೂ ಮೀರಿ ಜನಸಂಖ್ಯೆ ಇರುವ ವೀರಶೈವ ಜನಾಂಗಕ್ಕೆ ಈ ರೀತಿ ವರ್ಷಕ್ಕೆ 50 ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವುದು ಕಷ್ಟಸಾಧ್ಯವೇನೂ ಅಲ್ಲ. ಪ್ರತಿ ಜಿಲ್ಲೆಯಲ್ಲೂ ನಿದಿ ಸಂಗ್ರಹದ ಅರ್ಧಭಾಗವನ್ನು ಸಮಾಜದ ಪ್ರಗತಿಗಾಗಿ ಆಯಾ ಜಿಲ್ಲಾ ಶಾಖೆ ಕೈಗೊಳ್ಳುವ ಕಾರ್ಯಕ್ರಮಗಳಿಗಾಗಿ ಅಲ್ಲೆ ಉಳಿಸಿಕೊಳ್ಳಬೇಕು; ಉಳಿದ ಅರ್ಧ ಭಾಗವನ್ನು ಮಾತೃಸಂಸ್ಥೆಯಾದ ಮಹಾಸಭೆಯ ಕೇಂದ್ರ ಕಾರ್ಯಾಲಯಕ್ಕೆ ಪಾವತಿಮಾಡಬೇಕು. ಈ ದೇಣಿಗೆ ಸಂಗ್ರಹಕ್ಕೆ ಸೂಕ್ತ ವ್ಯವಸ್ಥೆ ಮಾಡಿ ಅದರ ಹೊಣೆಯನ್ನು ಜಿಲ್ಲಾ ಶಾಖೆಗೆ ಗೊತ್ತುಮಾಡಬೇಕು. ಸಮಾಜದ ಕಾರ್ಯದಲ್ಲಿ ತಾವೂ ಪಾಲುದಾರರೆಂಬ ಭಾವನೆ ಸಮಾಜದ ಪ್ರತಿಯೊಬ್ಬ ಸ್ತ್ರೀ-ಪುರುಷರಲ್ಲೂ ಬೆಳೆಯಬೇಕೆಂಬುದೇ ಬಡವರು ಸಿರಿವಂತರೆಂಬ ಬೇಧವಿಲ್ಲದ ಈ ಸಮಾನ ತ್ಯಾಗದ ಕಾರ್ಯಕ್ರಮದ ಉದ್ದೇಶ. ಆದರೆ, ತಮ್ಮ ಸಾಮರ್ಥ್ಯ ಹಾಗೂ ಸಾರ್ವಜನಿಕ ಕಲ್ಯಾಣಕ್ಕೆ ನೆರವಾಗುವ ಇಚ್ಛೆಗೆ ಅನುಗುಣವಾಗಿ ದೊಡ್ಡದೊಡ್ಡ ಅಭಿವೃದ್ಧಿ ಕಾರ್ಯಗಳಿಗೆ ಸೂಕ್ತ ಕಾಣಿಕೆ ನೀಡುವಂತೆ ಸಿರಿವಂತರಲ್ಲಿ ಮನವಿ ಮಾಡಿಕೊಳ್ಳಬಹುದು. ಇನ್ನು ರೂಪಾಯಿ ನಿಧಿಯನ್ನು ಕುರಿತು ಇದಕ್ಕಿಂತ ಹೆಚ್ಚುಹೇಳುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ಮಹಾಸಭೆಯು ತನ್ನ ಕಾರ್ಯ ನಿರ್ವಹಿಸಬೇಕಾದರೆ, ಬೃಹತ್ ಕರ್ನಾಟಕ ರಾಜ್ಯದ ನಮ್ಮ ಸಮಾಜ ಮನ್ನಣೆ ಪಡೆದು ಒಂದು ಗೌರವಾನ್ವಿತ ಘಟಕವಾಗಿ, ಯೋಗ್ಯ ಜನಾಂಗವಾಗಿ ಬದುಕಬೇಕಾದರೆ ಈ ನಿಧಿ ಅನಿವಾರ್ಯ, ಅಗತ್ಯವೆಂದಷ್ಟೆ ಸಮಾಜ ಬಂಧುಗಳಲ್ಲಿ ನನ್ನ ವಿನಂತಿ.

ಮುಖ್ಯವಾಗಿ ನನ್ನ ಸೋದರ ಸೋದರಿಯರಿಂದ ಕೂಡಿರುವ ಗಣ್ಯವ್ಯಕ್ತಿಗಳ ಈ ಮಹಾಸಭೆಯಲ್ಲಿ ನನ್ನ ಅಭಿಪ್ರಾಯಗಳನ್ನು ಮಂಡಿಸಲು ನನಗೆ ದೊರೆತ ಅವಕಾಶಕ್ಕಾಗಿ ನನಗೆ ಹರ್ಷವೆನಿಸಿದೆ. ನಿಷ್ಠೆ ಮತ್ತು ಶ್ರದ್ಧೆಯಿಂದ ಸಮಾಜ ಸೇವೆ ಸಲ್ಲಿಸಲು ತಾವೆಲ್ಲ ನನಗೆ ನೆರವಾಗುತ್ತೀರೆಂದು ನಂಬಿದ್ದೇನೆ. ಇಂದು ಈ ಅಧ್ಯಕ್ಷ ಪದವಿಯನ್ನು ನನಗೆ ನೀಡಿದ ತಮ್ಮ ವಿಶ್ವಾಸ ಅಪಾರವಾದುದು. ನಾನು ಈ ಪದವಿಯಿಂದ ನಿವೃತ್ತಿ ಹೊಂದುವಾಗ, ತಮ್ಮೆಲ್ಲರ ವಿಶ್ವಾಸಕ್ಕೆ ಸೇವೆ ಸಲ್ಲಿಸಿದೆನೆಂಬ ತೃಪ್ತ ಭಾವನೆ ಹೊಂದಲು ಸಾಧ್ಯವಾಗವುದಾದರೆ ಅದಕ್ಕಿಂತ ಮಹತ್ತರ ಸಂತೋಷ ನನಗೆ ಮತ್ತಾವುದೂ ಇಲ್ಲ.



ಗಂಗಾರಂಗತ್ತರಂಗ ಪ್ರಭವಕಣಗಣ ಸ್ಫಾರತಾರಾಪರೀತ ।
ಸ್ವಾಂಗಾರ್ಧೇಂದುದ್ಯುತಿಪ್ರೋನ್ಮೀಳಿತ ನಿಜಜಟಾಜೂಟ ವಿಭ್ರಾಜಮಾನಂ ।
ಶೃಂಗಾರಾಸಾರ ಗೌರೀ ಕಬಳಿತಕಲಿತಾರ್ಧಾಂಗನುದ್ಯದ್ದಯಾದ್ರಾ ।
ಪಾಂಗಂ ಮಾಂಗಲ್ಯಸಾಕಲ್ಯಮನೆಮಗೊಲವಿಂ ಮಾಳ್ಕೆ ನಿಚ್ಚಂ ತ್ರಿಣೇತ್ರಂ ॥

—**ಷಡಕ್ಷರದೇವ** (ವೃ. ವಿ).

ಅಖಿಲ ಭಾರತ ವೀರಶೈವ ಮಹಾಸಭೆಯ ೧೯ನೆಯ ಅಧಿವೇಶನದ

ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನ

ಅಧ್ಯಕ್ಷ ಭಾಷಣ ಸಾರಾಂಶ

— ಪ್ರೊ. ಸ. ಸ. ಮಾಳವಾಡ, ಎಂ.ಎ.

ವೀರಶೈವರ ಜೀವನ, ಸಾಹಿತ್ಯ, ಸಂಸ್ಕೃತಿ, ಧರ್ಮ- ಈ ನಾಲ್ಕಕ್ಕೂ ತಳಹದಿಯು ಒಂದೇ ಆಗಿದೆ. ಜೀವನ ಬೇರೆ, ಧರ್ಮ ಬೇರೆ, ಎಂಬ ಭಾವನೆ ಕೆಲವರಿಗೆ ಇರಬಹುದು. ಕೆಲವರ ಸಂಸ್ಕೃತಿಯು ಅವರ ಬಾಳಿನ ರೀತಿಯಲ್ಲಿ ವ್ಯಕ್ತವಾಗಲಿಕ್ಕಿಲ್ಲ. ಸಾಹಿತ್ಯ ಸೃಷ್ಟಿಯ ಆದರ್ಶ ಒಂದು ಬಗೆಯಾಗಿದ್ದು ಪ್ರತಿನಿತ್ಯದ ವ್ಯವಹಾರ ಇನ್ನೊಂದು ಬಗೆಯಾಗಿರುವುದನ್ನೂ ನಾವು ಕಾಣುತ್ತೇವೆ. ಆದರೆ ನೈಜ ವೀರಶೈವರ ದೃಷ್ಟಿಯು ಈ ನಾಲ್ಕು ವಿಧದಲ್ಲಿಯೂ ಏಕಪ್ರಕಾರದ್ದಾಗಿದೆ. ಆಂತರಿಕ ಶಿವಚೇತನವನ್ನು ಹೊರಹೊಮ್ಮಿಸುವುದೇ ಆ ದೃಷ್ಟಿಯಾಗಿದೆ.

ಇಷ್ಟಲಿಂಗದ ಮೂಲಕವಾಗಿ, ಸಮರ್ಪಣೆಯ ಭಾವದಿಂದ ಲಿಂಗಾಂಗ ಸಾಮರಸ್ಯದತ್ತ ಸಾಗುವುದು ವೀರಶೈವರ ಬಾಳಿನ ಸೂತ್ರ. ಈ ಸೂತ್ರವನ್ನು ಕುರಿತ ಹೃದಯದ ಸಂವೇದನೆಯು ರಮ್ಯವಾದ ನುಡಿಯಲ್ಲಿ ಮೂಡಿ ಬಂದಾಗ ಸಾಹಿತ್ಯವಾಗುತ್ತಿದೆ. ಈ ಸೂತ್ರವನ್ನೇ ಧೇನಿಸುತ್ತ ಹದಗೊಂಡ ಮನಸ್ಸು ಹೊರಗಿನ ನಡೆನುಡಿಗಳಲ್ಲಿ ವ್ಯಕ್ತವಾದಾಗ ಸಂಸ್ಕೃತಿಯಾಗುತ್ತಿದೆ. ತನ್ನೊಳಗೆ, ತನ್ನ ಸುತ್ತಲೂ ಪರಶಿವನ ಸಂಸ್ಪರ್ಶದ ಅನುಭವವು, ಅಚಲವಾಗಿ, ಸತತವಾಗಿ ನೆಲೆಗೊಳ್ಳುವುದೇ ಶಿವಾನುಭವ. ಆ ಗುರಿಯತ್ತ ನಮ್ಮನ್ನು ಕರೆದೊಯ್ಯುವ ಸಾಧನಗಳೆಂದರೆ, ಇಷ್ಟಲಿಂಗ, ಪಂಚಾಚಾರ, ಅಷ್ಟಾವರಣ ಷಟ್‌ಸ್ಥಲಗಳು. ಇದು ವೀರಶೈವ ಧರ್ಮದ ಸಾರ.

ಶಿವಾನುಭವದ ಕ್ರಮದಲ್ಲಿ ಶರಣರ ಬಾಳು ರೂಪುಗೊಂಡಿತು. ಅದು ಭಾವನಿಷ್ಠವಾಗಿ ಸವಿನುಡಿಯಲ್ಲಿ ಮೂಡಿಬಂದು ವಚನ ಸಾಹಿತ್ಯವಾಯಿತು. ಆ ಸಾಹಿತ್ಯವು ಹೃದಯ ಹೃದಯಗಳನ್ನು ಒಂದುಗೂಡಿಸುವ ಸಾಧನವಾಯಿತು. ಆತ್ಮ-ಪರಮಾತ್ಮರನ್ನು ಒಂದುಗೂಡಿಸುವ ಹಾದಿಯಲ್ಲಿ ಸಾಗುವವ ಅನುಭಾವಿ. ಇಂತಹ ಶಿವಾನುಭಾವಿಗಳಾದ ಶರಣರ ಜೀವನದಲ್ಲಿ ಸಂಸ್ಕೃತಿಯು ಸ್ಪಷ್ಟವಾಗಿ ಹೊರಹೊಮ್ಮಿಬಂದಿದೆ.

ಜೀವನವೆಂದರೆ ಬದುಕುವುದು. ಇದು ಒಂದು ಅರ್ಥ. ಬದುಕಬೇಕೆಂದರೆ ಕ್ರಿಯೆ ಕೈಗೊಳ್ಳಬೇಕು. ಆ ಕ್ರಿಯೆಯು ಸ್ವಂತದ ಐಹಿಕ ಪ್ರಯೋಜನಕ್ಕಾಗಿ ಮಾತ್ರವಾದರೆ ಅದು ಅಹಂಕಾರದ ಇಲ್ಲವೆ ಕನಿಕರದ ದುಡಿಮೆಯಾಗುವುದು. ಆದರೆ ಕ್ರಿಯೆಯು ಶಿವನಿಗಾಗಿ, ಶಿವಭಕ್ತರಿಗಾಗಿ ನಡೆದರೆ ಅದು 'ಕಾಯಕ'ವಾಗುವುದು. ಕಾಯಕ ತತ್ವವು ಶರಣಧರ್ಮದ ಒಂದು ಮಹತ್ವದ ಲಕ್ಷಣವೇ ಆಗಿದೆ. ವೀರಶೈವರ ಜೀವನವು ಕಾಯಕ ನಿಷ್ಠವಾದುದು.

ಜೀವನವೆಂದರೆ ಪರಮಸತ್ಯವನ್ನು ಅಭಿವ್ಯಕ್ತಗೊಳಿಸುವ ಸಾಧನೆ. ಇದು ಇನ್ನೊಂದು ಬಗೆಯ ಅರ್ಥ. ಅಂತಹ ಪರಮ ಸತ್ಯವೆಂದರೆ ಅಂಗನು ಲಿಂಗವಾಗಿ ಪರಿವರ್ತನೆ ಪಡೆಯುವುದು. ಲಿಂಗಾಂಗ ಸಾಮರಸ್ಯವು ವೀರಶೈವ ಧರ್ಮದ ಗುರಿಯೇ ಆಗಿದೆ.

ಮಾನವೀಯ ಬಾಳಿನ ಗುರಿಯು ಎರಡು ಬಗೆಯದಾಗಿದೆಯೆಂದು ಶ್ರೀ ಅರವಿಂದರು ಹೇಳಿದ್ದಾರೆ. ಸಾಮಾನ್ಯ ಬಾಳಿನ ಗುರಿಯು ತನ್ನ ಕರ್ತವ್ಯವನ್ನು ಶ್ರದ್ಧೆಯಿಂದ ನೆರವೇರಿಸುವುದು. ಆಧ್ಯಾತ್ಮ ಜೀವನದ ಗುರಿಯು ತನ್ನೊಳಗಿನ ದೈವೀಚೇತನವನ್ನು ಪ್ರಕಟಗೊಳಿಸುವುದು.

ವೀರಶೈವದಲ್ಲಿ ಈಯೆರಡು ಗುರಿಗಳೂ ಮೇಳವಿಸಿ ಬಂದಿವೆ.

ಕೈಕೊಳ್ಳುವ ಕಾಯಕವನ್ನು ವೀರಶೈವರು ಯೋಗದ ಮಟ್ಟಕ್ಕೆ ಏರಿಸಿದರು. 'ಕರ್ಮಯೋಗ'ವೆಂದು ಭಗವದ್ಗೀತೆಯಲ್ಲಿ ಉಲ್ಲೇಖಪಡೆದ ಪರಿಭಾಷೆಯನ್ನು ಶರಣರು ಸುಲಭಗೊಳಿಸಿ ಅದರ ತಿರುಳನ್ನು ಜನತೆಯಲ್ಲಿ ರೂಢಿಸಿದರು. ಕಾಯಕ ತತ್ವದಲ್ಲಿ ಸಂಸ್ಕೃತಿಯ ಲಕ್ಷಣಗಳು ಅಡಕವಾಗಿವೆ. "ಇಡಿಯ ಜೀವನವೆ, ಯೋಗ" ಎಂಬುದು ಶ್ರೀ ಅರವಿಂದರ ಸೂತ್ರವಾಗಿದೆ. ಈ ಸೂತ್ರವನ್ನು ಶಿವಶರಣರು ಆಚರಿಸಿ ತೋರಿಸಿದರು.

ನಿ ಪ್ವಾ ಮ
ಇಡಿಯ ಬಾಳು ಯ
ರಂಗಬಹಿರಂಗದ

'ನಿಷ್ಕಾಮ ಕರ್ಮ' ಸಾಧ್ಯವಾಗಬೇಕಿದ್ದರೆ, ಇಡಿಯ ಬಾಳು ಯೋಗವಾಗಬೇಕಾದರೆ ನಮ್ಮ ಅಂತರಂಗಬಹಿರಂಗಗಳು ಪರಿಶುದ್ಧಿ ಪಡೆದು ಅವೆಲ್ಲ ಪರಮಾತ್ಮನಿಗಾಗಿ ಸಮರ್ಪಿತವಾಗಬೇಕು. ಇದೇ ಶಿವಶರಣರ ಮಾರ್ಗವಾಗಿತ್ತು. ಅಹಂಕಾರ ಮುಖವಾಗಿ ಸಾಗುವ ಮಾನವೀಯ ಬಾಳು ಪರಶಿವಮುಖವಾಗಿ ಸಾಗುವ ಹಾದಿಯನ್ನು ಶರಣರು ಬೋಧಿಸಿದರು; ಸಾಧಿಸಿದರು.

ಶರಣರ ಬಾಳು ಸರ್ವಾರ್ಪಣಭಾವಕ್ಕೆ ಶ್ರೇಷ್ಠ ಉದಾಹರಣೆಯಾಗಿದೆ. 'ನಾವು ಸಮರ್ಪಣ ಮಾಡುತ್ತಿದ್ದೇವೆ' ಎಂಬ ಅಹಂಕಾರವು ನಮ್ಮಲ್ಲಿ ಮೊಳೆಯದಂತೆ ಶರಣರು 'ದಾಸೋಹಂ ಭಾವವನ್ನು ರೂಢಿಸಿದರು. ಆದರೆ ದಾಸನಾಗುವುದು ಮಾನವರಿಗಲ್ಲ, ಪರಶಿವನಿಗೆ ಮಾತ್ರ ಎಂಬುದನ್ನೂ ಸ್ಪಷ್ಟಪಡಿಸಿದರು.

'ಮಾಡಿದೆ, ನೀಡಿದೆ' ಎಂಬ ಅಹಂಕಾರ ಭಾವ ನಮ್ಮಲ್ಲಿ ಮೂಡಬಾರದು. 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ! ಏಡಿಸಿ ಕಾಡಿತ್ತು, ಶಿವನ ಡಂಗುರ' ಎಂಬ ಭಯಸೂಚಕ ಗಂಟೆಯ ಧ್ವನಿ ಬಸವವಾಣಿಯಲ್ಲಿದೆ.

ನಾವೀಗ ವೀರಶೈವ ವಿಕಾಸದ ಹಿನ್ನೆಲೆಯಲ್ಲಿ ವೀರಶೈವ ಸ್ವರೂಪವನ್ನು ಕಂಡುಕೊಳ್ಳೋಣ.

ಶೈವಮತವು ಪ್ರಾಚೀನವಾದುದು. ಅದರಲ್ಲಿ ಹಲವು ಶಾಖೆಗಳು ಬೆಳೆದು ಬಂದಿವೆ. ಅವುಗಳಲ್ಲಿ ಪಾಶುಪತ, ಕಾಳಾಮುಖ, ಕಾಪಾಲಿಕ, ಮಾಹೇಶ್ವರ (ಶೈವ) —ಇವೇ ನಾಲ್ಕು ಪ್ರಮುಖ ಶಾಖೆಗಳು. ಇವುಗಳಲ್ಲಿ ಮೊದಲಿನ ಮೂರು ರೌದ್ರ ಸ್ವರೂಪದವು. ಕೊನೆಯದು ಸೌಮ್ಯದ್ದು. ಸೌಮ್ಯಸ್ವರೂಪದ ಮಾಹೇಶ್ವರ ಅಥವಾ ಶೈವವೇ ಪರಿಷ್ಕಾರಗೊಂಡು ವೀರಶೈವವಾಗಿದೆಯೆಂಬುದು ವಿದ್ವಾಂಸರ ಮತ. ಶೈವಧರ್ಮದ ಹಲವು ಪಂಗಡಗಳನ್ನು ವಚನಕಾರರು, ಶಿವಕವಿಗಳು ಉಲ್ಲೇಖಿಸಿದ್ದಾರೆ. ಆ ಪಂಗಡಗಳಲ್ಲಿ ಸಮನ್ವಯ ಸಾಧಿಸುವ ಕಾರ್ಯ ಬಸವಣ್ಣನಿಂದ ನಡೆಯಿತು. ಸಮನ್ವಯವು ವೀರಶೈವದ ವೈಶಿಷ್ಟ್ಯವೂ ಆಗಿದೆ.

ವೀರಶೈವದ ಗುರಿಯೆಂದರೆ, 1) ಶಿವಪಾರಮ್ಯದ ಬಗೆಗೆ ಉತ್ಕಟವಾದ ಶ್ರದ್ಧೆ, 2) ಜೀವ-ಶಿವರ ಐಕ್ಯ ಸಾಧನೆಯನ್ನೇ ಗುರಿಯಾಗಿಟ್ಟುಕೊಂಡು ಬಾಳುವುದು, 3) ನಿಷ್ಠೆ-ಸದಾಚಾರಗಳ ಬಗೆಗೆ 'ವೀರವ್ರತ' ಪಾಲಿಸುವುದು.

ಈ ದೃಷ್ಟಿಯಿಂದ 'ವೀರ' ಪದವನ್ನು ಸಮರ್ಥಿಸಲಾಗಿದೆ.

ಶೈವಮತದ ಶಾಸ್ತ್ರದಲ್ಲಿ ಪಶು, ವೀರ, ದಿವ್ಯ ಎಂಬ ಮೂರು ಗುಣಶ್ರೇಣಿಗಳಿವೆ. ಪಶು ಆರಂಭದ ಸ್ಥಿತಿ; ದಿವ್ಯ ಕೊನೆಯ ನಿಲುಗಡೆ; ವೀರವು ಸಿದ್ಧಿಯ ಹಾದಿಯಲ್ಲಿ ಧೀರತನದಿಂದ ನಡೆಯುವ ಹಂತ.

ವೀರಶೈವವು 'ಲಿಂಗಾಯತ' ಎಂಬ ಹೆಸರಿನಿಂದ ಪ್ರಸಿದ್ಧವಿದೆ. 'ಲಿಂಗಾಯತ' ಧರ್ಮದ ಲಕ್ಷಣವನ್ನು ಲಿಂಗದೀಕ್ಷೆಗೆ ಸಂಬಂಧಿಸಿದ 'ಆಯತ' 'ಸ್ವಾಯತ' 'ಸನ್ನಿಹಿತ' ಎಂಬ ಮೂರು ಪದಗಳಿಗೆ ಅನ್ವಯಿಸಿ ಹೀಗೆ ಹೇಳಲಾಗುತ್ತಿದೆ:

1) 'ಅಂಗ'ದೊಳಗಿರುವ ಶಿವಚೇತನದ ಕುರುಹಾಗಿ ಇಷ್ಟಲಿಂಗವು ಗುರುವಿನ ಮೂಲಕ ಶಿವನ ಕೃಪೆಯಿಂದ 'ಆಯತ'ವಾಗಿ [ಅಂದರೆ ಸಹಜವಾಗಿ] ತನಗೆ ಲಭ್ಯವಾಗುವುದು.

2) ಹಾಗೆ ಲಭ್ಯವಾದ ಲಿಂಗವನ್ನು ತನ್ನ ಸ್ವಂತ ಅನುಭವದಿಂದ 'ಸ್ವಾಯತ' [ಅಂದರೆ ತನ್ನದನ್ನಾಗಿ] ಮಾಡಿಕೊಳ್ಳುವುದು.

3) ಅನುಭಾವವು ಬೆಳೆಯುತ್ತ ಸಾಗಿದಂತೆ ಲಿಂಗಸ್ವರೂಪದ ಶಿವಚೇತನವು ತನಗೆ 'ಸನ್ನಿಹಿತ' [ಅಂದರೆ ಅತಿ ನಿಕಟದ್ದು] ಆಗುವುದು.

ಸಾರಾಂಶವಾಗಿ ಹೇಳುವುದಾದರೆ ಅಹಂಕಾರಯುಕ್ತ ಸಂಕುಚಿತ ಜೀವಭಾವವನ್ನು ತೊಡೆದುಹಾಕಿ ಸತ್, ಚಿತ್, ಆನಂದ ಸ್ವರೂಪವಾಗಿರುವ ಪರಶಿವನಲ್ಲಿ ಸಮರಸ ಪಡೆಯುವ ದಿಸೆಯಲ್ಲಿ ಸಾಗುವುದೇ ವೀರಶೈವ ಮಾರ್ಗವಾಗಿದೆ. ಇದು ಶೂನ್ಯ ಸಂಪಾದನೆಯ ಹಾದಿ.

ಬಾಳಿನ ಪರಮ ಗುರಿಯಾದ ಜೀವ-ಶಿವ ಈ ಸಾಮರಸ್ಯದ ಸಾಧನೆಗಾಗಿ ವೀರಶೈವರು ನಿಷ್ಠೆ ಸದಾಚಾರಗಳನ್ನು 'ವೀರ' ವ್ರತಪೂರ್ವಕವಾಗಿ ಕೈಗೊಳ್ಳಬೇಕು. ಇದು ವೀರಶೈವದ ತಿರುಳು. ಇದನ್ನು ಕುರಿತ ಹಾದಿಯನ್ನು ಸುಲಭಗೊಳಿಸಿದುದೇ ಶರಣಮಾರ್ಗ.

ಜೀವ-ಶಿವರ ಸಮರಸ ಸಾಧನೆಯು ಅನುಭವದ ಹಾದಿಯಲ್ಲಿ ಸಾಗುತ್ತಿದೆ.

> **ಭಕ್ತಿಗೆ ಅನುಭಾವವೇ ಬೀಜ ಕಾಣಿರೋ**
> **ಭಕ್ತಿಗೆ ಅನುಭಾವವೇ ಆಚರಣೆ ಕಾಣಿರೋ**
> **ಭಕ್ತಿಗೆ ಅನುಭಾವವೇ ಸಕಲೈಶ್ವರ್ಯ ಶೃಂಗಾರ**
> **ಕಾಣಿರೋ**

ವೀರಶೈವಾಚಾರ ಸಂಪನ್ನರೆನಿಸುವ ಸದ್ಭಕ್ತರಿಗೆ
ಅನುಭಾವವೇ ಅರುವಿನಗೊತ್ತು ಕಾಣಿರೋ

—ಇದು ಚೆನ್ನಬಸವಣ್ಣನ ನುಡಿ. ಇದರಲ್ಲಿ ವೀರಶೈವ ಧರ್ಮದಲ್ಲಿ ಅನುಭಾವಕ್ಕಿರುವ ಮಹತ್ವವನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ. ವೀರಶೈವರ ಭಕ್ತಿ, ಆಚರಣೆ, ಜ್ಞಾನ, ಸಕಲ ಸಂಪತ್ತುಗಳಿಗೂ ಅನುಭಾವವೇ ಮೂಲವಾಗಿದೆ.

ಅಂತೆಯೆ ವೀರಶೈವರ ಜೀವನ, ಸಾಹಿತ್ಯ, ಸಂಸ್ಕೃತಿ, ಧರ್ಮಗಳು ಶಿವಾನುಭವದತ್ತಲೇ ಸಾಗುತ್ತಿವೆ. ಈ ಸಂಗತಿಯು ಶಿವಶರಣರ ಜೀವನ, ಸಾಧನೆಗಳಿಂದ ಸ್ಪಷ್ಟವಾಗುತ್ತಿದೆ.

ಪ್ರಾಚೀನ ವೀರಶೈವದ ಹಿನ್ನೆಲೆಯಲ್ಲಿ ಬಸವಣ್ಣ 12ನೆಯ ಶತಮಾನದಲ್ಲಿ ನೂತನ ಸಮಾಜವನ್ನು ರೂಪಿಸಿದ. ಬಸವಣ್ಣ ರೂಪಿಸಿದ ನವೀನ ಸಮಾಜದಲ್ಲಿ ಹೊಸಬೆಳಕು, ಚೈತನ್ಯ ಮೂಡಿಬಂದವು.

ವೀರಶೈವ ವಿಕಾಸದಲ್ಲಿ ಬಸವಣ್ಣನ ಸ್ಥಾನವು ಅದ್ವಿತೀಯ. ವಿಶ್ವವಿಭೂತಿಗಳ ಅಗ್ರಪಂಕ್ತಿಗೆ ಸೇರುವ ಘನತೆ ಆತನದು. ಅಂತೆಯೆ ಶಿವಶರಣರು ಆತನನ್ನು ಬಗೆ ಬಗೆಯಾಗಿ ಕೊಂಡಾಡಿದ್ದಾರೆ. 'ಜಗದಾರಾಧ್ಯ ಬಸವಣ್ಣನು, ಪ್ರಥಮ ಗುರು, ಬಸವಣ್ಣನು' ಎಂಬುದು ಚೆನ್ನಬಸವಣ್ಣನ ಉಕ್ತಿ. 'ಲಿಂಗ, ಜಂಗಮ, ಪ್ರಸಾದ, ಮಹಾತ್ಮೆಗೆ ಬಸವಣ್ಣನೇ ಆದಿಯಾದ' ಎಂಬುದು ಪ್ರಭುದೇವನ ಶ್ಲಾಘನೆಯಾಗಿದೆ. ಬಸವಣ್ಣನ ಬಗೆಗೆ ಬೇರೆ ಬೇರೆ ಭಾಷೆಗಳಲ್ಲಿ ರಚಿತವಾದ ಕೃತಿಗಳ ಸಂಖ್ಯೆ 400ನ್ನು (ನಾಲ್ಕುನೂರನ್ನು) ಮೀರುತ್ತಿದೆ'ಯೆಂಬ* ಸಂಗತಿ ಗಮನಾರ್ಹ.

೨

ವೀರಶೈವ ಸಂಸ್ಕೃತಿಯ ಸಾಕಾರ ಮೂರ್ತಿಯೇ ಬಸವಣ್ಣ. ಸಂಸ್ಕೃತಿ ಪದವನ್ನು ಜನರು ವಿಪುಲವಾಗಿ ಬಳಸುತ್ತಾರೆ. ಸಂಸ್ಕೃತಿಯ ಲಕ್ಷಣವನ್ನು ವಿವೇಚಿಸುವ ಗ್ರಂಥಗಳೂ ಇವೆ. ಆದರೂ ಆ ಪದದ ಬಗೆಗೆ ಖಚಿತವಾದ ವ್ಯಾಖ್ಯೆಯು ಸುಲಭಸಾಧ್ಯವೆನಿಸಿಲ್ಲ. ಆದರೆ ಬಸವಣ್ಣನ ಜೀವನ, ಮೂರ್ತಿಸ್ವರೂಪ, ನುಡಿಗಳ ನಿದರ್ಶನದಿಂದ 'ಸಂಸ್ಕೃತಿ' ಪದದ ವ್ಯಾಖ್ಯೆಯನ್ನು ಸ್ಪಷ್ಟಪಡಿಸುವುದು ಸಾಧ್ಯವೆಂದು ನಾನು ಭಾವಿಸಿದ್ದೇನೆ.

ವೇಷ-ಭೂಷಣ, ಸಂಪತ್ತು, ಅಧಿಕಾರ, ನಯವುಳ್ಳ ಮಾತು, ಕಲೆಯ ಚಾತುರ್ಯಗಳಿಂದ ಮಾತ್ರ ಸಂಸ್ಕೃತಿಯನ್ನು ನಿರ್ಣಯಿಸಲು ಬರುವಂತಿಲ್ಲ. ಸಂಪತ್ತು ಅಧಿಕಾರಗಳು ಸಂಸ್ಕೃತಿಗೆ ವಿರೋಧವನ್ನೂ ತರಬಹುದು. ವಿದ್ಯೆಯೊಂದಿಗೆ ಸಂಸ್ಕೃತಿಯೂ ಬೆಳೆಯುವುದೆಂದು ಹೇಳಲು ಬರುವಂತಿಲ್ಲ. ಆದುದರಿಂದ 'ಸಂಸ್ಕೃತಿ' ಪದದ ಅರ್ಥವನ್ನು ಸಮರ್ಪಕವಾಗಿ ಅರಿತುಕೊಳ್ಳಲು ಬಸವಣ್ಣನ ಕೆಲವು ವಚನಗಳು ಹೆಚ್ಚು ಉಪಯುಕ್ತವೆಂದು ನನಗೆ ಅನಿಸುತ್ತದೆ.

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ
ಒರೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ
ಸಲಹು ಕೂಡಲ ಸಂಗಮದೇವಾ

ಮಾನವನ 'ಮನದ ಕಾಳಿಕೆಯನ್ನು ಕಳೆ'ಯುವುದೇ ಸಂಸ್ಕೃತಿ. ಪುಟವಿಕ್ಕಿದ ಚಿನ್ನ ಪರಿಶುದ್ಧಿ ಪಡೆಯುತ್ತಿದೆ. ಪರಿಶುದ್ಧ ಚಿನ್ನವನ್ನು ಕಡಿಹ ಬಡಿಹಗಳಿಂದ ಬೇಕಾದ ಆಕಾರಕ್ಕೆ ತಂದು ಅಲಂಕಾರವನ್ನಾಗಿ ಮಾಡಲಾಗುತ್ತಿದೆ. ಅದರಂತೆ ಮನದ ಮಲಿನತೆಯನ್ನು ಕಳೆದು ಹದಗೊಳಿಸಿ ಒಂದು ರೂಪಕ್ಕೆ ತರುವ ವಿಧಾನವು ಬಸವಣ್ಣನ ಈ ವಚನದಲ್ಲಿ ಸುಂದರವಾಗಿ ನಿರೂಪಿಸಲಾಗಿದೆ. ಮನಸ್ಸು ಹಸನಾಗಿ ಹದಗೊಂಡು ಒಂದು ರೂಪಕ್ಕೆ ಬರುವುದೇ ಸಂಸ್ಕೃತಿ. ಇದು ಇನ್ನುಳಿದ ವ್ಯಾಖ್ಯೆಗಳಿಗಿಂತ ಹೆಚ್ಚು ಖಚಿತ.

ಬಸವಣ್ಣನ ಇನ್ನೊಂದು ವಚನದಲ್ಲಿ—

ಒಳಗೆ ಕುಟಿಲವಾಗಿ ಹೊರಗೆ ವಿನಾಯವಾಗಿ
ಭಕ್ತರೆನಿಸಿಕೊಂಬವರ ಒಲ್ಲನಯ್ಯ ಲಿಂಗವು
ಅವರು ಸತ್ಪಥಕ್ಕೆ ಸಲ್ಲರಯ್ಯ.

ಎಂಬ ಉಕ್ತಿಯಿದೆ. ಇಲ್ಲಿ ಭಕ್ತರ ಬಗೆಗೆ ಹೇಳಿದ ಮಾತು ಸಂಸ್ಕೃತಿವಂತನಿಗೂ ಅನ್ವಯಿಸುತ್ತಿದೆ. ಇಲ್ಲಿ ಬರುವ 'ಸತ್ಪಥ'ವು ಸಂಸ್ಕೃತಿ ಪಥಕ್ಕೂ ಹೊಂದಿಕೆಯಾಗುವಂತಿದೆ. ಕೇವಲ ಹೊರಗಿನ ವಿನಯವು ಸಂಸ್ಕೃತಿಯಲ್ಲ. ಹೊರಗಿನ ರಂಜನೆಯು ಸಂಸ್ಕೃತಿಯಾಗಲಾರದು. ಏಕೆಂದರೆ ಅದು,

ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ

ಎಂಬಂತಾಗುವುದು. ಸಗಣಿಯಿಂದ ಮಾಡಿದ ಗಣಪತಿಯ ಮೂರ್ತಿಯನ್ನು ಸಂಪಿಗೆಯ ಹೂವಿನಲ್ಲಿಟ್ಟು ಪೂಜೆ ಮಾಡಿದರೆ ರಂಜನೆಯೆನಿಸಬಹುದು. ಆದರೆ ಸಗಣಿಯ ವಾಸನೆಯನ್ನು ಕಳೆದಂತಾಗುವುದಿಲ್ಲ.

*ಬಸವ ಸಾಹಿತ್ಯ ದರ್ಪಣ— ಎಸ್. ಆರ್. ಗುಂಜಾಳ,-1967; ಬಸವ ಸಮಿತಿ, ಬೆಂಗಳೂರು.

ಇಂತಹ ಮಾರ್ಮಿಕ ಉದಾಹರಣೆಗಳು ಬಸವಣ್ಣನವರ ವಚನಗಳಲ್ಲಿ ವಿಪುಲವಾಗಿವೆ. ಅವು ಪರಿಣಾಮಕಾರಿಯೂ ಆಗಿವೆ.

ಮನೆಯಲ್ಲಿ ಧೂಳು ತುಂಬಿದ್ದರೆ ಅಲ್ಲಿ ಮನೆಯ ಒಡೆಯನು ಇಲ್ಲವೆಂದು ನಾವು ತಿಳಿಯಬೇಕಾಗುತ್ತಿದೆ. ಹಾಗೆಯೇ ಮನದಲ್ಲಿ ಹುಸಿಯು ತುಂಬಿದ್ದರೆ ಮನದ ಒಡೆಯನಾದ ಪರಮಾತ್ಮ ಅಲ್ಲಿ ಇರಲಾರ. ಮನದ ಸಂಸ್ಕೃತಿಯೂ ಅಲ್ಲಿ ಇರದು.

ಧೃತಿಗೆಟ್ಟು ಅನ್ಯರ ಬೇಡದ, ಮತಿಗೆಟ್ಟು ಪರರ ಹೊಗಳದ ನಿಲುಮೆ ಬಸವಣ್ಣನದು. ಅನ್ಯರನ್ನು ಬೇಡುವುದು, ಪರರನ್ನು ಮತಿಗೆಟ್ಟು ಹೊಗಳುವುದು ಭಕ್ತನಿಗೆ ಸಲ್ಲುವುದಿಲ್ಲ. ಸಂಸ್ಕೃತಿವಂತನಿಗೂ ಸಲ್ಲದು.

ಬಸವಣ್ಣನ ಇಂತಹ ನುಡಿಗಳಲ್ಲಿ ಸಾಹಿತ್ಯದ ಸೊಬಗಿದೆ. ಸಂಸ್ಕೃತಿಯ ತಿರುಳಿದೆ. ಭಕ್ತನ ಲಕ್ಷಣವಿದೆ. ಬಾಳಿನ ಬಗೆಯಿದೆ.

ಸಂಸ್ಕೃತಿ ಪದವಾಚಕ Culture ಎಂಬುದರ ಮೂಲರೂಪ Cult; ಅದರ ಮೂಲ ಅರ್ಥ ಪೂಜೆ, ಆರಾಧನೆ ಎಂದಿದೆ. ನಮ್ಮ ನಡೆ-ನುಡಿಗಳಲ್ಲಿ ಪೂಜೆಯ ಮನೋಭಾವವಿರುವುದೇ ಸಂಸ್ಕೃತಿ. ವೀರಶೈವರ 'ಸದ್ಭಕ್ತ' ಎಂಬ ಪದದಲ್ಲಿ ಈ ಅರ್ಥವಿದೆ.

ಬಸವಣ್ಣನ ಮೂರ್ತಿಸ್ವರೂಪದ ಹಿರಿಮೆಯ ಬಗೆಗೆ ಮಹಾಕವಿ ಹರಿಹರದೇವನ ವಾಣಿ ಹೀಗೆ ಹರಿದು ಬಂದಿದೆ.

ನಡೆದು ತಪ್ಪೆ, ನುಡಿದು ಹುಸಿಯೆ, ಹಿಡಿದು ಬಿಡೆ
ಬಿಟ್ಟು ಹಿಂಗಲೀಯೆ, ಕೊಟ್ಟು ನೆನೆಯೆ........
ಮನದೊಳ್ ಓವರಿಯಿಲ್ಲ; ಬುದ್ಧಿಯೊಳು ವಿಸಂಚವಿಲ್ಲ
ಅಹಂಕಾರದೊಳ್ ಗರ್ವವಿಲ್ಲ; ಚಿತ್ತದೊಳು ಹೊರೆಯಿಲ್ಲ.
..............ಮನದ ಸೊಗಡು ಹೊದ್ದದು
..............ಮತ್ಸರಕ್ಕೆ ಇಂಬು ಇಲ್ಲ.

ಬಸವರಾಜ, ನಿನ್ನ ಗುಣಂಗಳಂ ಬಣ್ಣಿಸಲ್ + ಎಮ್ಮ ಅಳವಲ್ಲ. ಈ ಶಬ್ದಚಿತ್ರದಲ್ಲಿ ಬಸವಣ್ಣನ ಶೀಲದ ಸಂಸ್ಕೃತಿಯ ಲಕ್ಷಣಗಳು ವಿವರವಾಗಿ, ಸ್ಫುಟವಾಗಿ ಮೂಡಿನಿಂತಿವೆ. ಮುಖ್ಯವಾಗಿ ಮನದಲ್ಲಿ 'ಓವರಿ' (ಮುಚ್ಚುಮರೆ, Croockedness) ಇಲ್ಲದೆ ಇರುವುದು ಸಂಸ್ಕೃತಿಯ ಲಕ್ಷಣ. ಅದು ಉತ್ತಮಶೀಲವೂ ಅಹುದು. ಶೀಲ ಸಂಪಾದನೆಗೆ ವೀರಶೈವದಲ್ಲಿ ಹೆಚ್ಚಿನ ಮಹತ್ವ ಕೊಡಲಾಗಿದೆ. ವೀರಶೈವರು ಆಚರಿಸಬೇಕಾದ ಶೀಲಗಳನ್ನು ವಚನಕಾರರು ಉಲ್ಲೇಖಿಸಿದ್ದಾರೆ. ಆ ಶೀಲಗಳ ಮೂಲಕವಾಗಿ ವೀರಶೈವ ಸಂಸ್ಕೃತಿಯು ಪರಿಸ್ಫುಟವಾಗುತ್ತಿದೆ.

ಜನತೆಯ ಸಂಸ್ಕೃತಿಯು ಕಲೆಗಳಲ್ಲಿ, ಸಾಹಿತ್ಯದಲ್ಲಿ ವ್ಯಕ್ತಗೊಳ್ಳುತ್ತಿದೆ.

ಚೈತನ್ಯಭರಿತವಾಗಿದ್ದ ಶರಣರ ಸಮಾಜವು ಸಾಂಸ್ಕೃತಿಕ ಜೀವನವನ್ನು ರೂಪಿಸಲು ಸಮರ್ಥವಾಯಿತು. ಬಾಳಿನ ಆನಂದಕ್ಕೆ ಶರಣಮಾರ್ಗವು ವಿಮುಖವಾಗಿರಲಿಲ್ಲ. ಅದು ವೃತ್ತಿಯ ವಿವಿಧ ಶಕ್ತಿಗಳ ವಿಕಾಸಕ್ಕೆ ಅವಕಾಶವನ್ನು ಒದಗಿಸಿತು. ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿತು. ಎಲ್ಲ ಬಗೆಯ ಕಾಯಕಗಳನ್ನು ಕೈಗೊಂಡ ಶರಣರಿಂದ ಕೂಡಿದ ಆ ಸಮಾಜವು ಸ್ವಯಂಪೂರ್ಣವಾಗಿತ್ತು.

ಹಾಡುಗಳನ್ನು ರಚಿಸುವ ಮತ್ತು ವಚನಗಳನ್ನು ಹಾಡುವ ಸಾಂಪ್ರದಾಯವು ಶಿವಶರಣರಲ್ಲಿತ್ತೆಂಬುದು ನಮಗೆ ವೀರಶೈವ ಸಾಹಿತ್ಯದಲ್ಲಿಯ ಉಲ್ಲೇಖಗಳಿಂದ ತಿಳಿದು ಬರುತ್ತಿದೆ. ಕಿನ್ನರಿ, ವೀಣೆ, ದಂಡಿಗೆ, ತಾಳ ಮುಂತಾದ ವಾದ್ಯಗಳ, ಲಲಿತ, ಮಲಹರಿ, ಗೌಳ ಮುಂತಾದ ರಾಗಗಳ ಹೆಸರುಗಳೂ ದೊರೆಯುತ್ತಿವೆ. ಈ ಬಗೆಯ ಆಧಾರಗಳನ್ನು ಅನುಸರಿಸಿ ನಡೆಸಿದ ಪ್ರೌಢ ವ್ಯಾಸಂಗವು ಫಲಕಾರಿಯಾಗಿದೆ. ಬಸವಾದಿ ಪ್ರಮಥರ ಹಾಡುಗಳ ಬಗೆಗೆ ವಿಸ್ತೃತವಾದ ಗ್ರಂಥ* ಪ್ರಕಟನೆಗೆ ಕಾರಣವಾಗಿದೆ. ಈ ಗ್ರಂಥದಲ್ಲಿ ಬಸವಣ್ಣ ಮುಂತಾದ ಇಪ್ಪತ್ತೇಳು ವಾಗ್ಗೇಯಕಾರರ ಹಾಡುಗಳನ್ನು ಸಂಗ್ರಹಿಸಿಕೊಡಲಾಗಿದೆ. ಆ ಹಾಡುಗಳ ರಾಗಗಳನ್ನು ಹೆಸರಿಸಲಾಗಿದೆ. ಅಭ್ಯಾಸಪೂರ್ಣವಾದ ಪ್ರಸ್ತಾವಣೆಯಲ್ಲಿ ಸಂಪಾದಕರು ವೀರಶೈವ ಸಂಗೀತದ ಪರಂಪರೆಯನ್ನು ವಿವೇಚಿಸಿದ್ದಾರೆ.

ಶರಣಸಮಾಜದ ಇನ್ನುಳಿದ ಕಲೆಗಳ ಬಗೆಗೆ ಸಂಶೋಧನೆ ವ್ಯಾಸಂಗ ನಡೆಯದೆ ಇದ್ದುದು ಇಂದಿನ ಒಂದು ಕೊರತೆ. ಇದನ್ನು ತುಂಬಿಕೊಳ್ಳುವ ಪ್ರಯತ್ನ

*ಶಿವದಾಸ ಗೀತಾಂಜಲಿ : ಸಂ : ಡಾ|| ಎಲ್. ಬಸವರಾಜು, 1963; ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

ವನ್ನು ವಿದ್ವಾಂಸರು, ಸಂಸ್ಥೆಗಳು ಕೈಕೊಳ್ಳಬೇಕಾಗಿದೆ.

ಬಗೆ ಬಗೆಯ ಕಾಯಕ ಕೈಕೊಂಡಿದ್ದ ಶರಣರ ಉಲ್ಲೇಖನಗಳಿಂದ ಕೆಲವು ಅಂಶಗಳನ್ನು ಇಲ್ಲಿ ಸಂಗ್ರಹಿಸಿ ಹೇಳುತ್ತೇನೆ.

ತೊಂಗಿನ ಮಹಾದೇವಿಯೆಂಬ ಶರಣೆಯು ಬೆಳಗಿನಲ್ಲಿ ಭಕ್ತರನ್ನು ಎಚ್ಚರಿಸುವ ಕಾಯಕ ಕೈಕೊಂಡಿದ್ದಳು. ಆಕೆ ಶರಣರ ಕೃತಿಗಳನ್ನು ಇಂಪಾಗಿ ಹಾಡುತ್ತ ಮನೆ ಮನೆಗೆ ಹೋಗುತ್ತಿದ್ದಳು.

ಸಹದೇವಿ ಮತ್ತು ಕಾಳಮ್ಮೆಯರು ಕಲಾಪೂರ್ಣ ರಂಗವಲ್ಲಿ ಹಾಕುವ ಕಾಯಕದಲ್ಲಿ ತಮ್ಮ ಜಾಣ್ಮೆಯನ್ನು ತೋರ್ಪಡಿಸುತ್ತಿದ್ದರು.

ಹೂವಿನ ಅಲ್ಲಮ್ಮ ಅಂದವಾದ ಹೂಮಾಲೆ ರಚಿಸುವ ಕಾಯಕದಲ್ಲಿ ನಿರತಳಾಗಿದ್ದಳು.

ಶಿವಮಾಯಿದೇವಿ ಪುರಾಣ ಹೇಳುವ ಕಲೆಯಲ್ಲಿ ತನ್ನ ಪ್ರವೀಣತೆಯನ್ನು ವ್ಯಕ್ತಪಡಿಸುತ್ತಿದ್ದಳು.

ಶಿವಕೀರ್ತನವನ್ನು ಉಚ್ಚಕಲೆಯ ಮಟ್ಟಕ್ಕೇರಿಸಿದ ಸಂಪ್ರದಾಯ ವೀರಶೈವರಲ್ಲಿ ಬೆಳೆದು ಬಂದುದನ್ನು ನಾವು ಗಮನಿಸಬೇಕು.

ಬಾಚಲದೇವಿ ಮದ್ದಳೆ ಬಾರಿಸುತ್ತಿದ್ದಳು.

ಕುಂಬಾರ ಗುಂಡಯ್ಯನ ರಗಳೆಯಲ್ಲಿ ಆತನು ತಾನೂ ಕುಣಿದು ಶಿವನನ್ನೂ ಕುಣಿಯಲು ತೊಡಗಿಸಿದ ಅದ್ಭುತರಮ್ಯ ವರ್ಣನೆ ಬಂದಿದೆ. ಅಲ್ಲಮನ ಮಾಯಾದೇವಿಯ ನರ್ತನಗಳನ್ನು ಕುರಿತ ಕಥೆಯು ಸುಪ್ರಸಿದ್ಧವಿದೆ.

ಬಹುರೂಪಿ ಚೌಡಯ್ಯ ವೇಷಹಾಕಿ ನಾಟಕವಾಡುವಲ್ಲಿ ಪ್ರವೀಣನಾಗಿದ್ದ. ಹಾಡುವ, ಆಡುವ, ಕುಣಿಸುವ ಕಲೆಯನ್ನು ಆತನು ತೋರ್ಪಡಿಸುತ್ತಿದ್ದ. ರಾಗವು ಆತನ ಲಿಂಗಪೂಜೆಗೆ ಸಂಗಜೋಡಣೆಯಾಗಿತ್ತಂತೆ!

ವೀರಶೈವರ ಕೆಲವು ಕೈಬರೆಹದ ಗ್ರಂಥಗಳಲ್ಲಿ ಚಿತ್ರಗಳಿವೆ. ಶಿವಶರಣರನ್ನು ಕುರಿತ ಚಿತ್ರಕಲೆಯು ಬೆಳೆದು ಬಂದಿದೆ. ಇಂದಿನ ಕೆಲವು ಶ್ರೇಷ್ಠವರ್ಗದ ವರ್ಣಚಿತ್ರ ಕಲಾವಿದರು ಶರಣ ಸಂಪ್ರದಾಯದಲ್ಲಿ ಬೆಳೆದುಬಂದವರಾಗಿದ್ದಾರೆ.

ವೀರಶೈವ ಶಿಲ್ಪಕಲೆಯನ್ನು ಕುರಿತ ವ್ಯಾಸಂಗಕ್ಕೂ ಅವಕಾಶವಿದೆ.

ಅಂತಃಕರಣ ಶುದ್ಧ ಪೂಜೆಯನ್ನು ಬೋಧಿಸಿದ ಶಿವಶರಣರು ಆಡಂಬರದ ಪೂಜೆಯನ್ನು, ಆ ದೃಷ್ಟಿಯ ದೇವಾಲಯ ನಿರ್ಮಾಣವನ್ನು ಖಂಡಿಸಿದ್ದು ನಿಜ. ಆದರೆ ವೀರಶೈವರು ಶಿಲ್ಪರಚನೆಗೆ ವಿರೋಧವಾಗಿದ್ದರೆಂದು ಇದರರ್ಥವಲ್ಲ. ಸಿದ್ಧರಾಮನು ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದನು. ಆ ಕಾರ್ಯದಲ್ಲಿಯೇ ಮಗ್ನನಾಗಿ ಇಷ್ಟಲಿಂಗವನ್ನು ಅಲಕ್ಷಿಸುವಂತಾಗಬಾರದೆಂದು ಪ್ರಭುದೇವ ಆತನನ್ನು ವಿಡಂಬಿಸಿ ನುಡಿದ ಮಾತು ಬೇರೆ. ಶಿವಾಲಯಗಳ ರಕ್ಷಣೆಗಾಗಿ ಶಿವರೂಪದ ಲಿಂಗಸ್ಥಾಪನೆಗಾಗಿ ಹೋರಾಟ ನಡೆಸಿದ ಶಿವಶರಣರ ಕಥೆಗಳೂ ಇವೆ. ವೀರಶೈವರಿಗೆ ಸಂಬಂಧಿಸಿದ ಶಿಲಾಲೇಖಗಳಲ್ಲಿ ಶಿವಾಲಯಗಳಿಗೆ ದತ್ತಿಬಿಟ್ಟ ಉಲ್ಲೇಖಗಳಿವೆ. ವೀರಶೈವ ಕ್ಷೇತ್ರಗಳಲ್ಲಿ ಪ್ರಸಿದ್ಧ ದೇವಾಲಯಗಳಿವೆ. ಕೆಲವು ಹಳೆಯ ಮಠಗಳನ್ನು ವಿಶಿಷ್ಟ ಪದ್ಧತಿಯಲ್ಲಿ ಕಟ್ಟಲಾಗಿದೆ. ವೀರಶೈವ ಶರಣರ ಸಮಾಧಿಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಕಟ್ಟುವ ಸಾಂಪ್ರದಾಯವಿದೆ. ಅವುಗಳ ಅಳತೆ ಆಕಾರಗಳ ಬಗೆಗೆ ಒಂದು ಕ್ರಮವೂ ಇದೆ. ಈ ಸಂಗತಿಗಳನ್ನು ಗಮನಿಸಿ ವೀರಶೈವ ಶಿಲ್ಪದ ಬಗೆಗೆ ವಿಷಯ ಸಂಗ್ರಹ ನಡೆದು ಅದರ ವೈಶಿಷ್ಟ್ಯವನ್ನು ಗುರುತಿಸುವ ಕಾರ್ಯ ನಡೆಯಬೇಕಾಗಿದೆ.

ಸ್ವಾದಿ, ಕೆಳದಿ ಮುಂತಾದ ಅರಸು ಮನೆಗಳ ಕಾಲಕ್ಕೆ ದೇವಾಲಯ ರಚನೆ ಜೀರ್ಣೋದ್ಧಾರಗಳ ಕಾರ್ಯ ನಡೆದಿದೆ.

ಸ್ವಾದಿ ಅರಸರಿಗೆ ಸಂಬಂಧಿಸಿದ ಒಂದು ಸುಂದರ ಕಲ್ಲುಮಂಟಪವು ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿದೆ. ಅದರ ಕಲೆಯನ್ನು ಶಿಲ್ಪಕಲಾ ವಿಮರ್ಶಕರು ಕೊಂಡಾಡಿದ್ದಾರೆ. ಅದರಲ್ಲಿ ಬಸವಣ್ಣನ ಕಾಲದ ಶಿವಶರಣರ ಮೂರ್ತಿಗಳನ್ನು ಎರಡು ಸಾಲುಗಳಲ್ಲಿ ರೂಪಿಸಿ ಅವರ ಹೆಸರುಗಳನ್ನೂ ಕೊಡಲಾಗಿದೆ. ಅವುಗಳಲ್ಲಿ ಮೋಳಿಗೆಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ ಇತ್ಯಾದಿ ಹೆಸರುಗಳಿವೆ. ಶಿವಶರಣರ ಮೂರ್ತಿ ಮತ್ತು ಹೆಸರುಗಳಿರುವ ಬೇರೆ ಪ್ರಾಚೀನ ಶಿಲ್ಪ ನಮ್ಮ ಕಣ್ಣಿಗೆ ಬಿದ್ದಿಲ್ಲವಾಗಿ ಕಲ್ಲು ಮಂಟಪದ ಶಿಲ್ಪ ಅಪೂರ್ವವೆನಿಸಿದೆ.

ವೀರಶೈವ ಸಂಸ್ಕೃತಿಯು ಜನತೆಯಲ್ಲಿ ಹರಡಿರುವುದನ್ನು ನಾವು ಜಾನಪದ ಗೀತೆಗಳ ಮೂಲಕವೂ ಕಂಡುಕೊಳ್ಳಬಲ್ಲೆವು. ಕನ್ನಡ ಜಾನಪದ ಗೀತೆಗಳ ಸಂಗ್ರಹ ಮತ್ತು ಪ್ರೌಢ ವ್ಯಾಸಂಗದಲ್ಲಿ ನಿರತರಾಗಿದ್ದ ಲಿಂಗೈಕ್ಯ ಗದ್ದಗಿಮಠ ಅವರ ಒಂದು ಬೃಹತ್ ಕೃತಿಯು* ಪ್ರಕಟವಾಗಿದೆ. ಅದರಲ್ಲಿ ಪಂತಿಯ ಹಾಡುಗಳ ಸಂಗ್ರಹವು ಮನನೀಯವಾಗಿದೆ. 'ಅವುಗಳಲ್ಲಿ ಬಸವಣ್ಣ, ಹರಳಯ್ಯ ಬಹುರೂಪಿ ಚೌಡಯ್ಯ, ಕುಂಬಾರ ಗುಂಡಯ್ಯ ಇತ್ಯಾದಿ ಶರಣರು ಜನಮನದಲ್ಲಿ ಮೂಡಿನಿಂತ ಬಗೆಯನ್ನು ರಮಣೀಯವಾಗಿ ಚಿತ್ರಿಸಲಾಗಿದೆ.

> "ಕುಣಿಕುಣಿದು ಚೌಡಯ್ಯ ಮಣಿಮಣಿದು ಹಾಡಿದರೆ
> ಕಣತುಂಬಿ ರಾಶಿ ಹೊರಸೂಸಿ" ತಂತೆ!

ಚೌಡಯ್ಯ ಆಡಿದ ಶಿವಲೀಲೆಯಿಂದ ನಾಡೆಲ್ಲವೂ ಹೂವಾಯ್ತು. ಮೂಡಿ ಶಿವಭಕ್ತಿ ಹಣ್ಣಾಯ್ತು. ಕೋಡಿರಸ ಹರಿಯಿತು. ಜನ ಅದನ್ನು ಕುಡಿದು ಶಿವಭಕ್ತಿ ರಸದೊಳು ಓಲಾಡಿದರು—ಎಂಬ ರಮ್ಯ ವರ್ಣನೆಯು ಅಲ್ಲಿ ಬರುತ್ತಿದೆ.

> ಕುಂಬಾರಗುಂಡಯ್ಯ, "ಕುಣಿದೊಳು
> ಹೆಡೆಯೆತ್ತಿ ನಾಗಮಣಿದಂತೆ ಹೆಜ್ಜೆ ಹಾಕು"ತ್ತಿದ್ದನಂತೆ!

'ಹೆಡೆಯೆತ್ತಿ ನಾಗಮಣಿದಂತೆ' ಎಂಬ ಉಪಮೆಯ ಸ್ವಾರಸ್ಯವನ್ನು ಗಮನಿಸಬೇಕು.

> ಶಿವಶರಣೆ ನಿನ್ಹಾಡ, ಭವದೊಳಗೆ ಹಾಡುವದು.
> ಶಿವಪದಕೆ ಮಿಗಿಲು ನಿತ್ಯದಲಿ। ಕೊನೆಯುಂಟಿ
> ಶಿವಭಕ್ತಿಸಾರ ತಿಳಿಸುವದಕೆ ||
> ಜನಕೆ ನಿನ್ನೀಹಾಡು ಕೆನೆಹಾಲು ಇದ್ದಂತೆ
> ತೆನೆಹಾಲು ನಿನಗೆ ಒಕ್ಕಲಿಗ ॥ ಇಂತಾಗಿ
> ಮನಸೋತು ವ್ಯೆಗೆ ಶಿವಲೋಕ ||

ಇಂತಹ ಹಾಡುಗಳಲ್ಲಿ ಕಾವ್ಯದ ಸೊಬಗಿದೆ. ಕಲ್ಪಕತೆಯ ವೈಭವವಿದೆ. ಮಹತ್ವಪೂರ್ಣ ಸಂದೇಶವಿದೆ.

ಬಹುರೂಪಿ ಚೌಡಯ್ಯ,

> ಬೇಡೆನಗೆ ಕೈಲಾಸ ನೀಡೆನಗೆ ಶಿವಭಕ್ತಿ
> ಮಾಡುವೆನು ಸೇವೆ ಶಿವಮತಕ್ಕೆ । ಶರಣರಿಗೆ
> ನಾಡ ಕಾಯಕವೆ ಕೈಲಾಸ.

ಎಂದು ಹೇಳಿದನಂತೆ. ಕಲಾರೂಪದ ಕಾಯಕ ಕೈಕೊಂಡ ಶಿವಶರಣರು ಅವುಗಳಲ್ಲಿಯೇ ಕೈಲಾಸದ ಆನಂದವನ್ನೇ ಅನುಭವಿಸಿದ್ದಾರೆ. ಜನತೆಗೆ ಶಿವಭಕ್ತಿಯ ಸಾರವನ್ನು ತಮ್ಮ ಕಲೆಗಳ ಮೂಲಕ ಹೃದಯಂಗಮವಾಗಿ ತಿಳಿಸಿ ಕೊಟ್ಟಿದ್ದಾರೆ.

ಶಿವಶರಣರನ್ನು ಕುರಿತ ಇಂತಹ ಇನ್ನೂ ಎಷ್ಟೋ ಹಾಡುಗಳ ಸಂಗ್ರಹ ಕಾರ್ಯ ನಡೆಯಬೇಕಾಗಿದೆ. ಹಾಗೆ ಸಂಗ್ರಹ ಮತ್ತು ಟೇಪ್‌ರೆಕಾರ್ಡ್ ಮಾಡುವ ಕಾರ್ಯವನ್ನು ಕೂಡಲೆ ಕೈಗೊಳ್ಳದಿದ್ದರೆ ಅವು ನಶಿಸಿ ಹೋಗುವ ಹೆದರಿಕೆಯಿದೆ.

೩

ವೀರಶೈವ ವಾಙ್ಮಯ ವಿಪುಲವಾಗಿ, ಪ್ರಮುಖವಾಗಿ ಕನ್ನಡ ಭಾಷೆಯಲ್ಲಿ ಬಂದಿದೆ. ಅದರ ವ್ಯಾಪ್ತಿಯು ಕನ್ನಡಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ತೆಲುಗು ತಮಿಳು, ಮರಾಠಿ, ಸಂಸ್ಕೃತ, ಆಂಗ್ಲ ಭಾಷೆಗಳಲ್ಲಿಯೂ ರಚಿತವಾಗಿದೆ. ಈ ಎಲ್ಲ ಭಾಷೆಗಳಲ್ಲಿಯ ವಾಙ್ಮಯದ ಸಮಾಲೋಚನೆಯು ಒಬ್ಬರಿಂದ ಸಾಧ್ಯವಲ್ಲ. ನಾನಿಲ್ಲಿ ಕೆಲವೊಂದು ನಾಮ ನಿರ್ದೇಶ ಮಾತ್ರ ಮಾಡುತ್ತೇನೆ.

ತೆಲುಗು, ತಮಿಳು, ಮರಾಠಿಗಳು ಕನ್ನಡಕ್ಕೆ ನೆರೆಹೊರೆಯ ಭಾಷೆಗಳಾಗಿವೆ. ಅಂತೆಯೆ ಅವುಗಳಲ್ಲಿ ಕೊಳುಕೊಡೆಯು ನಡೆದು ಬಂದಿದೆ. ಧಾರ್ಮಿಕ ವಾಙ್ಮಯವನ್ನು ಸಂಸ್ಕೃತದಲ್ಲಿ ರಚಿಸುವ ಸಾಂಪ್ರದಾಯವಿದೆ. ಆಧುನಿಕ ಕಾಲದಲ್ಲಿ ಆಂಗ್ಲ ಭಾಷೆಯಲ್ಲಿ ಕೃತಿ ರಚಿಸುವುದು ಇಲ್ಲವೆ ಅನುವಾದಿಸುವುದು ರೂಢಿಯಾಗಿದೆ. ಆದುದರಿಂದ ಈ ಎಲ್ಲ ಭಾಷೆಗಳಲ್ಲಿ ವೀರಶೈವ ವಾಙ್ಮಯವು ಮೂಡಿ ಬಂದುದು ಸ್ವಾಭಾವಿಕವಾಗಿದೆ.

ವೀರಶೈವ ಸಿದ್ಧಾಂತವನ್ನು ಮತ್ತು ಶರಣರನ್ನು ಕುರಿತ ಕೃತಿಗಳು, ಬಸವ ಪುರಾಣ, ಪ್ರಭುಲಿಂಗಲೀಲೆಯಂತಹ ಸುಪ್ರಸಿದ್ದ ಕನ್ನಡ ಕಾವ್ಯಗಳು, ಕೆಲವು ವಚನಗಳು ಈ ಭಾಷೆಯಲ್ಲಿ ಬಂದಿವೆ. ಕೆಲವು ವೀರಶೈವ ಕವಿಗಳು ಉಭಯ ಭಾಷಾಪಂಡಿತರೂ ಆಗಿದ್ದರು.

ಪಂಡಿತತ್ರಯರೆಂದು ಹೆಸರಾದ ಶ್ರೀಪತಿ, ಮಂಚಣ್ಣ, ಮಲ್ಲಿಕಾರ್ಜುನರು ಆಂಧ್ರ ದೇಶದವರು. ಪಾಲ್ಕುರಿಕೆ ಸೋಮನಾಥ, ಮಾದಯ್ಯಗಾರಿ, ಪಿಡುಪರ್ತಿ ಬಸವ, ನಾಗೇಶ್ವರ ಕವಿ ಮುಂತಾದವರು ತೆಲುಗು ಭಾಷೆಯಲ್ಲಿ ವೀರಶೈವ ವಾಙ್ಮಯ ರಚಿಸಿದ್ದಾರೆ. ಆಧುನಿಕ ಕಾಲದ ಕೆಲವು ವಿದ್ವಾಂಸರು ವೀರಶೈವದ ಬಗೆಗೆ ಬರೆದಿದ್ದಾರೆ.

ತಮಿಳುನಾಡಿನ ಕಂಚಿ ಶಂಕರಾರಾಧ್ಯರು ಕನ್ನಡ ಬಸವಪುರಾಣವನ್ನು ಸಂಸ್ಕೃತಕ್ಕೆ ಅನುವಾದಿಸಿದರು. ಪಿಳ್ಳೈನೈನಾರ್, ವಟ್ಟಿಕೂತರ್, ಕುಮಾರದೇವರ್, ರೇವಣಾರಾಧ್ಯ ದೇಶಿಕರ್, ಶಾಂತಲಿಂಗಸ್ವಾಮಿ, ಶಿವಪ್ರಕಾಶಸ್ವಾಮಿ, ವೇಲಯ್ಯಸ್ವಾಮಿ, ಕರುಣಪ್ರಕಾಶ

*ಕನ್ನಡ ಜಾನಪದ ಗೀತೆಗಳು : ಲೇಖಕ: ಡಾ|| ಬಿ. ಎಸ್. ಗದ್ದಗಿಮಠ, 1963; ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸ್ವಾಮಿ ಮುಂತಾದವರು ತಮಿಳು ಭಾಷೆಗೆ ವೀರಶೈವ ವಾಙ್ಮಯವನ್ನು ಒದಗಿಸಿದ್ದಾರೆ. ಆಧುನಿಕ ಕಾಲದಲ್ಲಿ ರಾಮಲಿಂಗಸ್ವಾಮಿ, ನಾಗಪ್ಪ ಚೆಟ್ಟಿಯಾರ್, ಪಂಡಿತ ಕುಮಾರವೀರಯ್ಯರ್ ಮುಂತಾದವರು ವೀರಶೈವ ವಾಙ್ಮಯದ ಪ್ರಕಟನೆಯ ಕಾರ್ಯವಹಿಸಿದವರಾಗಿದ್ದಾರೆ.

ಮರಾಠಿ ಭಾಷೆಯಲ್ಲಿ ಮನ್ಮಥಸ್ವಾಮಿ, ಶಂಕರ ಸ್ವಾಮಿ, ವಾದಿಶೇಖರ ಮುಂತಾದವರು ವೀರಶೈವದ ಬಗೆಗೆ ಕೃತಿ ರಚಿಸಿದ್ದಾರೆ. ಲಿಂಗೈಕ್ಯ ವಾರದ ಮಲ್ಲಪ್ಪನವರು ಹಲವಾರು ವೀರಶೈವ ಕೃತಿಗಳನ್ನು ಮರಾಠಿಯಲ್ಲಿ ಪ್ರಕಟಿಸಿ ಯಶೋಭಾಗಿಗಳಾದರು. ಈಗ ತಾಯಿ ಜಯದೇವಿಬಾಯಿ ಲಿಗಾಡೆಯವರು ಆ ಕಾರ್ಯವನ್ನು ಮುಂದುವರಿಸುತ್ತಿದ್ದಾರೆ. ಇನ್ನು ಕೆಲವರು ಮರಾಠಿ ಭಾಷೆಯ ಪತ್ರಿಕೆಗಳನ್ನು ನಡೆಸುತ್ತಿದ್ದು ಅವುಗಳಲ್ಲಿ ವೀರಶೈವದ ಬಗೆಗೆ ಲೇಖನಗಳು ಪ್ರಕಟವಾಗುತ್ತಿವೆ.

ಸಂಸ್ಕೃತ ವಾಙ್ಮಯದಲ್ಲಿ ಶಿವಾಗಮಗಳು, ಸ್ಕಾಂದ ಮತ್ತು ಲಿಂಗಪುರಾಣಗಳು, ಸಿದ್ಧಾಂತ ಶಿಖಾಮಣಿ, ಲಿಂಗಧಾರಣ ಚಂದ್ರಿಕೆ, ವೀರಶೈವ ಸದಾಚಾರ ಸಂಗ್ರಹ, ವೀರಶೈವಾಚಾರ ಪ್ರದೀಪಿಕೆ ಮುಂತಾದವು ಪ್ರಮುಖ ಕೃತಿಗಳಾಗಿವೆ. ಅನೇಕ ಸ್ತೋತ್ರಗಳು ರಚಿತವಾಗಿವೆ. ನೀಲಕಂಠ ಶಿವಾಚಾರ್ಯ, ವೃಷಭಪಂಡಿತ, ಗುರುರಾಜ, ತ್ರಿಲೋಚನ ಪಂಡಿತ ಮತ್ತು ಉಭಯ ಭಾಷಾ ಕವಿಗಳಾದ ಕನ್ನಡಿಗರು ಕೃತಿ ರಚನೆ ಮಾಡಿದ್ದಾರೆ.

ವೀರಶೈವ ಕವಿಗಳ ಕಾವ್ಯಗಳು 19ನೆಯ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಾತ್ಯ ವಿದ್ವಾಂಸರ ಗಮನಕ್ಕೆ ಬಂದವು. ಅಂದಿನಿಂದ ಇಂದಿನವರೆಗೆ ವೀರಶೈವದ ಬಗೆಗೆ ಆಂಗ್ಲ ಭಾಷೆಯಲ್ಲಿ ಕೃತಿರಚನೆ ನಡೆದಿದೆ. ಅಭ್ಯಾಸಪೂರ್ಣ ಲೇಖನಗಳು ಬಂದಿವೆ. ಲಿಂಗಧಾರಣ ಚಂದ್ರಿಕೆಯನ್ನು ಕುರಿತು ಒಂದು ಬೃಹದ್ಗ್ರಂಥ, 'A Hand Book of Veerasaivism'[1] 'Lingayet movement'[2] ಎಂಬ ಕೃತಿಗಳು ಹಿಂದೆಯೇ ಬಂದವು. ಈಚೆಗೆ ಶೂನ್ಯ ಸಂಪಾದನೆಯಂತಹ ಉದ್ಗ್ರಂಥ 'ಶಿವಶರಣರ ಅನುಭಾವ ಸಾಹಿತ್ಯ'[3] ಎಂಬ ಮಹತ್ವದ ಕೃತಿ, ಬಸವಣ್ಣ, ಅಕ್ಕಮಹಾದೇವಿಯರ ಸಂಪೂರ್ಣ ವಚನಗಳು ಆಂಗ್ಲ ಭಾಷೆಗೆ ಅನುವಾದಿತವಾಗಿವೆ.

೪

ಸಾವಿರ ವರುಷಗಳಿಂದ ಬೆಳೆದುಬಂದ ಕನ್ನಡ ಸಾಹಿತ್ಯ ಗಾತ್ರದಲ್ಲಿ, ಪಾತ್ರದಲ್ಲಿ ಹಿರಿಮೆ ಪಡೆದಿದೆ. ಅದರಲ್ಲಿ ವೀರಶೈವ ಸಾಹಿತ್ಯದ ಪಾಲು ಬಹಳ ದೊಡ್ಡದಾಗಿದೆ. ಕವಿ ಚರಿತೆಗಾರರು ಕೊಟ್ಟ ಕವಿಗಳ ಸಂಖ್ಯೆಯಿಂದ, ನಂತರ ನಡೆದ ವಿಷಯ ಸಂಗ್ರಹದಿಂದ ಒಟ್ಟಿನ ಕನ್ನಡ ಕವಿಗಳಲ್ಲಿ ನೂರಕ್ಕೆ 45ರಷ್ಟು ವೀರಶೈವರಿದ್ದಾರೆ. ಉಳಿದೆಲ್ಲ ಮತಗಳ ಸಂಖ್ಯೆಗಿಂತ ವೀರಶೈವರ ಸಂಖ್ಯೆಯು ದೊಡ್ಡದಾಗಿದೆಯೆಂಬುದು ಗಮನಾರ್ಹವಾದುದು. ಕೇವಲ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ ಯೋಗ್ಯತೆಯ ದೃಷ್ಟಿಯಿಂದಲೂ ವೀರಶೈವ ಸಾಹಿತ್ಯವು ಹಿರಿಮೆಗೆ ಅರ್ಹ.

11ನೆಯ ಶತಮಾನದಿಂದ 19ನೆಯ ಶತಮಾನದ ಕೊನೆಯವರೆಗಿನ ಅವಧಿಯಲ್ಲಿ ವೀರಶೈವ ಕವಿಗಳ ಸಂಖ್ಯೆ ಸುಮಾರು 550 ಆಗುತ್ತಿದೆ. ಕೃತಿಗಳು ಒಂದು ಸಾವಿರ ಅಂಕಿಯನ್ನು ಮೀರುವಷ್ಟಿದೆ. ಈಯೆಲ್ಲರ, ಎಲ್ಲ ಕೃತಿಗಳೂ ಲಭ್ಯವಾಗಿಲ್ಲ. ಆದರೂ ವೃತ್ತಿಯಿಂದ ವರ್ತಕರಾದ ಸಾಹಿತ್ಯ ಪ್ರೇಮಿಗಳೊಬ್ಬರು ವೀರಶೈವ ಸಾಹಿತ್ಯದ ಬಗೆಗೆ ಸಾಧ್ಯವಿರುವಷ್ಟು ವಿಷಯವನ್ನು ಶ್ರದ್ಧೆಯಿಂದ ಪರಿಶ್ರಮದಿಂದ ಸಂಗ್ರಹಿಸಿ ಒಂದು ಗ್ರಂಥ* ಪ್ರಕಟಿಸಿರುವುದು ಶ್ಲಾಘನೀಯ.[4] ವಿದ್ವಾಂಸರು ಈ ಬಗೆಯ ಕಾರ್ಯವನ್ನು ಮುಂದುವರಿಸಬೇಕಾಗಿದೆ. ಅಧಿಕೃತವಾದ, ಪೂರ್ತಿಯಾದ ವೀರಶೈವ ಸಾಹಿತ್ಯ ಚರಿತ್ರೆಯೊಂದು ಸಿದ್ಧವಾಗಬೇಕಾದುದು ಅತಿ ಮಹತ್ವದ ಅವಶ್ಯಕತೆಯೆನಿಸಿದೆ. ಈ ದಿಸೆಯಲ್ಲಿ ಲಕ್ಷ್ಮೇಶ್ವರದ ಆರ್ಟ್ಸ್ ಕಾಲೇಜಿನ ಅಧಿಕಾರಿಗಳು ಮುಂದೆ ಬಂದು ಒಂದು ವ್ಯಾಪಕ ಯೋಜನೆಯನ್ನು ರೂಪಿಸಿಕೊಂಡದ್ದು ಸಂತೋಷದ ಸಂಗತಿಯಾಗಿದೆ. ಈ ಉಪಕ್ರಮವು ನಮ್ಮೆಲ್ಲರ ಬೆಂಬಲಕ್ಕೆ ಅರ್ಹವಾಗಿದೆ.

ಇಷ್ಟೊಂದು ವಿಶಾಲವಾದ ವೀರಶೈವ ಕನ್ನಡ ಸಾಹಿತ್ಯವನ್ನು ಕುರಿತು ಕೆಲವು ಅಂಶಗಳನ್ನು ಮಾತ್ರ ನಾನಿಲ್ಲಿ ಪ್ರಸ್ತಾಪಿಸುತ್ತೇನೆ.

ಕಲ್ಯಾಣ ಚಾಲುಕ್ಯ ಮನೆತನದ ಜಯಸಿಂಹನ ಕಾಲಕ್ಕೆ (11ನೆಯ ಶತಮಾನ) ದಾಸಿಮಯ್ಯನು ವಚನಗಳನ್ನು ರಚಿಸಿದ್ದು ವೀರಶೈವ ಸಾಹಿತ್ಯ ಗಂಗೆಯ ಚಿಕ್ಕ

---

1) ಡಾ॥ ಎಸ್. ಸಿ. ನಂದಿಮಠ, 1942; 2) ಡಾ॥ ಎಂ. ಎಸ್. ಹುಣಶ್ಯಾಳ, 19; 3) ಡಾ॥ ಎಚ್. ತಿಪ್ಪೆರುದ್ರಸ್ವಾಮಿ 63.
4) ಲಿಂಗವಂತರ ಅಮರ ಕೃತಿಗಳು ಮತ್ತು ಲಿಂಗವಂತ ಕವಿಗಳು —ಗುರುಸಿದ್ದಪ್ಪ, ಗದಗ, 1960.

ಮೂಲವಿದ್ದಂತೆ. ಕಲಚೂರ್ಯ ಬಿಜ್ಜಳನ ಕಾಲದಲ್ಲಿ (12ನೆಯ ಶತಮಾನ) ವಚನ ಸಾಹಿತ್ಯವು ಮಹಾಪೂರವಾಗಿ ಪ್ರವಹಿಸಿತು. ಅದು ಮಹಾಶಕ್ತಿಯಾಗಿ ಪರಿಣಮಿಸಿತು. ಅದರ ಕೇಂದ್ರ ಬಿಂದು ಬಸವಣ್ಣ.

ಕಲ್ಯಾಣ ಕ್ರಾಂತಿಯ ನಂತರ ಕಾಕತೀಯ ಮತ್ತು ಹೊಯ್ಸಳ ರಾಜ್ಯಗಳಲ್ಲಿ ವೀರಶೈವರ ಕಾವ್ಯರಚನೆ ನಡೆಯಿತು. ಆಗ ಕನ್ನಡ ಕಾವ್ಯಸೃಷ್ಟಿಗೆ ಹೊಸ ದಿಸೆಯೊದಗಿತು. ಹರಿಹರದೇವ ಯುಗಪ್ರವರ್ತಕ ಕವಿಯಾಗಿ ಪರಿಣಮಿಸಿದ. ಈ ಮಹಾಕವಿಯ ಮಾರ್ಗದಲ್ಲಿ ಸಾಗಿ ರಾಘವಾಂಕ, ಕೆರೆಯಪದ್ಮರಸರು (13ನೆಯ ಶತಮಾನ) ಭೀಮಕವಿ (14ನೆಯ ಶತಮಾನ) ಮುಂತಾದವರು ಕಾವ್ಯ ರಚಿಸಿದರು.

ವಿಜಯನಗರದ ಪ್ರೌಢದೇವರಾಯನ ಆಳಿಕೆಯಲ್ಲಿ (15ನೆಯ ಶತಮಾನದ ಪೂರ್ವಾರ್ಧ) ವೀರಶೈವ ಸಾಹಿತ್ಯಕ್ಕೆ ಹೊಸಸುಗ್ಗಿಯ ಸಂಭ್ರಮವು ಒದಗಿಬಂದಿತು. ಚಾಮರಸ, ಲಕ್ಕಣ್ಣದಂಡೇಶರ ಶ್ರೇಷ್ಠ ಕಾವ್ಯಗಳು ಆಗ ರಚಿತವಾದವು. ತೋಂಟದ ಸಿದ್ಧಲಿಂಗೇಶ್ವರರ ಪ್ರಭಾವದಿಂದಾಗಿ (15ನೆಯ ಶತಮಾನದ ಉತ್ತರಾರ್ಧ) ವೀರಶೈವ ಮಠಗಳ ಸಂಘಟನೆ ನಡೆಯಿತು. ನೂರೊಂದು ವಿರಕ್ತರು ಕಾರ್ಯಪ್ರವೃತ್ತರಾದರು. ವಚನ ಸಂಪಾದನೆಯ ಕಾರ್ಯಸಾಗಿತು. 'ಶೂನ್ಯ ಸಂಪಾದನೆ' 'ಲಿಂಗಲೀಲಾವಿಲಾಸ'ಗಳಂತಹ ಉದ್ಗ್ರಂಥ ಹೊರಹೊಮ್ಮಿಬಂಧವು.

ವಿಜಯನಗರದ ಶಕ್ತಿಯು ಕೊನೆಗೊಂಡಾಗ ನಾಡಿನಲ್ಲಿ ಅನಿಶ್ಚಿತ ಪರಿಸ್ಥಿತಿಯುಂಟಾಯಿತು. ಆದರೂ 16ನೆಯ ಶತಮಾನದಲ್ಲಿ ವೀರಶೈವ ಸಿದ್ಧಾಂತವನ್ನು ಕುರಿತ ಕೃತಿಗಳು ರೂಪುಗೊಂಡವು. ವಿರೂಪಾಕ್ಷಪಂಡಿತನ ಪಾಂಡಿತ್ಯಪೂರ್ಣ 'ಚೆನ್ನಬಸವ ಪುರಾಣ' ರಚಿತವಾಯಿತು. ಅಸ್ಯಾದೃಶ ಕವಿಗಳಾದ ನಿಜಗುಣ ಶಿವಯೋಗಿ ಸರ್ವಜ್ಞರನ್ನು ಈ ಅವಧಿಗೆ ಸೇರಿಸುವುದೂ ಉಂಟು.

17ನೆಯ ಶತಮಾನದಲ್ಲಿ ವೀರಶೈವ ಪುರಾಣಗಳು ಚರಿತ್ರೆ ಕಾವ್ಯಗಳು ರಚಿತವಾಗಿವೆ. ಮಹಾಕವಿ ಷಡಕ್ಷರದೇವನ ಉದ್ದಾಮ ಕೃತಿಗಳ ರಚನೆ ನಡೆಯಿತು. ಕೆಳದಿ, ಸ್ವಾದಿ ಈ ವೀರಶೈವ ಅರಸು ಮನೆತನಗಳ ಕಾಲದಲ್ಲಿ ವೀರಶೈವ ಸಾಹಿತ್ಯ ರಚನೆಗೆ ಅವಕಾಶವೊದಗಿತು. ಆ ಮನೆತನಗಳ ಇಬ್ಬರು ಅರಸರೂ ಕಾವ್ಯ ರಚಿಸಿದ್ದು ವಿಶೇಷ ಸಂಗತಿ.

ನಂತರ ಭಾರತದೇಶದ ಪ್ರಭುತ್ವಕ್ಕಾಗಿ ನಡೆದ ಹೋರಾಟಗಳಿಂದಾಗಿ ದೇಶದಲ್ಲಿ ಅಸ್ಥಿರ ಪರಿಸ್ಥಿತಿ ತಲೆದೋರಿತು. ಇದು ಭಾರತವು ಇಡಿಯಾಗಿ ಬ್ರಿಟಿಷರ ಪ್ರಭುತ್ವಕ್ಕೆ ಒಳಗಾಗುವವರೆಗೆ ಸಾಗಿತು. ಆಗಲೂ ವೀರಶೈವ ಸಾಹಿತ್ಯ ರಚನೆ ಕೆಲಮಟ್ಟಿಗೆ ನಡೆದಿದೆ. ವೀರಶೈವ ಕೈವಲ್ಯ ಪದಗಳ ಸಾಂಪ್ರದಾಯ 18–19ನೆಯ ಶತಮಾನಗಳಲ್ಲಿಯೂ ಮುಂದುವರಿದಿದೆ.

19ನೆಯ ಶತಮಾನದ ಪೂರ್ವಾರ್ಧದಲ್ಲಿ ಮೈಸೂರು ಅರಸರ ಆಶ್ರಯದಲ್ಲಿ ಹೊಸಗನ್ನಡ ಸಾಹಿತ್ಯ ರಚನೆಗೆ ಅನುಕೂಲತೆಯೊದಗಿಬಂದಿತು: ಈ ಶತಮಾನದ ಉತ್ತರಾರ್ಧದಲ್ಲಿ ವಿದ್ವಾನ್ ಬಸವಪ್ಪ ಶಾಸ್ತ್ರಿಗಳು ಹೊಸಗನ್ನಡ ಸಾಹಿತ್ಯಕ್ಕೆ ಬೆಲೆಬಾಳುವ ಕಾಣಿಕೆ ಸಲ್ಲಿಸುವಂತಾಯಿತು. ಆದರೆ ಉತ್ತರ ಕರ್ನಾಟಕ ಪ್ರದೇಶವು ಅನ್ಯಭಾಷೆಯ ಆಕ್ರಮಣಕ್ಕೆ ಒಳಗಾಗಿತ್ತು. ಧಾರವಾಡ ಭಾಗದಲ್ಲಿ ಕನ್ನಡಕ್ಕೆ ಕತ್ತಲೆ ಆವರಿಸಿದಂತಾಗಿತ್ತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು ಕನ್ನಡ ಜಾಗೃತಿಗಾಗಿ ಕೆಚ್ಚಿನ ಹೋರಾಟ ನಡೆಸಿದರು. ಅಂತೆಯೆ ಅವರು ಕನ್ನಡವನುದ್ಧರಿಸಿದ ಪುಣ್ಯಪುರುಷರು ಎಂಬ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರಿಂದಾಗಿಯೆ 1865ರ ನಂತರ ಧಾರವಾಡದಲ್ಲಿ ಕನ್ನಡ ಸಂಘಟನೆಯ ಕಾರ್ಯವು ಉತ್ಸಾಹದಿಂದ ಅರಂಭವಾಯಿತು. ಅದು 20ನೆಯ ಶತಮಾನದ ಕನ್ನಡ ನವೋದಯಕ್ಕೆ ಭದ್ರವಾದ ಅಸ್ತಿವಾರವಾಯಿತು. ಕರ್ನಾಟಕ ನವೋದಯದಲ್ಲಿ ವೀರಶೈವರಿಗೆ ಮಹತ್ವದ ಪಾಲೂ ಇದೆ.

12ನೆಯ ಶತಮಾನದಲ್ಲಿ ಕರ್ನಾಟಕದ ಪುನರುಜ್ಜೀವನವು ಶಿವಶರಣರಿಂದ ನಡೆಯಿತು. ದೇವಲೋಕದ ಗಂಗೆಯನ್ನು ಭೂಲೋಕಕ್ಕೆ ತಂದು ಭಗೀರಥನು ಲೋಕಪಾವನಗೈದ ಕಥೆಯು ಪುರಾಣ ಪ್ರಸಿದ್ಧವಿದೆ. ಅಂತಹದೇ ಕಾರ್ಯವನ್ನು ಶಿವಶರಣರು ಸಾಧಿಸಿದರೆಂದು ಹೇಳಬಹುದಾಗಿದೆ. ಪಂಡಿತ ಲೋಕದ ಆತ್ಮ–ಪರಮಾತ್ಮ ಜ್ಞಾನವನ್ನು ಶರಣರು ಸಾಮಾನ್ಯ ಜನತೆಗೆ ಮುಟ್ಟಿಸಿದರು. ಈ ಮೂಲಕ ಅವರು ಸಾಮಾನ್ಯ ಜನತೆಯನ್ನು ಉದ್ಧರಿಸಿದರು.

ವೀರಶೈವ ಕಾವ್ಯ ರಚನೆಯ ದೃಷ್ಟಿಯಿಂದ ಹರಿ

ಹರದೇವನು ಮೊದಲಿಗ. ಆತನ ಪೂರ್ವದಲ್ಲಿ ಜೈನಕವಿಗಳು ಕಾವ್ಯ ರಚಿಸಿದ್ದರು. ಅವರು ಪ್ರತಿಭಾಶಾಲಿಗಳೂ ಆಗಿದ್ದರು. ರಾಜಾಶ್ರಯದಲ್ಲಿ ಕಾವ್ಯ ರಚಿಸಿದ ಅವರು ತಮ್ಮ ಪ್ರಭುಗಳನ್ನು ಪೌರಾಣಿಕ ವ್ಯಕ್ತಿಗಳಿಗೆ ಹೋಲಿಸಿ ಹೊಗಳುವ ಸಾಂಪ್ರದಾಯವನ್ನು ರೂಢಿಗೆ ತಂದರು. ನಿಸ್ಪೃಹಿಯಾದ ಹರಿಹರ ದೇವನಿಗೆ ಇದು ಸರಿದೋರಲಿಲ್ಲ. ಅಂತೆಯೆ ಆತನು,

ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಟರ ಮೇಲೆ
ತನತನಗೆ+ಇಂದ್ರ+ಚಂದ್ರ....ಕರ್ಣ....ಎಂದು ತಾನ್ । ಅನವರತ ಪೊಗಳ್ದು, ಕೆಡಬೇಡ+ಎಲೆ ಮಾನವ

—ಎಂದು ದಿಟ್ಟತನದಿಂದ ಸಾರಿದ. ಮುಂದುವರಿದು ಹೇಳಿದ,

...ಮಾನವ, ನೀನ್ ಅಹರ್ನಿಶಂ
ನೆನೆ, ಪೊಗಳ್, ಅರ್ಚಿಸು ಕಡುಸೊಂಪಿನ ಪೆಂಪಿನ
ಹಂಪೆಯಾಳ್ದನಂ

'ಶಿವಕವೀಂದ್ರ'ನ ಈ ನಿಲುವೆಯನ್ನು ಅನುಸರಿಸಿ ಮಹಾಕವಿ ಷಡಕ್ಷರ ದೇವ "ಶಿವನಂ ತದೀಯ ಶರಣವ್ರಜಮಂ.... ನುತಿಪೆ ।
ನುತಿಸೆಂ, ಉಳಿದ ಸುರರಂ ನರರಂ" ಎಂದು ಘೋಷಿಸಿದ.

ಕಾವ್ಯದಲ್ಲಿ ದೇವದೇವೋತ್ತಮನನ್ನು, ಆತನ ಭಕ್ತರನ್ನು ಸ್ತುತಿಸಬೇಕು. ಇನ್ನುಳಿದ ಪೌರಾಣಿಕ ಸುರರನ್ನು ಸುತ್ತಿಸಬಾರದು. ಇದು ವೀರಶೈವ ಕವಿಗಳ ಧೀರ, ನಿಸ್ಪೃಹ ನಿಲುವೆ. ಈ ನಿಲುವೆಯಿಂದ ಜೈನ ಕವಿ ರತ್ನಾಕರ ವರ್ಣಿಯೂ ಪ್ರಭಾವಿತನಾದ. ಅಂತೆಯೆ ಆತನು 'ಹೊಲ್ಲದ ನೃಪರಿಗೆ ಸಲ್ಲದ ಗುಣಗಳನ್ನಿಟ್ಟು' ಹೊಗಳುವುದು ಉಚಿತವಲ್ಲವೆಂದು ಹೇಳಿದ.

ಹೊಲ್ಲದ ನೃಪನಿಗೆ ಮಾತ್ರವಲ್ಲ, ಆ ಬಗೆಯ ಅಧಿಕಾರಿ ಮಂತ್ರಿಗಳಿದ್ದರೆ ಅವರಿಗೆ ಸಲ್ಲದ ಗುಣಗಳನ್ನು ಆರೋಪಿಸಿ ಹೊಗಳುವುದು ವೀರಶೈವ ಸಂಸ್ಕೃತಿಗೆ ವಿರೋಧವಾದುದು.

ಕಾವ್ಯವನ್ನು ಕನ್ಯೆಗೆ, ಕವಿಯನ್ನು ಕನ್ಯಾಪಿತನಿಗೆ ಹೋಲಿಸುವುದುಂಟು. ಶಿವಕವಿಗಳೂ ಇದನ್ನು ಒಪ್ಪಿಕೊಂಡರು. ಆದರೆ ಕಾವ್ಯಕನ್ನಿಕೆಯ ವರನ ಬಗೆಗೆ "ಕಬ್ಬಮಂ, ಕೂಸುಮಂ ಈವುದು ಅರಿಕೇಸರಿಗೆ" ಎಂಬ ಆದಿಪಂಪನ ಸಾಂಪ್ರದಾಯವನ್ನು ಇವರು ಅಲ್ಲಗಳೆದರು. ಅಂತೆಯೆ ರಾಘವಾಂಕ ಕವಿಯು 'ಪೊಸ ಕಾವ್ಯ ಕನ್ನಿಕೆಯ ಪಡೆದು ಪಂಪಾಂಬಿಕೆಯ+ಅರಸ ವಿರೂಪಾಕ್ಷಂಗೆ ಕೊಟ್ಟು' ತಾನು ಕೃತಕೃತ್ಯನಾದೆನೆಂದು ಹೇಳಿದ್ದಾನೆ. ದೇವದೇವೋತ್ತಮನೇ ಕಾವ್ಯದ ನಾಯಕನಾಗಬೇಕೆಂಬುದು ಶಿವಕವಿಗಳ ನಿಲುವೆ.

ಶಿವಕವಿಗಳ ಕಾವ್ಯೋದ್ದೇಶ ಚಾಮರಸ ಕವಿಯ 'ಪ್ರಭುಲಿಂಗ ಲೀಲೆಯಲ್ಲಿ ಹೀಗೆ ಮೂಡಿ ಬಂದಿದೆ:

ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವರ ಸೀಮೆಯು ಹೊಲಬು ತಾನಲ್ಲ॥

ಹೊತ್ತುಹೋಗದೆ ಪುಂಡರ್ + ಅಲಿಪ
ಮತ್ತಮತಿಗಳ ಗೋಷ್ಠಿಯಲ್ಲ + ಇದು
ಸತ್ಯಶರಣರು ತಿಳಿವುದು + ಪ್ರಭುಲಿಂಗಲೀಲೆಯನು

ಶಿವವಿಗಳ ಕಾವ್ಯಗಳು ಸತ್ತವರ, ಸಾಯುವವರ ಕಥೆಯಲ್ಲ. ಹಾಗಿದ್ದರೆ ವೀರಶೈವರು ಸಾಯುವುದಿಲ್ಲವೆ ಜನನದ ಕುತ್ತದಲಿ ಕುದಿಕುದಿದು ಕರ್ಮದ ಕತ್ತಲೆಗೆ ಸಿಲುಕುವ'ವರು ಮಾತ್ರ ಸಾಯುತ್ತಾರೆ. ಅಂಗಗುಣವು ಅಳಿದು ಲಿಂಗಗುಣ ಅಳವಟ್ಟ ಶರಣರಿಗೆ ಸಾವು ಇಲ್ಲ. ವೀರಶೈವ ಸಾಂಪ್ರದಾಯದಲ್ಲಿ 'ಮರಣ' ಎಂಬ ಪದವನ್ನು ಬಳಸುವದೂ ಇಲ್ಲ. 'ಲಿಂಗೈಕ್ಯ' ಎಂದೇ ಹೇಳಲಾಗುತ್ತಿದೆ. ವೀರಶೈವರಲ್ಲಿ ಸಾವಿನ ಸೂತಕವಿಲ್ಲವೆಂಬ ಸಂಗತಿಯನ್ನು ನಾವು ಗಮನಿಸಬೇಕು. ದೇಹದ ಗುಣ ಇಲ್ಲದಂತಾಗಿ ದೇವನ ಗುಣಗಳನ್ನು ರೂಢಿಸಿಕೊಳ್ಳುವಂತೆ ಬಾಳು ಸಾಗಿಸುವ ಶರಣನಿಗೆ ಸಾವೆಂಬುದು ಇಲ್ಲ ಜನ್ಮಾಂತರದ ಕರ್ಮಗಳನ್ನು ನೀಗಿ ಇದೇ ಜನ್ಮ ಕಡೆಯೆಂಬ ದೃಢವಾದ ಶ್ರದ್ಧೆ ವೀರಶೈವರದು. ಅಂತೆಯೆ ಅವರು ಬಾಳಿನಲ್ಲಿ ಕುದಿಕುದಿದು ಸೋಲಬೇಕಾಗಿಲ್ಲ. ಕರ್ಮದ ಕತ್ತಲೆಗೆ ಸಿಲುಕಬೇಕಾಗಿಲ್ಲ. ಅವರು 'ಸತ್ಯಶರಣ'ರು, ಸಾಯುವ ಮಾನವರಲ್ಲ. ಅಂತಹವರನ್ನು ಕುರಿತು, ಅಂತಹವರಿಗಾಗಿ "ಪ್ರಭುಲಿಂಗ ಲೀಲೆ" ರಚಿತವಾಗಿದೆಯೆಂಬುದು ಚಾಮರಸನ ಅಭಿಪ್ರಾಯ.

ಚಾಮರಸ ಕವಿಯ ಪದ್ಯದಲ್ಲಿ 'ಹೊತ್ತು ಹೋಗದೆ ಪುಂಡರ್+ಅಲಿಪ ಮತ್ತಮತಿಗಳ ಗೋಷ್ಠಿ' ಎಂಬ ಇನ್ನೊಂದು ಮಾತಿದೆ. ಸಾಹಿತ್ಯದ ಉದ್ದೇಶವು ಕ್ಷಣಿಕವಾಗಿ ಉದ್ದೇಶವನ್ನುಂಟು ಮಾಡುವುದಲ್ಲ, ಎಂಬ ಸೂತ್ರವಿಲ್ಲಿದೆ. ಸಾಹಿತ್ಯ ರಂಗ 'ಮತ್ತಮತಿ'ಗಳ ಗೋಷ್ಠಿಯಾಗಬಾರದು. ಸಾಹಿತ್ಯ ಸಮ್ಮೇಳನದಲ್ಲಿ ಶಿವಾನುಭವಗೋಷ್ಠಿಯ ಪಾವನಪರಿಸರಬೇಕು. ಈ

ಕರ್ನಾಟಕದಲ್ಲಿ ಕಾಫಿ ಬೆಳೆ

ಕರ್ನಾಟಕ ರಾಜ್ಯವನ್ನು ಗಂಧದಗುಡಿ, ಚಿನ್ನದ ನಾಡು — ಎಂದೆಲ್ಲ ವರ್ಣಿಸುತ್ತಾರೆ. ಈ ರಾಜ್ಯವು ಕಾಫಿಯ ಬೀಡು ಆಗಿದೆ.

ನಮ್ಮ ದೇಶದಲ್ಲಿ ಸುಮಾರು ಒಂದೂವರೆ ಲಕ್ಷ ಹೆಕ್ಟೇರುಗಳಲ್ಲಿ ಕಾಫಿಯನ್ನು ಬೆಳೆಯಲಾಗುತ್ತಿದೆ. ಅದರಲ್ಲಿ ಕರ್ನಾಟಕದಲ್ಲಿಯೇ 85 ಸಾವಿರ ಹೆಕ್ಟೇರುಗಳಷ್ಟಿದೆ. ದೇಶದಲ್ಲಿರುವ 50 ಸಾವಿರ ಕಾಫಿ ಎಸ್ಟೇಟುಗಳ ಪೈಕಿ 20 ಸಾವಿರ ನಮ್ಮ ರಾಜ್ಯದಲ್ಲಿವೆ. 2.5 ಲಕ್ಷ ಕಾಫಿ ಎಸ್ಟೇಟು ಕಾರ್ಮಿಕರ ಪೈಕಿ ಈ ರಾಜ್ಯದಲ್ಲಿ 1.5 ಲಕ್ಷ ಇದ್ದಾರೆ. ಕಾಫಿಯು ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಹೆಮ್ಮೆಯ ಸ್ಥಾನವನ್ನು ಪಡೆದಿದೆ. ನಮ್ಮ ರಾಜ್ಯದಲ್ಲಿ ಅರೇಬಿಕ ಮತ್ತು ರೋಬಸ್ಟ ಕಾಫಿಗಳನ್ನು ಬೆಳೆಯುತ್ತಾರೆ. 1972-73 ನೇ ಸಾಲಿನಲ್ಲಿ ದೇಶದಲ್ಲಿ ಉತ್ಪತ್ತಿಯಾದ 90 ಸಾವಿರ ಟನ್ ಕಾಫಿಯಲ್ಲಿ 72 ಸಾವಿರಕ್ಕೂ ಹೆಚ್ಚು ನಮ್ಮ ರಾಜ್ಯದಲ್ಲಿ ಬೆಳೆದುದಾಗಿದೆ.

31 ಕಾಫಿ ಕ್ಯೂರಿಂಗ್ ಸಂಸ್ಥೆಗಳ ಪೈಕಿ 16 ನಮ್ಮ ರಾಜ್ಯದಲ್ಲಿವೆ. ಈ ಸಂಸ್ಥೆಗಳು ಕಾಫಿ ಬೋರ್ಡ್‌ನ ಏಜೆಂಟರಂತೆ ಕಾರ್ಯವನ್ನು ನಿರ್ವಹಿಸಿ, ಸಂಸ್ಕರಿಸಿದ ಕಾಫಿಯನ್ನು ದಾಸ್ತಾನು ಇಟ್ಟಿರುತ್ತಾರೆ. ಮಂಗಳೂರಿನಲ್ಲಿರುವ ಐದು ಜನ ಏಜೆಂಟರು ದೇಶದಲ್ಲಿ ಉತ್ಪತ್ತಿಯಾಗುವ ಶೇಕಡ 40 ರಷ್ಟು ಕಾಫಿಯನ್ನು ಸಂಸ್ಕರಣಗೊಳಿಸುತ್ತಾರೆ.

ಭಾರತದ ಕಾಫಿಯು ತನ್ನ ಶ್ರೇಷ್ಠತೆಗಾಗಿ ವಿಶ್ವದಾದ್ಯಂತ ಹೆಸರನ್ನು ಪಡೆದಿದೆ. ದೇಶದಲ್ಲಿ ಕಾಫಿಯ ಬಳಕೆಯು ಒಂದೇ ಸಮನೆ ಹೆಚ್ಚುತ್ತಿದೆ. 1972-73 ರಲ್ಲಿ ಕಾಫಿಯ ರಫ್ತಿನಿಂದಾಗಿ 33 ಕೋಟಿ ರೂಪಾಯಿ ಸಂಪಾದನೆಯಾಗಿತ್ತು.

ಕಾಫಿ ಬೋರ್ಡ್ ದೇಶದಲ್ಲಿ ಕಾಫಿ ಉದ್ಯಮದ ಬೆಳವಣಿಗೆಯ ಬೆನ್ನೆಲುಬು ಆಗಿದೆ. ಬಾಳೆಹೊನ್ನೂರಿನಲ್ಲಿರುವ ಅದರ ಸಂಶೋಧನಾ ಕೇಂದ್ರವು ರೋಗ ನಿರೋಧಕವಾದ ಉತ್ತಮ ತಳಿಗಳನ್ನು ಕಂಡುಹಿಡಿದಿದೆ. ಇದರಿಂದ ಇಳುವರಿ ಹೆಚ್ಚಿದೆ. ಇದರ ವಿಸ್ತರಣಾ ವಿಭಾಗವು ಸಂಶೋಧನೆಯ ಫಲವನ್ನು ಪ್ಲಾಂಟರುಗಳಿಗೆ ತಿಳಿಸುತ್ತದೆ. ಅಭಿವೃದ್ಧಿ ಶಾಖೆಯು ನಾನಾ ರೀತಿಯ ಸಾಲಗಳನ್ನು ಒದಗಿಸುತ್ತದೆ. ಕಾಫಿ ಬೋರ್ಡ್ ಸಣ್ಣ ಪುಟ್ಟ ಪ್ಲಾಂಟರುಗಳ ಅಗತ್ಯದ ಕಡೆ ವಿಶೇಷವಾದ ಗಮನವನ್ನು ಕೊಡುತ್ತಿದೆ. ಏತಕ್ಕೆಂದರೆ ದೇಶದಲ್ಲಿರುವ 52 ಸಾವಿರ ಪ್ಲಾಂಟರುಗಳಲ್ಲಿ 50 ಸಾವಿರ ಸಣ್ಣ ಪ್ರಮಾಣದವರಾಗಿದ್ದಾರೆ. ಬೋರ್ಡ್‌ನ ಮಾರುಕಟ್ಟೆ ವಿಭಾಗವು ಸೂಕ್ತವಾದ ನೀತಿಯಿಂದ ಎಲ್ಲ ವಲಯಗಳಿಗೂ ಕಾಫಿಯು ನಿಯಂತ್ರಿತವಾಗಿ ದೊರೆಯುವಂತೆ ನೋಡಿಕೊಳ್ಳುತ್ತದೆ. ಪ್ರಚಾರ ವಿಭಾಗವು ದೇಶ ವಿದೇಶಗಳಲ್ಲಿ ಕಾಫಿಯ ಬೇಡಿಕೆಯನ್ನು ಬೆಳೆಸುತ್ತದೆ.

ಸಮ್ಮೇಳನದಲ್ಲಿ ಹಾಗಿದೆಯೆಂದು ನಾನು ಭಾವಿಸುತ್ತೇನೆ.

'ರಸಿಕತನ ಸುಳಿಸುಖಂ' ಎಂದು ರಾಘವಾಂಕ ಹೇಳಿದ್ದು ಶುದ್ಧ ಕಾವ್ಯದ ಗುರಿಯಾದ ರಸಾನಂದವನ್ನು 'ಸತ್ಯಶರಣ, ಎಂಬುದಾಗಿ ಚಾಮರಸ ಹೇಳಿದ್ದು ಶಿವಾನುಭವದ ನಿಲುಮೆಯನ್ನು. ಹೀಗೆ ಈಯೆರಡು ಬಗೆಯ ಗುರಿಗಳನ್ನೂ ಶಿವಕವಿಗಳು ತಮ್ಮ ಕಾವ್ಯರಚನೆಯಲ್ಲಿ ಮೇಳವಿಸಿದರು.

ಕಾವ್ಯೋದ್ದೇಶವನ್ನು ಕುರಿತು ಶಿವಕವಿಗಳು ನವೀನ ದೃಷ್ಟಿಯನ್ನು ತೋರಿದಂತೆ ಅದು ಅವರ ಕಾವ್ಯವಸ್ತು, ಕಾವ್ಯಪ್ರಕಾರ (Form) ಭಾಷೆಯ ಬಳಕೆಗಳಲ್ಲಿಯೂ ಕಂಡು ಬರುತ್ತಿದೆ.

ಶಿವಶರಣರ ಪೂರ್ವದಲ್ಲಿ ಸಂಸ್ಕೃತ, ಪ್ರಾಕೃತ ಪುರಾಣಗಳ, ರಾಮಾಯಣ ಮಹಾಭಾರತಗಳ ವಸ್ತುವನ್ನು ಕನ್ನಡ ಕಾವ್ಯ ರಚನೆಗಾಗಿ ಬಳಸುವ ಸಾಂಪ್ರದಾಯವಿತ್ತು. ಶಿವಪಾರಮ್ಯವನ್ನು ಒಪ್ಪಿದ ವೀರಶೈವ ಕವಿಗಳು ಶಿವಪುರಾಣ, ದ ್ಷಣದ ಶೈವಕೃತಿ ಅರುವತ್ತು ಮೂರು ಪುರಾತನರ ಕಥೆಗಳನ್ನು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡರು. ಶರಣಧರ್ಮ ಅಚ್ಚ ಕನ್ನಡನಾಡಿನದು. ಇಲ್ಲಿ ಅನೇಕ ನೂತನ ಶರಣರ ಸ್ಫೂರ್ತಿದಾಯಕ ಚರಿತ್ರೆ, ಅವರ ಶಿವಾನುಭವ, ವೀರಶೈವ ಕವಿಗಳ ಜೀವನ ಸಾಧನೆಗಳು ವೀರಶೈವ ಸಾಹಿತ್ಯಕ್ಕೆ ಪ್ರಮುಖವಾದ ವಸ್ತುವಾಗಿ ಪರಿಣಮಿಸಿತು. 'ಬಸವಪುರಾಣ', 'ಪ್ರಭುಲಿಂಗಲೀಲೆ', ಅಕ್ಕಮಹಾದೇವಿಯನ್ನು ಕುರಿತ ಕಾವ್ಯ 'ಚೆನ್ನಬಸವ ಪುರಾಣ'– ಇಂತಹ ಕೃತಿಗಳಿಗಾಗಿ 'ಪೆರರ ಒಡವೆಯಂ ಕೊಳ್ಳ' ಬೇಕಾಗಿರಲಿಲ್ಲ. ಅಂತೆಯೆ 'ಪೆರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ' ವೀರಶೈವ ಕವಿಗಳದಾಯಿತು. ಇನ್ನು ವಚನ ಸಾಹಿತ್ಯಕ್ಕಂತೂ ಶಿವಶರಣರ ಸ್ವಾನುಭಾವವೇ ಮೂಲದ್ರವ್ಯ. ಕನ್ನಡ ಸಾಹಿತ್ಯದ ಹಿರಿಮೆಗೆ ಕುರುಹು ಆಗಿರುವ ಷಟ್ಸ್ಥಲವಚನಗಳು 'ಶೂನ್ಯ ಸಂಪಾದನೆ', ಶರಣಧರ್ಮ ನಿರೂಪಣೆಯ ಇತರ ಕೃತಿಗಳ ವಸ್ತು ಹೊಚ್ಚ ಹೊಸತೇ ಆಗಿದೆ.

ಇನ್ನು ವೀರಶೈವ ಸಾಹಿತ್ಯದ ಪ್ರಕಾರಗಳನ್ನು ಗಮನಿಸಬೇಕು. ಶಿವಕವಿಗಳು ಸಮರ್ಥ ರೀತಿಯಲ್ಲಿ ಚಂಪೂ ಕಾವ್ಯ, ಶತಕಗಳನ್ನು ರಚಿಸಿದ್ದಾರೆ. ಮಹಾಕವಿ ಷಡಕ್ಷರದೇವ ಚಂಪೂ ಕಾವ್ಯ ರಚನೆಯಲ್ಲಿ ವಿಕ್ರಮ ಸ್ಥಾಪಿಸಿದ್ದಾನೆ. ಆದರೆ ಕ್ಲಿಷ್ಟಶೈಲಿಯ ಚಂಪೂ ಕೃತಿಗಳಿಗೆ ಪ್ರತಿಯಾಗಿ ಸರಳವಾದ ಹೊಸ ಪ್ರಕಾರಗಳನ್ನು ಒದಗಿಸಿದ್ದು ವೀರಶೈವ ಸಾಹಿತ್ಯದ ವೈಶಿಷ್ಟ್ಯ. ಧರ್ಮವನ್ನು, ಜನಮುಖಗೊಳಿಸುವುದು ಅವರ ಉದ್ದೇಶವಾಗಿತ್ತು.

ವಚನ ಸಾಹಿತ್ಯವು ಶಿವಶರಣರ ಅನ್ಯಾದೃಶ ರಚನೆ. ಅದು ಜಗತ್ತಿನ ಅನುಭಾವ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆ. ರಗಳೆ, ಷಟ್ಪದಿ, ತ್ರಿಪದಿಗಳನ್ನು ವೀರಶೈವರು ವಿಪುಲವಾಗಿ ರಚಿಸಿದ್ದಾರೆ. ಇವುಗಳಿಗೆ ವಚನ ಸಾಹಿತ್ಯವು ಪ್ರೇರಕವೂ ಆಗಿದೆ. ಹಂಪೆಯ ಹರಿಹರದೇವ ರಗಳೆಗಳ ಮೂಲಕ ಜನತೆಯಲ್ಲಿ ಅದ್ಭುತ ಜಾಗೃತಿಯನ್ನುಂಟುಮಾಡಿ ರಗಳೆಯ ಪ್ರಕಾರಕ್ಕೆ ಹಿರಿಮೆಯನ್ನು ತಂದುಕೊಟ್ಟ. ರಗಳೆ ರಚಿಸಿಯೂ ಆತನು ಮಹಾಕವಿಯಾದ. ರಾಘವಾಂಕ ಷಟ್ಪದೀ ಸಾಂಪ್ರದಾಯ ಸ್ಥಾಪಕ. ವೀರಶೈವ ಕವಿಗಳಿಂದಾಗಿ ಷಟ್ಪದಿಯು ಹದಗೊಂಡು ಬೆಳೆದು ಕನ್ನಡ ಕಾವ್ಯಪ್ರಪಂಚದ ಶ್ರೇಷ್ಠ ಕೃತಿಗಳಾದ ಭೀಮಕವಿಯ 'ಬಸವ ಪುರಾಣ' ಚಾಮರಸನ 'ಪ್ರಭುಲಿಂಗಲೀಲೆ', ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ', ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ'ಗಳು. ಷಟ್ಪದೀ ಕಾವ್ಯಕ್ಕೆ ವಿರೂಪಾಕ್ಷ ಪಂಡಿತನು ಪಾಂಡಿತ್ಯದ ಮೆರುಗನ್ನು ಒದಗಿಸಿದ್ದಾನೆ.

ಪ್ರಾಚೀನ ಕನ್ನಡ ಚಂಪೂ ಕೃತಿಗಳಲ್ಲಿ ತುಂಡು ತುಂಡಾಗಿ ಬಂದ ಗದ್ಯವು ಚಂಪೂರಾಣಿಯ ಊಳಿಗದ ದಾಸಿಯ ಕಾರ್ಯ ಕೈಕೊಂಡಂತಿತ್ತು. ಅದಕ್ಕೆ ಪ್ರತಿಯಾಗಿ ಗದ್ಯಕ್ಕೆ ಪ್ರಾಧಾನ್ಯ ಕಲ್ಪಿಸಿದವರು ವೀರಶೈವರು. ನಿರರ್ಗಳ ಭಾವದ ನಿರೂಪಣೆಗೆ, ವಿಚಾರದ ಸ್ಪಷ್ಟತೆಗೆ ಸಾಧ್ಯವಾಗುವ ಸರಳ, ಸುಂದರ, ಕೆಚ್ಚಿನ ಕನ್ನಡ ಗದ್ಯ ರೂಪಗೊಂಡದ್ದು ವೀರಶೈವ ಕವಿಗಳಿಂದ. ಹರಿಹರದೇವ ತನ್ನ ರಗಳೆಗಳಲ್ಲಿ ಕನ್ನಡ ಗದ್ಯದ ಸೊಬಗನ್ನು ತೋರ್ಪಡಿಸಿದ್ದಾನೆ. ವಚನ ಸಾಹಿತ್ಯವು ಲಯಬದ್ಧ ಗದ್ಯವಾಗಿದ್ದು ಅದು ಹೃದಯಂಗಮವೂ ಪ್ರಭಾವಪೂರ್ಣವೂ ಆಗಿದೆ.

ಆತ್ಮಜ್ಞಾನ, ಧರ್ಮ, ಶಾಸ್ತ್ರಜ್ಞಾನಗಳಂತಹ ಗಹನ, ಅಮೂರ್ತ (Obstract) ವಿಷಯಗಳನ್ನು ನಿರೂಪಿಸಲು ಸಂಸ್ಕೃತವೇ ತಕ್ಕ ಭಾಷೆಯೆಂಬ ಭಾವನೆ ನಮ್ಮ ದೇಶದಲ್ಲಿ ಬೆಳೆದುಬಂದಿತ್ತು. ಆದರೆ ಕನ್ನಡ ಭಾಷೆಯನ್ನು ಈ ದಿಸೆಯಲ್ಲಿ ಬಳಸಲು ಶಿವಶರಣರು

ಮುಂದೆ ಬಂದರು. ಈ ಕಾರ್ಯದಲ್ಲಿ ಯಶಸ್ವಿಯೂ ಆದರು. ಜಟಿಲ ಸಂಸ್ಕೃತ ಪದಗಳಿಗೆ ಪ್ರತಿಯಾಗಿ ಸುಲಲಿತ ಕನ್ನಡ ಪದಗಳನ್ನು ಮುಂದೆ ತಂದರು. ಜನಪದದ ಆಡುನುಡಿ ಬಳಸಿದರು. ಧರ್ಮದಂತೆ ಸಾಹಿತ್ಯವೂ ಜನಮುಖವಾಗುವ ದೃಷ್ಟಿ ಅವರದಾಗಿತ್ತು. ಶಿವಶರಣರು ಕನ್ನಡ ಭಾಷೆಯ ಮೂಲಕ ಅಂದು ಸಾಂಸ್ಕೃತಿಕ ಕ್ರಾಂತಿಯನ್ನು ಸಾಧಿಸಿದರು. ಸಂಸ್ಕೃತವನ್ನು ಆಗ ದೇವವಾಣಿಯೆಂದು ಭಾವಿಸಲಾಗಿತ್ತಾದರೂ ಅದು ಜನವಾಣಿಯಾಗಿರಲಿಲ್ಲ. ಆದುದರಿಂದ ಶಿವಶರಣರು ಜನವಾಣಿಯಾದ ಕನ್ನಡವನ್ನೇ ದೇವವಾಣಿಯ ಪಟ್ಟಕ್ಕೆ ಎತ್ತರಿಸಿದರು.

ಬಸವಣ್ಣನ ಪ್ರಾಂಜಲ ಆತ್ಮನಿವೇದನೆ, ಅಕ್ಕಮಹಾದೇವಿಯ ಕಾವ್ಯ ಮಮತೆ, ಚೆನ್ನಬಸವಣ್ಣನ ಜ್ಞಾನ ವಿನಿಮಯ, ಪ್ರಭುದೇವನ ತೇಜಃಪುಂಜ ನುಡಿಗಡಣ– ಇವುಗಳಿಂದ ಕನ್ನಡ ಸಾಹಿತ್ಯ ಭಾಷೆಗಳು ಕಳೆಗಟ್ಟಿವೆ. ಶೂನ್ಯ ಸಂಪಾದನೆಯಲ್ಲಿಯ ಅನುಭಾವಸಂಪತ್ತು, ಸಂವಾದದ ಶೋಭೆ, ವಿಚಾರವಾದ, ಸಿದ್ಧಾಂತ–ನಿರೂಪಣೆಗಳು ಅದ್ವಿತೀಯ. ಈ ಕೃತಿಗಳಲ್ಲಿಯ ಸಮಾಜ ವಿಮರ್ಶೆ ನೇರವೂ, ನೂತನವೂ ಆಗಿದೆ.

ವೀರಶೈವರ ಕೈವಲ್ಯಪದಗಳಲ್ಲಿ ಅನುಭಾವ ಸಂಪತ್ತು, ನೈತಿಕ ಮೌಲ್ಯ, ಕನ್ನಡ ಭಾಷೆಯ ಸೊಬಗುಗಳಿವೆ. ಧಾರ್ಮಿಕ, ನೈತಿಕ ವಿಶ್ವಕೋಶದಂತಿರುವ ನಿಜಗುಣ ಶಿವಯೋಗಿಯ ಕೃತಿಗಳಲ್ಲಿ ಕನ್ನಡವು ಜ್ಞಾನ ದೇವತೆಗೆ ಸಮರ್ಪಕವಾಗಿದೆ. ಬಿಚ್ಚು ನುಡಿಯ ಬಂಟ ಸರ್ವಜ್ಞನ ತ್ರಿಪದಿಗಳಲ್ಲಿ ಕನ್ನಡ ಭಾಷೆಯ ಅಸಾಧಾರಣ ಸತ್ತ್ವ ಹೊರಹೊಮ್ಮಿ ಬಂದಿದೆ.

ವೀರಶೈವದ ತಿರುಳನ್ನು ಚಿತ್ರರಿಸಿದಬಗೆ, ಕಲ್ಪಕತೆ, ವರ್ಣನೆ, ಸಂಭಾಷಣೆ, ಪಾತ್ರದರ್ಶನ, ಸುಲಲಿತ ಕನ್ನಡ ಪದಪ್ರಯೋಗಗಳ ದೃಷ್ಟಿಯಿಂದ 'ಪ್ರಭುಲಿಂಗ ಲೀಲೆ'ಯು ಉನ್ನತಮಟ್ಟದ ಕಾವ್ಯ. ಅದು ಬೇರೆ ಕೆಲವು ಭಾಷೆಗಳಲ್ಲಿ ಅನುವಾದ ಪಡೆದುದು ಸಹಜವಾಗಿದೆ.

ಶರಣರ ವಚನಗಳು, ಕೈವಲ್ಯಪದಗಳು, ಸರ್ವಜ್ಞನ ತ್ರಿಪದಿಗಳು ಸದಾ ಕನ್ನಡ ಜನತೆಯ ನಾಲಿಗೆಯ ಮೇಲೆ ನಲಿಯುವ ಸಫಲತೆ ಪಡೆದಿವೆ.

೫

ಪ್ರಾಚೀನ ವೀರಶೈವ ಸಾಹಿತ್ಯದ ಹಿರಿಮೆಯತ್ತ ಆಧುನಿಕರ ಗಮನ ಹರಿದು ಅದರ ವ್ಯಾಸಂಗವು ಸಾಗಿದ ಬಗೆಯನ್ನು ಅರಿತುಕೊಳ್ಳುವುದು ಈಗ ಕ್ರಮಪ್ರಾಪ್ತವಾಗುತ್ತಿದೆ. 1865ರ ನಂತರ ಡೆಪ್ಯೂಟಿ ಚೆನ್ನಬಸಪ್ಪನವರ ಪ್ರಯತ್ನಗಳಿಂದಾಗಿ ಕನ್ನಡ ಸಂಘಟನೆಯ ಕಾರ್ಯವು ಆರಂಭವಾಯಿತೆಂಬುದನ್ನು ಈ ಮೊದಲೇ ಸೂಚಿಸಲಾಗಿದೆ. ಆ ಪ್ರಯತ್ನಗಳ ಫಲವೋ ಎಂಬಂತೆ 1866ರ ಸುಮಾರಿಗೆ ರಾಯಲ್ ಏಸಿಯಾಟಿಕ್ ಸೊಸಾಯಟಿಯ ಮುಂಬಯಿ ಶಾಖೆಯ ವಿದ್ವತ್ ಪತ್ರಿಕೆಯಲ್ಲಿ ಬಸವ ಪುರಾಣ, ಚೆನ್ನಬಸವಪುರಾಣಗಳ ಸಾರಸಂಗ್ರಹ ಆಂಗ್ಲಭಾಷೆಯಲ್ಲಿ ಪ್ರಕಟವಾದವು. ವಿದೇಶೀಯ ವಿದ್ವಾಂಸರಾದ ರಾಯಿಸ್, ಫ್ಲೀಟ್, ವರ್ಥ್, ಬ್ರೌನ್ ಇವರು ವೀರಶೈವ ಸಾಹಿತ್ಯದ ಹಿರಿಮೆಯನ್ನು ತೋರಿಸಿಕೊಡುವ ಕಾರ್ಯವನ್ನು ಅಂದು ಕೈಕೊಂಡಿದ್ದರು.

ಆರ್. ನರಸಿಂಹಾಚಾರ್ಯರ ಕರ್ಣಾಟಕ ಕವಿಚರಿತೆಯ ಪ್ರಥಮಭಾಗವು ಇಪ್ಪತ್ತನೆಯ ಶತಮಾನದ ಪ್ರಥಮ ದಶಕದಲ್ಲಿ ಪ್ರಕಟವಾಯಿತು. ಅದರಿಂದಾಗಿ ವೀರಶೈವ ಸಾಹಿತ್ಯದ ವ್ಯಾಪ್ತಿಯು ಅನೇಕರ ಗಮನಕ್ಕೆ ಬಂದಿತು. ದ್ವಿತೀಯ ದಶಕದಲ್ಲಿ ಮೈಸೂರಿನ ವಿದ್ವಾಂಸರಾದ ಎನ್. ಆರ್. ಮತ್ತು ಪಿ. ಆರ್. ಕರಿಬಸವ ಶಾಸ್ತ್ರಿದ್ವಯರು ವೀರಶೈವ ಕೃತಿಗಳ ಪರಿಷ್ಕರಣಕಾರ್ಯ ಕೈಕೊಂಡರು. ಆ ಮೂಲಕ ಅವುಗಳ ವ್ಯಾಸಂಗಕ್ಕೆ ಅನುಕೂಲವಾಯಿತು. ಮೂರನೆಯ ದಶಕದಲ್ಲಿ ವಚನ ಶಾಸ್ತ್ರ ಪಿತಾಮಹ ಡಾ|| ಹಳಕಟ್ಟಿಯವರು ವೀರಶೈವ ಸಾಹಿತ್ಯದ ಸಂಗ್ರಹ, ಪ್ರಕಟನೆ, ಸಂಶೋಧನೆಗಳ ಕಾರ್ಯಕ್ಕೆ ತಮ್ಮ ಬಾಳನ್ನು ಮುಡಿಪಾಗಿಡಲು ನಿರ್ಧರಿಸಿದರು.

ವೀರಶೈವ ಕೃತಿಗಳ ಸಾರಸಂಗ್ರಹ ಆಂಗ್ಲಭಾಷೆಯಲ್ಲಿ ಪ್ರಕಟವಾದ ಅರುವತ್ತು ವರುಷಗಳ ನಂತರ ಅಂದರೆ 1926ರಲ್ಲಿ ಡಾ|| ಹಳಕಟ್ಟಿಯವರ "ಶಿವಾನುಭವ" ಪತ್ರಿಕೆಯು ಆರಂಭವಾಯಿತು. ಆ ಪತ್ರಿಕೆಯ ಮೂಲಕ ವೀರಶೈವ ಸಾಹಿತ್ಯದ ವಿಸ್ತೃತ ಸಾಮಗ್ರಿಯು ವ್ಯಾಸಂಗಿಗಳ ಸಂಶೋಧಕರ ಕಣ್ಣಿಗೆ ಬೀಳುವಂತಾಯಿತು.

ಶಿವಾನುಭವ ಪತ್ರಿಕೆಯಲ್ಲದೆ ಪದ್ಮಶ್ರೀ ಶಿವಮೂರ್ತಿಶಾಸ್ತ್ರಿಗಳ "ಶರಣ ಸಾಹಿತ್ಯ" [1934], ಪ್ರೊ. ಬಸವನಾಳರ ಸಂಪಾದಕತ್ವದ "ಸಾಹಿತ್ಯ ಸಮಿತಿಪತ್ರಿಕೆ" [1941], ಚೆನ್ನಮಲ್ಲಪ್ಪ ಮಾಸ್ತರರ 'ಸದ್ಧರ್ಮ ದೀಪಿಕೆ' [1946], ಶಿವಯೋಗಮಂದಿರದ "ಸುಕುಮಾರ" ಇತ್ಯಾದಿ ಪತ್ರಿಕೆಗಳು ವೀರಶೈವ ಸಾಹಿತ್ಯದ ವ್ಯಾಸಂಗವನ್ನು ಪ್ರಚುರಗೊಳಿಸುವ ಕಾರ್ಯದಲ್ಲಿ ಸಫಲತೆ ಪಡೆದಿದೆ. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ "ಸಾಹಿತ್ಯ ಸಮಿತಿ ಪತ್ರಿಕೆ"ಯು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಅದು ಹಲವಾರು ವಿದ್ವಾಂಸರ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸಿತು. ಮಾಜಿ ಮಂತ್ರಿ ಎಂ. ಪಿ. ಪಾಟೀಲರ ನೇತೃತ್ವದಲ್ಲಿ "ವೀರಶೈವ" ಪತ್ರಿಕೆಯ ಮರಾಠಿ ಭಾಷೆಯಲ್ಲಿ ಕೆಲಕಾಲ ನಡೆಯಿತು. ಅದರಂತೆ ವೀರಶೈವ ಮಹಾಸಭೆಯ ಪರವಾಗಿ ಡಾ|| ಪಾವಟೆಯವರ ನೇತೃತ್ವದಲ್ಲಿ "ವೀರಶೈವ" ತ್ರೈಮಾಸಿಕವು ಕನ್ನಡದಲ್ಲಿ ಕೆಲಕಾಲ ಬಂದಿತು. ಆಂಧ್ರ ಪ್ರದೇಶವಾದ ಶ್ರೀಶೈಲದಿಂದಲೂ ವೀರಶೈವರ ಒಂದು ಕನ್ನಡ ಪತ್ರಿಕೆ ಪ್ರಕಟವಾಗುತ್ತಿದೆ. ಈ ಬಗೆಯ ಪತ್ರಿಕೆಗಳ ಮೂಲಕ ವೀರಶೈವ ಧರ್ಮ, ಸಾಹಿತ್ಯಗಳ ವ್ಯಾಸಂಗಕ್ಕೆ ಚಾಲನೆಯೊದಗಿಬಂದಿದೆ.

ಡಾ|| ಹಳಕಟ್ಟಿಯವರ ನಿಸ್ಸೀಮ ನಿಷ್ಠೆ ಅನುಪಮ ಪರಿಶ್ರಮಗಳಿಂದಾಗಿ ಹಲವಾರು ವಿದ್ವಾಂಸರು ವೀರಶೈವ ಸಾಹಿತ್ಯದ ಬಗೆಗೆ ವಿಮರ್ಶಾತ್ಮಕ ವ್ಯಾಸಂಗ ಕೈಕೊಳ್ಳಲು ಪ್ರೇರಣೆ ಪಡೆಯುವಂತಾಯಿತು. ಇಂತಹ ಕಾರ್ಯಕ್ಕೆ ಪ್ರೊ|| ಬಸವನಾಳರು ತಮ್ಮ ಬಹುಶ್ರುತತ್ವದ ಖಚಿತ ವಿಮರ್ಶೆಯ ಬೆಂಬಲವನ್ನು ಒದಗಿಸಿದರು. ಡಾ|| ನಂದಿಮಠರ ಸಂಸ್ಕೃತ ಕೃತಿಗಳ ಮತ್ತು ಶಾಸನಗಳ ವ್ಯಾಸಂಗವು ಉಪಯುಕ್ತವಾಗಿ ಪರಿಣಮಿಸಿತು.

ಡಾ|| ಹಳಕಟ್ಟಿಯರಂತೆ ಚೆನ್ನಮಲ್ಲಪ್ಪ ಮಾಸ್ತರ, ಮಧುರಚೆನ್ನ, ಹರ್ಡೆಕರ ಮಂಜಪ್ಪ ಮುಂತಾದವರ ವೀರಶೈವ ಧರ್ಮ ಸಾಹಿತ್ಯಗಳ ಸಂಶೋಧನೆಯಲ್ಲಿ ವೀರಶೈವೇತರ ವಿದ್ವಾಂಸರಾದ ಪ್ರೊ|| ಟಿ. ಎಸ್. ವೆಂಕಣಯ್ಯ, ಬಿ. ಎಂ. ಶ್ರೀಕಂಠಯ್ಯ, ಎಂ. ಆರ್. ಶ್ರೀನಿವಾಸಮೂರ್ತಿ, ಉತ್ತಂಗಿ ಚನ್ನಪ್ಪ ಅವರು ಮಾಡಿದ ಕಾರ್ಯವೂ ಮಹತ್ವದ್ದಾಗಿದೆ. ಶಿಕ್ಷಣ ಸಾಹಿತ್ಯೇತರ ವಲಯಗಳ ವೃತ್ತಿಯಲ್ಲಿದ್ದೂ ಹಾಳಬಾವಿ ವೀರಭದ್ರಪ್ಪನವರು, ಪುರಾಣಿಕ ಬುದ್ದಯ್ಯನವರು ಟಿ. ಎಚ್ ಎಂ. ಸದಾಶಿವಯ್ಯನವರು ವೀರಶೈವ ಸಾಹಿತ್ಯ ಸಂಶೋಧನೆಗೆ ನೆರವಾದರು. ಇಳಿವಯಸ್ಸಿನಲ್ಲಿ ಈಗಲೂ ಶ್ರೀಜೂಗಪ್ಪನವರು, ಶ್ರೀ ಎಂ. ಪಿ. ಪಾಟೀಲರು ವೀರಶೈವ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದಾರೆ. ವೀರಶೈವ ಸಾಹಿತ್ಯ ಕೃತಿಗಳ ಪ್ರಕಟನೆ, ವೀರಶೈವ ಸಾಹಿತ್ಯ ಚರಿತ್ರೆ, ವಿಮರ್ಶೆಗಳನ್ನು ಕುರಿತ ಕೃತಿರಚನೆಗಳ ಮೂಲಕ ಪದ್ಮಶ್ರೀ ಶಿವಮೂರ್ತಿಶಾಸ್ತ್ರಿಗಳು ನವೀನ ಬಗೆಯ ಕೃತಿನಿರ್ಮಾಣ, ವೀರಶೈವತ್ವದ ವಿವೇಚನೆಗಳ ದೃಷ್ಟಿಯಿಂದ ಡಾ|| ಜ. ಚ. ನಿ. ಅವರು ಮಾಡಿದ ಮಾಡುತ್ತಿರುವ ಕಾರ್ಯವು ಅದ್ಭುತವೆನಿಸುವಂತಿದೆ.

ಈವರೆಗೆ ಉಲ್ಲೇಖಿಸಲು ಸಾಧ್ಯವಾಗದೆ ಉಳಿದಿರುಬಹುದಾದ ಎಲ್ಲ ಮಹನೀಯರ ಕಾರ್ಯವನ್ನು ನಾವು ನೆನೆಯಬೇಕಾಗಿದೆ.

ಶೂನ್ಯ ಸಂಪಾದನೆಯ ಮೌಲಿಕ ಸಂದೇಶವನು ವಿವೇಚಿಸುವ ಪ್ರೊ. ಎಸ್. ಎಸ್. ಭೂಸನೂರಮಠ ಅವರ ಪರಾಮರ್ಶೆ ಎಂಬ ಬೃಹದ್ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತದ್ದು ನಮಗೆ ಅಭಿಮಾನದ ಸಂಗತಿಯಾಗಿದೆ. ಪ್ರೊ. ಭೂಸನೂರಮಠ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತರಾದ ಶ್ರೀ ಪುಟ್ಟಸ್ವಾಮಯ್ಯ ಡಾ|| ತಿಪ್ಪೇರುದ್ರಸ್ವಾಮಿ ಅವರು ನಮ್ಮ ಅಭಿನಂದನೆಗೆ ಪಾತ್ರರಾಗಿದ್ದಾರೆ.

ವೀರಶೈವ ಕೃತಿಗಳ ಪರಿಷ್ಕರಣ ಪ್ರಕಟನೆಗಳ ಕಾರ್ಯವು ವೀರಶೈವ ಮಠ ಮತ್ತು ಸಂಸ್ಥೆಗಳಿಂದ ನಡೆದು ಬಂದಿರುವುದು ಸಂತೋಷದ ಸಂಗತಿಯಾಗಿದೆ. ಗ್ರಂಥ ಪರಿಷ್ಕರಣ ಕಾರ್ಯದಲ್ಲಿ ಪ್ರೊ. ಬಸವನಾಳರು ಒಂದು ಶ್ರೇಷ್ಠ ಮಾದರಿಯನ್ನು ಹಾಕಿಕೊಟ್ಟರು.

ಭಾರತದೇಶದ ಸ್ವಾತಂತ್ರ್ಯ, ಕರ್ನಾಟಕ ವಿದ್ಯಾಲಯ ಸ್ಥಾಪನೆ, ವಿಶ್ವವಿದ್ಯಾಲಯಗಳ ಧನಸಹಾಯ ಆಯೋಗ ರಚನೆ, ಕರ್ನಾಟಕ ಏಕೀಕರಣಗಳ ನಂತರ ಸಾಹಿತ್ಯ ಸಂಶೋಧನೆ ಪ್ರಕಟನೆಗಳಿಗೆ ಹೆಚ್ಚಿನ ಅವಕಾಶ ಧನಸಹಾಯ, ಕಾರ್ಯಕರ್ತರು ಒದಗಿಬರುವ ಪರಿಸ್ಥಿತಿಯುಂಟಾಗಿದೆ. ಡಾ|| ಹಳಕಟ್ಟಿ ಮತ್ತು ಚೆನ್ನಮಲ್ಲಪ್ಪ ಮಾಸ್ತರರ ಕಾಲದ ಅನಾನುಕೂಲ ಮತ್ತು ಕಾರ್ಪಣ್ಯದ ಸ್ಥಿತಿಯೀಗ ಉಳಿದಿಲ್ಲ. ಅಂತೆಯೆ ಹಲವಾರು ವೀರಶೈವ ಕೃತಿಗಳು ಪರಿಷ್ಕರಣ ಪಡೆದು ಪರಿಪುಷ್ಟವಾದ ಅಂದವಾದ ಬಗೆಯಲ್ಲಿ ಪ್ರಕಟವಾಗತೊಡಗಿವೆ. ಇಂತಹ ಹಲವು ಕೃತಿಗಳು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಡಾ|| ಆರ್. ಸಿ. ಹಿರೇಮಠರ ಪ್ರಧಾನ ಸಂಪಾದಕತ್ವದಲ್ಲಿ ಬಂದಿವೆ. ಅವುಗಳಲ್ಲಿ ವ್ಯಾಸಂಗಾರ್ಹ

ವಾದ ವಿಪುಲ ವಿಷಯ ಸಂಗ್ರಹವಿದೆ.

ಹಲವಾರು ಸಂಸ್ಮರಣ ಗ್ರಂಥಗಳಲ್ಲಿ ಪ್ರಕಟವಾದ ವೀರಶೈವ ವಿಚಾರ ವಿಮರ್ಶೆಗಳು ಉಪಯುಕ್ತವಾಗಿವೆ. ವಿಶ್ವವಿದ್ಯಾಲಯಗಳ ಡಾಕ್ಟರೇಟ್ ಪದವಿಗಾಗಿ ರಚಿತವಾದ ಕೆಲವು ಮಹಾ ಪ್ರಬಂಧಗಳು ವೀರಶೈವ ಸಾಹಿತ್ಯವನ್ನು ಕುರಿತಿವೆ.

ಹಲವು ವರುಷಗಳ ದೀರ್ಘ ಪರಿಶ್ರಮದ ಫಲವಾಗಿ ವೀರಶೈವೇತರ ವಿದ್ವಾಂಸರಾದ ಪ್ರೊ|| ತ. ಸು. ಶಾಮರಾಯರು ಒಂದು ಬೃಹದ್ಗ್ರಂಥ[5] ಪ್ರಕಟಿಸಿದ್ದಾರೆ. ಆ ಗ್ರಂಥದಲ್ಲಿ ಸಾವಿರದಷ್ಟು ಶರಣರ, ವಿಷಯಗಳ ಉಲ್ಲೇಖವಿದೆ. ಅದಕ್ಕಾಗಿ ೨೦೦ರಷ್ಟು ಆಕರಗಳಿಂದ ವಿಷಯ ಸಂಗ್ರಹಿಸಲಾಗಿದೆ. ಅದೊಂದು ವೀರಶೈವ ಕಾವ್ಯಗಳ ಕೈಪಿಡಿಯಂತಿದ್ದು ಅಭ್ಯಾಸಿಗಳಿಗೆ ಬಹಳ ಪ್ರಯೋಜನಕಾರಿಯಾಗಿದೆ.

ವೀರಶೈವೇತರ ವಿಚಾರವಾದಿಯೊಬ್ಬರ ಒಂದು ಚಿಕ್ಕ ಕೃತಿ[6] ಈಚೆಗೆ ಬಂದಿದೆ. ಅದರಲ್ಲಿ ಶಿವಶರಣರ ಸಂದೇಶವನ್ನು ಆಧುನಿಕ ಸಾಮಾಜಿಕ ವಿಚಾರ ಪ್ರಣಾಲಿಗೆ ಅನ್ವಯಿಸಿ ನವೀನ ಮತದ ಪರಿಭಾಷೆಯಲ್ಲಿ, ಚರ್ಚಿಸುವ ಪ್ರಯತ್ನವಿದೆ. ಆಧುನಿಕ ಯುಗದಲ್ಲಿ ವೀರಶೈವ ಸಂದೇಶದ ಔಚಿತ್ಯವನ್ನು ಕುರಿತ ಇಲ್ಲಿಯ ದೃಷ್ಟಿಕೋನವು ವಿಚಾರಾರ್ಹವೆನಿಸುವಂತಿದೆ.

ಹೊಸ ತಲೆಮಾರಿನ ವೀರಶೈವ ವಿದ್ವಾಂಸರಲ್ಲಿ ಡಾ|| ತಿಪ್ಪೇರುದ್ರಸ್ವಾಮಿ, ಡಾ|| ಎಲ್. ಬಸವರಾಜು ಪ್ರೊ|| ಬಸವರಾಜ ಜವಳಿ, ಡಾ|| ಕಲಬುರ್ಗಿ ಅವರ ವ್ಯಾಸಂಗನಿಷ್ಠೆಯು ಆಶಾದಾಯಕವೆನಿಸಿದೆ. ತಮ್ಮ 'ಶರಣರ ಅನುಭಾವ ಸಾಹಿತ್ಯ', 'ಶೂನ್ಯತತ್ವ ವಿಕಾಸ' ಮತ್ತು 'ಶೂನ್ಯ ಸಂಪಾದನೆ' 'ವಚನಗಳಲ್ಲಿ ವೀರಶೈವ ಧರ್ಮ' ಎಂಬ ಗ್ರಂಥಗಳ ಮೂಲಕ ಡಾ|| ತಿಪ್ಪೇರುದ್ರಸ್ವಾಮಿಯವರು ವೀರಶೈವತ್ವದ ತಿರುಳನ್ನು ಸಾಹಿತ್ಯದ ಹಿರಿಮೆಯನ್ನು ನಿಚ್ಚಳವಾಗಿ ಸಾಧಾರವಾಗಿ ಒಡಮೂಡಿಸಿ ತೋರಿಸಿದ್ದಾರೆ. ಡಾ|| ಎಲ್ ಬಸವರಾಜು ಅವರು ಶಿವಶರಣರ ಹಾಡುಗಳು, ಪ್ರಭುದೇವ, ಅಕ್ಕಮಹಾದೇವಿಯವರ ವಚನಗಳ ಬಗೆಗೆ ಬಹಳ ಪರಿಶ್ರಮ ತೋರಿಸಿದ್ದಾರೆ. ಪ್ರೊ|| ಬಸವರಾಜ ಜವಳಿಯವರು ಹರಿಹರದೇವ, ಚಾಮರಸ, ಅಕ್ಕಮಹಾದೇವಿಯವರ ಕೃತಿಗಳ ಬಗೆಗೆ ಆಳವಾದ ವ್ಯಾಸಂಗದ ಫಲವನ್ನು ಒದಗಿಸಿದ್ದಾರೆ. ಶಿವಶರಣರನ್ನು ಕುರಿತು ಶಿಲಾಶಾಸನಗಳಲ್ಲಿ ಬರುವ ಸಾಮಗ್ರಿಯನ್ನು ಸಂಗ್ರಹಿಸಿ ಡಾ|| ಕಲಬುರ್ಗಿ ಅವರು ವಿವೇಚಿಸಿದ್ದು[7] ನೂತನ ಕೊಡುಗೆಯಾಗಿದೆ.*

ಶಿವಶರಣರ ಉದಾತ್ತ ಜೀವನ ಸಾಧನೆಗಳಿಂದ ಪ್ರಚೋದಿತವಾಗಿ ಹೊಸಗನ್ನಡ ಸಾಹಿತ್ಯದಲ್ಲಿ ವಚನ, ಕವನ, ಕಥೆ, ಕಾದಂಬರಿ, ನಾಟಕಗಳು ಸೃಷ್ಟಿಯಾಗಿವೆ.

ವೀರಶೈವ ಧರ್ಮ ಸಾಹಿತ್ಯಗಳ ಹಿರಿಮೆಯನ್ನು ಪ್ರಚುರಗೊಳಿಸುವ ಕಾರ್ಯವು ಆಧುನಿಕ ಕಾಲದಲ್ಲಿ ಚೆನ್ನಾಗಿ ನಡೆದಿದೆ. ಆದರೆ ನಡೆಯಬೇಕಾದ ಕಾರ್ಯ ಇನ್ನೂ ಸಾಕಷ್ಟಿದೆ.

೬

ಕಿವಿಗೆ ಇಂಪನ್ನು, ಹೃದಯಕ್ಕೆ ತಂಪನ್ನು, ಬುದ್ಧಿಗೆ ಬೆಳಕನ್ನು ತಂದು ಆತ್ಮವನ್ನು ಎಚ್ಚರಿಸಿ, ಪರಮಾತ್ಮಾನುಸಂಧಾನದತ್ತ ನಮ್ಮನ್ನು ಒಯ್ಯಬಲ್ಲ ಸಾಹಿತ್ಯವು ಉದಾತ್ತವೆನಿಸುತ್ತಿದೆ. ವೀರಶೈವ ಸಾಹಿತ್ಯವು ಹೀಗೆ ಉದಾತ್ತವಾದುದಾಗಿದೆ.

ಪ್ರಾಣಾನುಭವದಲ್ಲಿ ಬಾಳಿನ ರಾಗದ್ವೇಷಗಳಿವೆ. ಕಾವ್ಯಾನುಭವದಲ್ಲಿ ರಸಾನಂದವಿದೆ. ಶಿವಾನುಭವದಲ್ಲಿ ಪರಮಾನಂದವಿದೆ. ಬಾಳಿನ ರಾಗದ್ವೇಷಗಳನ್ನು ಮೆಟ್ಟಿನಿಂತು, ಕಾವ್ಯದ ರಸಾನಂದವನ್ನು ಒದಗಿಸಿ ಪರಮಾನಂದದ ಸೆಲೆಯತ್ತ, ಸೆಳೆಯುತ್ತ ಸಾಗಿದ ಘನತೆ ಪ್ರಾಚೀನ ವೀರಶೈವ ಸಾಹಿತ್ಯದ್ದಾಗಿದೆ. ಮಾತು ಜ್ಯೋತಿರ್ಲಿಂಗವಾಗುವ ದಿಸೆಯು ಸಾಧನೆಯದು.

ಪ್ರಾಚೀನ ವೀರಶೈವ ಸಾಹಿತ್ಯದ ಹಿರಿಮೆಯನ್ನು ಹೇಳುವುದರಲ್ಲಿಯೇ ತೃಪ್ತಿಪಡುವುದು ಮಾತ್ರ ಸಾಲದು. ವಸ್ತುನಿಷ್ಠ ಸೂಕ್ಷ್ಮಮೌಲ್ಯಮಾಪನದ ಅವಶ್ಯಕತೆಯನ್ನು ನಾವು ಗಮನಿಸಬೇಕಾಗಿದೆ.

ವೀರಶೈವ ಸಾಹಿತ್ಯದ ಮೌಲಿಕ ಸಂದೇಶವನ್ನು ಆಧುನಿಕ ಯುಗಕ್ಕೆ ಅನ್ವಯಿಸುವುದು ಹೇಗೆ? ಇಂದಿನ ವೀರಶೈವರ ಬಾಳಿನಲ್ಲಿ ಅದನ್ನು ರೂಢಿಸುವ ಬಗೆ ಎಂತು ಎಂಬ ದಿಸೆಯಲ್ಲಿ ನಮ್ಮ ಪ್ರಯತ್ನಗಳು ಸಾಗಬೇಕಾಗಿದೆ. ವೀರಶೈವ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಯ ದಿಸೆಯಲ್ಲಿ ನಾವು ಇನ್ನೂ ಹೆಚ್ಚಿನ ನಿಷ್ಠೆಯಿಂದ, ವಿವೇಚನೆಯಿಂದ, ಕಲ್ಪಕತೆಯಿಂದ, ಕಳಕಳಿಯಿಂದ ಕಾರ್ಯ ಕೈಕೊಳ್ಳಬೇಕಾಗಿದೆ. ಈ ಮೂಲಕ ನವೀನ ಸಂಶೋಧನೆ ನಡೆಯಬೇಕಾಗಿದೆ.

ಇಂದಿನ ಬಾಳಿನಲ್ಲಿ ದ್ವೇಷ ವಿಷಮತೆಗಳ ತಾಂಡವ ನಡೆದಿದೆ. ಇಂದಿನ ಜಗತ್ತಿನ ಅಧಿಕಾರ ಲಂಪಟ ಹುಚ್ಚುತನದಿಂದ, ಆಚರಣೆಯ ಅಸಭ್ಯತನದಿಂದ ನಮ್ಮನ್ನು ಪಾರುಮಾಡಲು ಸಾಹಿತ್ಯ–ಸಂಸ್ಕೃತಿ–ಅಧ್ಯಾತ್ಮಗಳು ಮಾತ್ರ ನೆರವಾಗಬಲ್ಲವು. ವೀರಶೈವ ಸಾಹಿತ್ಯದಲ್ಲಿ ಸಂಸ್ಕೃತಿ–ಅಧ್ಯಾತ್ಮಗಳು ಮೇಳವಿಸಿವೆಯಾಗಿ ಆ ಮೂಲಕವಾಗಿ ನಾವು ನೆಮ್ಮದಿಯನ್ನು ಪಡೆಯಬಹುದಾಗಿದೆ.

ವೀರಶೈವ ಸಾಹಿತ್ಯ– ಸಂಸ್ಕೃತಿ– ಅನುಭಾವಗಳ ಅಮೂಲ್ಯ ಸೊತ್ತಿಗೆ ವಾರಸುದಾರರೆಂದು ಹೇಳಿಕೊಳ್ಳುವ ನಾವು–ವೀರಶೈವರು–ವೀರಶೈವ ಸಂದೇಶವನ್ನು ನಮ್ಮ ಬಾಳಿನಲ್ಲಿ ರೂಢಿಸಿಕೊಳ್ಳೋಣ ಎಂಬ ನಿವೇದನೆಯೊಂದಿಗೆ ತಮ್ಮೆಲ್ಲರಿಗೆ ಕೈಮುಗಿಯುತ್ತೇನೆ.

---

5 ಶಿವಶರಣರ ಕಥಾರತ್ನ ಕೋಶ ತ. ಸು. ಶಾಮರಾಯ; 19_7 ತ. ವೆಂ. ಸ್ಮಾರಕ ಗ್ರಂಥ ಸಮಿತಿ ಮೈಸೂರು.
6 ವೀರಶೈವವಾದ: ಲೇಖಕರು: ಪ್ರಕಾಶಕರು- ಶ್ರೀ ಹಳೇಪೇಟ, ಚಿಂತಾಮಣಿ; 1973.
7 "ಶಾಸನಗಳಲ್ಲಿ ಶಿವಶರಣರು" ಡಾ. ಎಂ. ಎಂ. ಕಲಬುರ್ಗಿ, ಸಿರಿಗನ್ನಡ ಪ್ರಕಾಶನ, ಧಾರವಾಡ; 1970
* ಹರಿಹರನ ರಗಳೆಗಳ ಬಗೆಗೆ ಶ್ರೀ ಹೆಚ್. ದೇವೀರಪ್ಪನವರ ಕಾರ್ಯ ಸ್ತುತ್ಯವಾದುದು. (—ಸಂ.)

ಪುಸ್ತಕ ವಿಮರ್ಶೆ....

ಸ್ತುತ್ಯರ್ಹ ಸಾಧನೆ ೧

ಬೆನ್ನ ಹಿಂದಿನ ಬೆಳಕು:

ಸಂ|| ಶಾಂತರಸ,ರಾಯಚೂರು. ಪುಟ: viii 268.-
ಬೆಲೆ: ಸಾಧಾರಣ ಪ್ರತಿ 15ರೂ. ಉ. ಪ್ರತಿ 20ರೂ.
ಸತ್ಯಸ್ನೇಹ ಪ್ರಕಾಶನ, ರಾಯಚೂರು.

ಇತ್ತೀಚಿನ ಸಾಹಿತ್ಯದ ಜಿಲ್ಲಾ ಮಟ್ಟದ ಹೆಜ್ಜೆಯಲ್ಲಿ ಇದೊಂದು ಸ್ತುತ್ಯಾರ್ಹವಾದ ಸಾಧನೆ! "ನವ್ಯಧ್ವನಿ", "ಹೊಸ ಜನಾಂಗದ ಕಾವ್ಯ", "ಅಕ್ಷರ ಹೊಸ ಕಾವ್ಯ" ಎಂಬಂಥ ಸಂಪಾದಿತ ಕವನ ಸಂಕಲನಗಳು ಹೊರಬಿದ್ದ ಸಮಯಾವಸರದಲ್ಲಿಯೇ ಜಿಲ್ಲಾ ಮಟ್ಟದ ಕವಿಶ್ರೇಣಿಗಳಿಂದ ಹೊರಬಿದ್ದಿರುವ ಈ ಕಾವ್ಯ ಸಂಕಲನ ಕೃತಿ ಹಲವಾರು ಅಂಶಗಳಿಂದ ಅವುಗಳಿಗಿಂತ ಹಲವು ಹೆಜ್ಜೆ ಮುಂದೆ ಹೋಗಿದೆಯೆನ್ನಬಹುದು. ಬಹುಶಃ ಶಿರೋನಾಮೆಯಿಂದಲೇ ಕೃತಿಯ ಪೂರ್ಣ ಬೆಳಕು ಅದರ ಗತಿ, ಗಮನ, ರೀತಿ, ನೀತಿಗಳನ್ನು ಊಹಿಸಬಹುದಾಗಿದೆ.

ಆಯ್ಕೆಗೊಂಡಿರುವ ಕವನಗಳಲ್ಲಿ ಸಮಕಾಲೀನ ಪ್ರಜ್ಞೆ, ಚಿಂತನ ವಿಕಾಸ, ವಾಸ್ತವಿಕತೆಯ ಕಣ್ನೋಟ, ವಿಷಯವೈವಿಧ್ಯ, ಛಂದೋವೈವಿಧ್ಯ ಮೊದಲಾದ ಅಂಶಗಳಿಂದ ಗಮನಾರ್ಹವೆನ್ನಬಹುದಾಗಿದೆ. ಕಾವ್ಯಾನಂದರಂತಹ ಪ್ರಸಿದ್ಧ ಕವಿಗಳಿಂದ ಹಿಡಿದು ಲಿಂಗಣ್ಣ ಸತ್ಯಂಪೇಟೆ, ಚಂದ್ರಕಾಂತ ಕುಸನೂರರಂಥ ಹೊಸ ಹೆಸರಿನ ಕವಿಗಳ ಕವನಗಳ ಸಂಗ್ರಹ ಕೃತಿ ಕಾವ್ಯಧಾರೆಯನ್ನು ಎತ್ತಿ ನಿಂತಿರುವುದು ಗಮನಾರ್ಹ.

"ಕಾಶ್ಮೀರದಲ್ಲಿ ಕರ್ನಾಟಕ" ಕವನವು ಹೊಸ ರಮ್ಯತೆಯನ್ನು ದೇಶಿವಡೆದು ತನ್ನತನವನ್ನು ಉಳಿಸಿಕೊಂಡಿದೆ. ಪುರಾಣಿಕ ಕವನದ ಸೊಬಗು ಅವರದೇ ಆದ ಶೈಲಿಯಲ್ಲಿ ಶೋಭೆಗೊಂಡಿದೆ. ಜಂಬಣ್ಣ ಅಮರ ಚಿಂತನದಲ್ಲಿನ ಯಾಹ್ಯಾಖಾ ಒಂದು ಒಳ್ಳೆಯ ಚಿಂತನ ಸಮಾರ್ ಬಾಂಗ್ಲಾ ಅಲ್ಲೋ, ಸೋನಾರ್ ಬಾಂಗ್ಲಾ, ಇರಲಿ, ಜೈಗಳು ಸಾಕು, ಯಾಕಂದರೆ, ನನ್ನ ಜೈಗಳಿಗೂ ನೀ, ನಾಲಾಯಕ್ಕು.

ಸಂಕಲನ ಕೃತಿಯ ಸಂಪಾದಕರಾದ ಶಾಂತರಸ ರಾಯಚೂರರೇ ಬರೆದಿರುವ 8 ಪುಟಗಳ ದೀರ್ಘ ಪ್ರಸ್ತಾವನೆಯೇ ಈ ಕೃತಿಯ ಪ್ರಕಟಿತೋದ್ದೇಶದ ಬಗ್ಗೆ ತಿಳಿಸುತ್ತದೆ. ಅವರು: ನನಗೆ ಯಾವ ಸಂಪ್ರದಾಯದ ಮೋಹವೂ ಇಲ್ಲ; ಸಂಪ್ರದಾಯ ನಿರ್ಮಿಸಿ ಅಥವಾ ಹಣೆಪಟ್ಟಿ ಕೊಂಡು ಅಥವಾ ಒಂದು ಚೌಕಟ್ಟು ಹಾಕಿಕೊಂಡು ಬರೆಯುವ ಕಾವ್ಯ ಸ್ವಾತಂತ್ರ್ಯದ ಉಸಿರಾಡಿಸಲಾರದು; ಆರೋಗ್ಯವುಳ್ಳದ್ದಾಗಿರಲಾರದು. ಅಂತೆಯೇ ಇಲ್ಲಿ ನಾನು ಯಾವ ಹೆಸರಿನಗೊಡವೆಗೆ ಹೋಗದೆ ಕಾವ್ಯಸತ್ತ್ವವನ್ನು ತೋರಿಸುವ ಉದ್ದೇಶವುಳ್ಳವನಾಗಿದ್ದೇನೆ. ಸಂಪ್ರದಾಯ ಹೆಸರು ಮುಖ್ಯವಲ್ಲ; ಕಾವ್ಯ ಮುಖ್ಯ. ಈ ಕಾವ್ಯವನ್ನು ನಾನಿಲ್ಲಿ ಗುರುತಿಸಿದ್ದೇನೆ" ಎಂಬ ಮಾತು ಕಾವ್ಯಪ್ರಕಟನೆಯ ಉದ್ದೇಶವನ್ನು ಮಾಡಿಕೊಡುತ್ತದೆ.

ಜಿಲ್ಲಾ ಮಟ್ಟದ ಕೇಂದ್ರದಲ್ಲಿ ಹೀಗೆ ಬಿಡುಗಡೆಯಾಗಿರುವ ಈ ಕಾವ್ಯ ಸಂಕಲನ ಕೃತಿ ತನ್ನ ಪರಿಮಿತಿಯ ಪರಿಧಿಯ ಕಾವ್ಯಸ್ವಾತಂತ್ರ್ಯತತ್ತ್ವವನ್ನು ಉಳಿಸಿ ಉಸಿರಾಡಿಸಿರುವ ಬಗ್ಗೆ ಮೆಚ್ಚುವಂತಹುದಾಗಿದೆ. ಅಂತೂ ಪ್ರತಿಕಾಲದ ವಾಸ್ತವಿಕತೆಯನ್ನು ಹಲವು ಕವನಗಳ ಮಾಧ್ಯಮವಾಗಿದ್ದರೂ ವಿಡಂಬನೆಯ ಅತಿರೇಕ ಹೆಚ್ಚಾಗಿ ಅರ್ಥಸಂಪತ್ತಿಗೆ ಬಹುಮಟ್ಟಿಗೆ ಬಾಧೆಯಾಗಿರುವುದೇನೋ ಎನ್ನಿಸುತ್ತದೆ.

ಅಂತೂ "ಸಂಘ"ದ ಈ ಮುದ್ರಣವಂತೂ ಕಾವ್ಯ ಜಗತ್ತಿಗೆ ಹಲವರನ್ನು ಪರಿಚಯಿಸಿರುವುದರ ಮೂಲಕ ಹಲವು ಕವಿಗಳನ್ನು ಬೆಳಕಿಗೆ ತಂದು ಪ್ರತಿಭೆಯ ವಿಕಾಸಕ್ಕೆ ಅನುಕೂಲ ಮಾಡಿಕೊಟ್ಟಿರುವುದು ಸ್ತುತ್ಯರ್ಹವೇ ಸರಿ.

—ವೆಂಕಟೇಶ
ಸಿದ್ಧಗಂಗಾ

73ನೆಯ ಅ. ಭಾ. ವೀರಶೈವ ಮಹಾಸಭೆಯ

ಅಂಗವಾಗಿ ನೆರವೇರಿದ

ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ ಸಮ್ಮೇಳನದಲ್ಲಿ

ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳ ಸ್ವಾಗತ ಭಾಷಣ ಸಾರ

ಕರ್ನಾಟಕ ರಾಜಧಾನಿಯಾದ ಬೆಂಗಳೂರು ಮಹಾನಗರದಲ್ಲಿ, ಅಖಿಲಭಾರತ ವೀರಶೈವ ಮಹಾಸಭೆಯ 19ನೆಯ ಅಧಿವೇಶನವು ಮಾನ್ಯ ಶ್ರೀ ಜೆ. ಬಿ. ಮಲ್ಲಾರಾಧ್ಯ, ಐ.ಎ.ಎಸ್.ರವರ ಘನ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯುತ್ತಿರುವ ಈ ಸುಸಂದರ್ಭದಲ್ಲಿ, ಅಖಿಲ ಭಾರತ ವೀರಶೈವ ಸಾಹಿತ್ಯ ಸಮ್ಮೇಳನವು 5ನೆಯಬಾರಿ ಇಂದು ನಡೆಯುತ್ತಿರುವುದು ನಿಜಕ್ಕೂ ಸಂತೋಷದಾಯಕವಾಗಿದೆ. 1940ರಲ್ಲಿ ಕುಂಭಕೋಣಂನಲ್ಲಿಯೂ 1945ರಲ್ಲಿ ತುಮಕೂರಿನಲ್ಲಿಯೂ, 1955ರಲ್ಲಿ ಬಸವಕಲ್ಯಾಣದಲ್ಲಿಯೂ, 1960ರಲ್ಲಿ ಶಿವಯೋಗ ಮಂದಿರದಲ್ಲಿಯೂ, ನಡೆದ ವೀರಶೈವ ಮಹಾಸಭೆಗಳ ಕಾಲದಲ್ಲಿ ಇಂತಹ ವೀರಶೈವ ಸಾಹಿತ್ಯ ಸಮ್ಮೇಳನಗಳು ನಡೆದದ್ದುಂಟು. 1941ರಲ್ಲಿ ಧಾರವಾಡ ಜಿಲ್ಲಾ ಹೀರೆಕೆರೂರಿನಲ್ಲಿ ನಡೆದ ಅಖಿಲ ಭಾರತ ಶಿವಾನುಭವ ಸಮ್ಮೇಳನದ ಕಾಲದಲ್ಲಿ ಮತ್ತು 1941ರಲ್ಲಿ ತಮಿಳು ನಾಡಿನ ರಾಯವೆಲ್ಲೂರಿನಲ್ಲಿ ನಡೆದ ದಕ್ಷಿಣ ಭಾರತ ವೀರಶೈವ ಸಿದ್ಧಾಂತ ಮಹಾಸಭೆಯ ಕಾಲದಲ್ಲಿ ಇಂತಹ ಸಾಹಿತ್ಯ ಸಮ್ಮೇಳನಗಳು ನಡೆದದ್ದುಂಟು. ಇಂತಹ ಸತ್ಪರಂಪರೆಯನ್ನು ಅನುಸರಿಸಿ, ಬೆಂಗಳೂರು ವೀರಶೈವಮಹಾಸಭಾ ಸ್ವಾಗತ ಸಮಿತಿಯವರು, ಇಲ್ಲಿ ಇಂದು **'ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿ'** ಸಮ್ಮೇಳನವನ್ನು ಏರ್ಪಡಿಸಿರುವುದು ಎಲ್ಲ ರೀತಿಯಿಂದಲೂ ಸಮಂಜಸವಾಗಿದೆ. ಪೂರ್ವೋಕ್ತ ಸಾಹಿತ್ಯ ಸಮ್ಮೇಳನಗಳ ಕಾಲದಲ್ಲಿ ಒಂದಲ್ಲ ಒಂದು ರೀತಿಯಿಂದ ಭಾಗವಹಿಸಿದ್ದ ನನಗೆ ಈ ದಿವಸವೂ ಸ್ವಾಗತಾಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಕೊಟ್ಟಿರುವ ಮಹಾಸಭೆಯ ಸ್ವಾಗತ ಸಮಿತಿಯವರಿಗೆ ನಾನು ನನ್ನ ಹಾರ್ದಿಕವಾದ ಕೃತಜ್ಞತೆಯನ್ನು ಇಂದು ಸಮರ್ಪಿಸುತ್ತಿದ್ದೇನೆ.

ಇಂದಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ–ಸ್ವಾಗತ ಸಮಿತಿಯ ಕೋರಿಕೆಯಂತೆ ಇಲ್ಲಿಗೆ ದಯಮಾಡಿಸಿರುವ, ಕರ್ನಾಟಕದ ಹಿರಿಯ ಸಾಹಿತಿಗಳಾದ ಪ್ರೊ|| ಸ. ಸ. ಮಾಳವಾಡ ಎಂ. ಎ., ಅವರನ್ನೂ, ಉದ್ಘಾಟಕರಾಗಿ ಇಲ್ಲಿಗೆ ಆಗಮಿಸಿರುವ, ನಮ್ಮೆಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿರುವ, ಕರ್ನಾಟಕ ರಾಜ್ಯದ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎಚ್. ಸಿದ್ಧವೀರಪ್ಪನವರನ್ನೂ ನಾನು ತುಂಬಿದ ಮನದಿಂದ ನಮ್ಮ ಸ್ವಾಗತ ಸಮಿತಿಯ ಹಾಗೂ ಇಂದಿನ ಸಮ್ಮೇಳನದ ಪರವಾಗಿ ಅಕ್ಕರೆಯಿಂದ ಬರಮಾಡಿಕೊಳ್ಳುತ್ತಿದ್ದೇನೆ. ಇಂದಿನ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಮಮತೆಯಿಂದ ಆಗಮಿಸಿರುವ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರ ಭಾರತದ ಎಲ್ಲ ವಿದ್ವಾಂಸರುಗಳನ್ನೂ ನಾನು ಸ್ವಾಗತ ಸಮಿತಿಯ ಪರವಾಗಿ ಆದರದಿಂದ ಬರಮಾಡಿಕೊಳ್ಳುತ್ತಿದ್ದೇನೆ.

ವೀರಶೈವ ಮತವು ಭರತಖಂಡದಲ್ಲಿ ಶೈವ ಧರ್ಮದ ಅಂಗವಾಗಿ–ಸಪ್ತ ಶೈವಗಳಲ್ಲಿ ಒಂದಾಗಿ – ಶತಮಾನಗಳಷ್ಟು ಹಿಂದಿನಕಾಲದಿಂದಲೂ ಕ್ರಮಕ್ರಮವಾಗಿ ಬೆಳೆದುಕೊಂಡು ಬಂದಿದೆ. ವೀರಶೈವ ಸಮಾಜಕ್ಕೆ ಉಜ್ವಲವಾದ ಧರ್ಮ, ದರ್ಶನ; ಸಾಹಿತ್ಯ, ಸಂಸ್ಕೃತಿ ಮತ್ತು ಇತಿಹಾಸಗಳ ಬೆಂಬಲವಿದೆ. ವೀರಶೈವ ಸಾಹಿತ್ಯವು ಕನ್ನಡ ಸಂಸ್ಕೃತ ಮತ್ತು ತೆಲುಗಿನಲ್ಲಿ ವಿಪುಲವಾಗಿಯೂ, ತಮಿಳು, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಕ್ವಚಿತ್ತಾಗಿಯೂ, ಇದೆ. ಆದುದರಿಂದ ವೀರಶೈವ ಸಾಹಿತ್ಯಕ್ಕೆ ಅಖಿಲಭಾರತ ಸ್ವರೂಪ ಬಂದಿದೆ ಎಂಬುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ವೀರಶೈವ ಸಾಹಿತ್ಯವು 11ನೆಯ ಶತಮಾನದಿಂದ ಕನ್ನಡದಲ್ಲಿಯೂ, 12ನೆಯ ಶತಮಾನದಿಂದ ತೆಲುಗಿನಲ್ಲಿಯೂ, ಅದಕ್ಕೂ

ಹಿಂದೆ ಸಂಸ್ಕೃತ ಮತ್ತು ತಮಿಳು ಭಾಗಗಳಲ್ಲಿಯೂ, ಇತ್ತೀಚೆಗೆ ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿಯೂ ಕಾಣಿಸಿಕೊಂಡಿವೆ. ಕ್ರಿ. ಶ. 8ನೆಯ ಶತಮಾನದಲ್ಲಿ ಗೋಕರ್ಣದಲ್ಲಿ ಇದ್ದ ನೀಲಕಂಠಾಚಾರ್ಯರು ವೀರಶೈವ ಭಾಷ್ಯಕಾರರೆಂದು ಹೇಳುತ್ತಾರೆ. ಅವರ ಶಿಷ್ಯ ಹರದತ್ತಾಚಾರ್ಯರೂ ಕೂಡ ವೀರಶೈವ ಗ್ರಂಥಕಾರರೆಂದು ಹೇಳಲಾಗಿದೆ. ಕ್ರಿ. ಶ. 7ನೆಯ ಶತಮಾನದಲ್ಲಿ ಕುಂಭಕೋಣಂನಲ್ಲಿದ್ದ ಕವಿ ವಟ್ಟಕೂತರ್ ಲಿಂಗವಂತ ಕವಿ ಎಂದು ತಮಿಳು ವಿದ್ವಾಂಸರು ಹೇಳಿದ್ದಾರೆ. ವೀರಶೈವ ಸಾಹಿತ್ಯದ ತಾಯಿಬೇರನ್ನು ಶಿವಪುರಾಣಗಳಲ್ಲಿಯೂ, ಶಿವಾಗಮ ಗ್ರಂಥಗಳಲ್ಲಿಯೂ, ತೇವಾರಂ, ತಿರುಕುರಳ್ ಮೊದಲಾದ ಪ್ರಾಚೀನ ತಮಿಳು ಗ್ರಂಥಗಳಲ್ಲಿಯೂ ನಾವು ಕಾಣಬಹುದು. ಅತಿ ಪ್ರಾಚೀನವಾದ ವೇದಮಂತ್ರಗಳಲ್ಲಿಯೂ ಕೂಡ ವೀರಶೈವ ದರ್ಶನದ ಅಂಶವು ಉಂಟೆಂದು ಲಿಂಗಧಾರಣಚಂದ್ರಿಕೆ ಮತ್ತು ಶ್ರುತಿಸಾರಭಾಷ್ಯ ಎಂಬ ಗ್ರಂಥಗಳಲ್ಲಿ ಹೇಳಲಾಗಿದೆ.

ಕನ್ನಡದಲ್ಲಿ ದೇವರ ದಾಸಿಮಯ್ಯ ಶಂಕರ ದಾಸಿಮಯ್ಯ (1040) ಕೊಂಡಗುಳಿ ಕೇಶಿರಾಜ (1110) ಮೆರೆಮಿಂಡೆದೇವ (1100) ಇವರನ್ನು ಮೊದಮೊದಲಿನ ಕವಿಗಳೆಂದು ನಾವು ತಿಳಿಯಬಹುದು. ಅನಂತರ 12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಭಕ್ತಿಭಂಡಾರಿ ಬಸವೇಶ್ವರ, ಚೆನ್ನಬಸವೇಶ್ವರ, ಅಲ್ಲಮಪ್ರಭು, ಘಟ್ಟಿವಾಳಯ್ಯ ಸಿದ್ಧರಾಮೇಶ್ವರ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಿತಂದೆ, ಏಕಾಂತರಾಮಯ್ಯ, ಆದಿಶೆಟ್ಟಿ, ಆಮುಗಿದೇವಯ್ಯ ಮೊದಲಾದ ಮಹಾಶರಣರು ವೀರಶೈವ ವಚನಶಾಸ್ತ್ರದ ಕಲ್ಪವೃಕ್ಷಗಳಾಗಿ ಕಂಗೊಳಿಸಿದರು. ಅದೇ ಕಾಲದಲ್ಲಿ ಅಕ್ಕಮಹಾದೇವಿ, ಅಕ್ಕನಾಗಮ್ಮ, ಅಕ್ಕಮುಕ್ತಾಯಿ, ನೀಲಾಂಬಿಕೆ, ಗಂಗಾಂಬಿಕೆ, ರಾಣಿಮಹಾದೇವಿ, ಆಯ್ದಕ್ಕಿಲಕ್ಕಮ್ಮ, ಹಡಪದ ಲಿಂಗಮ್ಮ ಮೊದಲಾದ ಶಿವಶರಣೆಯರು ಉಪನಿಷತ್ತಿಗೆ ಸಮಾನವಾದ ವಚನಗಳನ್ನು ರಚಿಸಿ ಪ್ರಖ್ಯಾತರಾಗಿದ್ದಾರೆ. ಅನಂತರ 13ನೆಯ ಶತಮಾನದಲ್ಲಿ ಹೊಯ್ಸಳರ ಮಹಾಮಂತ್ರಿಯಾದ ಕೆರೆಯ ಪದ್ಮರಸ, ಅವರ ಮಗ ಕುಮಾರ ಪದ್ಮರಸ, ಹಂಪೆಯ ಹರೀಶ್ವರ ರಾಘವಾಂಕ ಪಂಡಿತ, ಸೋಮರಾಜಕವಿ ಮತ್ತು ನಿಜಗುಣ ಶಿವಯೋಗಿ ಮೊದಲಾದವರು ಲಿಂಗವಂತ ಸಾಹಿತ್ಯದ ದಿಗ್ಗಜಗಳಾಗಿ ಪರಿಶೋಭಿಸಿದರು.

14ನೆಯ ಶತಮಾನದಲ್ಲಿ ಪದ್ಮರಾಜ ಪುರಾಣದ ಮಹಾಕವಿ ಪದ್ಮಣಾಂಕ, ಬಸವಪುರಾಣದ ಭೀಮಕವಿ ಮೊದಲಾದವರು ವೀರಶೈವ ಸಾಹಿತ್ಯವನ್ನು ತಲೆಯೆತ್ತಿ ನಿಲ್ಲುವಂತೆ ಮಾಡಿದರು. 15ನೆಯ ಸತಮಾನದಲ್ಲಿ ವಿಜಯನಗರದಲ್ಲಿ ಭಕ್ತಿಭಂಡಾರಿ ಜಕ್ಕಣಾಚಾರ್ಯ, ಮಹಾದಂಡನಾಯಕ ಲಕ್ಕಣಾಮಾತ್ಯ, ಮಹಾಲಿಂಗದೇವರು, ಕಲ್ಲುಮಠದ ಪ್ರಭುದೇವರು, ಮಹಾಕವಿ ಚಾಮರಸ, ಅಷ್ಟಭಾಷಾಕವಿ ಚಂದ್ರಶೇಖರ, ಮಗ್ಗೆಯ ಮಾಯಿದೇವರು, ಸಪ್ತಕಾವ್ಯದ ಗುರುಬಸವ, ಅದ್ರೀಶ ಕವಿ ಮೊದಲಾದವರು ನಮ್ಮ ಸಾಹಿತ್ಯವನ್ನು ಬಹಳವಾಗಿ ಉಜ್ವಲಗೊಳಿಸಿದರು. ಅನಂತರ ಎಡೆಯೂರು ಸಿದ್ಧಲಿಂಗೇಶ್ವರ, ಸ್ವತಂತ್ರ ಸಿದ್ಧಲಿಂಗೇಶ್ವರ, ಘನಲಿಂಗಿದೇವರು, ಕಾಡುಸಿದ್ಧೇಶ್ವರ ಮೊದಲಾದವರು ಕಂಗೊಳಿಸಿದರು.

16ನೆಯ ಶತಮಾನದಲ್ಲಿ ಬಿಜ್ಜಾವರದ ವಿರಕ್ತ ತೋಂಟದಾರ್ಯ, ಸಂಪಾದನೆಯ ಪರ್ವತೇಶ್ವರ, ಗುಬ್ಬಿಯ ಮಲ್ಲಣಾರ್ಯ, ಮಲ್ಲಣಾಚಾರ್ಯ, ಶಾಂತೇಶಕವಿ, ಪುಲಿಗೆರೆಯ ಸುರಂಗಕವಿ, ಸೋಮಕವಿ, ಗೂಳೂರಿನ ಸಿದ್ಧವೀರಣಾಚಾರ್ಯ, ಚನ್ನಂಜೇದೇವರು, ಅಬ್ಬಲೂರಿನ ಸರ್ವಜ್ಞಮೂರ್ತಿ, ಹಂಪೆಯ ವಿರೂಪಾಕ್ಷಪಂಡಿತ, ಸಾಂಗತ್ಯದ ನಂಜುಂಡಕವಿ ಮೊದಲಾದವರು ವೀರಶೈವ ಸಾಹಿತ್ಯವನ್ನು ಬೆಳಗಿಸಿದರು.

17ನೆಯ ಶತಮಾನದಲ್ಲಿ ಯಳಂದೂರು ಷಡಕ್ಷರದೇವ, ಯಳಂದೂರು ಹರೀಶ್ವರ, ಕೊಟ್ಟೂರು ಬಸವಲಿಂಗ, ರಾಯಚೂರು ಭಾಗದ ಸಂಗವಿಭು, ಶಾಲ್ಯದ ಕೃಷ್ಣಪ್ರಭು ಮೊದಲಾದವರು ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಅನಂತರ 18 ಮತ್ತು 19ನೆಯ ಶತಮಾನಗಳಲ್ಲಿಯೂ ಕೂಡ ವೀರಶೈವ ಕವಿಗಳು, ಹಲವು ಕಾವ್ಯಗಳು ಹಾಡುಗಬ್ಬ, ಯಕ್ಷಗಾನ, ಶತಕ, ಸಾಂಗತ್ಯ ಮೊದಲಾದುವುಗಳನ್ನು ರಚಿಸಿರುತ್ತಾರೆ. 19ನೆಯ ಶತಮಾನದಲ್ಲಿ ಮೈಸೂರಿನ ಅಭಿನವ ಕಾಳಿದಾಸ, ಬಸವಪ್ಪಶಾಸ್ತ್ರಿಗಳ ಹೆಸರು ಅಗ್ರಮಾನ್ಯವಾಗಿದೆ. ಹಾಗೂ ಬೆಂಗಳೂರು ಉಭಯಕವಿ, ಶ್ರೀ ಸರ್ಪಭೂಷಣ ಶಿವಯೋಗಿಗಳು ಇಲ್ಲಿ ಸ್ಮರಣಾರ್ಹರಾಗಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿಯೂ ರೈನಾಪುರದ ಶಿವಲಿಂಗ ತನಯ, ಮಲ್ಲಿಕಾರ್ಜುನಪ್ಪ, ದ್ಯಾಂಪುರದ ಚನ್ನಯ್ಯಕವಿ, ಹುಕ್ಕೇರಿಯ ಸದಾಶಿವಶಾಸ್ತ್ರಿ, ಬಳ್ಳಾರಿಯ ನಾಗೇಶ

ಶಾಸ್ತ್ರಿ, ದಾವಣಗೆರೆ ಚಂದ್ರಶೇಖರಶಾಸ್ತ್ರಿ, ರಾಯಚೂರು ಚಂದ್ರಶೇಖರಶಾಸ್ತ್ರಿ, ಗದಗಿನ ಪಂಡಿತ ಪುಟ್ಟರಾಜ ಗವಾಯಿಗಳು, ಸೊನ್ನಲಾಪುರದ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರು, ಧಾರವಾಡದ ಸರಸ್ವತೀದೇವಿಗೌಡರ ಮೊದಲಾದವರು ಗಣ್ಯಸಾಹಿತಿಗಳೆನಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಲಸಂಗಿ ಮಧುರಚನ್ನ, ಚನ್ನವೀರಣಕವಿ, ಸಿದ್ಧಯ್ಯ ಪುರಾಣಿಕ ಈಶ್ವರ ಸಣಕಲ್ಲ, ಹೊಸಮನಿ ಸಂಗಮೇಶ, ಸಿಂಪಿ ಲಿಂಗಣ್ಣ, ಶ್ರೀಮತಿ ಶಾಂತಾದೇವಿ ಮಾಳವಾಡ ಮೊದಲಾದ ನವ್ಯಕವಿಗಳು ಗಣ್ಯರಾಗಿರುತ್ತಾರೆ. ಎಚ್. ದೇವೀರಪ್ಪ, ಬಿ. ಪುಟ್ಟಸ್ವಾಮಯ್ಯ, ಶ್ರೀ ಜ. ಚ. ನಿ. ಮುಲ್ಲಾಬಾದಿ ವೀರಭದ್ರಪ್ಪ, ಬೂದಿಹಾಳಮಠ, ಕಟ್ಟೀಮನಿ ಬಸವರಾಜ, ಡಾ|| ಕೆ. ಮುದ್ದಣ್ಣ, ಡಾ|| ಜಿ. ಎಸ್. ಶಿವರುದ್ರಪ್ಪ, ಬಿ. ಸಿ. ಜವಳಿ ಮೊದಲಾದವರು ಪ್ರಖ್ಯಾತರಾಗಿರುತ್ತಾರೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಸುಮಾರು 900 ವರ್ಷಗಳಿಂದ ನಮ್ಮ ಲಿಂಗವಂತ ಕವಿಗಳು ಮಿಗಿಲಾದ ಸಾಹಿತ್ಯ ಸೇವೆಯನ್ನು ಸಲ್ಲಿಸಿರುತ್ತಾರೆ.*

ಆಂಧ್ರಪ್ರದೇಶದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯರು, ಪಾಲ್ಕುರಿಕೆ ಸೋಮನಾಥ, ಪಿಡುಪರ್ತಿಯ ಕವಿತ್ರಯರು (ಬಸವನ, ಸೋಮನಾಥ, ಬಸವಪ್ಪ) ಪಾಪಯಾಮಾತ್ಯ ವೇಮನ, ಪರ್ವತಮಂತ್ರಿ ಲಿಂಗನ, ತಿರುಮಲನಾಥ, ಶಿವರಾಮ, ಲಿಂಗಕವಿ, ಅನ್ನಮಯ್ಯ, ಸಿದ್ಧನಾಥ, ಅಪ್ಪನಾರ್ಯ, ಪರಮಾನಂದಯತಿ, ರೇವಣಸಿದ್ಧಕವಿ, ಭದ್ರಾರಾಧ್ಯ, ರಾಮಕವಿ, ಮಹಾದೇವ, ನಾಗಭೂಷಣ, ನಾಗನಾಥ ಮೊದಲಾದವರು ಆಂಧ್ರಭಾಷೆಯಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿರುತ್ತಾರೆ. ಇತ್ತೀಚೆಗೆ ಆಂಧ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಕೈ|| ಭಂಡಾರು ತಮ್ಮಯ್ಯನವರು ಸಿಕಂದರಾಬಾದಿನ ವೀರಭದ್ರಶಾಸ್ತ್ರಿಗಳು [ಕಾಶಿ ಜಗದ್ಗುರು] ಹಲವು ಮಹತ್ವದ ಗ್ರಂಥಗಳನ್ನು ಸಂಪಾದಿಸಿ ಮತ್ತು ರಚಿಸಿ ವೀರಶೈವ ಆಂಧ್ರ ವಾಙ್ಮಯಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿರುತ್ತಾರೆ. ಕೈ|| ಟಿ. ಎಚ್. ಎಮ್. ಸದಾಶಿವಯ್ಯನವರು ಆಂಧ್ರ ವೀರಶೈವ ವಾಙ್ಮಯವನ್ನು ಕುರಿತು ಹಲವು ಉಪಯುಕ್ತವಾದ ಲೇಖನಗಳನ್ನು ಬರೆದಿರುತ್ತಾರೆ. ಕಾಕತೀಯ ರಾಜನಾದ ಪ್ರತಾಪರುದ್ರದೇವನು "ನೀತಿಸಾರಮು" ಎಂಬ ಗ್ರಂಥವನ್ನು ಬರೆದಿದ್ದಾನೆ. ವೀರಶೈವ ದೀಕ್ಷಾಬೋಧಮು, ಶಿವಯೋಗಸಾರಮು ಮೊದಲಾದ ಗ್ರಂಥಗಳು ತೆಲುಗಿನಲ್ಲಿ ರಚನೆಯಾಗಿವೆ.

ಕನ್ನಡದಲ್ಲಿ ಹಂಪೆಯ ಹರೀಶ್ವರನು ರಗಳೆಯಲ್ಲಿಯೂ, ರಾಘವಾಂಕನು ಷಟ್ಪದಿಗಳಲ್ಲಿಯೂ ಕಾವ್ಯಗಳನ್ನು ರಚಿಸಿದಂತೆ ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥ ಮತ್ತು ಪಿಡುಪರ್ತಿ ಕವಿಗಳು, ದ್ವಿಪದಿ ಹಾಗೂ ಸೀಸ ಪದ್ಯಗಳಲ್ಲಿ ಮಹಾಕೃತಿಗಳನ್ನು ರಚಿಸಿ ಸಾಹಿತ್ಯದಲ್ಲಿ ಕ್ರಾಂತಿಯನ್ನು ಮಾಡಿರುತ್ತಾರೆ.

ತಮಿಳು ಭಾಷೆಯಲ್ಲಿ 17ನೆಯ ಶತಮಾನದಲ್ಲಿ ಮಹಾಕವಿ ಶಿವಪ್ರಕಾಶಸ್ವಾಮಿಗಳು, ಚೊಕ್ಕಲಿಂಗ ಸ್ವಾಮಿಗಳು, ಷಣ್ಮುಗಂ ಪಿಳ್ಳೆ, ಶಾಂತಲಿಂಗಸ್ವಾಮಿಗಳು, ಪರಂಜ್ಯೋತಿ ಸ್ವಾಮಿಗಳು ಮೊದಲಾದವರು ಪ್ರಭುಲಿಂಗಲೀಲೆ, ಸಿದ್ಧಾಂತ ಶಿಖಾಮಣಿ, ಇಷ್ಟಲಿಂಗ ಅಗವಲ್, ನವಮಣಿಮಾಲೈ, ಅಕ್ಕಮಹಾದೇವಿಚರಿತ, ತಿರುವಳಿಯಾಡರ್‌ಪುರಾಣಂ, ಷಟ್‌ಸ್ಥಲಾಗಮಂ, ವೀರ ಸಿಂಹಾಸನ ಮಠಂ ಪುರಾಣಂ, ಬಸವ ಪುರಾಣಂ ಮೊದಲಾದವುಗಳನ್ನು ರಚಿಸಿ, ವೀರಶೈವ ಸಾಹಿತ್ಯವನ್ನು ತಮಿಳುನಾಡಿನಲ್ಲಿ ಪ್ರಕಾಶಗೊಳಿಸಿರುತ್ತಾರೆ. ಇತ್ತೀಚೆಗೆ ಮದರಾಸಿನಲ್ಲಿ ಆಗಿಹೋದ ಗುರುಬಸವ ಅಂಡ್ ಕಂಪನಿ ಮಾಲೀಕರಾದ ನಾಗಿಚೆಟ್ಟಿಯಾರ್, ಅನೇಕ ವೀರಶೈವ ಗ್ರಂಥಗಳನ್ನು ಪ್ರಕಟಪಡಿಸಿ ತಮಿಳುನಾಡಿಗೆ ಉಪಕಾರ ಮಾಡಿರುತ್ತಾರೆ.

ಸಂಸ್ಕೃತ ಭಾಷೆಯು ಭಾರತದ ಪ್ರಾಚೀನ ಭಾಷೆ ಅದು ಸಮಗ್ರ ಭರತಖಂಡದಲ್ಲಿಯೂ, ಇಂದು ವಿಶ್ವದ, ಅಮೇರಿಕ, ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ರಷ್ಯಾ ಮೊದಲಾದ ಮಹಾರಾಷ್ಟ್ರಗಳಲ್ಲಿಯೂ ಪಂಡಿತ ಮಾನ್ಯವೆನಿಸಿದೆ. ವೀರಶೈವ ಮಹಾಕವಿಗಳು ಮತ್ತು ಶಾಸ್ತ್ರಕಾರರು ಸಂಸ್ಕೃತ ಭಾಷೆಯಲ್ಲಿ ಅನೇಕ ಮಹತ್ವದ ಗ್ರಂಥಗಳನ್ನು ರಚಿಸಿರುತ್ತಾರೆ. ಲಿಂಗಧಾರಣ ಚಂದ್ರಿಕೆ ಶ್ರೀಕರಭಾಷ್ಯ, ಕ್ರಿಯಾಸಾರ, ಧರ್ಮ ಶಿರೋಮಣಿ, ಶಿವಾದ್ವೈತ ಮಂಜರಿ, ಅನುಭವ ಸೂತ್ರ, ವಿಶೇಷಾರ್ಥ ಪ್ರಕಾಶಿಕೆ, ಶಿವಯೋಗ ಪ್ರದೀಪಿಕೆ, ಶಿವಜ್ಞಾನದೀಪಿಕೆ ಮಿರಶೈವಾಚಾರಸಾರ ಸಂಗ್ರಹ, ಅನಾದಿ ವೀರಶೈವ ಸಂಗ್ರಹ, ವಾತುಲೋತ್ತರ ವ್ಯಾಖ್ಯಾನ, ವೀರಶೈವ ಕೌಸ್ತುಭ, ವೀರಶೈವಾನಂದ ಚಂದ್ರಿಕೆ, ಕವಿಕರ್ಣ ರಸಾಯನಂ, ಭಕ್ತಾಧಿಕ್ಯ, ಶಿವಾಧಿಕ್ಯ ಸಂಸ್ಕೃತ ಚೆನ್ನ ಬಸವಪುರಾಣಂ, ಸಂಸ್ಕೃತ ಪಂಡಿತಾರಾಧ್ಯ ಚರಿತಂ,

* 20ನೆಯ ಶತಮಾನದ ಮಹಾಕವಿ ಮತ್ತು ದಾರ್ಶನಿಕರ ಪಟ್ಟಿಯಲ್ಲಿ ಲಿಂ|| ಗೌರೀಶಂಕರ ಸ್ವಾಮಿಗಳು ಅಗ್ರಮಾನ್ಯರಾಗುತ್ತಾರೆ. — ಸಂ.

ಸಂಸ್ಕೃತ ಪ್ರಭುಲಿಂಗಲೀಲೆ, ಸಂಸ್ಕೃತ ರೇಣುಕ ಚಂಪು ಶಿವಪಂಚಸ್ತವ, ಕೇನೋಪನಿಷತ್, ಕೈವಲ್ಯೋಪನಿಷತ್ ಈಶಾವಾಶ್ಯೋಪನಿಷತ್, ಸಿದ್ಧಾಂತಶಿಖೋಪನಿಷತ್ ಭಾಷ್ಯಗಳು, ಶಿವತತ್ವರತ್ನಾಕರ, ಕೈವಲ್ಯಸಾರ, ಶರಣ ಚರಿತಂ ಮತ್ತು ಮಾಚಿದೇವ ಮನೋವಿಲಾಸಂ ಮೊದಲಾದ ಮಹತ್ವದ ಗ್ರಂಥಗಳನ್ನು ರಚಿಸಿರುತ್ತಾರೆ. ಈಗಲೂ ಹುಬ್ಬಳ್ಳಿಯಲ್ಲಿರುವ ಪಂಡಿತ ಬಸವರಾಜ ಶಾಸ್ತ್ರಿಗಳು ಸಂಸ್ಕೃತದಲ್ಲಿ "ಸಿದ್ಧಲಿಂಗೇಶ್ವರ ಮಹಾಪುರಾಣ"ವನ್ನು ರಚಿಸಿರುತ್ತಾರೆ. ಹುಕ್ಕೇರಿ ಸದಾಶಿವಶಾಸ್ತ್ರಿಗಳು ಸಂಸ್ಕೃತದಲ್ಲಿ ಇತ್ತೀಚೆಗೆ ಅಥಣಿ ಶಿವಯೋಗಿಗಳ ಪುರಾಣವನ್ನು ರಚಿಸಿದ್ದಾರೆ. ಕೆರೆಯ ಪದ್ಮರಸರು, ಮಗ್ಗೆ ಮಾಯಿದೇವರು, ವಿರೂಪಾಕ್ಷಪಂಡಿತರು, ಷಡಕ್ಷರ ದೇವರು, ಬಸಪ್ಪಶಾಸ್ತ್ರಿಗಳು, ಮತ್ತು ಶಿವಯೋಗಿ ಸರ್ಪಭೂಷಣರು ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ ಅನೇಕ ಮಹತ್ವದ ಗ್ರಂಥಗಳನ್ನು ರಚಿಸಿರುತ್ತಾರೆ.

ಮರಾಠಿ ಭಾಷೆಯಲ್ಲಿ ಮನ್ಮಥಸ್ವಾಮಿಗಳು ಮತ್ತು ಶಂಕರಸ್ವಾಮಿಗಳು ಪ್ರಸಿದ್ಧ ಅಭಂಗ ಕರ್ತೃಗಳಾಗಿರುತ್ತಾರೆ. ಮರಾಠಿಯಲ್ಲಿ ವಿವೇಕ ಚಿಂತಾಮಣಿಯನ್ನು, ಸಿಂಘಣ ಪುರದ ಶಾಂತಲಿಂಗಸ್ವಾಮಿ ರಚಿಸಿರುತ್ತಾರೆ. ಇವರೇ ಚೆನ್ನಬಸವೇಶ್ವರರ "ಕರಣಹಸಿಗೆ" ಯನ್ನು ಮರಾಠಿಗೆ ಭಾಷಾಂತರಿಸಿರುತ್ತಾರೆ. ಬ್ರಹ್ಮದಾಸನೆಂಬ ಕವಿಯು ಮರಾಠಿಯಲ್ಲಿ ಪ್ರಭುಲಿಂಗಲೀಲೆಯನ್ನು ಓವೀಬದ್ಧವಾಗಿ ಬರೆದಿದ್ದಾನೆ. ಇತ್ತೀಚೆಗೆ ಸೊಲ್ಲಾಪುರದ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರು ಕನ್ನಡದಲ್ಲಿ ಸಿದ್ಧರಾಮ ಪುರಾಣವನ್ನು ಬರೆದು, ಮರಾಠಿ ಮತ್ತು ಹಿಂದಿಯಲ್ಲೂ ವಚನಗ್ರಂಥಗಳನ್ನು ಅನುವಾದ ಮಾಡಿ ಪ್ರಸಿದ್ಧರಾಗಿದ್ದಾರೆ.

ಭಾರತದ ರಾಷ್ಟ್ರಭಾಷೆ ಎನಿಸಿರುವ ಹಿಂದಿಯಲ್ಲಿ ತ್ರಿಭಾಷಾಕವಿ, ಉಭಯ ಗಾರ್ಯನಾಚಾರ್ಯ ಪಂಡಿತ ಪುಟ್ಟರಾಜ ಗವಾಯಿಗಳು "ಬಸವ ಪುರಾಣ"ವನ್ನು ಸಂಸ್ಕೃತದಲ್ಲಿಯೂ, ಅಕ್ಕಮಹಾದೇವಿಯ ಪುರಾಣವನ್ನು ಕನ್ನಡದಲ್ಲಿಯೂ, ಗುರುಗೀತೆಯನ್ನು ಸಂಸ್ಕೃತದಲ್ಲಿಯೂ ರಚಿಸಿ ಪ್ರಖ್ಯಾತರಾಗಿರುತ್ತಾರೆ.

ತೆಲುಗು ಭಾಷೆಯಲ್ಲಿ ಮದರಾಸಿನ ಆಂಧ್ರ ಪತ್ರಿಕೆಯ ನಾಗೇಶ್ವರರಾವ್ ಪಂತುಲು ಅವರು ಬಸವ ಪುರಾಣಮು, ಪಂಡಿತಾರಾಧ್ಯ ಚರಿತಮು ಮೊದಲಾದುವುಗಳನ್ನು ಪ್ರಕಟಿಸಿ ವೀರಶೈವ ಸಾಹಿತ್ಯಕ್ಕೆ ಮಹೋಪಕಾರ ಮಾಡಿರುತ್ತಾರೆ. ಮರಾಠಿಯಲ್ಲಿ ವಾರದ ಮಲ್ಲಪ್ಪನವರು ಹಲವು ವೀರಶೈವ ಸಂಸ್ಕೃತ ಗ್ರಂಥಗಳನ್ನು ಮರಾಠಿ ಟೀಕೆ ಟಿಪ್ಪಣಿಯೊಂದಿಗೆ ಪ್ರಕಟಿಸಿ ಲೋಕೋಪಕಾರ ಮಾಡಿರುತ್ತಾರೆ. ಮೈಸೂರು ಯಜಮಾನ ವೀರಸಂಗಪ್ಪನವರು, ಹೊಸಮಠದ ಬಸವಲಿಂಗ ಸ್ವಾಮಿಗಳು ಕರ್ನಾಟಕ ಭಾಷಾರತ್ನಂ ಪಿ. ಆರ್. ಕರಿಬಸವ ಶಾಸ್ತ್ರಿಗಳು, ವ್ಯಾಕರಣದ ಬಿ. ಮಲ್ಲಪ್ಪನವರು, ಬೀಜನಹಳ್ಳಿ ಮಲ್ಲಾರಾಧ್ಯರು, ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು, ಎಮ್. ಬಸವಲಿಂಗಶಾಸ್ತ್ರಿಗಳು, ಪಂಡಿತರತ್ನಂ ಶಿರಸಿ ಗುರುಶಾಂತ ಶಾಸ್ತ್ರಿಗಳು, ಬಿಜಾಪುರದ ಡಾ|| ಫ.ಗು. ಹಳಕಟ್ಟಿಯವರು ಶ್ರೀಶಂಭುಲಿಂಗ ಸ್ವಾಮಿಗಳು, ಬಸವರಾಜ ಶಾಸ್ತ್ರಿಗಳು ಕೋಡಿಕೊಪ್ಪ, ಧಾರವಾಡದ ವಿ. ಬಿ. ಹಾಲಭಾವಿಯವರು, ಪ್ರೊ|| ಎಸ್. ಎಸ್. ಬಸವನಾಳರು, ಬುದ್ಧಯ್ಯ ಪುರಾಣಿಕರು, ದ್ಯಾಂಪುರದ ಕಲ್ಲಿನಾಥಶಾಸ್ತ್ರಿಗಳು, ಧಾರವಾಡದ ಮೃತ್ಯುಂಜಯ ಮಹಾ ಸ್ವಾಮಿಗಳು, ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳು ಕಾಶಿಜಂಗಮವಾಡಿ ಮಠದ ಜಗದ್ಗುರುಗಳು, ಚಿತ್ರದುರ್ಗದ ಮುರುಘಾ ಮಠದ ಜಗದ್ಗುರುಗಳು ಸುತ್ತೂರು ವೀರಸಿಂಹಾಸನ ಮಠದ ಜಗದ್ಗುರುಗಳು, ಸಿರಿಗೆರೆಯ ತರಳಬಾಳು ಜಗದ್ಗುರುಗಳು, ಡಾ|| ಎಸ್. ಸಿ. ನಂದಿಮಠ, ಡಾ|| ಆರ್. ಸಿ. ಹಿರೇಮಠ, ಪ್ರೊ|| ಎಸ್. ಎಸ್. ಭೂಸನೂರು ಮಠ, ಬೆಂಗಳೂರಿನ ಎಂ. ಬಸವಾರಾಧ್ಯರು, ನಂ. ಶಿವಪ್ಪಶಾಸ್ತ್ರಿಗಳು, ನಂಜುಂಡಸ್ವಾಮಿಗಳು ಮೈಸೂರಿನ ಡಾ. ಎಲ್. ಬಸವರಾಜು, ಡಾ|| ಎಚ್. ತಿಪ್ಪೆರುದ್ರಸ್ವಾಮಿ, ಡಾ. ಟಿ. ಜಿ. ಸಿದ್ಧಪ್ಪಾರಾಧ್ಯರು, ವಿದ್ವಾನ್ ಎಮ್. ಜಿ. ನಂಜುಂಡಾರಾಧ್ಯರು, ಬಾಗಲ್ಕೋಟೆಯ ಪ್ರೊ|| ಉಮಾಪತಿಶಾಸ್ತ್ರಿಗಳು, ರಾಯಚೂರಿನ ಶಾಂತರಸರು ಡಾ|| ಹುಣಶ್ಯಾಳರು ಮೊದಲಾದ ಮಹನೀಯರೆಲ್ಲರೂ ಅನೇಕ ವೀರಶೈವ ಗ್ರಂಥಗಳನ್ನು ರಚಿಸಿ ವೀರಶೈವ ಸಾಹಿತ್ಯದ ಉದ್ಧಾರಕರೆಂದು ಕೀರ್ತಿಪಡೆದಿರುತ್ತಾರೆ.

ವೀರಶೈವ ಸಂಸ್ಕೃತಿಯು ಬೌದ್ಧರ ಅನುಕಂಪ, ಜೈನರ ಅಹಿಂಸೆ, ದ್ರಾವಿಡರ ಭಕ್ತಿಮಾರ್ಗ, ಆರ್ಯರ ತತ್ವಜ್ಞಾನ ಇವುಗಳ ಸಮನ್ವಯ ರೂಪವಾಗಿದೆ. ವೀರಶೈವರು ಸದಾಚಾರಿಗಳು, ಸಸ್ಯಾಹಾರಿಗಳು, ದೈವ ಭಕ್ತರು, ಅಹಿಂಸಾವಾದಿಗಳು ಸ್ವತಂತ್ರ ವಿಚಾರಿಗಳು

ಆಗಿದ್ದಾರೆ. ಶಿವಾಗಮಗಳಲ್ಲಿಯೂ ಕನ್ನಡ, ಸಂಸ್ಕೃತ, ಸಾಹಿತ್ಯದಲ್ಲಿಯೂ, ಕನ್ನಡ ಜಾನಪದ ಸಾಹಿತ್ಯದಲ್ಲಿಯೂ, ವೀರಶೈವ ಸಂಸ್ಕೃತಿಯನ್ನು ಅರಿಯಬಹುದು.

ವೀರಶೈವೇತರರಾದ ಹಲವು ಮಂದಿ ವಿದ್ವಾಂಸರು ಅಂದರೆ ಡಾ|| ಆರ್. ಆರ್. ದಿವಾಕರ್, ಪ್ರೊ|| ಟಿ. ಎಸ್. ವೆಂಕಣ್ಣಯ್ಯ, ಡಾ|| ಡಿ. ಎಲ್. ನರಸಿಂಹಾಚಾರ್, ಎಮ್. ಆರ್. ಶ್ರೀನಿವಾಸಮೂರ್ತಿ, ಹುಲ್ಲೂರು ಶ್ರೀನಿವಾಸಜೋಯಿಸ್, ರೆ. ಚೆನ್ನಪ್ಪ ಉತ್ತಂಗಿ, ಕಾವ್ಯಕಲಾನಿಧಿ ರಾಮಾನುಜ ಐಯ್ಯಂಗಾರ್ ಮೊದಲಾದವರು ವೀರಶೈವ ಸಾಹಿತ್ಯಕ್ಕೆ ಮಾಡಿದ ಉಪಕಾರವು ಸ್ಮರಣಾರ್ಹವಾಗಿದೆ.

ಧಾರವಾಡದ ಗಂಗಾಧರ ಮಡಿವಾಳೇಶ್ವರ, ರಾಚಿದೇವ ಕಿತ್ತೂರ, ಗದಿಗಯ್ಯ ಹೊನ್ನಾಪುರಮಠ, ಶಿರಾಳಕೊಪ್ಪದ ಚನ್ನಮಲ್ಲಪ್ಪನವರು, ಹೆಸರುಘಟ್ಟದ ಹೊನ್ನಪ್ಪನವರು, ಮಾಗಡಿ ವೀರಪ್ಪಶಾಸ್ತ್ರಿಗಳು, ತುಮಕೂರು ನಂಜುಂಡಸ್ವಾಮಿಗಳು, ಗುಬ್ಬಿ ವೀರೇಶ್ವರ ಶಾಸ್ತ್ರಿಗಳು, ದೇವನೂರು ಮಠದ ಶಿವಬಸವಸ್ವಾಮಿಗಳು, ಇಲ್ಲಿ ಸ್ಮರಣಾರ್ಹರು.

ಬೆಂಗಳೂರಿನ ನ್ಯಾಯಮೂರ್ತಿ ಟಿ. ಎ. ಮಲ್ಲಪ್ಪನವರು ನಾಸದೀಯಸೂಕ್ತ, ಪುರುಷಸೂಕ್ತ, ಉಪನಿಷತ್ತು ಮೊದಲಾದವುಗಳನ್ನು ಕುರಿತು ಭಾಷ್ಯಗಳನ್ನು ಬರೆದಿರುತ್ತಾರೆ. ಡಾ. ಜಿ. ರುದ್ರಪ್ಪನವರು ಕಾಶ್ಮೀರ ಶೈವವನ್ನು ಕುರಿತು ಕನ್ನಡದಲ್ಲಿಯೂ, ಇಂಗ್ಲೀಷಿನಲ್ಲಿಯೂ ಉಪಯುಕ್ತವಾದ ಗ್ರಂಥಗಳನ್ನು ಬರೆದಿದ್ದಾರೆ. ಡಾ|| ಸಿ. ಪಿ. ಬ್ರೌನರವರು ಪ್ರಭುಲಿಂಗಲೀಲೆ ಮತ್ತು ವೇಮನ ವಚನಗಳನ್ನೂ, ರಾವ್ ಸಾಹೇಬ್ ಹಯವದನ ರಾಯರು ಶ್ರೀಕರ ಭಾಷ್ಯವನ್ನೂ, ಡಾ. ಸಾಖರೆಯವರು ಲಿಂಗಧಾರಣ ಚಂದ್ರಿಕೆಯನ್ನೂ ಎಚ್. ದೇವೀರಪ್ಪನವರು ಬಸವಣ್ಣನವರ ವಚನಗಳನ್ನೂ ಇಂಗ್ಲೀಷಿಗೆ ಭಾಷಾಂತರಿಸಿರುತ್ತಾರೆ. ಬೆಂಗಳೂರು ಸರ್ಪಭೂಷಣ ಮಠದ ಶ್ರೀ ಶಿವಕುಮಾರಸ್ವಾಮಿಗಳು ಪ್ರಭುದೇವರ ವಚನಗಳನ್ನು ಡಾ. ಆರ್. ಆರ್. ದಿವಾಕರರವರು ವಚನಶಾಸ್ತ್ರ ರಹಸ್ಯವನ್ನು ಮೈಸೂರು ಎಂ. ರಾಜೇಶ್ವರಯ್ಯನವರು ಬಸವೇಶ್ವರ ವಚನವನ್ನು ಹಿಂದಿಗೂ ಅನುವಾದ ಮಾಡಿರುತ್ತಾರೆ. ಇತ್ತೀಚೆಗೆ ಬೆಂಗಳೂರು ಬಸವ ಸಮಿತಿಯವರು ಬಸವೇಶ್ವರ ವಚನಗಳನ್ನು ತೆಲುಗು, ತಮಿಳು, ಹಿಂದಿ, ಮರಾಠಿ, ಉರ್ದು ಮತ್ತು ಇಂಗ್ಲೀಷಿಗೆ ಭಾಷಾಂತರ ಮಾಡಿಸಿರುವುದು ಗಮನಾರ್ಹವಾಗಿದೆ.

ಈ ಸಮ್ಮೇಳನದ ಫಲಿತಾಂಶ ರೂಪವಾಗಿ ಕೆಲವು ನಿರ್ಣಯಗಳು ಮಹಾಸಭೆಯಲ್ಲಿ ಮಂಜೂರಾಗಲು ಇಲ್ಲಿಂದ ಶಿಫಾರ್ಸ್ ಆಗಬೇಕಾಗಿದೆ.

1. ತಾಳೆಯೋಲೆಯಲ್ಲಿ ಅಡಗಿ ಕುಳಿತಿರುವ ಕನ್ನಡ, ಸಂಸ್ಕೃತ, ತೆಲುಗು, ತಮಿಳು ಮೊದಲಾದ ಭಾಷೆಗಳಲ್ಲಿರುವ ಅಪ್ರಕಟಿತ ವೀರಶೈವ ಧರ್ಮ ಗ್ರಂಥಗಳು ಹಾಗೂ ಕಾವ್ಯಪುರಾಣಗಳು ಶುದ್ಧವಾಗಿಯೂ, ಸುಂದರವಾಗಿಯೂ ಅಚ್ಚಾಗಿ ಬೆಳಕಿಗೆ ಬರಬೇಕಾಗಿದೆ. 2. ವೀರಶೈವ ರಾಜರು, ಶರಣರು ಮತ್ತು ಶರಣೆಯರಿಗೆ ಸಂಬಂಧಪಟ್ಟ ಶಿಲಾ ಮತ್ತು ತಾಮ್ರದ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಬೇಕಾಗಿದೆ. 3. ವೀರಶೈವ ಸಾಹಿತ್ಯ ಮತ್ತು ಸಂಸ್ಕೃತಿಗಳ ಉದ್ಧಾರಕ್ಕಾಗಿ ಹಿಂದೆ ಮಹಾ ಸಭೆಯ ಅಧ್ಯಕ್ಷರಾಗಿದ್ದ ಡಾ. ಡಿ. ಸಿ. ಪಾವಟೆಯವರು ಪ್ರಾರಂಭಿಸಿ ನಡೆಸಿದ "ವೀರಶೈವ" ಎಂಬ ತ್ರೈಮಾಸಿಕವು, ಮಾಸಿಕವಾಗಿ ವೀರಶೈವ ಮಹಾ ಸಭೆಯ ಆಶ್ರಯದಲ್ಲಿ ಮತ್ತೆ ನಡೆಯಬೇಕಾಗಿದೆ. 4. ವೀರಶೈವ ಮಹಾ ಕವಿಗಳಾದ ಹಂಪೆಯ ಹರೀಶ್ವರ, ರಾಘವಾಂಕಪಂಡಿತ ಚಾಮರಸ, ಷಡಕ್ಷರದೇವ, ನಿಜಗುಣ ಶಿವಯೋಗಿ, ಪಾಲ್ಕುರಿಕೆ ಸೋಮನಾಥ, ಶಿವಪ್ರಕಾಶ ಸ್ವಾಮಿಗಳು, ಸರ್ವಜ್ಞಮೂರ್ತಿ, ವೇಮನ ಮೊದಲಾದವರ ಜಯಂತಿಗಳನ್ನು ಸಮಾಜದವರು ಮೇಲಿಂದಮೇಲೆ ಶ್ರೀ ಬಸವ ಜಯಂತಿಯನ್ನು ನಡೆಯಿಸುವ ಹಾಗೆ ನಾಡಿನಲ್ಲೆಲ್ಲಾ ಏರ್ಪಡಿಸುವುದು. 5. ಸಾಹಿತ್ಯದ ತಾಯಿ ಬೇರಿನಂತಿರುವ ಜನಪದ ಸಾಹಿತ್ಯದಲ್ಲಿ ಹುದುಗಿ ಕುಳಿತಿರುವ ಶರಣರ ಉಜ್ವಲ ಸಾಹಿತ್ಯ ಕೃತಿಗಳನ್ನು ಸಂಶೋಧಿಸಿ ಸಂಗ್ರಹಿಸುವುದು ಅಗತ್ಯವಾಗಿದೆ. 6. ವೀರಶೈವ ಮಹಾ ಕಾವ್ಯಗಳಾದ ಗಿರಿಜಾ ಕಲ್ಯಾಣ, ಸಿದ್ಧರಾಮ ಪುರಾಣ, ಬಸವರಾಜ ವಿಜಯ, ಪ್ರಭುಲಿಂಗಲೀಲೆ, ಚನ್ನಬಸವ ಪುರಾಣ ಪಂಡಿತಾರಾಧ್ಯ ಚರಿತೆ, ತ್ರಿಷಷ್ಠಿ ಪುರಾತನ ವಿಲಾಸ, ಬಸವ ಪುರಾಣ, ಪದ್ಮರಾಜ ಪುರಾಣ ಮತ್ತು ವೀರಶೈವ ಮಹಾ ಪುರಾಣ, ಮೊದಲಾದ ಗ್ರಂಥಗಳನ್ನು ಪುರಾಣ ಪ್ರವಚನ ಮಾಡುವುದು, ಕಾವ್ಯ ವಾಚನ ಮಾಡುವುದು ಮೊದಲಾದ ರೀತಿಗಳಿಂದ ಜನರಲ್ಲಿ ಪ್ರಚಾರ ಮಾಡಬೇಕಾಗಿದೆ.

7. ಆಕಾಶವಾಣಿ, ಸಂಗೀತ ಕಛೇರಿ ಮೊದಲಾದ ಸಂಸ್ಕೃತಿ ಪ್ರಸಾರ ಕೇಂದ್ರಗಳಲ್ಲಿ ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಮೈಲಾರದ ಶರಣರು, ಸೋಮೆಕಟ್ಟೆ ಸ್ವಾಮಿಗಳು, ಶಾಲ್ಯದ ಕೃಷ್ಣ ಪ್ರಭುಗಳು, ಮುಪ್ಪಿನ ಷಡಕ್ಷರಿಗಳು, ಘನಮಠಾರ್ಯರು, ಮುಳಗುಂದದ ಮಹಾಂತರು, ಮನ್ಮಥ ಸ್ವಾಮಿಗಳು ಮೊದಲಾದವರ ಅನುಭವ ಸಾಹಿತ್ಯವನ್ನು ಬಸವೇಶ್ವರಾದಿಗಳ ವಚನದಂತೆಯೇ ಪ್ರಚಾರಕ್ಕೆ ತರಬೇಕು. 8. ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವಂತೆ ಬಸವಪೀಠ ಅಥವಾ ವೀರಶೈವ ದರ್ಶನ ಪೀಠವನ್ನು ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಬೇಕು. 9. ವೀರಶೈವ ಧರ್ಮ ಮತ್ತು ಸಂಸ್ಕೃತಿಗಳನ್ನು ಪ್ರಚಾರ ಮಾಡುವ ಶಿವಕೀರ್ತನ, ಪುರಾಣ ಪ್ರವಚನ, ಲಾವಣಿ, ಗೀಗೀ ಪದ, ಕಂಸಾಳೆಯ ಪದಗಳೇ ಮೊದಲಾದ ಜಾನಪದ ಹಾಡುಗಳ ಪ್ರಸಾರಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. 10. ಮುಖ್ಯವಾಗಿ ವೀರಶೈವ ಧರ್ಮ, ದರ್ಶನ, ರಾಜಮನೆತನಗಳು, ಕವಿ ಕಾವ್ಯಗಳು ಮೊದಲಾದವುಗಳ ಅಧ್ಯಯನಕ್ಕಾಗಿ ವೀರಶೈವ ಮಹಾ ಸಭೆಯು ಎಲ್ಲಾ ಭಾಷೆಯ ವೀರಶೈವ ಸಾಹಿತ್ಯವನ್ನು ಒಳಗೊಂಡ ಒಂದು ದೊಡ್ಡ ಗ್ರಂಥ ಭಂಡಾರವನ್ನು ಸ್ಥಾಪಿಸಬೇಕು. 11. ವೀರಶೈವ ಸಂಸ್ಕೃತಿಯ ಪ್ರತೀಕಗಳಾದ ಕರಡಿ ಮೇಳ, ಕಣಿಗಿವಾದ್ಯ, ವೀರಭದ್ರನ ಖಡ್ಗ, ನಂದಿಧ್ವಜ, ಯಕ್ಷಗಾನ, ಭೃಂಗಿನೃತ್ಯ, ರಂಗನ ಕುಣಿತ, ಮೊದಲಾದವುಗಳ ಪ್ರಸಾರಕ್ಕಾಗಿ ಮಹಾಸಭೆಯು ಪ್ರಯತ್ನಿಸಬೇಕು. 12. ಈ ಎಲ್ಲಾ ಮಹತ್ಕಾರ್ಯ ಸಾಧನೆಗಾಗಿ ಘನಸರ್ಕಾರದಿಂದಲೂ, ವೀರಶೈವ ಧರ್ಮಪೀಠಗಳಿಂದಲೂ, ಶ್ರೀಮಂತ ವರ್ಗದವರಿಂದಲೂ, ಉದಾರ ದೇಣಿಗೆಯನ್ನು ಪಡೆಯಲು ಮಹಾಸಭೆಯು ಪ್ರಯತ್ನಿಸಬೇಕು. 13 ವೀರಶೈವ ಧರ್ಮ ಗ್ರಂಥಗಳನ್ನು, ಕಾವ್ಯ ಪುರಾಣಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗಾಗಿ ಒಂದು ಪಾರಿಭಾಷಿಕ ಶಬ್ದ ಕೋಶವನ್ನು ಮಹಾಸಭೆಯು ಸಿದ್ಧಗೊಳಿಸಬೇಕು. 14. ವೀರಶೈವ ಧರ್ಮ, ಸಾಹಿತ್ಯ ಸಂಸ್ಕೃತಿಗಳ ಉನ್ನತಿಗಾಗಿ ಹಲವು ವರ್ಷಗಳ ಕಾಲ ಉತ್ತಮ ರೀತಿಯಲ್ಲಿ ಪ್ರಕಟಗೊಂಡ ಬಿಜಾಪುರದ ಶಿವಾನುಭವ, ಧಾರವಾಡದ ಸಾಹಿತ್ಯ ಪತ್ರಿಕೆ, ಬೆಂಗಳೂರಿನ ಶರಣ ಸಾಹಿತ್ಯ, ಮೈಸೂರಿನ ಸದ್ಧರ್ಮ ದೀಪಿಕೆ, ಸಿಕಂದರಾಬಾದಿನ ವಿಭೂತಿ ಇವುಗಳ ಉಪಕಾರವನ್ನು ಇಲ್ಲಿ ನಾವು ಸ್ಮರಿಸಿಕೊಳ್ಳಬೇಕು. 15. ವೀರಶೈವ ಕವಿ ಚರಿತ್ರೆ, ವಿಜಯನಗರ, ಕಾಕತೀಯ, ಕೆಳದಿ, ಸ್ವಾದಿ, ಬೀಳಗಿ, ಕೊಡಗು, ಕಿತ್ತೂರು, ಬಿಜಾಪುರ, ಹಾಗಲವಾಡಿ ಮೊದಲಾದ ರಾಜಮನೆತನಗಳ ಚರಿತ್ರೆ, ವೀರಶೈವ ಧರ್ಮಕ್ಷೇತ್ರಗಳ ಹಾಗೂ ಮಠಮಾನ್ಯಗಳ ಚರಿತ್ರೆಗಳನ್ನು ಸಿದ್ಧಗೊಳಿಸಿ ಪ್ರಕಟಿಸುವ ಕಾರ್ಯ ಮಹಾಸಭೆ ಕೈಗೊಳ್ಳಬೇಕು.

ವೀರಶೈವ ಸಾಹಿತ್ಯದ ವಿಸ್ತಾರ, ವೈವಿಧ್ಯ ಮತ್ತು ಮಹತ್ವಗಳನ್ನು ಕುರಿತು ಇದುವರೆಗೆ ಸಿಂಹಾವಲೋಕನ ದೃಷ್ಟಿಯಿಂದ ಹಲವು ಸಂಗತಿಗಳನ್ನು ಸಂಗ್ರಹಿಸಿ ಹೇಳಲಾಗಿದೆ. ಇಂದಿನ ಸಾಹಿತ್ಯ ಸಮ್ಮೇಳನದಲ್ಲಿ ನೆರೆದಿರುವ ಆಹ್ವಾನಿತ ಮಹನೀಯರೆಲ್ಲರೂ, ತಮ್ಮ ತಮ್ಮ ವಿಷಯದಲ್ಲಿ ವಿದ್ವತ್ ಪೂರ್ಣವಾದ ಭಾಷಣಗಳನ್ನು ಮಾಡಿ ವೀರಶೈವ ಸಾಹಿತ್ಯಕ್ಕೆ ಹೆಚ್ಚು ಬೆಳಕು ತೋರುವರೆಂದು ನಂಬುತ್ತೇನೆ.

73ನೆಯ ಅ. ಭಾ. ವೀರಶೈವ ಮಹಾ ಸಭೆಯ ಅಂಗವಾಗಿ ನೆರವೇರಿದ ಮಹಿಳಾ ಗೋಷ್ಠಿಯ ಅಧ್ಯಕ್ಷೆಯವರ ಭಾಷಣ

— ಶ್ರೀಮತಿ ಶಾಂತಾದೇವಿ ಮಳೀಮಠ

ಸುಸಂಸ್ಕೃತರೂ, ವಿದ್ವನ್ಮಣಿಗಳೂ, ಅನುಭಾವಿಗಳೂ ಅಲಂಕರಿಸಿರುವ ಇಂದಿನ ಮಹಿಳಾ ಗೋಷ್ಠಿಯ ಅಧ್ಯಕ್ಷಸ್ಥಾನಕ್ಕೆ, ಯಾವುದೇ ಕಾಲೇಜಿಗೆ ಹೋಗದ, ಯಾವುದೇ ಡಿಗ್ರಿಯನ್ನು ಪಡೆಯದ ನನ್ನನ್ನು ಹೇಗೆ ಆರಿಸಿದರೋ, ಅದನ್ನು ಒಪ್ಪುವ ಧಾರ್ಷ್ಟ್ಯವನ್ನು ಇಂತಹ ನಾನು ಅದೆಂತು ಮಾಡಿದೆನೋ ನನಗೆ ಅರಿಯದಾಗಿದೆ. ಸ್ವಾಗತ ಸಮಿತಿಯ ಪರವಾಗಿ ಶ್ರೀಮತಿ ಲೀಲಾದೇವಿ ಆರ್. ಪ್ರಸಾದರು ಅಣ್ಣ ಶ್ರೀ ಎಚ್. ಆರ್. ಮಹಂತಯ್ಯನವರೊಡನೆ ಮನೆಗೆ ಬಂದು ವೀರಶೈವ ಮಹಿಳಾ ಗೋಷ್ಠಿಯ ಅಧ್ಯಕ್ಷರಾಗಲು ವಿನಂತಿಸಿದರು. ಆಗ

ಅಣ್ಣ ಮಹಂತಯ್ಯನವರು "ನೀವು ಒಪ್ಪಲೇಬೇಕು. ನೀವು ಒಪ್ಪಿಗೆ ಕೊಡುವವರೆಗೆ ನಾವು ಇಲ್ಲಿಂದ ಬಿಟ್ಟು ಕದಲುವುದಿಲ್ಲ" ಎಂದು ಆತ್ಮೀ ಭಾವದಿಂದ ಪಟ್ಟು ಹಿಡಿದಾಗ ಸೋಲಬೇಕಾಗಿ ಬಂತು. ನಿಮ್ಮವಳೆಂಬ ಕಕ್ಕುಲಾತಿಯಿಂದ ನೀವೆಲ್ಲ ನನ್ನನ್ನು ಕರೆತಂದ ನಿಮ್ಮ ವಿಶ್ವಾಸಪೂರ್ವಕ ಅಂತಃಕರಣಗಳಿಗೆ ನನ್ನ ವಂದನೆಗಳು. ಅದೇ ಅಂತಃಕರಣದಿಂದ ಈ ನನ್ನ ಸೇವೆಯನ್ನು ಪಡೆಯಬೇಕೆಂದು ವಿನಂತಿಸುತ್ತೇನೆ.

ನಿತ್ಯ ಕಾಲದಲ್ಲಿ ನಿರತರಾಗಿರುತ್ತಿದ್ದ, ನಿರಭಿಮಾನಿ ನಿರಹಂಕಾರಿ, ಮಹಾಶರಣ ಮಹಾಂತಯ್ಯನವರನ್ನು, ಮಹಾದೇವನು ಇಷ್ಟರಲ್ಲಿಯೇ ಕೈಲಾಸಕ್ಕೆ ಬರಮಾಡಿಕೊಳ್ಳುವನೆಂದು ಯಾರೂ ಎಣಿಸಿರಲಿಲ್ಲ. ಅವರ ಗುರುತರ ಸೇವೆ ಪರಮಾತ್ಮನಿಗೆ ಮೆಚ್ಚಿಗೆಯಾಗಿರಲಿಕ್ಕೆ ಸಾಕು ಅವರು ಇಲ್ಲಿದಿದ್ದರೆ, ಇಂದಿನ ಕಾರ್ಯಕ್ರಮಗಳನ್ನೆಲ್ಲಾ ಕಣ್ತುಂಬಾ ನೋಡಿ, ಅದೆಷ್ಟು ಸಂತಸಪಡುತ್ತಿದ್ದರೋ! ಪರಮಾತ್ಮನು ಅವರ ಆತ್ಮಕ್ಕೆ ಸಾಯುಜ್ಯವನೀಯಲಿ.

ವೀರಶೈವ ಮಹಿಳಾಗೋಷ್ಠಿಯು ವೀರಶೈವ ಮಹಾಸಭೆಗೆ ಜೋಡಿಸಲ್ಪಟ್ಟ ಒಂದು ಕಾರ್ಯಕ್ರಮವು ಸನ್ 1904ರಲ್ಲಿ ಪ್ರಾರಂಭವಾಗಿರುವ ಮಹಾಸಭೆಯ ಇಂದಿನ ಅಧಿವೇಶನವು 19ನೆಯದು. ಮಹಿಳಾಗೋಷ್ಠಿಯು ಅದರೊಡನೆ ಹುಟ್ಟಿದ್ದಲ್ಲ. ಇದರ ಇತಿಹಾಸದ ಬಗ್ಗೆ ಸಂಶೋಧಿಸಿದ ಹಾಗೂ 1960ರಲ್ಲಿ ಸೇರಿದ ಮಹಿಳಾಗೋಷ್ಠಿಯ ಸ್ವಾಗತಾಧ್ಯಕ್ಷಿಣಿಯರಾದ ಶ್ರೀಮತಿ ಶಾಂತಾದೇವಿ ಮಾಳವಾಡರು ಮಹಿಳಾಗೋಷ್ಠಿಯ ಮೊದಲನೆಯ ಅಧಿವೇಶನವು 1909ರಲ್ಲಿ ಬಳ್ಳಾರಿಯಲ್ಲಿ ನಡೆಯಿತೆಂದು ತಮ್ಮ ಭಾಷಣದಲ್ಲಿ ಹೇಳಿರುವರು. ಮಹಾಸಭೆಗೇ ಇಂತಹ ಮಂದಗತಿ ಪ್ರಾಪ್ತವಾಗಿದ್ದಾಗ ಮಹಿಳಾಗೋಷ್ಠಿಯ ಗತಿ ಏನು ? ಸುದೈವದಿಂದ ಈ ಸಲದ ಮಹಾಸಭೆಯ ಚುಕ್ಕಾಣಿಯೂ ಕಾರ್ಯದುರಂಧರರೂ, ದಕ್ಷರೂ, ಸ್ಫೂರ್ತಿಯ ಸೆಲೆಯೂ ಆದ ಶ್ರೀ ಜೆ. ಬಿ. ಮಲ್ಲಾರಾಧ್ಯರ ಕೈಸೇರಿದೆ. ಮುಂದಿನ ಏಳಿಗೆಗೆ ಇದೊಂದು ಶುಭಚಿಹ್ನೆಯೇ ಸೈ. ಇನ್ನು ಮಹಾಸಭೆಯು ತನ್ನ ಆಲಸ್ಯದ ಪೈಕಳಚಿ ನಾವೀನ್ಯತೆಯ ರೂಪುಗೊಳ್ಳುವದೆಂಬಲ್ಲಿ ಸಂದೇಹವಿಲ್ಲ. ಇನ್ನು ಮೇಲೆ ಮಹಾಸಭೆಯೂ, ಮಹಿಳಾಗೋಷ್ಠಿಯೂ ಹೊಸ ಚೈತನ್ಯ ಹೊಂದಿ ವೀರಶೈವರ ಅಭಿವೃದ್ಧಿಯು ಅವ್ಯಾಹತವಾಗಿ ಸಾಗುವಂತೆ ಮಾಡಲೆಂದು ಹಾರೈಸುವೆ.

ಸನ್ 1911ರಲ್ಲಿ ಬೆಳಗಾಂವಿನಲ್ಲಿ ನೆರೆದ ಮಹಿಳಾಗೋಷ್ಠಿಯಲ್ಲಿ ಆದ ಗೊತ್ತುವಳಿಗಳನ್ನು, 1960ರಲ್ಲಿ ಶಿವಯೋಗ ಮಂದಿರದಲ್ಲಿ ಸೇರಿದ ಗೋಷ್ಠಿಯ ಕಾಲದ ಪರಿಸ್ಥಿತಿಗಳೊಡನೆ ಹೋಲಿಸಿ, ಈ 50 ವರ್ಷಗಳ ಕಾಲಾಂತರದಲ್ಲಿ ಆದ ಪ್ರಗತಿಯ ಮೂಲಕ, ಸಾಮೂಹಿಕ ಸ್ಥಿತಿಯಲ್ಲಿ ಎದ್ದು ಕಾಣುವ ಮಹದಂತರವನ್ನು ಶ್ರೀಮತಿ ಶಾಂತಾದೇವಿಯವರು ತಮ್ಮ ಭಾಷಣದಲ್ಲಿ ಎತ್ತಿ ತೋರಿಸಿದ್ದಾರೆ. ಆ ನಂತರದ ಈಗಿನವರೆಗಿನ ಕಳೆದ ಹದಿನಾಲ್ಕೇ ವರ್ಷಗಳಲ್ಲಿ ಸಾಮಾಜಿಕ ಹಾಗೂ ವೈಜ್ಞಾನಿಕ ಪ್ರಗತಿಯು ನಾಗಾಲೋಟದಿಂದ ಓಡಿದೆ. ಮಾನವನು ಚಂದ್ರಲೋಕವನ್ನು ಮುಟ್ಟಿ ಅಲ್ಲಿ ಅಡ್ಡಾಡಿ ಬಂದಿದ್ದಾನೆ. ಅದೇ ಮೇರೆಗೆ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವೂ ಬಹುದೂರ ಮುಂದುವರಿಯುತ್ತಾ ಬಂದಿದೆ. ಹೊಸಕಾಲದ ನವ ವನಿತೆಯರು ಉನ್ನತೋನ್ನತ ವಿದ್ಯಾಶಿಖರಗಳನ್ನೇರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿದ್ದಾರೆ; ಅದೇಕೆ, ಮಹಾವಿದ್ಯಾಪೀಠದ ವ್ಹಾಯಿಸಚಾನ್ಸಲರೂ ಆಗಿದ್ದಾರೆ; ಅನೇಕರು ಹೆಸರಾಂತ ಡಾಕ್ಟರರಾಗಿದ್ದಾರೆ; ಡೆಪ್ಯುಟಿ ಕಮೀಶನರ; ಕಮೀಶನರ ಆಗಿದ್ದಾರೆ; ವಕೀಲರಾಗಿದ್ದಾರೆ; ಎಂಜನೀಯರ ಆಗಿರುವರಲ್ಲದೆ ಪೋಲೀಸ್ ಸೂಪರಿಡೆಂಟರು ಸಹ ಆಗಿದ್ದಾರೆ; ರಾಜ್ಯಗಳ ಮಂತ್ರಿಗಳೂ ಮುಖ್ಯಮಂತ್ರಿಗಳೂ ಆಗಿರುವರು. ವಿಧಾನಸಭೆಗೆ ಇಡೀ ಹಿಂದುಸ್ಥಾನದಲ್ಲಿಯೇ ಮೊದಲನೆಯ ಅಧ್ಯಕ್ಷಿಣಿಯರಾದ ಮಾನ್ಯ ಶ್ರೀಮತಿ ನಾಗರತ್ನಮ್ಮನವರು ಇಲ್ಲಿದ್ದಾರೆ. ಇಷ್ಟೇ ಏಕೆ ಇಡೀ ಭಾರತ ಭೂಮಿಯೇ ಆಗಿರುವರಲ್ಲವೇ ? ಬಾಹ್ಯಾಕಾಶದಲ್ಲಿ ಉಡ್ಡಾಣವನ್ನು ಮಹಿಳೆಯರು ಮಾಡಿ ಬಂದಿರುವರು. ಹೀಗಿರುವಾಗ ಪುರುಷರಿಗಿಂತ ಸ್ತ್ರೀಯು ಅದೇತರಲ್ಲಿ ಕಮ್ಮಿ ?

ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು "ಬಂಗ್ಲಾಸಮರ ವಿಜೇತಳು." ಅರಬ ರಾಜ್ಯಗಳೆಲ್ಲ ಒಟ್ಟಾಗಿ, ಸುತ್ತಲೂ ಎರಗಿದರೂ, ಕಲಿತನದಿಂದ ಕಾದಿ, ಅವರಿಗೆಲ್ಲ ಏಳುಕೆರೆಯ ನೀರು ಕುಡಿಸಿದ ವೀರರಮಣಿ ಇಸ್ರಾಯಿಲ್ ದೇಶದ ಪ್ರಧಾನಿ, ಗೋಲ್ಡಾಮೀರಳು. ಹೀಗೆ ಸ್ವತಂತ್ರ ದೇಶಗಳನ್ನು ಆಳಬಲ್ಲ, ತಮ್ಮ ದೇಶದ ಸ್ವಾತಂತ್ರ್ಯದ ರಕ್ಷಣೆಯನ್ನು ಮಾಡಬಲ್ಲ ಅನ್ಯದೇಶಗಳಿಗೆ ಸ್ವಾತಂತ್ರ್ಯವನ್ನು ಶೌರ್ಯದಿಂದ ದೊರಕಿಸಿಕೊಡಬಲ್ಲವರು ಸ್ತ್ರೀಯರಿದ್ದರೂ 'ನ ಸ್ತ್ರೀ

ಸ್ವಾತಂತ್ರ್ಯಮರ್ಹತಿ' ಎಂಬ ಹೇಳಿಕೆಯು ತೀರಾ ಅನುಚಿತವೂ ಅಗ್ರಾಹ್ಯವೂ ಆದದ್ದು.

ಗಂಡು-ಹೆಣ್ಣುಗಳ ಮೇಲಾಟ ಎಂದಿನಿಂದಲೂ ಇದೆ. ಇತ್ತೀಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಈ ಸೆಣಸಾಟವು ಅತಿ ತೀವ್ರಸ್ವರೂಪಕ್ಕೆ ಹೋಗಿದೆ. ತಾನೇ ಮೇಲೆಂದು ತೋರಿಸಲು ಹೆಣ್ಣು ಅನೇಕ ರೀತಿಯ ಪ್ರಯತ್ನಗಳನ್ನು ನಡೆಸಿದ್ದಾಳೆ. ಗಂಡು ಹೆಣ್ಣುಗಳ ಇಂತಹ ತಿಕ್ಕಾಟದಲ್ಲಿ ಅರ್ಥವಿಲ್ಲ. ಗಂಡು ಹೆಣ್ಣು ಇಬ್ಬರೂ ಮಾನವರೇ ಇರುವಾಗ ಕೀಳಿನ ಪ್ರಶ್ನೆಯೇ ಹುಟ್ಟುವುದಿಲ್ಲ. ಉಭಯತರೂ ಸಮಾನರೇ !

ಇದನ್ನು ಕನ್ನಡ ಕವಯಿತ್ರಿ ಸಂಚಿ ಹೊನ್ನಮ್ಮನು ತನ್ನ ಕಾವ್ಯದಲ್ಲಿ ಸೊಗಸಾಗಿ ಹೇಳಿರುವಳು.

ಕುವರನಾದೊಡೆ ಬಂದ ಗುಣವೇನದರಿಂದ
ಕುವರಿಯಾದೊಡೆ ಕುಂದೇನು ?
ಇವರೀರ್ವರೊಳೇಳ್ಗೆ ಪಡೆದವರಿಂದ
ಸವನಿಪುದಿಹಪರಸೌಖ್ಯ.

ಈ ಮೇರೆಗೆ ಹುಟ್ಟುತ್ತಲೇ ಯಾರೂ ಹೆಚ್ಚಲ್ಲ, ಕಡಿಮೆ ಅಲ್ಲ; ಸರಿಸಮಾನರು. ತಮ್ಮ ತಮ್ಮ ಕರ್ತೃತ್ವ ಶಕ್ತಿಯಿಂದಲೇ ಮೇಲು ಕೀಳು ಆಗುವರು.

ಪುರುಷನ ಒಡನಾಡಿಯಾದ ಸ್ತ್ರೀಯು, ಪುರುಷನಷ್ಟೇ ಬುದ್ಧಿ ಪ್ರಧಾನಳಿರುವಳು. ಅವಳಿಗೆ ಅವನಷ್ಟೇ ಸ್ವಾತಂತ್ರ್ಯಾಧಿಕಾರ ಹಾಗೂ ಸಮಾನತೆಗಳಿರುತ್ತವೆ. ಸ್ತ್ರೀಯ ದೈಹಿಕ ಸಾಮರ್ಥ್ಯ ಕಡಿಮೆ ಇದ್ದಾಕ್ಷಣ ಅವಳಿಗೆ ಅಬಲೆಯೆನ್ನುವದು ಸಲ್ಲದು. ಮಹಾತ್ಮಾಗಾಂಧಿಯವರ ಅಭಿಪ್ರಾಯದಂತೆ "ಈ ಬಲವನ್ನು ಪಶುಬಲ ಎಂದು ಅರ್ಥಮಾಡಿದರೆ ನಿಜಕ್ಕೂ ಸ್ತ್ರೀಯರು ಈ ಪಶು–ಸಾಮರ್ಥ್ಯದಲ್ಲಿ ನಿರ್ಬಲರು. ಆದರೆ ಈ ಬಲವನ್ನು ನೈತಿಕ ಬಲವೆಂದು ಭಾವಿಸಿದರೆ ಹೆಣ್ಣು ಮಕ್ಕಳು ಗಂಡಸರಿಗಿಂತಲೂ ಆ ಶಕ್ತಿಯಲ್ಲಿ ಸಾವಿರಪಾಲು ಸಮರ್ಥರು."

ಹೆಣ್ಣೂ ಗಂಡೂ ಮಾನವರೇ ಆಗಿರುವುದರಿಂದ ಅವರಲ್ಲಿ ದೇವದತ್ತ ಸಮಾನತೆ ಇರುವುದಾದರೂ, ಅವರ ದೈಹಿಕ ನಿರ್ಮಾಣದಲ್ಲಿ ಭಿನ್ನತೆ ಇರುವುದೆಂಬುದು ನಿರ್ವಿವಾದವಾದುದು. ಆದರಿಂದಾಗಿ ಅವಳ ಗುಣ ಸ್ವಭಾವದಲ್ಲಿಯೂ ಕೆಲಮಟ್ಟಿಗೆ ಭಿನ್ನತೆ ಇರುವದು, ಅಲ್ಲದೆ ಅವಳ ಮನಸ್ಸಿನ ನಿರ್ಮಾಣದಲ್ಲಿಯೂ ಕೆಲವು ವ್ಯತ್ಯಾಸಗಳಿಲ್ಲದಿಲ್ಲ. ಹೀಗೆ ಹಲವಾರು ವಿಷಯಗಳಲ್ಲಿ ಅವಳಲ್ಲಿಯೂ ಕೆಲವು ವೈಶಿಷ್ಟ್ಯಗಳಿರುವವು. ತ್ಯಾಗವು ಹೆಣ್ಣಿನಲ್ಲಿ ಸ್ವಭಾವ ಜನ್ಯವಾದದ್ದು, ಹೆಣ್ಣು ಸ್ವಾರ್ಥತ್ಯಾಗದ ಅವತಾರವೆಂದು ಹೇಳಿದರೆ ತಪ್ಪಾಗದು, ಅವಳು ಕರುಣಾಮಯಿ. ಹೆಣ್ಣಿಗೆ ನೈಜವಾಗಿ ಬಂದ ಪ್ರತಿಭೆಗಳನ್ನೇ ಬೆಳೆಸಿಕೊಂಡರೆ ಅವುಗಳಲ್ಲಿ ಸ್ವಾಭಾವಿಕವಾಗಿ ಮೇಲ್ಮೆ ಹೊಂದುವಳು. ಆದುದರಿಂದ ಈ ವಿಷಯಗಳ ಕಡೆಗೆ ಮಹಿಳೆಯರು ವಿಶೇಷ ಗಮನಕೊಡಬೇಕು.

ಸೈನ್ಯ ಸಾಮರ್ಥ್ಯದಿಂದಲೂ, ಪಶುಬಲದಿಂದಲೂ ಬಲಾಢ್ಯರಾಗಿದ್ದ ಬ್ರಿಟಿಷರನ್ನು ಎದುರಿಸುವುದು ಭಾರತೀಯರಿಗೆ ಅಸಾಧ್ಯವಾಗಿತ್ತು. ಅಂತಹವರನ್ನು ಓಡಿಸಿ ಸ್ವಾತಂತ್ರ ಗಳಿಸಲು, ಮಹಾತ್ಮಾಗಾಂಧಿಯವರು ಒಂದು ಹೊಸ ತಂತ್ರವನ್ನು ಶೋಧಿಸಿದರು. ಇದೇ ಬೇರೆ ಬೇರೆ ಹಂತಗಳಲ್ಲಿ ಅಸಹಕಾರವೆಂದೂ, ಸತ್ಯಾಗ್ರಹವೆಂದೂ ಹೆಸರು ಪಡೆಯಿತು. ಈ ತಂತ್ರವನ್ನು ಹೆಂಗಸರು ಎಂದಿನಿಂದಲೂ ತಮ್ಮತಮ್ಮ ಮನೆತನಗಳಲ್ಲಿ ಉಪಯೋಗಿಸುತ್ತಿದ್ದರೆಂತಲೂ, ಮಹಾತ್ಮಾಗಾಂಧಿಯವರು ಇದನ್ನು ಹೆಂಗಸರಿಂದಲೇ ಕಲಿತಿರಬೇಕೆಂತಲೂ ಹೇಳಿದರೆ ತಪ್ಪಾದೀತೇ ? ತನ್ನ ಬೇಡಿಕೆಯನ್ನು ಮನ್ನಿಸದ, ಪ್ರಬಲ ಗಂಡನನ್ನು ಹಾದಿಗೆ ತರಲು, ಸಿಟ್ಟು, ಸೆಡವು, ಉಪವಾಸಾದಿ ವಿಧಾನಗಳನ್ನು ಹೆಂಡತಿಯು ಅವನ ವಿರುದ್ಧ ಉಪಯೋಗಿಸುವದಿಲ್ಲವೇನು ? ಅದು ಅಸಹಕಾರವಲ್ಲದೆ ಇನ್ನೇನು ? ಇಂದರಿಂದಲೇ ಸತ್ಯಾಗ್ರಹ ಹುಟ್ಟುವದಲ್ಲವೆ ? ಈ ಉಪಾಯಗಳನ್ನು ಮಹಿಳೆಗೆ ಯಾರೂ ಕಲಿಸಿರುವದಿಲ್ಲ. ಆದರೂ ಪ್ರತಿಯೊಬ್ಬ ಹೆಂಗಸು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಇವುಗಳನ್ನು ಉಪಯೋಗ ಮಾಡಿಯೇ ಮಾಡುತ್ತಾಳೆ. ಅವಳ ನೈಜಗುಣವು. ತನ್ನ ಮಾತನ್ನೇ ನಡೆಸುವ, ಹೆಂಡತಿಯ ಒಳ್ನುಡಿಗಳಿಗೆ ಕಿವಿಗೊಂಡಿರುವ, ಮಣಿಯದ ಗಂಡನನ್ನು ಬಲಪ್ರಯೋಗವಿಲ್ಲದೇ ಮಣಿಸುವ ಹೆಣ್ಣಿನ ಈ ಉಪಾಯದ ಸಾಮರ್ಥ್ಯವನ್ನು ಕಂಡು ಹಿಡಿದು, ಅದನ್ನು ಮಹಾತ್ಮಾಗಾಂಧಿಯು ರಾಜಿಕೀಯಕ್ಕೆ ಉಪಯೋಗಿಸಿಕೊಂಡಿರಲಿಕ್ಕೆ ಸಾಕು.

ವೀರಶೈವ ಧರ್ಮವು ಬಹು ಪುರಾತನವಾದದ್ದು. ಮೊಹೆಂಜೋದಾರೋನಲ್ಲಿ ಸಿಕ್ಕ ಅವಶೇಷಗಳಿಂದ 5000 ವರ್ಷಗಳ ಪೂರ್ವದಲ್ಲಿಯೇ ಲಿಂಗಗಳ ಚಿತ್ರಗಳೂ ಲಿಂಗಪೂಜೆಯೂ ಇದ್ದಿತೆಂದು ವೇದವೇದಾಂತ ವಿದ್ಯಾವಾಚಸ್ಪತಿ, ಹಾಯಕೋರ್ಟಿನ ನಿವೃತ್ತ ನ್ಯಾಯಮೂರ್ತಿ ಶ್ರೀ ಟಿ. ಎನ್. ಮಲ್ಲಪ್ಪನವರು "ವೀರಶೈವದ ಉಗಮ ಮತ್ತು ಪ್ರಗತಿ" ಎಂಬ ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ.

ವೀರಶೈವ ಧರ್ಮವು ಅವನತ ಸ್ಥಿತಿಗೆ ಇಳಿದಿದ್ದಾಗ 12 ನೆಯ ಶತಮಾನದಲ್ಲಿ ಜಗಜ್ಜ್ಯೋತಿಬಸವೇಶ್ವರರು ಹುಟ್ಟಿ ಅದನ್ನು ಬಹುವಾಗಿ ಸುಧಾರಿಸಿ ಮೇಲಕ್ಕೆತ್ತಿದರು. ಬಸವೇಶ್ವರರು ಮಾಡಿದ ಸುಧಾರಣೆಗಳು– ಹಿಂದೂ ಧರ್ಮದಲ್ಲಿ ಹೇಳಿರುವ ಮೇಲು ಕೀಳುಗಳನ್ನು ಬದಿಗೊತ್ತಿ ಎಲ್ಲರ ಸರಿಸಮಾನತೆಯ ಮೇಲೆ ಆಧಾರಿತವಾಗಿದ್ದವು. ಮನುಷ್ಯರು ಕೈಕೊಳ್ಳುವ ವೃತ್ತಿಗಳು ಮೇಲು ಕೀಳಾಗಿರುವವೆಂಬ ಆಧಾರದ ಮೇಲೆ ಕಟ್ಟಲ್ಪಟ್ಟ ವರ್ಣಾಶ್ರಮ ಧರ್ಮದ ತತ್ವಗಳನ್ನು ತೊಡೆದು ಹಾಕಿ, ಸರ್ವರ ಸಮಾನತೆಯ ಆಧಾರದ ಮೇಲೆ ಬಸವೇಶ್ವರರು ವೀರಶೈವ ಧರ್ಮವನ್ನು ಪಸರಿಸಿದರು. ಲಿಂಗ ಧರಿಸಿ ವೀರಶೈವನಾದವನು ವೃತ್ತಿಯಿಂದ ವೇದವನ್ನೋದುವ ಬ್ರಾಹ್ಮಣನಾಗಲಿ, ಪಾದರಕ್ಷೆಯನ್ನು ಹೊಲಿಯುವ ಮಚ್ಚಿಗಾರನಾಗಲಿ, ಇಬ್ಬರೂ ಸರಿಸಮಾನರೇ. ಅವರಲ್ಲಿ ಭೇದವನ್ನು ಮಾಡಕೂಡದು ಎಂದು ಸಾರಿ ಅದರಂತೆಯೇ ಆಚರಿಸಿದರು. ಬಸವಣ್ಣನು ತನ್ನ ವಚನದಲ್ಲಿ ಈ ರೀತಿ ಹೇಳಿರುವನು–

> **ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ**
> **ಹಾಸನಿಕ್ಕಿ ಸಾಲಿಗನಾದ**
> **ವೇದವನೋದಿ ಹಾರುವನಾದ**
> **ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ?**
> **ಇದು ಕಾರಣ ಕೂಡಲಸಂಗಮದೇವಾ**
> **ಲಿಂಗಸ್ಥಲವನರಿದವನೆ ಕುಲಜನು.**

ಅಂತೆಯೇ ಡೋಹರ ಕಕ್ಕಯ್ಯ, ಮೇದಾರ ಕ್ಯಾತಯ್ಯ, ಹಡಪದ ಅಪ್ಪಣ್ಣ ಮಡಿವಾಳ ಮಾಚಿದೇವ, ಹರಳಯ್ಯ ಮೊದಲಾದ ಅನೇಕರು ಅವನ ಕಾಲಕ್ಕೆ ಶಿವಶರಣರೆನಿಸಿ ಸರ್ವ ಸಮಾನತೆಯನ್ನು ಹೊಂದಿದ್ದರು.

ಇಂತಹ ಅಲೌಕಿಕ ಸಮತಾವಾದಿ ವೀರಶೈವ ಸಮಾಜದಲ್ಲಿ ಮಹಿಳೆಯರನ್ನು ಕಡೆಗಣಿಸುವುದು **ಸಾಧ್ಯವೇ?** ವೀರಶೈವನಾಗಿರುವವನು ಗಂಡಿರಲಿ, **ಹೆಣ್ಣಿ**ರಲಿ ಸ್ಥಾನಮಾನ ಒಂದೇ, ಇಬ್ಬರು ಸರಿಸಮಾನರು. ಆದೇ ಹಿಂದೂ ಧರ್ಮದಲ್ಲಿ ಬ್ರಾಹ್ಮಣ ಸ್ತ್ರೀಗೆ ಕೂಡ ಪುರುಷನ ಸಮಾನ ಸ್ಥಾನವಿಲ್ಲ. ಅವಳಿಗೆ ದೀಕ್ಷಾ ಸಂಸ್ಕಾರವಿಲ್ಲ, ಪುರುಷನಂತೆ ಅವಳು ದ್ವಿಜಳಲ್ಲ-ಜನಿವಾರವಿಲ್ಲ ದೇವರ ಪೂಜೆ ಮಾಡುವ ಅಧಿಕಾರವಿಲ್ಲ, ವೀರಶೈವ ಮಹಿಳೆಯು ಗಂಡಸಿನಂತೆಯೇ ಮೈಮೇಲೆ ಲಿಂಗ ಧರಿಸುವಳು. ಆ ಇಷ್ಟಲಿಂಗವನ್ನು ಅವನಂತೆಯೇ ಪೂಜಿಸಬಲ್ಲಳು. ಅಂತೆಯೇ ತನ್ನ ಪೂಜೆಯ ಫಲದಿಂದ ತಾನೇ ಕೈಲಾಸವನ್ನು ಪಡೆಯಬಲ್ಲಳು. ಇದಕ್ಕೆ ನೀಲಮ್ಮನ ಉದಾಹರಣೆಯೇ ಸಾಕು. ತನ್ನ ಅಂತ್ಯಕಾಲಕ್ಕೆ ಬಸವೇಶ್ವರನು ಸಂಗಮನಾಥನಲ್ಲಿ ಐಕ್ಯಹೊಂದುವ ಮುಂಚೆ ತಂಗಡಿಗಿಯಲ್ಲಿದ್ದ ತನ್ನ ಮಡದಿ ನೀಲಮ್ಮನನ್ನು ಕರೆ ಕಳುಹಲು "ಅಲ್ಲಿದ್ದ ಸಂಗಮನು ಇಲ್ಲಿಲ್ಲವೇ ? ಅಲ್ಲಿಗೇಕೆ ಬರಬೇಕು ? ಪರಮಾತ್ಮನಲ್ಲಿ ಇಲ್ಲಿಯೇ ನಾನು ಐಕ್ಯವಾಗುವೆನು" ಎಂದು ಮಾರುತ್ತರ ಹೇಳಿ ತಂಗಡಿಯಲ್ಲಿಯೆ ಕುಳಿತು ಅಂಗೈಯಲ್ಲಿ ಇಷ್ಟಲಿಂಗವನ್ನು, ಇಟ್ಟುಕೊಂಡು ಧ್ಯಾನಮಾಡುತ್ತಾ ಪರಶಿವನಲ್ಲಿ ಐಕ್ಯ ಹೊಂದಿದಳು. ಇಂಥ ಮನೋಧೈರ್ಯ, ನಿಷ್ಠೆ, ಸಾಹಸ ಅವಳಿಗೆ ಬಂದದ್ದು ವೀರಶೈವದ ಉದಾತ್ತ ತತ್ವ ಮತ್ತು ಆಚರಣೆಗಳಿಂದ.

ಈ ಮೇರೆಗೆ ಗಂಡಿಗೆ ಎಲ್ಲ ರೀತಿಯಿಂದಲೂ ಹೆಣ್ಣು ಸರಿಸಮಾನಳಾಗಿ-ಅಲ್ಲ, ಗಂಡಿಗಿಂತಲೂ ಮೇಲಾಗಿ ಕಾರ್ಯಮಾಡಿ ತೋರಿಸಿದ ಉದಾಹರಣೆಗಳು ಒಂದಲ್ಲ ನೂರಾರಿವೆ, ಮತ್ತು ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಣಬರುತ್ತವೆ. ತಾತ್ವಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿಯಂತೂ ಅನೇಕ ಶಿವಶರಣೆಯರು ಆಗಿಹೋಗಿದ್ದಾರೆ ಅವರಲ್ಲಿ ದೈದೀಪ್ಯಮಾನವಾಗಿ ಬೆಳಗುವ ಅಕ್ಕಮಹಾದೇವಿಯು ಎಲ್ಲಕ್ಕೂ ಶ್ರೇಷ್ಠಳು. ಬ್ರಹ್ಮಚರ್ಯೆಯಿಂದಿದ್ದು ವಿರಾಗಿಣಿಯಾದವರು ಮಹಿಳೆಯರಲ್ಲಿ ತೀರ ಕಡಿಮೆ. ಅಕ್ಕಮಹಾದೇವಿಯು ಆಜನ್ಮ ಬ್ರಹ್ಮಚಾರಿಣಿಯಾಗಿ ಉಳಿದು ವೈರಾಗ್ಯಮಾರ್ಗ ತಳೆದು ಕಲ್ಯಾಣದಲ್ಲಿ ಅನುಭವ ಮಂಟಪದಲ್ಲಿ ವಿರಾಜಿಸಿದಳು. ತಾನು ಹುಟ್ಟುತಲೆ ಇದ್ದಂತೆ ಅನಾವಸ್ತ್ರಳಾಗಿ ಅವಳು ವಿರಕ್ತಿಯಿಂದ ಆಯುಷ್ಯವನ್ನು ಕಳೆದ ಕತೆ ನೀವು ಬಲ್ಲಿರಿ. ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಗಂಡನೆಂದುನಂಬಿ 'ಚೆನ್ನಮಲ್ಲಿಕಾರ್ಜುನ ಗಂಡನಾದ ಬಳಿಕ ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ' ಎಂದು ಹೇಳಿದ್ದಾಳೆ. ಹಾಗೂ ಕೊನೆಗೆ ಅವನನ್ನೇ ತನ್ನ ಗಂಡನನ್ನಾಗಿ ಪಡೆದಿದ್ದಾಳೆ. ಗಂಡನೇ ದೇವರೆಂದು ಹೇಳುವವರಿರುತ್ತಿರುವಾಗ, ಇವಳು ದೇವರನ್ನೇ ತನ್ನ ಗಂಡನನ್ನಾಗಿ ಮಾಡಬಹುದೆಂಬುದನ್ನು ತನ್ನ ಆಚರಣೆಯಿಂದ ತೋರಿಸಿ ಕೊಟ್ಟಿದ್ದಾಳೆ. ಇದನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸಿದಲ್ಲಿ ದೇವರನ್ನೇ ಗಂಡನನ್ನಾಗಿ ಒಲಿಸುವ ಶಕ್ತಿ ಹೆಣ್ಣಿಗಿರುವಾಗ, ತನಗೆ ಇಷ್ಟವಾದ ಮಾನವನನ್ನು ಗಂಡನನ್ನಾಗಿ ವರಮಾಡಿಕೊಳ್ಳಲಾರಳೇ ? ಎಂಬುದನ್ನು ಆಲೋಚಿಸಬೇಕು. ಇಂಥ ಶಕ್ತಿಯನ್ನು ಮಹಿಳೆಯರು ಕರಗತ ಮಾಡಿಕೊಂಡರೆ ಮಾರುಕಟ್ಟೆಯಲ್ಲಿ ವರದಕ್ಷಿಣೆ ಕೊಟ್ಟು ಗಂಡು ಕೊಳ್ಳುವ ಹೀನ ವ್ಯವಹಾರ ತಾನೇ ನಿಂತುಹೋಗಬಹುದು.

ಬಸವನ ಕಾಲದಲ್ಲಿ ವೀರಶೈವವು ಉನ್ನತಿಯ ಕಳಸವನ್ನೇರಿತ್ತು. ಅವನ ತರುವಾಯ ಬಿಜ್ಜಳ ಹಾಗೂ ಅವನ ಮಗ ನಡೆಸಿದ ಹಿಂಸಾಕೃತಿಗಳಿಂದ ಹತ್ತಿಕ್ಕಲ್ಪಟ್ಟು ಅದು ಕ್ಷೀಣತೆಯನ್ನು ಹೊಂದಿತು. ಮುಂದೆ ವಿಜಯನಗರದ ವೀರಶೈವ ಅರಸರ ಕಾಲದಲ್ಲಿ ಪುನಃ ಕಳೆದುಂಬಿತ್ತು. ಆದರೆ ಮತ್ತೆ ಅದೀಗ ಅವನತ ಸ್ಥಿತಿಗೆ ಇಳಿದಿದೆ. ಇದಕ್ಕೆ ಅನೇಕ ಕಾರಣಗಳಿವೆ. ಆಂಗ್ಲರ ಆಡಳಿತವಾಗಿ ಕ್ರಿಶ್ಚಿಯನ್ ಪಾದ್ರಿಗಳ ಧರ್ಮಪ್ರಸಾರ ಕಾರ್ಯ ನಡೆದಂತೆಲ್ಲ ಭಾರತೀಯ ಧರ್ಮಗಳ ನ್ಯೂನತೆಗಳು ದೊಡ್ಡವಾಗಿ ತೋರಿಸಲ್ಪಟ್ಟವೆ. ಪಾಶ್ಚಾತ್ಯ ವಿದ್ಯಾಭ್ಯಾಸ ಬೆಳೆದಂತೆಲ್ಲ ಚಿಕಿತ್ಸಕ ವಿಚಾರಸರಣಿ ಬೆಳದುದಲ್ಲದೆ, ಆಚಾರದಲ್ಲಿಯ ಕಟ್ಟುನಿಟ್ಟುಗಳು ಕಳಚಿ ಹೋಗಹತ್ತಿವೆ. ಹೀಗಾಗಿ ಧರ್ಮ, ಭಾವುಕತೆ ಮತ್ತು ದೈವಭಕ್ತಿ ಕಡಿಮೆಯಾಗಹತ್ತಿವೆ. ಧರ್ಮದ ಮೇಲ್ಮೆ ಅದರಲ್ಲಿ ಶ್ರದ್ಧೆ ಇವು ಅಳಿಯಹತ್ತಿವೆ.

ವೀರಶೈವರಲ್ಲಿ ಮತ್ಸರ, ಅಸೂಯೆಗಳು ಬಹಳ. ಒಬ್ಬರು ಮುಂದೆ ಹೋದರೆ, ಇನ್ನೊಬ್ಬರಿಗೆ ಹೊಟ್ಟೇಕಿಚ್ಚು. ಮುಂದೆ ಹೋಗುವವರಿಗೆ ಅಡ್ಡಗಾಲು ಹಾಕುವರು. ಇದಲ್ಲದೆ ಜಾತಿಭೇದ ಪುನಃ ಒಳಸೇರಿದೆ. ಹೀಗಾಗಿ **ಸಮಾಜ**ದಲ್ಲಿ ತುಂಬಾ ಒಡಕು **ಪಕ್ಷಪಂಗಡಗಳಿಗೆ** ಎಣೆಯೇ ಇಲ್ಲ. ಒಂದು ಪಂಗಡದವರನ್ನು ಎರಡನೆಯ ಪಂಗಡದ ವಿರುದ್ಧ ಬೇರೆ ಸಮಾಜದವರು ಹುರಿದುಂಬಿಸಿ ಒಡಕನ್ನು ಬೆಳೆಸಿ, ಪಂಗಡಗಳು ಒಂದುಗೂಡದಂತೆ ಮಾಡುತ್ತಾರೆ. ಇದರಿಂದ ನಾವು ಅಧೋಗತಿಗಿಳಿದಿದ್ದೇವೆ. ನಾವೆಲ್ಲ ಲಿಂಗವಂತರು-ವೀರಶೈವರು ಎಂದು ಹೇಳಿಸಿಕೊಳ್ಳುತ್ತಿರುವೆವಷ್ಟೇ ? ಆದರೆ ನಮ್ಮಲ್ಲಿ ಎಷ್ಟೋ ಜನ ಲಿಂಗವನ್ನೇ ಧರಿಸುವುದಿಲ್ಲ. ಅರಿಯದ ದಡ್ಡರು ಹೀಗೆ ಮಾಡುವರಷ್ಟೇ ಅಲ್ಲ, ಓದಿದ ವಿದ್ಯಾವಂತರೇ ಅನಾಸ್ಥೆಯಿಂದಲೋ, ಅನಾದರದಿಂದಲೋ ಲಿಂಗ ಬಿಟ್ಟಿರುತ್ತಾರೆ. ಮುಖ್ಯ ಕರ್ತವ್ಯಕ್ಕೇ ಈ ದೆಸೆ ಬಂದಿರುವಾಗ ಮಿಕ್ಕ ಆಚರಣೆಗಳ ಪಾಡೇನು ? ಧರ್ಮ ಉಳಿಯುವದೆಂತು ?

ಸ್ವಭಾವತಃ ಸ್ತ್ರೀಯು ಧರ್ಮಪ್ರಿಯಳು. ಧರ್ಮದ ನಿತ್ಯನೇಮಗಳನ್ನು ಪಾಲಿಸುವದು ಅವಳಿಗೆ ಇಷ್ಟ. ದೇವಭಕ್ತಿಯು ಅವಳಿಗೆ ಹೆಚ್ಚು.

"ಗಂಡಸರು ದೇವರನ್ನು ಮಾಡಬಲ್ಲರು. ಅವುಗಳನ್ನು ಪೂಜಿಸುವವರು ಹೆಂಗಸರು" ಎಂಬ ಇಂಗ್ಲೀಷ್ ಜಾಣ್ಣುಡಿಯು ಇದನ್ನೇ ಸಮರ್ಥಿಸುತ್ತದೆ. ಅವಳು ಸ್ವಭಾವತಃ **(conservate)** ಅನುಸಾರಿಣಿ ಯಾವಾಗಲೂ ಪರಂಪರಾನುವರ್ತಿನಿ. ಹೊಸತನ ಕಂಡಾಗಲೇ ಅದರತ್ತ ಆಕರ್ಷಿತಳಾಗಿ, ಹಳೆಯದನ್ನು ಬಿಟ್ಟುಕೊಡುವ ಪ್ರವೃತ್ತಿ ಕಡಿಮೆ. ಭಾರತದಲ್ಲಿ ಆಂಗ್ಲರ ಪ್ರಭಾವ ಬೀಳುತ್ತಲೇ ಇಲ್ಲಿಯ ಗಂಡಸರು ನೆಕ್ಟಾಯಿ, ಕಾಲರ, ಪ್ಯಾಂಟ್, ಹ್ಯಾಟ್, ಬೂಟ್ ಮೊದಲಾದುವುಗಳನ್ನು ಧರಿಸಲು ಪ್ರಾರಂಭಿಸಿದರು. ಆದರೆ ಹೆಂಗಸರು ಝುಗಾ, ಫ್ರಾಕುಗಳನ್ನಾಗಲೀ ಹ್ಯಾಟುಗಳನ್ನಾಗಲಿ ಧರಿಸಲಿಲ್ಲ. ಇಂಗ್ಲೆಂಡ್ ಫ್ರಾನ್ಸ್ ಅಮೆರಿಕ ದೇಶಗಳಿಗೆ ಹೋದಾಗ ಅಲ್ಲಿದ್ದ ಭಾರತೀಯರು ಎದುರಾದರೆ ಗಂಡಸರು ನೂರಕ್ಕೆ ನೂರು ಪಾಶ್ಚಿಮಾತ್ಯ ಉಡುಪನ್ನು ಧರಿಸಿರುತ್ತಾರೆ. ಆದರೆ ಹೆಂಗಸರು ಮಾತ್ರ ಸೀರೆಯನ್ನೇ ಉಟ್ಟು ಭಾರತೀಯರೆಂಬ ಹೆಸರನ್ನು ತರುತ್ತಾರೆ. ಭಾರತದಲ್ಲಿಯೂ ಮನೆಗಳಲ್ಲಿ ಹಬ್ಬಹುಣ್ಣಿಮೆಗಳನ್ನು ಮಾಡುವವರೂ ಆ ಕಾಲಕ್ಕೆ ಪೂಜೆ ಪುನಸ್ಕಾರಗಳನ್ನು ಆಚರಿಸುವವರೂ ಹೆಂಗಸರೇ ! ಹೀಗೆ ಸ್ವಭಾವತಃ ಧಾರ್ಮಿಕ ಪ್ರವೃತ್ತಿಯವರಾದ ಹೆಂಗಸರು ಧರ್ಮದ ಆಚರಣೆಗಳನ್ನು ಮನೆಯಲ್ಲಿ ನಡೆಯಿಸುತ್ತ ಮನೆಯವರಿಗೆಲ್ಲ ಮಾರ್ಗದರ್ಶಿಗಳಾಗಬೇಕು. ಮುಂದಿನ ಪೀಳಿಗೆಯನ್ನು ಮಾರ್ಪಡಿಸುವ ಕಾರ್ಯ ಮತ್ತು ಶಕ್ತಿ ಅವಳವಾಗಿರುತ್ತವೆ. ಮಕ್ಕಳಿಗೆ ಚಿಕ್ಕಂದಿನಿಂದ ಧಾರ್ಮಿಕ ಆಚಾರ ವಿಚಾರಗಳನ್ನು ಕಲಿಸಿದರೆ ಅವರು ಮುಂದೆ ಧರ್ಮನಿಷ್ಠರಾಗುವಲ್ಲಿ ಸಂದೇಹವಿಲ್ಲ. ಈ ಮೇರೆಗೆ ಮುಂದಿನ ಪೀಳಿಗೆಯನ್ನು ಧರ್ಮನಿಷ್ಠರಾಗುವಂತೆ ಮಾಡಬಲ್ಲರಲ್ಲದೆ, ಮಹಿಳೆಯರು ತಮ್ಮ ಗಂಡರನ್ನೂ ತಿದ್ದಿ ಧಾರ್ಮಿಕತೆಯ ಕಡೆಗೆ ಒಲವು ಉಂಟು ಮಾಡಲೂ ಅವರಿಗೆ ಸಾಧ್ಯವಿದೆ. ಪುರುಷನ ಒಡನಾಡಿಯಾಗಿ ಪ್ರಾಪಂಚಿಕ ವ್ಯವಹಾರಗಳಲ್ಲಿ ಇಬ್ಬರೂ ಒಬ್ಬರೊಡನೊಬ್ಬರು ಸಹಕರಿಸಬೇಕು. ಹೆಚ್ಚಿನ ನೈತಿಕ ಬಲವನ್ನು ನೈಸರ್ಗಿಕವಾಗಿ ಪಡೆದಿರುವ ಮಹಿಳೆಯು ತನ್ನ ಗಂಡನಮೇಲೆ ನೈತಿಕ ಜೀವನದ ಪ್ರಭಾವ ಬೀರಿ ಅವನಿಗೆ ಒಳ್ಳೇ ದಾರಿ ತೋರಬೇಕು. ಅದರಂತೆಯೇ

ಮಹಿಳೆಯು ಧರ್ಮನಿಷ್ಠಳಾಗಿ ಆಚರಿಸಿದಲ್ಲಿ ಅವಳ ನಡೆನುಡಿಗಳ ಪರಿಣಾಮ ಮನೆಯವರ ಮೇಲೂ ನೆರೆಹೊರೆಯವರ ಮೇಲೂ ಆಗದಿರದು.

ಜಂಗಮ ದಾಸೋಹಕ್ಕಾಗಿ ಬೇಕಾಗುವಷ್ಟೇ ಅಕ್ಕಿಯನ್ನು ಆಯ್ದು ತರುವ ಕಾಯಕವನ್ನು ಆಚರಿಸುತ್ತಿದ್ದ ಆಯ್ದಕ್ಕಿ ಮಾರಯ್ಯನು ಒಂದುದಿನ ಹೆಚ್ಚು ಅಕ್ಕಿಯನ್ನು ಆಯ್ದುಕೊಂಡು ಮನೆಗೆ ತಂದಾಗ, ಅವನ ಹೆಂಡತಿ ಲಕ್ಕಮ್ಮನು, ಅವನ ಕೃತಿಯು ಅವನ ಕಾಯಕಕ್ಕೆ ವಿರೋಧವಾದದ್ದೆಂದು ತಿಳಿಸಿ ಹೇಳಿದಳು.

"ಒಮ್ಮನ ಮೀರಿ, ಇಮ್ಮನದಲ್ಲಿ ತಂದಿರಿ ಈಸಕ್ಕಿಯ ಆಸೆ ನಿಮಗೇಕೆ" ?

ಈಶ್ವರನೊಪ್ಪ, ಮಾರಯ್ಯ! ಸಲ್ಲದ ಬೋನವ ಅಲ್ಲಿಯೇ ಸುರಿದು ಬನ್ನಿ ಮಾರಯ್ಯ; ಎಂದು ಲಕ್ಕಮ್ಮನು ತನ್ನ ಗಂಡನಿಗೆ ಬುದ್ಧಿ ಹೇಳಿ ಹೆಚ್ಚಿನ ಅಕ್ಕಿಯನ್ನು ತಿರುಗಿ ಕೊಡಹಚ್ಚಿದಳು. ಹೀಗೆ ಮಾರಯ್ಯನು ತನ್ನ ಕಾಯಕವನ್ನು ಚ್ಯುತಿ ಇಲ್ಲದೆ ಪಾಲಿಸಲು ಲಕ್ಕಮ್ಮನು ಕಾರಣಳಾದಳು. ಇದೇ ಮೇರೆಗೆ ಗಂಡನು ಹಾದಿತಪ್ಪುವ ಪ್ರಸಂಗಗಳು ಬಂದಾಗೆಲ್ಲಾ ಹೆಂಡತಿಯು ಅವನಿಗೆ ತಿಳಿಹೇಳಿ ಒಳ್ಳೆಯ ಹಾದಿಗೆ ಹಚ್ಚಬಹುದು. ಯಾರಾದರೂ ಆಸೆಗೆ ಬಲಿಬಿದ್ದು ಲಂಚಕ್ಕೆ ಕೈ ಒಡ್ಡಿದಾಗ ತಿಳಿಹೇಳಿ ಅತ್ತ ಮನಸ್ಸೆಳೆಯದಂತೆ ಹೆಂಡತಿಯು ತನ್ನ ಪ್ರಭಾವ ಬೀರಬಹುದು. ಇಂಥ ಲಕ್ಕಮ್ಮಗಳ ಸಂಖ್ಯೆ ಬೆಳೆಯುತ್ತಾ ಹೋಗಲಿ, ಎಷ್ಟೋ ಪ್ರಸಂಗಗಳಲ್ಲಿ ತಮ್ಮ ಸೌಂದರ್ಯ ಸಾಧನೆಗೆಂದು ಹೆಂಡಂದಿರು ಬೆಲೆ ಬಾಳುವ ಅರಿವೆ ಅಂಚಡಿಗಳನ್ನೋ, ಬೆಳ್ಳಿ ಬಂಗಾರದ ವಸ್ತು ಒಡವೆಗಳನ್ನೊ, ಮುತ್ತು, ರತ್ನಗಳ ಆಭರಣಗಳನ್ನೋ ಬೇಡಿದಾಗ ಮುಂದುಗಾಣದೆ ಗಂಡಸರು ಲಂಚರುಶುವತ್ತುಗಳಕಡೆಗೆ ಒಲಿಯಬೇಕಾಗಿ ಬರುತ್ತದೆ. ಇಂಥದನ್ನು ತಪ್ಪಿಸುವದಂತೂ ಹೆಂಡಂದಿರ ಕೈಯಲ್ಲೇ ಉಂಟು. ತಮ್ಮ ಹಾಸಿಗೆಯನು ದಾಟಿ ಕಾಲು ಹೊರಗೆ ಚಾಚದಂತೆ ನೋಡಿಕೊಂಡರೆ ಈ ಸೆಳೆತಗಳಿಂದ ತಪ್ಪಿಸಲು ಸಾಧ್ಯವಾಗುತ್ತದೆ.

ಲಿಂಗ ಧರಿಸಲಿಕ್ಕೇ ಒಪ್ಪದ ಜನರಿರುವಾಗ, ಲಿಂಗ ಧರಿಸುವಲ್ಲಿ ಅಗತ್ಯವಿದ್ದ ವಸ್ತುಗಳಿಲ್ಲ ಎಂಬ ನೆವ ಸಿಕ್ಕಿದರಂತೂ ಕೇಳುವದೇ ಬೇಡ. ಇಂಥ ನೆವಕ್ಕೆ ಅನುವು ಕೊಡದಂತೆ ಆ ವಸ್ತುಗಳನ್ನೆಲ್ಲಾ ಪೂರೈಕೆ ಮಾಡುವದು ಅಗತ್ಯವಾದ ಕೆಲಸ. ವೀರಶೈವರು ವಾಸವಾಗಿರುವ ಪ್ರತಿಯೊಂದು ಹಳ್ಳಿಯಲ್ಲೂ ಅಲ್ಲಿಯ ಮಠದಲ್ಲಿ ಲಿಂಗಗಳನ್ನಿಟ್ಟು ಕೂಸಿಗೆ ಲಿಂಗಾಧಾರಣ ಮಾಡಲು ಅವು ಪುಕ್ಕಟೆಯಾಗಿ ದೊರೆಯುವಂತೆ ನೋಡಿಕೊಳ್ಳಬೇಕು. ಅದರಂತೆಯೇ ಲಿಂಗಗಳನ್ನು ಕಟ್ಟಲು ಬೇಕಾಗುವ, ವಸ್ತ್ರಗಳೂ ಕರಡಿಗೆಗಳೂ, ಶಿವದಾರಗಳೂ ಯೋಗ್ಯ ಬೆಲೆಗೆ ದೊರೆಯುವಂತೆ ಏರ್ಪಾಡು ಆಗಬೇಕು. ಇದಲ್ಲದೆ ವಿಭೂತಿಗಳು ಕೂಡ ಪುಕ್ಕಟೆಯಾಗಿ ದೊರೆಯಬೇಕು. ಇದನ್ನೆಲ್ಲಾ ಒದಗಿಸುವ ಭಾರ ಊರಿನ ಮಠದವರ ಅಥವಾ ಜಂಗಮರ ಮೇಲೆ ಇರತಕ್ಕದ್ದು. ಈ ಬಗ್ಗೆ ಅಗತ್ಯಬಿದ್ದಲ್ಲಿ ಸಹಾಯ ಧನವನ್ನು ಅಥವಾ ಪುಕ್ಕಟೆ ವಸ್ತುಗಳನ್ನು ಅವರಿಗೆ ಪೂರೈಸುವಂತೆ ತಕ್ಕ ಏರ್ಪಾಡನ್ನು ಮಹಾಸಭೆಯು ಮಾಡಬೇಕಾದೀತು.

ಹಣೆಗೆ ವಿಭೂತಿಯನ್ನು ಧರಿಸುವುದು ವೀರಶೈವ ಧರ್ಮದ ಕುರುಹೆಂಬುದಂತೂ ಸರಿಯೇ. ಅಲ್ಲದೆ ಹಾಗೆ ಧರಿಸುವುದು ಸೌಂದರ್ಯದಾಯಕವೆಂದು ಬಸವಣ್ಣನವರೇ ತಮ್ಮ ವಚನದಲ್ಲಿ ಹೇಳಿದ್ದಾರೆ.

ನೀರಿಂಗೆ ನೈದಿಲೆಯೇ ಶೃಂಗಾರ
ಸಮುದ್ರಕ್ಕೆ ತೆರೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ
ಗಗನಕ್ಕೆ ಚಂದ್ರಮನೇ ಶೃಂಗಾರ
ಕೂಡಲ ಸಂಗನ ಶರಣರ ನೊಸಲಿಗೆ
ವಿಭೂತಿಯೇ ಶೃಂಗಾರ

ವಿಭೂತಿಯೂ ಒಂದು ಪ್ರಸಾಧವೆಂದೇ ಇದನ್ನು ಉಪಯೋಗಿಸಬಹುದಾಗಿದೆ. ಹಿಂದಿನ ಕಾಲದಲ್ಲಿ ಹೆಂಗಸರು ತಮ್ಮ ನೊಸಲಿಗೆ ವಿಭೂತಿಯನ್ನು, ಕೆನ್ನೆಗಳಿಗೆ ಅರಿಸಿಣವನ್ನೂ, ಹಣೆಗೆ ಕುಂಕುಮವನ್ನೂ ಸೌಂದರ್ಯಕ್ಕಾಗಿ ಹಚ್ಚುತ್ತಾ ಬಂದಿರುವರಲ್ಲವೇ ? ಅವೆಲ್ಲಾ ಹಳೆಯವೆಂದು ಹಳಿಯುತ್ತಾ ಈಗಿನವರು ಬಿಟ್ಟುಕೊಟ್ಟಿದ್ದಾರೆ. ಅರಿಸಿಣವು ಮನುಷ್ಯನ ಚರ್ಮಕ್ಕೆ ಹಿತಕಾರಿ ಎಂಬುದು ವಿಜ್ಞಾನದಿಂದ ಸಿದ್ಧಗೊಳಿಸಲ್ಪಟ್ಟಿದೆ. ಅರಿಸಿಣ ಬೆರೆತ "ಟರಮೆರಿಕ್ ವ್ಹಾಯ್ಟನಿಸಿಂಗ್ ಕ್ರೀಮ್" ಎಂಬ ಪ್ರಸಾಧನವು ಪೇಟೆಯಲ್ಲಿ ಮಾರಲ್ಪಡುತ್ತದೆ. ಹೀಗೆ ಪಾಶ್ಚಾತ್ಯ ರೂಪದ ಪ್ರಸಾಧನೆಯಾಗಿ ಬಂದಾಗ ನಮ್ಮವರನೇಕರು ಅದನ್ನು ಮನಮೆಚ್ಚಿ ಉಪಯೋಗಿಸುತ್ತಾರೆ. ಇದೇ ರೀತಿ ಗೋಮಯ ಸುಟ್ಟ ಬೂದಿಯಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ವಿಭೂತಿಯು ಚರ್ಮಕ್ಕೆ ಹಿತಕಾರಿಯು. ಹೊಸಕಾಲದ ಹೆಂಗಳೆಯರು ಮುಖಕ್ಕೆ ಯಾವ ಯಾವುದೋ ಪೌಡರ್ ಬಳಿದುಕೊಳ್ಳುವದಿಲ್ಲವೇ ? ಅವುಗಳು ಎಷ್ಟೋ ಅಪಾಯಕಾರಿ ಅಂಶಗಳಿಂದ ಕೂಡಿರುವುದುಂಟು. ಅವುಗಳಿಗೆ ಸುವಾಸನೆ ಇರುವದೆಂಬುದೇ ಅತ್ತ ಮನವೆಳೆಯಲು ಕಾರಣ. ಇದನ್ನರಿತು ವಿಭೂತಿಯನ್ನೇ ಸುವಾಸನಾಪೂರಿತವಾಗುವಂತೆ ನಿರ್ಮಾಣ ಮಾಡಿ ಒದಗಿಸಿಕೊಟ್ಟರೆ ವೀರಶೈವ ಮಹಿಳೆಯರೂ ಬೇರೆಯವರೂ ಅದನ್ನು ಪ್ರಸಾಧನವೆಂದಾದರೂ ಉಪಯೋಗಿಸುವರು. ಮನುಷ್ಯನ ಚರ್ಮಕ್ಕೆ ಹಿತಕಾರಿಯಾದ ಹಾಗೂ ಕರ್ನಾಟಕದಲ್ಲಿ ವಿಪುಲವಾಗಿ ಬೆಳೆಯುವ ಶ್ರೀಗಂಧದ ಪರಿಮಳವನ್ನು ಅದರಲ್ಲಿ ಬೆರೆಸಿ ಹೊಸತರದ ಪಾವುಡರನ್ನು ನಮ್ಮ ಅಣ್ಣಂದಿರು ನಿರ್ಮಿಸಿ ಒದಗಿಸಿದಲ್ಲಿ ಸಮಾಜಕ್ಕೆ ಕಲ್ಯಾಣವನ್ನೂ ಸ್ವಂತಕ್ಕೆ ಲಾಭವನ್ನೂ ಉಂಟುಮಾಡಬಲ್ಲರು.

ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗಿನಿಂದ ವಿದ್ಯಾಪ್ರಸಾರವು ಭರದಿಂದ ಸಾಗಹತ್ತಿದೆ. ಹೆಣ್ಣು ಮಕ್ಕಳು ವಿದ್ಯೆ ಕಲಿಯಲಿಕ್ಕೆ ಮುಂದಾಗಿದ್ದಾರೆ. ಗಂಡು ಹುಡುಗರು ಕಲಿಯುವ ವಿದ್ಯೆಯಲ್ಲಿ ಹಾಗೂ ಅದರ ಬೇರೆ ಬೇರೆ ಶಾಖೆಗಳಲ್ಲಿ ಹೆಣ್ಣು ಹುಡುಗಿಯರೂ ಶಿಕ್ಷಣ ಹೊಂದಿ ಗಂಡು ಹುಡುಗರಿಗಿಂತಲೂ ಮೇಲ್ತರಗತಿಯನ್ನೇ ಸಂಪಾದಿಸುತ್ತಿದ್ದಾರೆ. ಇದೆಲ್ಲ ಸರಿಯೇ ! ಆದರೆ ಗಂಡಿಗೂ ಹೆಣ್ಣಿಗೂ ಒಂದೇ ಶಿಕ್ಷಣ ಕ್ರಮವಿರುವದು ಸರಿಯಲ್ಲ. ಸಾಮಾನ್ಯ ಜ್ಞಾನವನ್ನೂ ಹಾಗೂ ತಿಳುವಳಿಕೆಯ ಶಕ್ತಿಯನ್ನೂ ವಿಕಸಿತಗೊಳಿಸಬಲ್ಲ ಓದು, ಬರಹ, ಗಣಿತ ಈ ವಿಷಯುಗಳು ಎಲ್ಲರಿಗೂ ಅವಶ್ಯವೇ. ಇವುಗಳಿಂದ ಬುದ್ಧಿಶಕ್ತಿಯು ಹೆಚ್ಚುವದಲ್ಲದೆ, ಹರಿತವೂ ಆಗುವುದು. ಆದರೆ ಇವುಗಳನ್ನೆಲ್ಲ ಕಲಿಸುವ ಕ್ರಮ ಗಂಡು ಹುಡುಗರಿಗೇ ಬೇರೆ ಹಾಗೂ ಹೆಣ್ಣು ಹುಡುಗಿಯರಿಗೇ ಬೇರೆ ಆಗಿ ಇರತಕ್ಕದ್ದು. ಹೆಣ್ಣು ಹುಡುಗಿಯರ ದೇಹ ಹಾಗೂ ಮನಸ್ಸು ಇವುಗಳ ಬೆಳವಣಿಗೆಯ ರೀತಿ ಗಂಡು ಹುಡುಗರಿಗಿಂತ ವಿಭಿನ್ನವಾಗಿದೆ. ಸಾಮಾನ್ಯವಾಗಿ ಹದಿನಾರು ವರ್ಷ ತುಂಬುವಷ್ಟರಲ್ಲಿ ದೈಹಿಕವಾಗಿಯೂ ಮಾನಸಿಕವಾಗಿಯೂ ಹೆಣ್ಣು ಬೆಳವಣಿಗೆ ಹೊಂದಿ ಪ್ರಬುದ್ಧಳಾಗುವಳು. ಇದೇ ಪ್ರಬುದ್ಧತೆಯನ್ನು ಪಡೆಯಲು ಗಂಡಿಗೆ 21–22 ವರ್ಷ ವಯಸ್ಸಾದರೂ ಆಗಬೇಕು. ಈ ಮಾತು ಇಂಗ್ಲಿಷ್ ಭಾಷೆಯ ಜಾಣ್ನುಡಿಯಲ್ಲಿ ಪರ್ಯಾಯವಾಗಿ ಹೇಳಲ್ಪಟ್ಟಿದೆ. (A li ttle boy is a little boy; but a little girl is a little woman) ಅಂದರೆ ಚಿಕ್ಕಮಗನೇನೋ ಚಿಕ್ಕಮಗನೇ, ಆದೇ ಚಿಕ್ಕ ಮಗಳು ಒಬ್ಬ ಚಿಕ್ಕ ಹೆಂಗಸೇ ಸೈ. ಹೀಗೆ ಹೆಣ್ಣು ಚಿಕ್ಕವಳಿರುವಾಗಲೇ ಪ್ರಬುದ್ಧತೆ ಹೊಂದಿರುವಳು. ಅವಳ ಬೆಳವಣಿಗೆಯೂ ತೀವ್ರಗತಿಯದಾಗಿರುವುದರಿಂದ ಅವಳ ಅಭ್ಯಾಸವೂ ಅದೇ ಮೇರೆಗೆ ತೀವ್ರಗತಿಯಿಂದ ಸಾಗಬೇಕಾದುದು ಅವಶ್ಯ. ವಯಸ್ಸಿನ 5ರಿಂದ 21ರ ವರೆಗೆ ಅಂದರೆ 16 ವರ್ಷಗಳ ಅವಧಿಯಲ್ಲಿ ಗಂಡುಹುಡುಗನು ಏರುವ ವಿದ್ಯೆಯ ಮೆಟ್ಟಲುಗಳನ್ನು ಹೆಣ್ಣು ಹುಡುಗಿಯರು 10–11 ವರ್ಷಗಳಲ್ಲಿ ಸಹಜವಾಗಿ ಏರಬಲ್ಲಳು. ಆದ ಕಾರಣ ಅವಳ ಶಿಕ್ಷಣ ಕ್ರಮವು ಇದೇ ಮೇರೆಗೆ ತೀವ್ರಗತಿಯುಳ್ಳದ್ದಾಗಿ ಮಾರ್ಪಡಿಸಲ್ಪಡತಕ್ಕದ್ದು. ಅವಳ ಮನಸ್ಸಿನ ಬೆಳವಣಿಗೆಯು ಭರದಿಂದ ಸಾಗುತ್ತಿರುವುದರಿಂದ ಕ್ಷಿಪ್ರದಲ್ಲಿ ವಿಷಯುಗಳನ್ನು ಗ್ರಹಿಸುವ ಶಕ್ತಿ ಅವಳದಾಗಿದೆ. ಕಾರಣ ಅವಳಿಗೆ ಕಲಿಸಬೇಕಾದ ವಿಷಯುಗಳನ್ನು ತೀವ್ರಗತಿಯಿಂದ ಹೇಳಿಕೊಡಬೇಕು. ಇದೇ ಮಾತನ್ನು ಆಂಗ್ಲ ವಿದ್ವಾಂಸ ರಸ್ಕಿನ್ನನು "Lilies of the Queen's Garden" "ರಾಣಿದೋಟದ ಕಮಲಗಳು" ಎಂಬ ಪುಸ್ತಕದಲ್ಲಿ ವಿಶದವಾಗಿ ವಿವರಿಸಿದ್ದಾನೆ. ರಸ್ಕಿನ್ನನ ಅಭಿಪ್ರಾಯದಂತೆ ಹೆಣ್ಣು ಹುಡುಗಿಯ ದೇಹ ಹಾಗೂ ಬುದ್ಧಿಯು 14ನೆಯ ವಯಸ್ಸಿಗೇ ಪ್ರಬುದ್ಧತೆಯನ್ನು ಪಡೆಯುತ್ತದೆ. ಆದುದರಿಂದ ಅಷ್ಟರಲ್ಲಿಯೇ ತಕ್ಕ ವಿದ್ಯಾಭ್ಯಾಸವನ್ನೆಲ್ಲಾ ಅವಳು ಮುಗಿಸುವಂತೆ ಅಭ್ಯಾಸ ಕ್ರಮವನ್ನು ಏರ್ಪಡಿಸತಕ್ಕದ್ದು ಎಂದು ಬರೆದಿದ್ದಾನೆ. ಈ ರೀತಿಯಲ್ಲಿ ಗಂಡು ಹೆಣ್ಣಿನ ಅಭ್ಯಾಸಕ್ರಮವು ಭಿನ್ನ ವಿಧದಲ್ಲಿರುವದು ಅವಶ್ಯವು.

ಗಂಡು ಹೆಣ್ಣು ಇಬ್ಬರಲ್ಲಿಯೂ ಮೇಲು ಕೀಳು ಇಲ್ಲವೆಂಬುದನ್ನೂ ಇಬ್ಬರೂ ಸರಿಸಮಾನರೆಂಬುದನ್ನೂ ಮೇಲೆ ಹೇಳಲಾಗಿದೆ. ಗಂಡು ಹೆಣ್ಣುಗಳಲ್ಲಿ ಯಾವ ರೀತಿಯ ಭೇದಭಾವ ಎಣಿಸಕೂಡದೆಂದು ಭಾರತದ ರಾಜ್ಯಾಂಗದಲ್ಲಿಯೂ ಘೋಷಿಸಲಾಗಿದೆ. ಆದಾಗ್ಯೂ ವ್ಯಾವಹಾರಿಕವಾಗಿ ಹೆಣ್ಣಿಗೆ ಸರಿಯಾದ ಸ್ಥಾನಮಾನ ಎಷ್ಟೋ ಸಂದರ್ಭದಲ್ಲಿ ದೊರೆಯುವುದಿಲ್ಲ. ಈ ಕಟು ಸತ್ಯವನ್ನು ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಯವರೇ ಕೆಲ ವಾರಗಳ ಕೆಳಗೆ ಹೇಳಿರುವರು. 'ಪುರುಷನಿಗಿಂತ ಯಾವ ರೀತಿಯಿಂದಲೂ ಕಡಿಮೆಯಿಲ್ಲದ ಹಕ್ಕುಬಾಧ್ಯತೆಗಳು ಸ್ತ್ರೀಗೆ ಕಾಯಿದೆಯಲ್ಲೇನೋ ಕೊಡಲ್ಪಟ್ಟಿವೆ. ಆದರೂ ಸಹ ಗಂಡಸರಿಗೆ ಸಮಾನ

ವಾದ ಹಕ್ಕುಗಳನ್ನು ಸ್ತ್ರೀಯರು ಅನುಭವಿಸುತ್ತಿಲ್ಲ' ಎಂಬುದನ್ನು ಪ್ರಧಾನಿಯವರೇ ಒಪ್ಪಿಕೊಂಡಿರುವರು. ಕಾಯಿದೆಯ ದೃಷ್ಟಿಯಿಂದ ಒಂದಾದರೆ, ಸಮಾಜದ ದೃಷ್ಟಿ ಬೇರೊಂದಾಗಿದೆ. ಸಾಮಾಜಿಕ ದೃಷ್ಟಿಯಲ್ಲಿ ಹೆಂಗಸು ಅಬಲೆಯೆಂದೇ ಗ್ರಹಿಸಲ್ಪಟ್ಟಿದ್ದಾಳೆ. ಆದುದರಿಂದ ಸಮಾಜವು ಅವಳಿಗೆ ಕೊಡುವದು ಎಡಸ್ಥಾನ. ಅವಳಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲ. ಕಲಿಸಲು ಹಣ ಸಾಲದೆ ಎಷ್ಟೋ ಜನ ತಮ್ಮ ಗಂಡು ಮಗುವಿಗೆ ಮಾತ್ರ ವಿದ್ಯೆ ಕಲಿಸಿ ಹೆಣ್ಣು ಮಗುವಿನ ಕಲಿಯುವಿಕೆಯನ್ನು ನಿಲ್ಲಿಸಿಬಿಡುವರು. ಮಧ್ಯಮ ವರ್ಗದ ಹೆಂಗಸು ವಿದ್ಯಾವತಿಯಾದರೂ ಅವಳು ಸ್ವತಂತ್ರವಾದ ಗಳಿಕೆಯ ಮಾರ್ಗ ಹಿಡಿದರೆ ಸಮಾಜವು ಅವಳನ್ನು ಕಡೆಗಣ್ಣಿನಿಂದ ಕಾಣುವದು. ಇವೆಲ್ಲ ವಿಷಯ ಪರಿಸ್ಥಿತಿಗಳನ್ನು ಎದುರಿಸಲು ವಿದ್ಯಾವಂತ ಧುರೀಣರೂ, ಸಮಾಜವೂ, ಸರಕಾರವೂ ಬೆಂಬಲ ಹಾಗೂ ಉತ್ತೇಜನ ಕೊಡಬೇಕು.

ಮೊದಲನೆಯದಾಗಿ ಶಿಕ್ಷಣವು ಹೆಣ್ಣುಮಗಳಿಗೆ ಪುಕ್ಕಟೆಯಾಗಿ ದೊರೆಯಬೇಕು. ಅವರಿಂದ ಎಷ್ಟು ಶಾಲಾ ಫೀ ವಸೂಲ ಮಾಡಬಾರದು. ವಿದ್ಯಾರ್ಥಿಗಳಿಗೆ ಬೇಕಾಗುವ ಪುಸ್ತಕ ಮೊದಲಾದ ಸಲಕರಣೆಗಳನ್ನು ಎಲ್ಲರಿಗಲ್ಲದಿದ್ದರೂ ಕೆಲವರಿಗಾದರೂ ಪುಕ್ಕಟೆಯಾಗಿ ದೊರಕುವಂತೆ ಏರ್ಪಾಟು ಆಗಬೇಕು. ಓದಿನಲ್ಲಿ ಮುಂದುವರೆದು ಮೇಲ್ತರಗತಿ ಪಡೆದ ಹೆಣ್ಣು ಹುಡುಗೆಯರಿಗೆ ವಿದ್ಯಾರ್ಥಿವೇತನ, ಕಾಣಿಕೆ ಮುಂತಾಹುವುಗಳನ್ನು ವಿಪುಲವಾಗಿ ಕೊಟ್ಟು ಉತ್ತೇಜಿಸಬೇಕು. ಇದೆಲ್ಲಾ ವಿಶೇಷ ಸಹಾಯವನ್ನು ಮಹಿಳೆಯರಿಗಾಗಿ ಮಾಡುವಂತೆ ಸರಕಾರವನ್ನು ಒತ್ತಾಯಪಡಿಸಬೇಕು.

ಕಲಿತಂಥ ಪ್ರಬುದ್ಧ ಹುಡುಗೆಯರಿಗೆ ವರಗಳನ್ನು ದೊರಕಿಸುವ ಕಾರ್ಯದಲ್ಲಿ ಸಹಾಯಕವಾಗುವ ಸಂಸ್ಥೆಯು ಅವಶ್ಯಕವಾಗಿದೆ. ಗಂಡು ಹೆಣ್ಣುಗಳ ಬಗ್ಗೆ ಮಾಹಿತಿಯೇ ಇಲ್ಲದಾಗ ಬಹು ತೊಂದರೆಯಾಗುತ್ತದೆ. ಮಹಾರಾಷ್ಟ್ರದಲ್ಲಿ ಇಂಥ ಸಂಘಗಳು ಎಷ್ಟೋ ವರ್ಷಗಳಿಂದ ಕಾರ್ಯ ನಡೆಸಹತ್ತಿವೆ. ಇತ್ತೀಚೆಗೆ ಇಂಥ ಕೆಲಸ ನಿರ್ವಹಿಸುವುದಕ್ಕಾಗಿ ವೀರಶೈವ ವಿವಾಹ ಸಹಾಯಕ ಸಮಿತಿಯೊಂದು ಬೆಂಗಳೂರಿನಲ್ಲಿ ಸ್ಥಾಪಿತವಾಗಿದೆ. ಇದರ ಶಾಖೆ ಉಪಶಾಖೆಗಳು ನಾಡುತುಂಬೆಲ್ಲಾ ಅಲ್ಲಲ್ಲಿ ಸ್ಥಾಪಿತವಾಗಬೇಕು. ಅದು ವೀರಶೈವರಲ್ಲಿ ಉಪಲಬ್ಧವಿರುವ ಗಂಡುಹೆಣ್ಣುಗಳ ಪೂರ್ತಿ ಮಾಹಿತಿಯನ್ನು ಸಂಗ್ರಹಿಸಿ ಇಡಬೇಕು. ಆ ವಿವರಗಳು ಯೋಗ್ಯ ವಧೂವರರನ್ನು ಹುಡುಕುವ ಕೆಲಸದಲ್ಲಿ ದೊಡ್ಡ ನೆರವಾಗುವವು.

ಪ್ರೌಢಳಾದೊಡನೆಯೇ ಹೆಣ್ಣು ಹುಡುಗಿಯು ಮದುವೆಯಾಗಿ ಮನೆಹಿಡಿದು ಪ್ರಪಂಚ ಸಾಗಿಸಹತ್ತಿರುವದೇ ಒಂದು ಗುರಿಯಾಗಿ, ಈವರೆಗೆ ಬೆಳೆದು ಬಂದ ನಡುವಳಿಕೆ. ಇಂಥ ವಿಚಾರಸರಣಿಯನ್ನೂ, ಈ ಪದ್ಧತಿಯನ್ನೂ ಈಗಿನ ಕಾಲಕ್ಕೆ ಸರಿಯಾಗಿ ಬದಲಾಯಿಸಬೇಕು. ಸ್ವಲ್ಪಕಾಲದ ಮಟ್ಟಿಗಾಗಲೀ, ಕಾಯಂ ಆಗಿಯಾಗಲೀ ಹಣ ಗಳಿಸುವ ಉದ್ಯೋಗದಲ್ಲಿ ಅವಳು ತೊಡಗುವುದು ಒಳ್ಳೆಯದು. ಮದುವೆಯಾದಮೇಲೆ ಅದನ್ನು ಬಿಟ್ಟರೂ ಅಡ್ಡಿ ಇಲ್ಲ. ಹೀಗೆ ಕೆಲ ಕಾಲವಾದರೂ ಉದ್ಯೋಗದಲ್ಲಿ ತೊಡಗುವುದರಿಂದ ಎರಡೊಂದು ಲಾಭಗಳುಂಟು. ಕೂಡಲೇ ಮದುವೆಯಾಗಬೇಕೆಂಬ ಅಗತ್ಯಕ್ಕೊಳಗಾಗಿ ಕಂಡಕಂಡ ವರನನ್ನೇ ಮದುಯಾಗುವ ಪೇಚಾಟ ತಪ್ಪುವುದು. ಹಾಗೂ ಮದುವೆಯಾಗುವವರೆಗೆ ಅವಳಿಗೊಂದು ಉದ್ಯೋಗವೂ, ಅದರ ಗಳಿಕೆಯಿಂದ ಅವಳಿಗೆ ಆರ್ಥಿಕ ಬಲವೂ ಉಂಟಾಗುವದು. ಇಷ್ಟೇ ಅಲ್ಲ; ಈಗಿನ ದಿನಮಾನದಲ್ಲಿ ಗಂಡ ಒಬ್ಬನೇ ದುಡಿದು ಅವನೊಬ್ಬನ ಗಳಿಕೆಯಿಂದ ಮಾತ್ರ ಪ್ರಪಂಚ ಸಾಗಿಸುವುದು ಕಷ್ಟಸಾಧ್ಯ. ಶಕ್ಯವಿದ್ದಷ್ಟು ಮತ್ತು ಸಾಧ್ಯವಾದಾಗ ಹೆಂಡತಿಯೂ ತಾನೂ ಕೈನೀಡಿ ಗಳಿಕೆಯನ್ನು ಹೆಚ್ಚಿಸುವದು ಅಗತ್ಯವು. ಈ ಪರಿಸ್ಥಿತಿಯು ಸಾಮಾನ್ಯವಾಗಿ ಮಧ್ಯಮವರ್ಗದವರಿಗೆ ಅನ್ವಯಿಸುತ್ತದೆ. ಅವರಿಗಿಂತ ಕಡಿಮೆ ಸ್ಥಿತಿಯಲ್ಲಿ ಇರುವ ಹೆಂಗಸರೆಲ್ಲಾ ಎಂದಿನಿಂದಲೂ ದುಡಿದೇ ದುಡಿಯುತ್ತಾರೆ. ಅವರು ಬೇಸಾಯ ಮಾಡುವವರಿರಲಿ, ಕೂಲಿಕಾರರಿರಲಿ, ಹೆಂಗಸರೂ ದುಡಿದು ಮನೆಯ ಗಳಿಕೆಯನ್ನು ಹೆಚ್ಚಿಸುವದರಲ್ಲಿ ಸಹಾಯಕರಾಗಿಯೇ ಆಗುವದುಂಟು. ಮಧ್ಯಮ ವರ್ಗದವರೂ ಈ ನಡತೆಯನ್ನು ಅನುಸರಿಸುವದು ಅಗತ್ಯವಾಗಿದೆ.

ವಿದ್ಯಾವತಿಯರಾದ ಮಹಿಳೆಯರಿಗೆ ಸರಕಾರಿ ನೌಕರಿಗಳನ್ನು ಮೀಸಲಾಗಿರಿಸುವದು ಅವಶ್ಯವು. ಅದು ಸರಕಾರದ ಕರ್ತವ್ಯವೂ ಹೌದು. ಹರಿಜನರಿಗೂ ಗಿರಿಜನರಿಗೂ ಸರಕಾರಿ ನೌಕರಿಯಲ್ಲಿ ಕೆಲ ಭಾಗವನ್ನು ಈಗಾಗಲೇ ಕಾಯ್ದು ಇಡುತ್ತಿರುವರು. ಅಲ್ಲದೇ ಸಾಮಾಜಿಕವಾಗಿ ಹಾಗೂ ವಿದ್ಯೆಯ ಮೂಲ ಹಿಂದುಳಿದ

ಜನಾಂಗದವರಿಗೆ ಸಹ ಕೆಲವು ಸ್ಥಾನಗಳನ್ನು ಮೀಸಲಾಗಿ ಇಡಲಾಗುತ್ತದೆ. ವೀರಶೈವರು ವಿಶೇಷವಾಗಿ ವೀರಶೈವ ಮಹಿಳೆಯರು ಸಾಮಾಜಿಕವಾಗಿಯೂ, ವಿದ್ಯೆಯಲ್ಲಿಯೂ ಹಿಂದುಳಿದವರೇ ಇದ್ದಾರೆ. ವೀರಶೈವರ ಮುಖ್ಯ ಜೀವನೋದ್ಯೋಗ ಬೇಸಾಯ. ಹೊಲ ಬೆಳೆದೇ ಜೀವನ ಸಾಗಿಸುವರು. ಆದುದರಿಂದ ಅವರಲ್ಲಿ ಹೆಚ್ಚಾಗಿ ಜನ ಹಳ್ಳಿಗಳಲ್ಲಿಯೇ ವಾಸಿಸುವರು. ವೀರಶೈವ ಮಹಿಳೆಯರ ಸ್ಥಿತಿಯಂತೂ ತೀರ ಕನಿಷ್ಠ. ಓದು ಬರಹ ಅರಿಯದವರೇ ಹೆಚ್ಚು. ಬಡತನದ ಸ್ಥಿತಿಯಲ್ಲಿ ಇರುತ್ತಿರುವದಲ್ಲದೆ, ಸಾಮಾಜಿಕವಾಗಿಯೂ ಅವರು ಹಿಂದುಳಿದವರು. ಆದುದರಿಂದ ಅವರು ಹಿಂದುಳಿದ ವರ್ಗದವರೆಂದು ಸರಕಾರದವರು ನಿರ್ಣಯಿಸತಕ್ಕದ್ದು. ಹಾಗೂ ಸರಕಾರೀ ನೌಕರಿಗಳಲ್ಲಿ ಪ್ರಾತಿನಿಧ್ಯ ವೀರಶೈವರಿಗೆ ತೀರಾ ಕಡಿಮೆ. ವೀರಶೈವ ಹೆಂಗಸರಂತೂ ತೀರ ವಿರಳ ಇದನ್ನು ನಿವಾರಿಸಲು ವೀರಶೈವರಿಗೆ–ವಿಶೇಷತಃ ಮಹಿಳೆಯರಿಗೆ, ಸರಕಾರೀ ನೌಕರಿಗಳಲ್ಲಿ ಸ್ಥಳಗಳನ್ನು ಕಾಯ್ದಿರಿಸತಕ್ಕದು. ಇದೂ ಅಲ್ಲದೆ ತಾಂತ್ರಿಕ ಕಾಲೇಜುಗಳಲ್ಲಿ ಮತ್ತು ಔದ್ಯೋಗಿಕ ಕಾಲೇಜುಗಳಲ್ಲಿ ಪ್ರವೇಶಕ್ಕೆ ಸಹಾ ಅವರಿಗೆ ಕಷ್ಟಸಾಧ್ಯವಾಗಿದೆ. ಹೀಗಿರುವಾಗ ಆ ವಿದ್ಯೆಗಳಲ್ಲಿ ಅವರು ಮುಂದುವರಿಯುವದೆಂತು ? ಕೆಲವು ಕಾಲೇಜುಗಳಲ್ಲಂತೂ ಹೇರಳವಾಗಿ ಹಣ ಕೊಟ್ಟು ಪ್ರವೇಶ ಪಡೆಯಬೇಕಾಗುತ್ತದೆ. ಬಡತನದ ಮೂಲಕ ಇದೂ ಕಠಿಣ ಸಾಧ್ಯವು. ಇವೆಲ್ಲ ಕಾರಣಗಳಿಗಾಗಿ ಇಂಥ ಕಾಲೇಜುಗಳಿಗೆ ಪ್ರವೇಶ ಕೊಡುವಲ್ಲಿ ಹಿಂದುಳಿದವರಾದ ವೀರಶೈವ ಮಹಿಳೆಯರಿಗೆ ಸ್ಥಾನಗಳನ್ನು ಕಾಯ್ದಿರಿಸದಿರುವುದು ಶೋಚನೀಯ. ಅವರ ಗಮನವನ್ನು ಇತ್ತ ಕಡೆಗೆ ಸೆಳೆದು ಕೇಂದ್ರ ಹಾಗೂ ಹಾಗೂ ರಾಜ್ಯ ಸರಕಾರಗಳು ಇಂಥ ಎಲ್ಲ ಕಾಲೇಜುಗಳಲ್ಲಿಯೂ ಸರಕಾರೀ ನೌಕರಿಗಳಲ್ಲಿಯೂ ಸಾಕಷ್ಟು ಸ್ಥಾನಗಳನ್ನು ವೀರಶೈವರಿಗೆ ಮೀಸಲಾಗಿ ಇರಿಸಲು ಒತ್ತಾಯಪಡಿಸತಕ್ಕದ್ದು.

ಈ ಮೇರೆಗೆ ನಾನು ಮಾಡಿರುವ ಕೆಲ ಸೂಚನೆಗಳನ್ನೂ ಮತ್ತು ಬೇರೆಯವರು ಮಾಡಬಹುದಾದ ಸೂಚನೆಗಳನ್ನೂ, ಮಹಿಳಾಗೋಷ್ಠಿಯೂ ಮಹಾಸಭೆಯೂ ಚರ್ಚಿಸಬೇಕು. ಹಾಗೂ ಸೂಕ್ತ ಗೊತ್ತುವಳಿಗಳನ್ನು ಅಂಗೀಕರಿಸಿ ಅವು ಕಾರ್ಯಗತವಾಗುವಂತೆ ಮಾಡಬೇಕಾಗಿ ಬಿನ್ನಹ.

ಅಕ್ಕತಂಗಿಯರೇ, ಈವರೆಗೆ ನನ್ನ ನಾಲ್ಕು ಮಾತುಗಳನ್ನು ಶಾಂತವಾಗಿ ಕೇಳಿಕೊಂಡದ್ದಕ್ಕೆ ತಮ್ಮೆಲ್ಲರಿಗೆ ನನ್ನ ವಂದನೆಗಳು. ಹಾಗೂ ನನ್ನನ್ನು ಇಲ್ಲಿಗೆ ಬರಮಾಡಿ ನನಗೆ ಈ ಸಂಧಿ ಒದಗಿಸಿಕೊಟ್ಟದ್ದಕ್ಕಾಗಿ ಪುನಃ ಮಹಿಳಾಗೋಷ್ಠಿಯ ಕಾರ್ಯಕರ್ತರಿಗೂ ಮುಖ್ಯತಃ ಸ್ವಾಗತಾಧ್ಯಕ್ಷೆ ಗಿರಿಜಾದೇವಿಯವರಿಗೂ ನನ್ನ ವಂದನೆಗಳು.

ಪುಸ್ತಕ ವಿಮರ್ಶೆ.... 2

ಗಡಿನಾಡಿನಲ್ಲಿ ಕನ್ನಡದ ಕಹಳೆ

ಅ. ಮ. ಸಿದ್ಧಲಿಂಗಯ್ಯನವರ ಕೃತಿಗಳು : ಶಿಗಣೆ, (ಬೆಲೆ 1-50) ಬಾಂಗ್ಲಾ ತೆರೆದಿತ್ತು, (ಬೆಲೆ 2-00) ಮಂಗಮಲ್ಲನ ವ್ಯಂಗ ಪದಗಳು (ಬೆಲೆ 2-50) ಪ್ರಕಾಶಕರು :—

ಈ ಮೇಲಿನ ಮೂರು ಕಾವ್ಯ ಸಂಕಲನಕೃತಿಗಳು ಒಬ್ಬರವೇ. ಆಯಾ ಕಾವ್ಯ ಮುಖಪುಟದ ಶಿರೋನಾಮೆಯಲ್ಲಿ ಇಡೀ ಕಾವ್ಯದ ಏಕತಾನ, ಅದರ ಜೀವದುಸಿರು ತುಂಬಿರುವುದು ಸುಸ್ಪಷ್ಟ. ಈ ಕವಿಗಳ ಕವನಗಳನ್ನು ಓದುತ್ತಿದ್ದರೆ ಭಾಷೆಯಲ್ಲಿ, ಭಾವದಲ್ಲಿ, ರೀತಿಯಲ್ಲಿ ಜಿ. ಪಿ. ರಾಜರತ್ನಂರವರ 'ನಾಗನ ಪದಗಳು', 'ರತ್ನನ ಪದಗಳು' ಜೊತೆಗೆ ಬೇಂದ್ರೆಯವರ ಕಾವ್ಯ ಪ್ರಭಾವವೂ ಇವರ ಮೇಲೆ ಸ್ವಲ್ಪಮಟ್ಟಿಗೆ ಆಗಿದೆ, ಎನ್ನಬಹುದಾಗಿದೆ. ರಾಯಚೂರು ಜಿಲ್ಲಾ ದೇಸೀ ಪ್ರಭಾವದ ಹಾಗೂ ನುಡಿಯೋಲ್ಮೆಯ ಬಳಕೆಯ ವಸಾಹತನ್ನು ಕವಿಗಳು ತಮ್ಮದನ್ನಾಗಿ ಮಾಡಿಕೊಂಡಿರುವುದು ಅಚ್ಚರಿ ತರುವಂತಹುದು. ವಾಸ್ತವಿಕತೆಯಲ್ಲಾಗಲೀ, ತಂತ್ರವೈವಿಧ್ಯದಲ್ಲಾಗಲೀ, ಅ. ಮ. ಸಿ. ಯವರ ಕಾವ್ಯದ ಮೇಲ್ಮೆ ಮೆಚ್ಚುವಂತಹುದೇ. ಶಿಗಣೆಯಲ್ಲಿ ಸಾಮಾಜಿಕ, ರಾಜಕೀಯ ಪರಿಸರದ ಥೀಮಂತರ ಮೇಲೆ ವಿಡಂಬನೆಯ ಚಟಾಕಿ ಹಾರಿಸಿದ್ದಾರೆ.

'ಬಾಂಗ್ಲಾ ತೆರೆದಿತ್ತು' ಎಂಬ ಕವನ ಸಂಕಲನದಲ್ಲಿ ಹಳ್ಳಿಯ ಬಾಳು, ಜೀವನ ಗತಿ, ಹೆಣ್ಣು ಗಂಡಿನ ಪ್ರೇಮ, ದಾಂಪತ್ಯ ಸಮಸ್ಯೆಗಳ ಬಗ್ಗೆ ಬಹು ಪರಿಣಾಮಕಾರಿಯಾಗಿ ಕವನ ಮೂಡಿಬಂದಿವೆ. ಕೊನೆಯದಾದ ಮಂಗಮಲ್ಲನ ವ್ಯಂಗ್ಯ ಪದಗಳಲ್ಲಿ ಡಿ. ವಿ. ಜಿ.ರವರ ಮಂಕುತಿಮ್ಮನ ಕಗ್ಗದ ಸಾಮ್ಯವಿದೆ. ಅಂದ ಮಾತ್ರಕ್ಕೆ

(ಮುಂದುವರಿದಿದೆ)

ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯ ಸಮೀಕ್ಷೆ

—ವಿದ್ಯಾವಿಭೂಷಣ ಶ್ರೀ ಓ. ಎಸ್. ಲಿಂಗಣ್ಣಯ್ಯ ಬಿ.ಎ., (ಆನರ್ಸ್) ಮೈಸೂರು.

೧

ಕನ್ನಡ ಸಾಹಿತ್ಯದಲ್ಲಿ ವಚನವಾಙ್ಮಯ ವಿಶಿಷ್ಟಪೂರ್ಣವಾದುದು 'ಶೂನ್ಯಸಂಪಾದನೆ' ವಚನವಾಙ್ಮಯದಲ್ಲಿ ಮಹತ್ತರವಾದದ್ದು. ಇದು ವಚನ ಸಾಹಿತ್ಯದಲ್ಲಿ ಹಾಲ್ಗಡಲು. ನಾನಾ ಕಡೆಗಳಿಂದ ಹರಿದು ಬಂದ ಶರಣವಾಣೀಕ್ಷೀರ ನದಿಗಳು ಇದರಲ್ಲಿ ಸಂಗಮವಾಗಿವೆ. ಇದೊಂದು ತತ್ತ್ವಜ್ಞಾನ ಸಂಗಮ ಕ್ಷೇತ್ರ. ಹನ್ನೆರಡನೆಯ ಶತಮಾನದ ಶಿವಶರಣರ ಅನುಭಾವಪೂರ್ಣರ ಸಾಲನಂದನದಂತಿದೆ ಈ ಶೂನ್ಯ ಸಂಪಾದನೆ! ಇದರ ಬೇರು ಸ್ವರ್ಗದಲ್ಲಿ; ಫಲ ಮರ್ತ್ಯದಲ್ಲಿ. ಅಂದು ಕಲ್ಯಾಣದಲ್ಲಿ ಬಸವಣ್ಣನವರ ಮಹಾಮನೆಯ ಶಿವಾನುಭವ ಮಂಟಪದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶರಣರು ಅಲ್ಲಮ ಪ್ರಭುದೇವರ ಸಮಕ್ಷದಲ್ಲಿ ನಡಸಿದ ತತ್ತ್ವಾರ್ಥ ಸಾರವೇ ಶೂನ್ಯ ಸಂಪಾದನೆಯಲ್ಲಿದೆ. ಅಷ್ಟೇ ಅಲ್ಲ, ಅಲ್ಲಮರು ದೇಶ ಪರ್ಯಟನದಲ್ಲಿ ತಾವು ಸಂಧಿಸಿದ ನಾನಾ ಮಟ್ಟದ ಶರಣರ ಮತ್ತು ಶರಣೆಯರ ಮನೋಭಾವವನ್ನು ತಿದ್ದಿ, ರೂಪಿಸಿ, ಪರಿಪೂರ್ಣದತ್ತ ಮಾರ್ಗದರ್ಶನ ಮಾಡಿದ ಜ್ಞಾನ ಬೋಧನೆಯೂ ಇದರಲ್ಲಿದೆ. ಶರಣರು ಲೋಕದ ಬದುಕನ್ನು ತಿದ್ದಲು, ಜನಮನವನ್ನು ನಿರ್ಮಲಗೊಳಿಸಲು ಪ್ರಯತ್ನಿಸಿದರು. ಇಹ–ಪರ ಸಾಧನೆಯೇ ಶರಣರ ಗುರಿ. ಅಂದು ಸಮಾಜದಲ್ಲಿ ರೂಢಮೂಲವಾಗಿದ್ದ, ವರ್ಣಾಶ್ರಮ ಧರ್ಮವನ್ನು ಬುಡಮಟ್ಟ ಅಲುಗಾಡಿಸಿ, ಸಮಾಜದಲ್ಲಿ ಮೇಲು, ಕೀಳು, ಹೆಣ್ಣು, ಗಂಡು ಎಂಬ ಭೇದ ಭಾವನೆಯನ್ನು ನಿರಾಕರಿಸಿ, ಶಿವಭಕ್ತರೆಲ್ಲರೂ ಸಮಾನರು ಎಂಬ ತತ್ತ್ವವನ್ನು ಪ್ರಚಾರ ಮಾಡಿದರು. ವಿಚಾರ ಸ್ವಾತಂತ್ರ್ಯ, ಆಚಾರ ಸ್ವಾತಂತ್ರ್ಯ ಧಾರ್ಮಿಕ ಸ್ವಾತಂತ್ರ್ಯ ಮೊದಲಾದ ಹೊಸ ಜೀವನ ಮೌಲ್ಯಗಳು ಸಮಾಜದಲ್ಲಿ ಮೂಡಿದುವು. ಅರ್ಥವಿಲ್ಲದ ಮೂಢ ಸಂಪ್ರದಾಯಗಳೂ, ಶುಷ್ಕ ಕರ್ಮಾಚರಣೆಗಳೂ ಶಕ್ತಿಹೀನವಾದುವು. ಯಜ್ಞಯಾಗಗಳಲ್ಲಿ ಮತ್ತು ಕ್ಷುದ್ರದೇವತೆಗಳ ಪೂಜೆಯಲ್ಲಿ ನಡೆಯುತ್ತಿದ್ದ ಪಶುಬಲಿಯನ್ನು ಖಂಡಿಸಿ ಸಾತ್ವಿಕ ಪೂಜೆಯನ್ನು ಪ್ರೋತ್ಸಾಹಿಸಿದರು. ಶರಣರು ಅಹಿಂಸಾ ಧರ್ಮವನ್ನು ಎತ್ತಿ ಹಿಡಿದರು; ಜ್ಞಾನ ಮತ್ತು ಕ್ರಿಯೆ–ಎರಡೂ ಜೀವನ ಕಲ್ಯಾಣಕ್ಕೆ ಆವಶ್ಯಕವೆಂಬುದನ್ನು ಸಾರಿದರು. ಕರ್ಣಾಟಕದ ನಾನಾ ಭಾಗಗಳಿಂದ ಮತ್ತು ಕಾಶ್ಮೀರ, ಸೌರಾಷ್ಟ್ರ, ಕಳಿಂಗ, ಮಹಾರಾಷ್ಟ್ರ, ಆಂಧ್ರ ತಮಿಳುನಾಡು ಮೊದಲಾದ ನಾನಾ ಪ್ರಾಂತಗಳಿಂದ ಬಂದಿದ್ದ ಶರಣರೆಲ್ಲರೂ ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಸೇರಿ, ಅನುಭವ ಮಂಟಪದಲ್ಲಿ ಶಿವಧರ್ಮ ತತ್ತ್ವಗಳನ್ನು ಚಿಂತನೆ ಮಾಡುತ್ತಿದ್ದರು. ಅವರಲ್ಲಿ ಅನೇಕರು 'ವಚನ'ಗಳನ್ನು ರಚಿಸಿ, ಧರ್ಮ ಪ್ರಚಾರ ಮಾಡುತ್ತಿದ್ದರು. ಆ ಕಾಲದಲ್ಲಿ ಎರಡು ಎಂಬತ್ತು ಕೋಟಿ ವಚನಗಳ ರಚನೆಯಾಯಿತೆಂಬ ಪ್ರತೀತಿ ಇದೆ. ಕಲ್ಯಾಣ ಕ್ರಾಂತಿಯ ಸಮಯದಲ್ಲಿ ಶರಣರು ನಾನಾ ಕಡೆಗಳಿಗೆ ಚದುರಿ ಹೋದರು. ಅವರು ತಮ್ಮಲ್ಲಿದ್ದ 'ವಚನ' ವಾಙ್ಮಯದ ತಾಳೆಗರಿಯ ಕಟ್ಟುಗಳನ್ನೂ ಹೊತ್ತುಕೊಂಡು ಸುರಕ್ಷಿತವಾದ ಆಶ್ರಯಗಳನ್ನು ಅರಸುತ್ತ ದಿಕ್ಕುಗೆಟ್ಟು ಓಡಿದರು. ಅಲ್ಲಲ್ಲಿ ಅವರು ಮಠಗಳನ್ನು ಕಟ್ಟಿಸಿಕೊಂಡು ನೆಲಸಿದರು. ಈ ವಚನ ಸಾಹಿತ್ಯ ದೇಶ ಮಧ್ಯದಲ್ಲಿ ಗುಡಿ ಗುಂಡಾರಗಳಲ್ಲಿ, ಮನೆ ಮಠಗಳಲ್ಲಿ ಕಣ್ಮರೆಯಾಗಿ ಉಳಿದುಬಿಟ್ಟವು. ಅನೇಕ ವಚನ ಕಟ್ಟುಗಳು ಪರಕೀಯರ ಧಾಳಿಗಳಿಗೆ ಸಿಕ್ಕಿ ನಾಶವಾಗಿರಲೂ ಬೇಕು. ಸುಮಾರು ಮುನ್ನೂರು ವರ್ಷ ಕಾಲ ವಚನ ಸಾಹಿತ್ಯ ಬೆಳೆಯಲಿಲ್ಲ. 15ನೆಯ ಶತಮಾನದಲ್ಲಿ ಈ ಸಾಹಿತ್ಯ ಪ್ರಜ್ಞೆ ಸಮಾಜದಲ್ಲಿ ಉಂಟಾಯಿತು. ವಿಜಯನಗರದ ಅರಸರು ವೀರಶೈವ ಧರ್ಮವನ್ನು ಆಗ ಪರಿಪೋಷಿಸಿದರು. ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ (1419–1447) ವೀರಶೈವ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. ಅನೇಕ ವಿದ್ವಾಂಸರು ಅಲ್ಲಲ್ಲಿ ಅಡಗಿದ್ದ ತಾಳೆ ಓಲೆಯ ವಚನಗ್ರಂಥಗಳನ್ನು ಸಂಗ್ರಹಿಸಿ, ಈ ಪ್ರಾಚೀನ ವಚನಗಳಿಗೆ ವ್ಯಾಖ್ಯಾನ ಟೀಕೆ ಟಿಪ್ಪಣಿಗಳನ್ನು ಬರೆದರು. ನೂತನ ವಚನಗಳ ಸೃಷ್ಟಿಯೂ ಆಯಿತು. ಆ ಕಾಲದಲ್ಲಿದ್ದ ನೂರೊಂದು ವಿರಕ್ತರು ಈ ದಿಸೆಯಲ್ಲಿ ಉತ್ಕೃಷ್ಟ ಸೇವೆ ಸಲ್ಲಿಸಿದರು. ಅದುವರೆಗಾಗಲೆ, ಹರಿಹರ, ರಾಘವಾಂಕ, ಕೆರೆಯ ಪದ್ಮರಸ ಮೊದಲಾದ ವೀರಶೈವಕವಿಗಳು ಅನೇಕ ಶರಣರ ಜೀವನ ವೃತ್ತಾಂತಗಳನ್ನು ಕಾವ್ಯರೂಪದಲ್ಲಿ ಹಾಡಿದ್ದರು. ಅವರು ಅನೇಕ ವಚನಗಳ ಸತ್ವವನ್ನು ತಮ್ಮ ಕಾವ್ಯಗಳಲ್ಲಿ ಸಂದರ್ಭೋಚಿತವಾಗಿ ತುಂಬಿರುತ್ತಾರೆ. ಹದಿನೈದನೆಯ ಶತಮಾನದಲ್ಲಿ ಈ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಸಂಕಲನ ಗ್ರಂಥಗಳನ್ನು ಅನೇಕ ವಿದ್ವಾಂಸರು ರಚಿಸಿದರು. ಅನೇಕ ಋಷಿದ್ರಷ್ಟಾರರು ರಚಿಸಿದ್ದ ಋಕ್ಕುಗಳನ್ನು ಆರಿಸಿ, ವಿಂಗಡಿಸಿ, ಚತುರ್ವೇದಗಳ ರೂಪದಲ್ಲಿ ಸಂಯೋಜಿಸಿದ ವೇದವ್ಯಾಸರಂತೆ, ಅನೇಕ ಶರಣದ್ರಷ್ಟಾರರು ನುಡಿದಿದ್ದ ವಚನಗಳನ್ನು ವಿಂಗಡಿಸಿ, ಸಂಯೋಜಿಸಿದ ಶಿವಗಣಪ್ರಸಾದಿ ಮಹಾದೇವಯ್ಯ ಹದಿನೈದನೆಯ ಶತಮಾನದಲ್ಲಿ 'ಶೂನ್ಯಸಂಪಾದನೆ'ಯನ್ನು ರಚಿಸಿದನು. ಈತನು ಉತ್ತಮ ವಚನಗಳನ್ನು ಆರಿಸಿಕೊಂಡು ಉತ್ತರ ಪ್ರತ್ಯುತ್ತರ ರೂಪದಲ್ಲಿ ವೀರಶೈವ ಧರ್ಮತತ್ತ್ವಗಳನ್ನು ಅಳವಡಿಸಿಕೊಂಡು 'ಪ್ರಭುದೇವರ ಶೂನ್ಯಸಂಪಾದನೆ' ಎಂಬ ವಚನ ಸಂಕಲನ ಗ್ರಂಥವನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾನೆ. ಈತನ ತರುವಾಯ, ಇದೇ ಶೂನ್ಯ ಸಂಪಾದನೆಯನ್ನು ಪರಿಷ್ಕರಿಸಿ, ಹೆಚ್ಚಿನ ಪ್ರಸಂಗಗಳನ್ನು ಸೇರಿಸಿ, ಕೆಂಚವೀರಣ್ಣೊಡೆಯ, ಹಲಗೆದೇವರು, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರ ಮೊದಲಾದವರು ಕಾಲಕ್ರಮದಲ್ಲಿ ಬೇರೆ ಬೇರೆ ಶೂನ್ಯಸಂಪಾದನೆಗಳನ್ನು ರಚಿಸಿರುತ್ತಾರೆ. ಇವನ ಸಮಕಾಲೀನ ಸಾಹಿತ್ಯವನ್ನು ಪರಿಶೀಲಿಸಿದರೆ, ಈತನು ಗುಮ್ಮಳಾಪುರ ಪ್ರಾಂತದವನೆಂದು ಹೇಳಬಹುದು. ಇವನು ವೀರಶೈವ ತತ್ತ್ವನಿಷ್ಠೆಯ ಶರಣಧರ್ಮ ಪ್ರೇಮಿಯೂ ಆಗಿದ್ದ ಗುರುಸ್ಥಲದ ವೀರಶೈವನೆಂಬುದರಲ್ಲಿ ಸಂದೇಹವಿಲ್ಲ.

'ಶೂನ್ಯ ಸಂಪಾದನೆ' ವೀರಶೈವ ತತ್ತ್ವಗ್ರಂಥ. ಸಂಸ್ಕೃತ ವೀರಶೈವ ಧಾರ್ಮಿಕ ಗ್ರಂಥಗಳಲ್ಲಿ ಶಿವಯೋಗಿ ಶಿವಾಚಾರ್ಯ ಕೃತ 'ಸಿದ್ಧಾಂತ ಶಿಖಾಮಣಿ' ಪ್ರಪ್ರಥಮ ಗ್ರಂಥವಾಗಿರುವಂತೆಯೇ ಕನ್ನಡ ವೀರಶೈವ ಧಾರ್ಮಿಕ ಗ್ರಂಥಗಳಲ್ಲಿ 'ಶೂನ್ಯಸಂಪಾದನೆ'ಯೇ ಮೊಟ್ಟಮೊದಲನೆಯ ವಚನಧರ್ಮಶಾಸ್ತ್ರ ಗ್ರಂಥವೆಂದು ಹೇಳಬಹುದು. ಶಿವನ ಆಜ್ಞೆಯ ಮೇರೆಗೆ ಭೂಲೋಕದಲ್ಲಿ ಅವತರಿಸಿದ ರೇಣುಕರು ಷಟ್‌ಸ್ಥಲ ಸಿದ್ಧಾಂತವನ್ನು ಅಗಸ್ತ್ಯರಿಗೆ ಉಪದೇಶಮಾಡಿದಂತೆಯೇ ಮರ್ತ್ಯಲೋಕದಲ್ಲಿ ಅವತಾರ ಮಾಡಿದ ಅಲ್ಲಮರು ಷಟ್‌ಸ್ಥಲ ಸಿದ್ಧಾಂತವನ್ನು ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ ಮೊದಲಾದ ರುದ್ರಮುನಿಗಳೂ, ಮುಕ್ತಾಯಕ್ಕ ಮತ್ತು ಅಕ್ಕಮಹಾದೇವಿಯರಂಥ ಶಿವಜ್ಞಾನ ಸಂಪನ್ನೆಯರಿಗೂ ಉಪದೇಶ ಮಾಡಿದರು. ರೇಣುಕರ ತತ್ತ್ವ ಬೇರೆ ಅಲ್ಲ; ಅಲ್ಲಮರ ತತ್ತ್ವ ಬೇರೆಯಲ್ಲ. ಇಬ್ಬರೂ ಸಂಪೂಜ್ಯರು. ರೇಣುಕರು ಕೈಲಾಸದಲ್ಲಿ ಪ್ರಮಥ ಗಣದಲ್ಲಿ ಪ್ರಮುಖರಾಗಿದ್ದಂತೆಯೇ, ಅಲ್ಲಮರು 'ನಿರ್ಮಾಯ'ನೆಂಬ ಹೆಸರಿನಿಂದ ಶಿವನಸನ್ನಿಧಿಯ ರುದ್ರಗಣದಲ್ಲಿ ಪ್ರಮುಖರಾಗಿದ್ದರು. ಇಬ್ಬರೂ ಶಿವನ ಕೃಪಾಪಾತ್ರರು. ಆದರೆ ಅವರಿಬ್ಬರೂ ಭೂಲೋಕಕ್ಕೆ ಬಂದ ಕಾರಣ ಮಾತ್ರ ಬೇರೆ ಬೇರೆ. ಒಂದು ದಿನ ನಿರ್ಮಾಯ ಪಾರ್ವತಿಯ ಸಂಚಿನಿಂದ ಕಾಮಲತೆಯೆಂಬ ರುದ್ರಕನ್ನಿಕೆಯನ್ನು ಕಂಡು ಮೋಹಪರವಶನಾದ್ದರಿಂದ, ಶಿವನ ಅಪ್ಪಣೆಯಂತೆ, ಅವನು ಭೂಲೋಕದಲ್ಲಿ ಬನವಾಸಿಯೆಂಬ ಗ್ರಾಮದಲ್ಲಿದ್ದ ನಾಗಾವಾಸಾಧಿಪತಿಯೆನಿಸಿದ್ದ ಶಿವಭಕ್ತ ಮತ್ತು ಅವನ ಪತ್ನಿ ಸುಜ್ಞಾನಿದೇವಿಯ ಪುತ್ರನಾಗಿ ಜನಿಸಿದನು. ಅವನಿಗೆ ಅಲ್ಲಮ ಎಂದು ಹೆಸರಾಯಿತು. ಪಾರ್ವತಿಯ ಪ್ರೇಮದ ರುದ್ರಕನ್ಯೆ 'ಕಾಮಲತೆ'ಯಾಗಿ ಅದೇ ಊರಿನ ಶಿವಭಕ್ತರ ಕುಟುಂಬದಲ್ಲಿ ಜನಿಸಿದಳು. ಅವಳು ಅತ್ಯಂತ ಸ್ಫುರದ್ರೂಪಿಣಿಯಾಗಿ ಬಳೆಯುತ್ತ, ನೃತ್ಯವಿದ್ಯಾಪಾರಂಗತೆಯಾಗಿ ಯೌವನವತಿಯಾದಳು. ಅಲ್ಲಮ ಕಾಮಲತೆಯರು ಮದುವೆಯಾದರು. ಅವರು ಅನೇಕ ವರ್ಷಕಾಲ ಸಂಸಾರ ಸುಖಲೋಲುಪರರಾಗಿದ್ದರು. ಅವರು ಬನವಾಸಿಯ ಗುಹೇಶ್ವರ ದೇವಾಲಯದಲ್ಲಿ ಪರಿಚರ್ಯದಿಂದ ಕಾಲ ಕಳೆಯುತ್ತಿದ್ದರು. ಹೀಗಿರಲು, ರುದ್ರಕನ್ಯೆ ವಿಶಾಪದಿಂದ ಅಲ್ಲಮನನ್ನು ಅಗಲಿ ಹೋದಳು. "ಮಾನವಾಕಾರ ಚೈತನ್ಯ ಕಳೆಯಂ ಧರಿಸಿ ಮರ್ತ್ಯಲೋಕಕ್ಕೆ ಇಳಿದು ಬಂದಿದ್ದ ನಿರ್ಮಾಯ ರುದ್ರಗಣೇಶ್ವರ ಬನವಾಸಿಯಲ್ಲಿ 'ಗುಹೇಶ್ವರ'ನೆಂಬ ಮೂಲಸ್ಥಾನದ (ದೇವಸ್ಥಾನದ) ಸೇವೆಯಲ್ಲಿದ್ದನೆಂದು ಶೂನ್ಯಸಂಪಾದನೆಯಲ್ಲಿ

ಹೇಳಿದೆ. ಅಲ್ಲಮ ಗೃಹಸ್ಥ ಜೀವನದಲ್ಲಿ ಸ್ಥಾವರಲಿಂಗ
ಪೂಜೆಯಲ್ಲಿ ನಿರತನಾಗಿದ್ದನೆಂದು ವ್ಯಕ್ತವಾಗುತ್ತದೆ.
ಕೈಲಾಸದಲ್ಲಿ ಅಂದು ಶಿವನು ನಿರ್ಮಾಯನನ್ನು ಕುರಿತು
ಮರ್ತ್ಯವೆಂಬುದು ಎನ್ನ ಕಮ್ಮಟ ! ಅಲ್ಲಿ ಇದ್ದಡೇನು?
ಎಲ್ಲಕಂ ನಾನೇ ಕರ್ತ; ನೀನಂಜದಿರು. ನಿನ್ನ ಮುಸು
ಕಿದ ಮಾಯೆಯಂ ನಿವೃತ್ತಿಯ ಮಾಡಿದಪೆನು. ನಾನೆ
ನಿನಗೆ ಪ್ರಾಣಲಿಂಗವಾಗಿ ಬಂದು ನಿನ್ನ ಸರ್ವಾಂಗ
ದೊಳು ನೆಲೆಗೊಂಡು ನಿಜಲಿಂಗೈಕ್ಯನ ಮಾಡಿ ನಿರ್ವಾಣ
ಸಮಾಧಿಯೊಳು ನಿಲಿಸಿದಪೆವು. ನಿನ್ನಿಂದ ಮರ್ತ್ಯ
ಲೋಕದ ಶಿವಾಚಾರ ಜೀರ್ಣೋದ್ಧಾರವಾದಪುದು.
ನಿನ್ನಿಂದ ಮರ್ತ್ಯಲೋಕದ ಮಹಾಗಣಂಗಳಿಗೆ ಜ್ಞಾನಾ
ನಂದ ಸುಖಮಪ್ಪುದು. ನೀನು ಹೋಗು" ಎಂದು
ಅಭಯ ಪ್ರಧಾನ ಮಾಡಿದನು. ಅಲ್ಲಮರಿಗಿಂತ ಹಿಂದೆ
ಯೇ ಭೂಲೋಕದಲ್ಲಿ ಸ್ಥಾವರಲಿಂಗ ಪೂಜೆ ಆಚರಣೆ
ಯಲ್ಲಿತ್ತು; ಮಹಾಗಣಂಗಳೂ ಇಲ್ಲಿದ್ದರು. ಆ ಶಿವಾ
ಚಾರವನ್ನು ಜೀರ್ಣೋದ್ಧಾರಮಾಡಲು ಅಲ್ಲಮರು ನಿರ
ತರಾದರೆಂದು 'ಶೂನ್ಯ ಸಂಪಾದನೆ' ನಿರೂಪಿಸುತ್ತದೆ.
ಅಲ್ಲಮರು ಬನವಾಸಿಯ ಗುಹೇಶ್ವರಲಿಂಗದ ಪರಮ
ಭಕ್ತರಾಗಿದ್ದುದರಿಂದಲೇ ಅವರು 'ಗುಹೇಶ್ವರ' ಎಂಬ
ಕಾವ್ಯನಾಮವನ್ನು ಧರಿಸಿ ತಮ್ಮ ವಚನಗಳಲ್ಲಿ ಆ ಅಂಶ
ವನ್ನೇ ಉಪಯೋಗಿಸಿರುತ್ತಾರೆ. ಶರಣರೆಲ್ಲರೂ ಯಾವು
ದಾದರೊಂದು ಸ್ಥಾವರಲಿಂಗದ ಅಂಕಿತವನ್ನೇ ಬಳಸು
ತ್ತಾರೆ. ಸ್ವಲ್ಪ ಮನಸ್ಸು ಮಾಡಿದ್ದರೆ, ಶಿವಗಣಪ್ರಸಾದಿ
ಮಹದೇವಯ್ಯ ನಿರ್ಮಾಯ ಗಣೇಶ್ವರನನ್ನು ಬನವಾಸಿ
ಯ ಗುಹೇಶ್ವರಲಿಂಗದಲ್ಲಿ ಆವಿರ್ಭವಿಸಿದನೆಂದೇ ಹೇಳ
ಬಹುದಾಗಿತ್ತು. ವೀರಶೈವದಲ್ಲಿ ಎಂದರೆ ಅಲ್ಲಮರ ಕಾಲ
ದ ಶಿವಾಚಾರದಲ್ಲಿ ಎಂದಿನಿಂದಲೂ ಸ್ಥಾವರಲಿಂಗಪೂಜೆ
ನಡೆಯುತ್ತಿವೆಂಬುದು ನಿಜ; ಈಗಲೂ ಅದು ಆಚರಣೆ
ಯಲ್ಲಿದೆ.

ಕಾಮಲತೆಯ ವಿಯೋಗದಿಂದ ದುಃಖತಪ್ತನಾದ
ಅಲ್ಲಮನು ಚಿಂತೆಯಲ್ಲಿ ಮುಳುಗಿ "ಪುಷ್ಪವಾಟಿಕೆಯೊಳ್
ಕುಳ್ಳಿರ್ದು, ಪರವಶನಾಗಿ ಇರುತ್ತಮಿರೆ, ತನಗೆಯೂ
ಪರಮೇಶ್ವರನ ಕರುಣ ಪ್ರಸನ್ನವಪ್ಪ ಕಾಲದೊಳು
ಕಾಮತತ್ತ್ವದ ಅಳಿವು ಶಿವತತ್ತ್ವದ ಉಳಿವು "ಎಂಬುದು
ಸತ್ಯಮಾದಂತೆ ಕರ್ಮಕ್ಷಯಮಾಗಿ ಸುಜ್ಞಾನಾಂಕುರ
ವನೊಳಕೊಂಡಿರ್ಪ ಅಲ್ಲಮ ಪ್ರಭುದೇವರ ಸತ್ಪಿಂಡ
ದೊಳಡಗಿರ್ದ ಶಿವತತ್ತ್ವ ನಿದರ್ಶನವೆಂತಿರ್ದಡೆದೆಂದು
ಪ್ರಥಮದಲ್ಲಿ ಪಿಂಡಸ್ಥಲವಾದುದು" ಎಂಬ ಅರಿವಾಯಿತು.

ಅಲ್ಲಮಪ್ರಭು ಆಗರ್ಭ ಮಹಾಂತನೆಂಬುದನ್ನು ಶಿವಗಣ
ಪ್ರಸಾದಿ ಆಧ್ಯಾತ್ಮಿಕದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾನೆ.
ಗ್ರಂಥಕಾರ ಅಲ್ಲಮರನ್ನು "ಶ್ರೀಮತ್ಪರಮತತ್ತ್ವ, ಪರ
ಮಾನಂದ, ಪರಂಜ್ಯೋತಿ, ಪರಮೇಶ್ವರ, ಅಗಮ್ಯ,
ಅಗೋಚರ, ಅಪ್ರಮೇಯ, ಅನಾಮಯ, ಅಪ್ರತರ್ಕ್ಯ,
ಮಹಾಜ್ಞಾನ ಪ್ರಭಾಮಯ" ಎಂದೂ "ಗುಣ ಧರ್ಮ
ಕರ್ಮ ನಿರ್ಲೇಪನ, ಸಕಲ ಭುವನ ಭವನಾಂತರಂಗ,
ನಿತ್ಯ ನಿರ್ಮಲ ಸ್ವರೂಪ", ಎಂದೂ "ಇಷ್ಟಲಿಂಗಪ್ರಾಣ
ಲಿಂಗತೃಪ್ತಿಲಿಂಗಾಲಿಂಗಿತಾಂಗಲೇಪಗುರುಲಿಂಗಜಂಗಮ
ಪ್ರಸಾದ ಪಾದೋದಕಾದಿ ಪಂಚಾಚಾರ
ಪ್ರತಿಷ್ಠಾಪನಾಚಾರ್ಯ, ಭಕ್ತ ಮಾಹೇಶ್ವರ
ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯಾದಿ ಷಟ್ಸ್ಥಲ ಚಕ್ರ
ವರ್ತಿ" ಎಂದೂ "ಶ್ರೀವೀರಶಿವಾಚಾರ ಶಿರೋರತ್ನ,
ಶ್ರೀ ವೀರಶಿವಾಚಾರ ಪ್ರಥಮ ನಾಯಕ ಶ್ರೀ ವೀರಶಿವಾ
ಚಾರ ಶಿವಾಚಾರ್ಯ, ಅನಿಮಿಷ ಶ್ರೀ ಚರಣಾಂಭೋ
ಜಾತ ಕರ್ಣಿಕಾವಾಸ, ಗುಹೇಶ್ವರ ನಾಮಾಮೃತ
ಸ್ವೀಕಾರ ಸಂತುಷ್ಟ" ಎಂದೂ ಶೂನ್ಯಸಂಪಾದನೆಯ
ಪ್ರಾರಂಭದಲ್ಲಿಯೇ ಪ್ರಶಂಸಿಸಿರುತ್ತಾನೆ. "ನಿನ್ನಿಂದ,
ಮರ್ತ್ಯಲೋಕದ ಶಿವಾಚಾರ ಜೀರ್ಣೋದ್ಧಾರವಾದ
ಪುದು" ಎಂದು ಅಂದು ಶಿವನು ನಿರ್ಮಾಯಗಣೇಶ್ವರ
ನನ್ನು ಬೀಳ್ಕೊಟ್ಟನೆಂಬುದನ್ನು ಮರೆಯುವಂತಿಲ್ಲ. ಆದ್ದ
ರಿಂದ ಅಲ್ಲಮರಿಗಿಂತ ಪೂರ್ವದಲ್ಲಿಯೇ ಶಿವಾಚಾರ
ವಿತ್ತೆಂದೂ ಅಲ್ಲಮರು ಆ ಶಿವಾಚಾರವನ್ನು ಪರಿಷ್ಕರಿಸಿ
'ಶ್ರೀವೀರಶಿವಾಚಾರಶಿವಾಚಾರ್ಯ'ನಾದನೆಂದು ಅರ್ಥ
ವಾಗುತ್ತದೆ. ಅಲ್ಲಮರ ಕಾಲದಲ್ಲಿ ವೀರಶೈವ
ಯಾವ ರೀತಿಯಲ್ಲಿದ್ದಿತೆಂಬುದನ್ನು ಇಲ್ಲಿ ವಿವರಿಸಲು
ಅವಕಾಶವಿಲ್ಲ. ಆಗ ವೀರಶೈವವೆಂಬುದ ಕಾಳಾಮುಖ
ಪಾಶುಪತ ಮತ್ತು ಲಕುಳೀಶರೆಂಬ ಪ್ರಧಾನ ಶಿವಧರ್ಮ
ಶಾಖೆಗಳಲ್ಲಿ ಹಬ್ಬಿತ್ತು. ಅದೇ ಅಂದಿನ ವೀರಶೈವ.
ಬನವಾಸಿ ಆಗ ಪ್ರಾಚೀನ ವೀರಶೈವ ಕೇಂದ್ರಗಳಲ್ಲಿ
ಒಂದಾಗಿತ್ತು. ಆದರಿಂದಲೇ ಅಲ್ಲಮ "ಬಾಲ್ಯದಲ್ಲಿ
ಯೌವನದಲ್ಲಿ "ಗುಹೇಶ್ವರಲಿಂಗ" ದೇವಾಲಯದ ಪರಿ
ಸರದಲ್ಲಿ ಬೆಳೆದು, ಆ ಮತ ಧರ್ಮದ ಆಚರಣೆಗಳನ್ನು
ಅರಿತು ಮುಂದೆ ಶಿವಾಚಾರ ಧರ್ಮಪ್ರತಿಷ್ಠಾಪನಾ
ಚಾರ್ಯನಾದನು. ಷಟ್ಸ್ಥಲ ಚಕ್ರವರ್ತಿಯಾದನು;
ಶ್ರೀ ವೀರಶಿವಾಚಾರ ಶಿರೋರತ್ನವಾದನು. ಸುಜ್ಞಾ
ನಾಂಕುರವನ್ನು ಒಳಗೊಂಡಿರ್ಪ ಅಲ್ಲಮಪ್ರಭುದೇವರ
ಸತ್ಪಿಂಡದೊಳಡಗಿರ್ದ ಶಿವತತ್ತ್ವ ನಿದರ್ಶನವಾಗಿದ್ದ

ನೆಂದು ಶೂನ್ಯಸಂಪಾದನೆ ತಿಳಿಸುತ್ತದೆ. ಅಲ್ಲಮರ
ಜೀವನದಲ್ಲಿ ಷಟ್ಸ್ಥಲಸಾಧನಾಮಾರ್ಗ ಗೋಚರಿಸುವು
ದಿಲ್ಲವಾದರೂ, ಅಪರೋಕ್ಷಜ್ಞಾನಿಯಾಗಿದ್ದ ಅಲ್ಲಮರು
ಅತ್ಯುನ್ನತ ಜ್ಞಾನದ ಮಟ್ಟದಲ್ಲಿಯೇ ಲೋಕದ ಬದು
ಕನ್ನು ನೋಡಿ, ಲೋಕವನ್ನು ತಮ್ಮ ಮಟ್ಟದಲ್ಲಿಯೇ
ಪರಿಪೂರ್ಣದತ್ತ ನಡೆಸಿದರು. ಶೂನ್ಯಸಂಪಾದನೆಯಲ್ಲಿ
ಅವರಲ್ಲಿ ಪಿಂಡಸ್ಥಲಾದಿ ಜ್ಞಾನಶೂನ್ಯ ಸ್ಥಲಪರ್ಯಂತ
ಅಖಂಡಮಹಾಲಿಂಗಸ್ವರೂಪ ಚಿಜ್ಜ್ಯೋತಿಯಿಂದ ಬೆಳ
ಗುತ್ತಿತ್ತು. ಇಲ್ಲಿ "ಪಿಂಡ" ಎಂಬುದನ್ನು ವಿಶಿಷ್ಟವಾದ
ಅರ್ಥದಲ್ಲಿ ಹೇಳಿದೆ. ತನ್ನಲ್ಲಿರುವ ಅಂತಶ್ಯಕ್ತಿಯನ್ನು
ಆತ್ಮಸಾಕ್ಷಾತ್ಕಾರ ದೃಷ್ಟಿಯಿಂದ ಅರಿಯಬಲ್ಲ ನಿರ್ಮಲ
ಚಿತ್ತ ವ್ಯಕ್ತಿಯ ಸಾಧಕನ ಮೊದಲನೆಯ ಹಂತವನ್ನು
"ಪಿಂಡ" ಎಂದು ಕರೆಯಲಾಗಿದೆ. ಅಲ್ಲಮರು ತನಗೂ
ತನ್ನ ಆರಾಧ್ಯಮೂರ್ತಿ "ಗುಹೇಶ್ವರ"ನಿಗೂ ಅರ್ಥಾತ್
ಪರಶಿವನಿಗೂ ಇರುವ ಸಂಬಂಧವನ್ನು "ಕಲ್ಲೊಳಗಣ
ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ,
ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದ
ದಂತೆ, ಗುಹೇಶ್ವರಾ, ನಿಮ್ಮ ಶರಣ ಸಂಬಂಧ" ಎಂದು
ಬಹಳ ಅರ್ಥಪೂರ್ಣವಾಗಿ ನಿರೂಪಿಸಿದ್ದಾರೆ. ಪರಬ್ರಹ್ಮ
ತತ್ತ್ವದಲ್ಲಿ "ಪಿಂಡಸ್ಥಲ" ಕಲ್ಲಿನಲ್ಲಿ ಬೆಂಕಿಯಿರುವಂತೆ,
ಉದಕದಲ್ಲಿ ಪ್ರತಿಬಿಂಬವಿರುವಂತೆ, ಬೀಜದಲ್ಲಿ ವೃಕ್ಷವಿರು
ವಂತೆ, ಶಬ್ದದಲ್ಲಿ ನಿಶ್ಶಬ್ದವಿರುವಂತೆ ಅಡಗಿರುತ್ತದೆ.
ಅಲ್ಲಮರು ಪಿಂಡದಲ್ಲಿ ಶಿವತತ್ತ್ವವನ್ನು ಅಡಗಿಸಿಕೊಂಡಿ
ದ್ದ ಆತ್ಮಜ್ಞಾನಿ. ಅವರು ಅಣುವಿನಲ್ಲಿ ಅಣು, ಮಹ
ತ್ತಿನಲ್ಲಿ ಮಹತ್ತು. ಅವರು ತನ್ನ ಜ್ಞಾನದೃಷ್ಟಿಯಿಂದ
ಅರಿತು ತಾನು ಮಾಂಸ ಪಿಂಡ ಹುಟ್ಟುವಂದು ಹುಟ್ಟಿ
ದವನಲ್ಲ. ಬೆಳೆವಲ್ಲಿ ಬೆಳೆದವನಲ್ಲ, ಅಳಿವಲ್ಲಿ ಅಳಿದವ
ನಲ್ಲ; ತಾನು ಈ ಪ್ರಪಂಚ ಹುಟ್ಟದ ಮುನ್ನವೇ ಆದಿ
ಚಿತ್‌ಶಕ್ತಿಯಿಂ[illegible] ಉದಯಿಸಿದೆನೆಂದು ತಮ್ಮನ್ನು ತಾವೇ
ಅಂತರ್ಮುಖ[illegible]ಗಿ ನೋಡಿ ತಿಳಿಯುತ್ತಿದ್ದರು. ಅಲ್ಲ
ಮರು ಆದಿ ಮಧ್ಯ ಅಂತ್ಯ ರಹಿತರು. ಈ ಸೃಷ್ಟಿಗೆ
ಪೂರ್ವದ ಸ್ಥಿತಿಯಲ್ಲಿ ಅವರು ಆಕಾರ ನಿರಾಕಾರಗಳನ್ನು
ಮೀರಿದ ನಿಲುವಿನಲ್ಲಿ ಅದ್ವಯ ಸ್ಥಿತಿಯಲ್ಲಿದ್ದರು.

"ಆದಿಯಾಧಾರವಿಲ್ಲದಂದು, ಹಮ್ಮುಬಿಮ್ಮು ಇಲ್ಲ
ದಂದು ಸುರಾಳನಿರಾಳ ವಿಲ್ಲದಂದು. ಶೂನ್ಯ ನಿಶ್ಶೂನ್ಯವಿಲ್ಲ
ದಂದು ಸಚರಾಚರವೆಲ್ಲಾ ರಚನೆಗೆ ಬಾರದಂದು ಗುಹೇ
ಶ್ವರಾ ನಿಮ್ಮ ಶರಣ ನುದಯಿಸಿದನಂದು "ಸೃಷ್ಟಿಪೂರ್ವ
ದಲ್ಲಿ ಅಲ್ಲಮರು ಇದ್ದರೆಂದೂ ಮತ್ತು "ನಾದಬಿಂದುಗಳಿ
ಲ್ಲದಂದು ನಿರ್ಭಯನೆಂಬ ಗಣೇಶ್ವರನು, ಉತ್ಪತ್ತಿ ಸ್ಥಿತಿ
ಲಯವಿಲ್ಲದಂದು ಅಕ್ಷಯನೆಂಬ ಗಣೇಶ್ವರನು, ಓದು-
ವೇದಂಗಳಿಲ್ಲದಂದು ಓಂಕಾರನೆಂಬ ಗಣೇಶ್ವರನು, ಗುಹೇ
ಶ್ವರನೆಂಬ ಲಿಂಗವಿಲ್ಲದಂದು ನಿರ್ಮಾಯನೆಂಬ ಗಣೇ
ಶ್ವರನು" ತಾವಾಗಿದ್ದರೆಂದೂ ನೆನಪು ಮಾಡಿಕೊಂಡಿರು
ತ್ತಾರೆ. ನಿರಾಕಾರನಾಗಿದ್ದ ಅಲ್ಲಮರು ಕೈಲಾಸದಲ್ಲಿ
ನಿರ್ಮಾಯರಾಗಿದ್ದ ಅವತಾರವನ್ನು ವೀಕ್ಷಿಸಿರುತ್ತಾರೆ.
ಆ ನಿರ್ಮಾಯನೆಂದರೆ ಸಾಮಾನ್ಯನಲ್ಲ. ಬ್ರಹ್ಮವಿಷ್ಣು
ಇವರನ್ನು ಮಾಯೆಕೊತ್ತಳ ತುಳಿದಂದು, ರುದ್ರಗಣ,
ಪ್ರಥಮಗಣಗಳನ್ನು ಮಾಯೆ ಮೋಹಗೊಳಿಸಿ ಕಾಡು
ವಂದು, ನೊಸಲಕಣ್ಣು ಪಂಚ ಮುಖದವರಿಗೆ ಮಾಯೆ
ಅರ್ಧಾಂಗಿಯಾದಂದು, ಅಷ್ಟಾಶೀತಿ ಸಹಸ್ರ ಋಷಿ
ಗಳನ್ನು ಮಾಯೆ ತಪೋಮದದಲ್ಲಿ ಕೆಡಹುವಂದು ತಾವು
ನಿರ್ಮಾಯರಾಗಿದ್ದರೆಂದು ಅಂತದೃಷ್ಟಿಯಿಂದಪರಿಭಾವಿ
ಸಿಕೊಂಡು ತಮ್ಮ ಸ್ವರೂಪವನ್ನು ಹೇಳಿರುತ್ತಾರೆ.
ಇವೆಲ್ಲಾ ಸೃಷ್ಟಿ ಪೂರ್ವದ ಮತ್ತು ಸೃಷ್ಟಿಯ ಅನಂತರದ
ತಮ್ಮ ಜೀವನಲೀಲೆಯನ್ನು ತಿಳಿಸಿರುವಂತೆಯೇ, ತಾವು
ಕೃತಯುಗದಲ್ಲಿ ಸ್ಥೂಲಕಾಯ, ತ್ರೇತಾಯುಗದಲ್ಲಿ
ಶೂನ್ಯ ಕಾಯ, ದ್ವಾಪರ ಯುಗದಲ್ಲಿ ಅನಿಮಿಷ ಮತ್ತು
ಕಲಿಯುಗದಲ್ಲಿ ಅಲ್ಲಮಪ್ರಭು ಎಂಬ ಗಣೇಶ್ವರನಾಗಿ
'ಮಣಿಹದಲ್ಲಿ ತದ್ಗತನಾಗಿರ್ದೆ'ನೆಂದೂ ಅವರು ನುಡಿದಿ
ರುತ್ತಾರೆ.

ಅಲ್ಲಮರು ಮಾನವರಲ್ಲ; ಅವರು ಮಾನವಾತೀತ
ವ್ಯಕ್ತಿ. ಅಲ್ಲಮರು ವ್ಯಕ್ತಿಯಲ್ಲ; ಅವರು ಚಿತ್‌ಶಕ್ತಿ.
ಅಲ್ಲಮರು ಅವತಾರ ಪುರುಷರಲ್ಲ; ಅವರು ಕಾರಣಿಕ
ಪುರುಷರು. ಪರಬ್ರಹ್ಮ ತತ್ತ್ವವೇ ಅಲ್ಲಮರು; ಮಹಾ
ಲಿಂಗಸ್ವರೂಪವೇ ಅಲ್ಲಮರು. ವೀರಶೈವ ಸಿದ್ಧಾಂತ
ದಲ್ಲಿ ಪರಬ್ರಹ್ಮವನ್ನು ಶೂನ್ಯವೆಂದೂ ಕರೆಯುತ್ತಾರೆ.
ಶೂನ್ಯವೆಂದರೆ ಏನೂ ಇಲ್ಲದಸ್ಥಿತಿ ಎಂದು ಅರ್ಥವಲ್ಲ.
ಎಲ್ಲವೂ ಇದ್ದು ಏನೂ ಇಲ್ಲದ ಶಕ್ತಿಜ್ಯೋತಿಯೇ
ಶೂನ್ಯ. ಇದು ಪರಮೋನ್ನತ ಸ್ಥಿತಿ. ಇದರಿಂದಲೇ
ಜಗತ್ತು ಆವಿರ್ಭಾವವಾಗುತ್ತದೆ. ಜಗತ್ತು ಪುನಃ ಇದ
ರಲ್ಲಿಯೇ ಲಯವಾಗುತ್ತದೆ. ಹೀಗೆ, ಸೃಷ್ಟಿಸ್ಥಿತಿಲಯ
ಕರ್ಮಗಳನ್ನು ಒಳಗೊಂಡ ಅಗಮ್ಯ, ಅತರ್ಕ್ಯ ಅಪ್ರ
ಮೇಯ ಸ್ಥಿತಿಯೇ ಶೂನ್ಯ. ಇದೇ ಪರಿಪೂರ್ಣಾವಸ್ಥೆ.
ಜೀವರು ಈ ಶೂನ್ಯಸ್ಥಿತಿಗೆ ಪರಿಪೂರ್ಣದೆಡೆಗೆ ನಡೆಯುವ
ಕ್ರಮವೇ ಶೂನ್ಯಸಂಪಾದನೆ. ಈ ಶೂನ್ಯಸ್ಥಿತಿಯನ್ನು
ಶರಣರು ಯಾವ ಮಾರ್ಗದಲ್ಲಿ ಎಷ್ಟುರಮಟ್ಟಿಗೆ ಸಂಪಾ
ದಿಸಿದರೆಂಬ ತತ್ತ್ವಸ್ವರೂಪವನ್ನು 'ಶೂನ್ಯಸಂಪಾದನೆ'
ವಿವರಿಸುತ್ತದೆ. (ಮುಂದುವರೆಯುವುದು.)

ಕೊಡಗಿನ ಕೈಲ್ ಮಹೋರ್ತ

— ಡಿ. ಬಿ. ರಾಮಚಂದ್ರಾಚಾರ್, ಕೊಡಗು.

ಒಂದು ಜನಾಂಗದ ನಾಗರಿಕತೆಯ ಅಳತೆಗೋಲಾಗಿ, ಅವರ ಅನೇಕ ನಡಾವಳಿಗಳೂ, ಹಬ್ಬಹರಿದಿನಗಳೂ, ಅವರ ಸಂಪ್ರದಾಯ ವೈಶಿಷ್ಟ್ಯಗಳೂ ನಿಲ್ಲುತ್ತವೆ. ಅಂತೆಯೇ ಕರ್ನಾಟಕದ ಒಂದು ಭಾಗವಾಗಿ, ಗುಡ್ಡಗಾಡುಗಳಲ್ಲೇ ತಮ್ಮ ಬದುಕಿನ ಹೆಚ್ಚಿನ ಅವಧಿಯನ್ನು ಕಳೆದು, ಅಲ್ಲಿಯೇ ಬೆಳೆದು ಉಳಿರು ಬಂದಿರುವ 'ಕೊಡುವ' ಜನಾಂಗದ ಸಂಸ್ಕೃತಿ, ನಾಗರಿಕತೆಗಳು ಅವರು ಆಚರಿಸುವ ಸಾಂಪ್ರದಾಯಿಕ ಹಬ್ಬಗಳಲ್ಲಿ ವ್ಯಕ್ತವಾಗುತ್ತವೆ.

ಪ್ರಕೃತಿದತ್ತವಾದ ಉನ್ನತ ಗಿರಿ ವನಗಳಿಂದಲೂ ಕನ್ನಡನಾಡಿನ ಜೀವದುಸಿರಾಗಿರುವ ಕಾವೇರಿಯ ಜನ್ಮಸ್ಥಳವಾಗಿರುವುದರಿಂದಲೂ ವಾಣಿಜ್ಯಬೆಳೆಗಳಾದ ಕಾಫಿ, ಕಿತ್ತಳೆ, ಯಾಲಕ್ಕಿ, ಮೆಣಸು ಮುಂತಾದವುಗಳ ಉತ್ಪಾದನೆಯಿಂದಲೂ. ಕೊಡಗು ಕರ್ನಾಟಕದ ಮುಖ್ಯ ಜಿಲ್ಲೆಯಾಗಿದೆ. ಇಂತಹ ವೈಶಿಷ್ಟ್ಯಗಳಿಂದ ಕೂಡಿದ ಕೊಡವರ "ಕೈಲ್ ಪೊಳ್ದ್" ಹಬ್ಬದ ವಿಶಿಷ್ಟತೆಯನ್ನು ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

ಭಾರತ ಮುಖ್ಯವಾಗಿ ರೈತರ ಭೂಮಿ. ಇಲ್ಲಿಯ ಪ್ರಜಾಸಂಖ್ಯೆಯಲ್ಲಿ ಶೇಕಡ ಎಂಬತ್ತರಷ್ಟು ಮಂದಿ ಬೇಸಾಯದಿಂದ ಜೀವಿಸುವವರು. ಕೊಡವರು ಇದಕ್ಕೆ ಹೊರತಲ್ಲ. ಅವರು ಆಧುನಿಕ ಭಾರತದಲ್ಲಿ ಉತ್ತಮ ಸೈನಿಕರು ಎಂದು ಹೆಸರು ಪಡೆದಿರುವಂತೆಯೇ ಉತ್ತಮ ವ್ಯವಸಾಯಗಾರರೂ ಎಂಬುದನ್ನೂ ಸಾಧಿಸಿಕೊಂಡಿದ್ದಾರೆ. ಆಗಷ್ಟ್ ತಿಂಗಳಿನಲ್ಲಿ ಕೊಡಗಿನ ಸಂಚಾರವನ್ನು ಕೈಗೊಂಡ ಸಾಮಾನ್ಯನಿಗೂ ಗುಡ್ಡಗಳ ಇಳಿಜಾರಿನಲ್ಲಿ ಕಣ್ಣು ಹರಿಯುವ ತನಕ ಹಬ್ಬಿರುವ ಭತ್ತದ ಗದ್ದೆಗಳು ಆನಂದವನ್ನೀಯುತ್ತವೆ.

ಮೇ ಕಡೆಯ ವಾರ ಅಥವಾ ಜೂನ್ ಮೊದಲ ವಾರದಿಂದ ಪ್ರಾರಂಭವಾಗುವ ಮುಂಗಾರಿನ ಮಳೆಯನ್ನು ನೋಡಿಕೊಂಡು ರೈತರು ತಮ್ಮ ವ್ಯವಸಾಯದ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಆಗಷ್ಟ್ ಕಡೆಯ ಹೊತ್ತಿಗೆ ತಮ್ಮ ಗದ್ದೆಯ ಕೆಲಸವನ್ನೆಲ್ಲಾ ಮುಗಿಸಿಕೊಂಡು, ವಿಶ್ರಾಂತಿ ತೆಗೆದುಕೊಳ್ಳಲು ನಡೆಸುವ ಒಂದು ಹಬ್ಬವಾಗಿ ಈ ಮಹೋರ್ತ ಪರಿಗಣಿಸಲ್ಪಟ್ಟಿದೆ.

ಸಾಮಾನ್ಯವಾಗಿ ಈ ಹಬ್ಬವನ್ನು ಕೈಲ್ ಪೊಳ್ದ್ ಎಂದೂ, ಕೈಲ್ ಪೂದು ಎಂದು ಕರೆಯುತ್ತಾರೆ. ಕೈಲ್ ಪೊಳ್ದ್ ಎಂದರೆ ಆಯುಧಗಳ ಪೂಜೆ ಎಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಇದು ಒಬ್ಬರು ಮತ್ತೊಬ್ಬರೊಡನೆ ಕೂಡುವ ಹಬ್ಬ ಎಂಬುದಾಗಿ ಪರಿಗಣಿಸುತ್ತಾರೆ. [ಕೈಲ್ ಎಂದರೆ ಕೈ ಅಥವಾ ಹಸ್ತ, ಪೂದು ಎಂದರೆ ಸೇರುವಿಕೆ.] ಇಂದಿಗೂ ದೂರದ ಸ್ಥಳಗಳಲ್ಲಿ ವಾಸಿಸುವ ನೆಂಟರಿಷ್ಟರು ಒಟ್ಟಿಗೆ ಸೇರಿ ಇದನ್ನು ಆಚರಿಸುತ್ತಾರೆ.

ವ್ಯವಸಾಯದ ಕಾಲ ಪ್ರಾರಂಭವಾದಾಗ, ನಾಟಿ ಕೆಲಸ ಮುಗಿಯುವವರೆಗೆ ಬೇಟೆಗೆ ಹೋಗಬಾರದೆಂದು ಬೇಟೆಯ ಆಯುಧಗಳನೆಲ್ಲಾ ಮನೆಯ ನೆಲ್ಲಕ್ಕಿ ಬಾಡೆ ಅಥವಾ ಕನ್ನಿಕೊಂಬರೆಗಳಲ್ಲಿ [ಒಂದು ವಿಶಿಷ್ಟ ಕೊಠಡಿ ಪೂಜಾಗೃಹ] ಇಟ್ಟಿರುತ್ತಾರೆ. ಈ ಹಬ್ಬದ ದಿನ ಮನೆಯ ಹಿರಿಯರಿಂದ ಮೊದಲ್ಗೊಂಡು ಕಿರಿಯರವರೆಗೆ ಎಲ್ಲರೂ ಆಯುಧಗಳನ್ನು ಪೂಜಿಸಿ ನಂತರ ಅಂದು ಬೇಟೆಯನ್ನು ಪ್ರಾರಂಭಿಸುತ್ತಾರೆ; ಇದು ಈ ಹಬ್ಬದ ಮುಖ್ಯ ಆಕರ್ಷಣೆ.

ಸಾಮಾನ್ಯವಾಗಿ ಈ ಹಬ್ಬ ಸೆಪ್ಟೆಂಬರ್ ಮೂರನೆಯ ತಾರೀಖು ನಡೆಯುತ್ತದೆ. [ಕೊಡವರ ಲೆಕ್ಕದ ಪ್ರಕಾರ ಬೆಂಜೂರ್ ತಿಂಗಳು 18 ರಂದು ಇದು ಬೀಳುತ್ತದೆ.] ಆದರೆ ನಾಲ್ಕು ನಾಡು, ಮೂರ್ತ್ನಾಡ್ ಮುಂತಾದ ಕಡೆಯುವರು ಬೆನ್ಸಾರ್ 12 ರಂದು ಈ ಹಬ್ಬವನ್ನು ಆಚರಿಸುತ್ತಾರೆ. [ಬೆನ್ಸಾರ್ ಎಂದರೆ ಸಿಂಹ ಮಾಸ.]

ಈ ಹಬ್ಬದ ಹಿಂದಿನ ದಿನವೇ ಮನೆಗೆ ಬೇಕಾದ ಹಂದಿಯ ಮಾಂಸವನ್ನು [ಪಂದಿಯರ್ಬಿ] ಸಿದ್ಧಮಾಡಿಕೊಳ್ಳುತ್ತಾರೆ. ಹಂದಿ ಸಾಕಲು ಶಕ್ತಿಯಿಲ್ಲದವರು ಹಂದಿಯ ಮಾಂಸವನ್ನು ಕೊಂಡಾದರೂ ಅಂದು ಪಡೆಯಲೇಬೇಕು ಎಂಬ ನಿಯಮವೂ ಉಂಟು. ಅಂತೂ ಅಂದು ಸಂಜೆಯ ಹೊತ್ತಿಗೆ ಎಲ್ಲರ ಮನೆಗೂ ಹಂದಿಯ ಮಾಂಸ ಸೇರಬೇಕು.

ಮಾರನೆಯ ದಿನ ಬೆಳಿಗ್ಗೆ ಎದ್ದ ತಕ್ಷಣ, ಮನೆ

With best compliments from

VISIT WHILE AT HINDUPUR

M/s Nanjundeswara Buildings

MAIN BAZAAR, HINDUPUR-515201 (A.P.)

PHONE: 55

AIRY—SPACIOUS ROOMS AVAILABLE

Proprietors :

K. G. NANJUNDAPPA, B.A., B.L. (*Advocate*)
K. G. SIDDAPPA
K. G. BASAVARAJ, B.SC. (Agri.)

SREE GURUKRUPA
S.V.D. ROAD
HINDUPUR

With best compliments from



M/s VIKRAM AGENCIES

PHARMACEUTICAL DISTRIBUTORS

BANGALORE

With best compliments from



MAHAVEER DRUG HOUSE

PHARMACEUTICAL DISTRIBUTORS

114, Baneswara Temple Street, 5th Cross
Arcot Srinivasachar Street
Post Box No. 7644, BANGALORE-560053

Grams : "PITHERJI"

Phone : 71507

ಯಿಂದ ದೂರದಲ್ಲಿರುವ ದೇವಸ್ಥಾನದ ಒಂದು ಗೊತ್ತಾದ ಸ್ಥಳಕ್ಕೆ [ಊರಿನ ಮಂದಿಗೆ] ಒಂದು ನಿಶ್ಚಿತ ಗಿಡವೊಂದರ [ಆಣಕೆ ಗಿಡ] ಕೈ ಬೆರಳು ಗಾತ್ರದ ಗೇಣುದ್ದದ 2 ತುಂಡುಗಳನ್ನು ಕಡಿದು ಅವುಗಳ ಒಂದು ತುದಿಯನ್ನು ಚೂಪಾಗಿಸಿ, ಮತ್ತೊಂದು ತುದಿಯನ್ನು ಸೀಳಿ, ನೇರಳೆ ಎಲೆಗಳನ್ನು ಗರಿಗಳಂತೆ ಕಟ್ಟಿ ಬಾಣಗಳನ್ನು ತಯಾರಿಸಿ, ಹಾಲು ಬರುವ ಗಿಡಕ್ಕೆ ಆ ಬಾಣಗಳನ್ನು ಆ ಗಿಡದ ಕಾಂಡಕ್ಕೆ ತಗುಲುವಂತೆ ಎಸೆಯುತ್ತಾರೆ. [ಈ ಪದ್ಧತಿ ಕೆಲವು ಕಡೆ ಮಾತ್ರ ರೂಢಿಯಲ್ಲಿದೆ] ನಂತರ ವ್ಯವಸಾಯಕ್ಕೆ ಬಳಸಿದ ನೇಗಿಲು, ಸನಿಕೆ, ಗುದ್ದಲಿ ಮುಂತಾದ ವ್ಯವಸಾಯದ ಉಪಕರಣಗಳನ್ನು ಚೆನ್ನಾಗಿ ತೊಳೆದು ಶುಚಿಗೊಳಿಸುತ್ತಾರೆ. ನಂತರ ದನ ಕರುಗಳನ್ನು ತೊಳೆದು ಶುಚಿಗೊಳಿಸಿ, ಸೂರ್ಯನಿಗೆ ದೂಪ ದೀಪಗಳಿಂದ ಪೂಜೆ ಸಲ್ಲಿಸಿ, 'ಪಣಿಪುಟ್'ನ್ನು ನಿವೇದಿಸುತ್ತಾರೆ- [ಪಣಿಪುಟ್ಟು-ಅಕ್ಕಿಹಿಟ್ಟು, ಬೆಲ್ಲ, ಯಾಲಕ್ಕಿ ಮುಂತಾದುವುಗಳಿಂದ ತಯಾರಿಸಿದ ಒಂದು ಸಿಹಿ ತಿಂಡಿ]. ಅದೇ ಪ್ರಸಾದವನ್ನು ದನಕರುಗಳಿಗೆ ತಿನ್ನಿಸಿ, ಮನೆಯವರು ನಂತರ ಸೇವಿಸುತ್ತಾರೆ.

ಮಧ್ಯಾಹ್ನ ಪಂದಿಯುರ್ಚಿಯಿಂದ ತಯಾರಿಸಿದ ಸಾರು [ಪಂದಿತರಿ] ಮತ್ತು ಅಕ್ಕಿಯಿಂದ ತಯಾರಿಸಿದ ಕಡುಬುಗಳನ್ನು ವಿಶೇಷ ಅಡಿಗೆಯೆಂದು ಪರಿಗಣಿಸಿ, ಊಟ ಮಾಡುತ್ತಾರೆ. ಊಟದ ನಂತರ ಮನಸ್ಸುತೃಪ್ತಿಯಾಗುವಷ್ಟು ಕಳ್ಳು ಮತ್ತು ಸಾರಾಯಿಯನ್ನು ಮಕ್ಕಳಿಂದ ಹಿಡಿದು ದೊಡ್ಡವರವರೆಗೂ ಸೇವಿಸುತ್ತಾರೆ. ಹಬ್ಬದ ಅತಿ ಮಹತ್ವದ ಘಟ್ಟ ಮಧ್ಯಾಹ್ನದ ಊಟ.

ಊಟದ ನಂತರ ಹಬ್ಬ ತನ್ನ ಮೂರನೆಯ ಘಟ್ಟವನ್ನು ತಲುಪುತ್ತದೆ: ಮಧ್ಯಾಹ್ನ ಕನ್ನಿಕೋಂಬರೆಯಲ್ಲಿಟ್ಟಿರುವ ಆಯುಧಗಳನ್ನು ದೂಪ, ದೀಪ, ಗಂಧದ ತಿಲಕಗಳಿಂದ ಪೂಜಿಸುತ್ತಾರೆ. ಈ ಪೂಜೆಗೆ ಒಂದು ವಿಶಿಷ್ಟವಾದ ಪುಷ್ಪವನ್ನು ಮಾತ್ರ ಬಳಸುತ್ತಾರೆ [ಕೆಲವು ಕಡೆ ಈ ಹೂವನ್ನು ಕೋಳಿಹೂ ಎಂದು ಕರೆಯುತ್ತಾರೆ, ಇದು ಕೆಂಪು ಬಣ್ಣದ ಹೂ].

ಊಟ ಉಪಚಾರದ ನಂತರ, ಎಲ್ಲರೂ ಹೊಸ ಬಟ್ಟೆಯನ್ನು ಧರಿಸಿ, ಕುಟುಂಬದ ಗಂಡಸರೆಲ್ಲರೂ ಪೂಜೆಗಿಟ್ಟಿರುವ ಆಯುಧಗಳ ಮುಂದೆ ನಿಲ್ಲುತ್ತಾರೆ. ಆಗ ಕುಟುಂಬದ ಹಿರಿಯ ವ್ಯಕ್ತಿ ಒಂದು ಕೋವಿಯನ್ನು ಕೈಗೆ ತೆಗೆದುಕೊಂಡು, ನಿಂತಿರುವವರಲ್ಲಿ ಹಿರಿಯನೊಬ್ಬನಿಗೆ ಅದನ್ನು ನೀಡುತ್ತಾನೆ. ಹಾಗೆ ಕೋವಿಯನ್ನು ನೀಡುವಾಗ "ನರಿಸೋ ಪಂದಿಸೋ ಬಟ್ಟೆ ಕಟ್ಟಿ ಪರಾಂಗ್, ಮಿತ್ತುರ್ಥಾಕ್ ತೋಣೆಯಾಯಿಲ್ ನಿಲ್ಲ್. ರಾಜಂಗ್ ಮಿನಿಯತೆ, ದೇವರ ಮರೆಯತೆ" ಎಂದು (ಹುಲಿ ಬರುವಾಗ ದಾರಿಬಿಟ್ಟು ನಿಲ್ಲು, ಶತ್ರುವನ್ನು ತಡೆಯಲು ಹೋಗಬೇಡ, ಹಾಗೆ ತಡೆಯುವ ಹಾಗಿದ್ದರೆ ಆತನು ಚಲಿಸದಂತೆ ದಾರಿಯನ್ನು ಅಡ್ಡಗಟ್ಟಿ ತಡೆ. ಮಿತ್ರನಿಗೆ ಸಹಾಯಕನಾಗಿರು, ರಾಜನನ್ನು ಮೀರದೆ, ದೇವರನ್ನು ಮರೆಯದೆ ಇರು) ಬುದ್ಧಿವಾದವನ್ನು ಹೇಳಿ ಕೋವಿಯನ್ನು ನೀಡುತ್ತಾರೆ. ನಂತರ ಉಳಿದವರು ಕ್ರಮವಾಗಿ ಆಯುಧಗಳನ್ನು ಪಡೆಯುತ್ತಾರೆ. ಆಯುಧಗಳನ್ನು ಪಡೆಯುವಾಗ ಆಯುಧವನ್ನು ಕೊಡುವ ಹಿರಿಯನ ಪಾದಮುಟ್ಟಿ ನಮಸ್ಕರಿಸುತ್ತಾರೆ.

ಇದಾದನಂತರ ಊರಿನ ಎಲ್ಲಾ ಗಂಡಸರೂ, ಊರಿನ ದೇವಾಲಯದ (ಊರ್‌ಮಂದ್) ಬಳಿ ಸೇರಿ ಅಲ್ಲಿ ವಿವಿಧ ರೀತಿಯ ಆಟ ಓಟಗಳ ಸ್ಪರ್ಧೆಯನ್ನು ನಡೆಸುತ್ತಾರೆ. ಅದೇ ಸಂದರ್ಭದಲ್ಲಿ ದೂರದಲ್ಲಿ ಕಟ್ಟಿರುವ ತೆಂಗಿನ ಕಾಯಿಗೆ ಗುಂಡುಹಾರಿಸುವುದು ಮುಂತಾದ ಸ್ಪರ್ಧೆಗಳು ನಡೆದು ಬೇಟೆಗೆ ಹೋಗಲು ಅಣಿಯಾಗುತ್ತಾರೆ.

ಈ ಹಬ್ಬಕ್ಕೆ ಸೇರಿದ ಬಂಧುಮಿತ್ರರೆಲ್ಲ ಒಂದು ನಿಶ್ಚಿತ ದಿನವನ್ನು ಗೊತ್ತುಮಾಡಿಕೊಂಡು ಬೇಟೆಗೆ ಹೊರಡುತ್ತಾರೆ. ಬೇಟೆಗೆ ನಾಯಿ, ನಗಾರಿಗಳನ್ನು ಸಜ್ಜುಮಾಡಿಕೊಳ್ಳುತ್ತಾರೆ. ನಾಯಿ ಕೂಡಿಸುವವರು ಎಲ್ಲ ನಿಲ್ಲಬೇಕು ಎಂಬುದರ ಬಗ್ಗೆ ವಿಧಿವತ್ತಾದ ನಿಯಮಗಳಿವೆ. ಹಾಗೆಯೇ ಬೇಟೆಯಲ್ಲಿ ಯಾವುದೇ ಕಾಡುಪ್ರಾಣಿಗೆ ಗುಂಡು ಹಾಕಿ ಕೊಲ್ಲದೆ ಅಥವಾ ಗುಂಡು ಹಾರಿಸದೆ ಬಿಟ್ಟವರಿಗೆ ತಕ್ಕ ಶಿಕ್ಷೆಯೂ ಇದೆ. ಬೇಟೆಯಲ್ಲಿ, ಆಹಾರವಾಗಿ ಉಪಯೋಗಿಸುವ ಪ್ರಾಣಿಯನ್ನು ಕೊಂದವನಿಗೆ ಅದರ ತಲೆ, ಒಂದು ತೊಡೆ, ಬೆನ್ನಿನ ಹುರಿಯನ್ನು ಬಹುಮಾನವಾಗಿ ಕೊಡುತ್ತಾರೆ. ಬೇಟೆಯಲ್ಲಿ ಭಾಗವಹಿಸಿದ ಬೇಟೆಗಾರರೆಲ್ಲ ಉಳಿದ ಮಾಂಸವನ್ನು ಹಂಚಿಕೊಳ್ಳುತ್ತಾರೆ. ಸಾಮಾನ್ಯವಾಗಿ ಕೈಲ್ ಮುಹೂರ್ತ ಬುಧವಾರ ಅಥವಾ ಶನಿವಾರ ಬಂದರೆ ಅಂದು ಬೇಟೆಗೆ ಹೋಗುವುದಿಲ್ಲ. ಆ ದಿನಗಳನ್ನು ದೇವರ ದಿನಗಳೆಂದು ಪರಿಗಣಿಸುತ್ತಾರೆ.

ಹೀಗೆ ಈ ಮುಹೂರ್ತ ಒಂದು ದಿನದಲ್ಲಿ ಮುಕ್ತಾಯಗೊಂಡರೂ ಹಬ್ಬದ ನೆನಪು ಮಾತ್ರ ಅನೇಕ ದಿನಗಳವರೆಗೆ ಕೊಡವರ ಮನಸ್ಸಿನಲ್ಲಿ ತೇಲುತ್ತಲೇ ಇರುತ್ತದೆ.

ಈ ಹಬ್ಬದಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಗಮನಿಸಿದರೆ ಕೊಡವರ ಬೇಟೆಯ ಪ್ರೀತಿ, ಅವರ ಶೌರ್ಯ ಮನೋಭಾವ ವ್ಯಕ್ತವಾಗುತ್ತದೆ.

ಹಬ್ಬದ ಪ್ರಾರಂಭದಲ್ಲಿಯೇ ಹಾಲು ಬರುವ ಮರಕ್ಕೆ ಬಾಣ ಬಿಡುವ ಸಂಪ್ರದಾಯದ ಹಿನ್ನೆಲೆಯನ್ನು ವಿಚಾರಿಸಿದಾಗ ಆ ಹಿನ್ನೆಲೆ ಆಗಲೇ ಜನರ ಸ್ಮೃತಿಯಿಂದ ಮರೆಯಾಗಿರುವುದು ಅನುಭವಕ್ಕೆ ಬಂದಿತು. ಆದರೆ ನಾನು ಮತ್ತೆ ಮತ್ತೆ ಕೆದಕಿದಾಗ, ಅದರ ಹಿನ್ನೆಲೆ ಇದಿರಬಹುದೆಂದು ನನಗನ್ನಿಸಿತು. ಕೊಡವರ ಸಂಸ್ಕೃತಿಯಲ್ಲಿ ಬೇಟೆಗೆ ಅತ್ಯಂತ ಪ್ರಧಾನ ಸ್ಥಾನವಿದೆ. ಅದರ ಬೇಟೆಯದೇವರು ಅಯ್ಯಪ್ಪ (ಬೊಟ್ಟಕಾರ) ಆತನ ರೂಪ ಹೀಗೆ ಎಂದು ನಿರ್ಧಾರವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಹಾಲು ಸುರಿಯುವ ಮರದಲ್ಲಿ ಆತ ವಾಸಿಸುವನೆಂದು ಜನರ ನಂಬಿಕೆ. ಊರಿನ ಹೊರಗೆ ಇರುವ ಅಂತಹ ಮರದ ಸುತ್ತಲೂ ಮಣ್ಣಿನಲ್ಲಿ ಮಾಡಿದ ನಾಯಿಗಳ ಪ್ರತಿಮೆಗಳನ್ನು ನಿಲ್ಲಿಸಿ, ಆ ಮರವನ್ನು ಪೂಜಿಸುತ್ತಾರೆ. ಆ ಸ್ಥಳವನ್ನು ಅಯ್ಯಪ್ಪನ ಗುಡಿಯೆನ್ನುತ್ತಾರೆ. ತಲೆಮಾರಿನಿಂದ ತಲೆಮಾರಿಗೆ ಈ ಪದ್ಧತಿ ನಡೆದು ಬಂದಿದೆ. ಹೀಗಾಗಿ ಹಬ್ಬದ ಬೆಳಗ್ಗೆ ಹಾಲು ಸುರಿಯುವ ಮರಕ್ಕೆ ಮೂರು ಬಾಣಗಳನ್ನು ಬಿಡುವ ಪದ್ಧತಿ, ತಮ್ಮ ಬೇಟೆಯನ್ನು ಪ್ರಾರಂಭಿಸುವ ದಿನ, ತಮ್ಮ ಬೇಟೆಯ ದೇವರನ್ನು ಪೂಜಿಸುವ (ನಮಸ್ಕರಿಸುವ ರೀತಿ ಮಹಾಭಾರತದಲ್ಲಿ ದ್ರೌಪತಿಯ ಸ್ವಯಂವರ ಸನ್ನಿವೇಶದಲ್ಲಿ ಅರ್ಜುನನು ದ್ರೋಣರ ಪಾದವೆಡೆಗೆ ಬಾಣಬಿಟ್ಟ ಸನ್ನಿವೇಶ) ರೀತಿ ಇರಬೇಕೆಂದು ಎನಿಸುತ್ತದೆ. ಇದಕ್ಕೆ ತಕ್ಕ ಆಧಾರಗಳು ಸಿಗಬೇಕಾಗಿದೆ.

-+-

ಗಡಿನಾಡಿನಲ್ಲಿ ಕನ್ನಡದ ಕಹಳೆ

(51ನೆಯ ಪುಟದಿಂದ ಮುಂದುವರೆದಿದೆ).

ಕವಿಯ ಸ್ವತಂತ್ರ ವೈಶಿಷ್ಟ್ಯವಿಲ್ಲದೆ ಇಲ್ಲ. ಈ ಮೂರು ಕಾವ್ಯ ಸಂಕಲನಕ್ಕೆ ಮುನ್ನುಡಿ ಬರೆದಿರುವ ಅ.ಮ.ಸಿ.ಯವರ ಗದ್ಯಧಾಟಿ, ನಿರೂಪಣಾ ವಿಧಾನ, ಮಾತಿನ ಮೋಡಿ ಬೆರಗುಗೊಳಿಸುತ್ತದೆ. ಗಡಿನಾಡ ಪ್ರಾಂತದಲ್ಲಿದ್ದು, ದೇಶಭಕ್ತರಾಗಿ ಹಿರಿಯರ ಮಾರ್ಗದರ್ಶನ, ಕೃತಿದರ್ಶನ ಪ್ರಭಾವದಿಂದ ಕನ್ನಡವನ್ನು ಕನ್ನಡ ನುಡಿಯನ್ನು ಎಚ್ಚರಿಸಿರುವ, ಎಚ್ಚರಿಸುವ ಉದ್ಯೋಗದಲ್ಲಿ ಕಾವ್ಯಕಲೆಯನ್ನು ಮಾಧ್ಯಮವಾಗಿ ಉಪಯೋಗಿಸಿಕೊಂಡಿರುವ ಅ. ಮ. ಸಿ.ಯವರ ರೀತಿ ಮೆಚ್ಚುವಂತಹುದು. ಉತ್ತಮವಾದ ತಪ್ಪಿಲ್ಲದ ಮುದ್ರಣ ಕಡಮೆ ಬೆಲೆಯಲ್ಲಿ ತಮ್ಮ ಸ್ವಂತ ಪ್ರಕಾಶನದಿಂದಲೇ ಪ್ರಕಟಿಸುವ ಸಂಕಲ್ಪ ಕೈಗೊಂಡಿರುವ ಅ. ಮ. ಸಿ.ಯವರ ಸಾಹಸ ದೊಡ್ಡದು. ಕನ್ನಡಿಗರ ಗಮನ ಇತ್ತ ಹರಿಯಬೇಕಾದುದು ಅವಶ್ಯವೇ ಸರಿ !

— ವೆಂಕಟೇಶ

++++

ಬುದ್ಧ ಮತ್ತು ಬಸವ

ಎರಡು ಜಗಜ್ಜ್ಯೋತಿಗಳು



ಮೂಲ :

ಶ್ರೀಶ್ರೀ ಕುಮಾರಸ್ವಾಮೀಜಿ,
ನವಕಲ್ಯಾಣಮಠ, ಧಾರವಾಡ

ಕನ್ನಡಕ್ಕೆ :
ಶ್ರೀ
ಟಿ. ಆರ್. ಮಹದೇವಯ್ಯ
ಬೆಂಗಳೂರು.





ಕನ್‌ಫ್ಯೂಷಿಯಸ್‌ನು ವ್ಯಾವಹಾರಿಕ ಮನೋವೃತ್ತಿಯವನಾದ್ದರಿಂದ ಸದ್ಗುಣಗಳ ಸ್ವಭಾವವನ್ನು ವಿವರಿಸುವಲ್ಲಿ ಅಥವಾ ವಾಸ್ತವ ಜೀವನದಲ್ಲಿನ ಒಳಿತು ಮತ್ತು ಕೆಡುಕಿನ ವ್ಯತ್ಯಾಸವನ್ನು ತಿಳಿಸುವಲ್ಲಿ ಎಂದೂ ಬೇಸರಗೊಳ್ಳಲಿಲ್ಲ. ಆದರೆ ಆತನು ಆತ್ಮದ ಸ್ವಭಾವ ಅಥವಾ ಆಧ್ಯಾತ್ಮಿಕ ಪ್ರಶ್ನೆಗಳ ಬಗ್ಗೆ ಊಹಿಸಲು ಸ್ವಲ್ಪವೂ ಗಮನಕೊಡಲಿಲ್ಲ. ಹಾಗಿದ್ದರೂ ಆತ ಸದ್ಗುಣಗಳ ಸ್ವಭಾವದ ಬಗ್ಗೆ ಒಂದು ಸಾಮಾನ್ಯ ಅಭಿಪ್ರಾಯಕ್ಕೆ ಬಂದನು. ಆತನು ಸದ್ಗುಣವನ್ನು ಒಂದು ಏರಲಾಗದ ಸ್ಥಿತಿ, ಮತ್ತೊಂದು ದಾಟಿಹೋದ ಸ್ಥಿತಿ – ಈ ಎರಡು ಪರಾಕಾಷ್ಠೆಗಳ ನಡುವಣ ಸಾಧನ ಎಂದು ಎಣಿಸಿದ್ದನು. ಆತನು ಅತಿರೇಕವನ್ನು ತಪ್ಪು ಹಾಗೂ ನ್ಯೂನತೆಗಳಷ್ಟೇ ಕೆಟ್ಟದ್ದೆಂದು ಪ್ರತಿಪಾದಿಸಿದ್ದಾನೆ. ಈ ತತ್ತ್ವವು ಒಂದೂವರೆ ಶತಮಾನದನಂತರ 'ಆಧಿಕ್ಯ ಮತ್ತು ಕೊರತೆಗಳ ನಡುವಣ ಸಾಧನವೇ ಸದ್ಗುಣ' ಎಂದು ಘೋಷಿಸಿದ ಅರಿಸ್ಟಾಟಲನ ತತ್ತ್ವಕ್ಕೆ ಸರಿಹೊಂದುತ್ತದೆ. ಹೀಗೆ ಕನ್‌ಫ್ಯೂಷಿಯಸ್‌ನ ಹಿತಕರಮಾನವತಾವಾದವು, ನೈತಿಕ ಕಟ್ಟಳೆಯನ್ನು ಪರಿಗಣಿಸಿದರೂ, ಎಲ್ಲ ನ್ಯಾಯ ಹಾಗೂ ಕಟ್ಟಳೆಗಳ ಆಕರ ಹಾಗೂ ಮೂಲಸ್ಥಾನವಾದ ಅಂತರ್ಗತಶಕ್ತಿಯನ್ನು ಮರೆಯುವಂಥದ್ದಾಗಿದೆ ಎಂಬುದನ್ನು ನಾವು ಕಾಣುತ್ತೇವೆ.

ಭಾರತದಲ್ಲಿ ಬುದ್ಧನು 'ಮಾನವ ಹಿತನಿಷ್ಠೆಯು ಉದಾತ್ತ ಜೀವನದ ಮೂಲೆಗಲ್ಲು' ಎಂದು ಪ್ರತಿಪಾದಿಸುವ 'ಕಲ್ಯಾಣ ಧಮ್ಮ'ವನ್ನೂ ಬೋಧಿಸಿದನು. ಯಾರು ತಿಳಿವಿನ ಹಾದಿಯಲ್ಲಿ ಸಾಗುತ್ತಾರೋ ಅವರಿಗೆ ಸ್ವರ್ಗದ ದ್ವಾರ ತೆರೆದಿರುತ್ತದೆ ಎಂದು ಅವನು ಹೇಳಿ

ದನು. 'ಯಾರು ಕೊಲ್ಲುತ್ತಾರೆ, ಹಾಳುಮಾಡುತ್ತಾರೆ, ಕದಿಯುತ್ತಾರೆ, ಹಾದರ ಮಾಡುತ್ತಾರೆ, ಮದ್ಯಪಾನ ಮಾಡುತ್ತಾರೆ, ಒರಟು ಭಾಷೆಯನ್ನು ಮಾತನಾಡುತ್ತಾರೆ, ಇನ್ನೊಬ್ಬರ ವಸ್ತುವಿಗೆ ದುರಾಸೆಪಡುತ್ತಾರೆ, ಬೇರೆಯುವರನ್ನು ದ್ವೇಷಿಸುತ್ತಾರೆ, ಕಾರ್ಯಕಾರಣಗಳ ನಿಯಮವನ್ನು ಅಲ್ಲಗಳೆಯುತ್ತಾರೆ ಅವರಿಗೆ ನರಕ ಕಾದಿದೆ.' ಬೌದ್ಧಧರ್ಮದ ನೀತಿಪದ್ಧತಿಯಲ್ಲಿ ಬುದ್ಧನ ವ್ಯಕ್ತಿತ್ವವು ಪ್ರಮುಖವೆನಿಸಿದೆ. ಅದರೊಡನೆ ವ್ಯಕ್ತಿಸ್ವಾತಂತ್ರ್ಯ ಅಥವಾ ಕೊನೆಯ ಪಕ್ಷ ವಿಮೋಚನೆಯ ಉತ್ಸಾಹದ ಪರಿಗಣನೆಯು ಸಹಕರಿಸುತ್ತದೆ. ಈ ವಿಮೋಚನಾ ಉತ್ಸಾಹವು **ಮಧ್ಯಮ ಮಾರ್ಗಕ್ಕೆ** ತೋರಿಸುವ ಪ್ರಾಶಸ್ತ್ಯದೊಡನೆ ತೀರನಿಕಟವಾದ ಸಂಬಂಧವನ್ನು ಹೊಂದಿದೆ. ಬನಾರಸ್‌ನಲ್ಲಿ ನೀಡಿದ ಬುದ್ಧನ ಮೊದಲ ಧರ್ಮೋಪದೇಶದಲ್ಲಿ ಅದು ಮಾನವತಾವಾದದ ಪ್ರಧಾನತತ್ತ್ವವಾಗಿರಬೇಕೆಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗಿದೆ. ಮಧ್ಯಮ ಮಾರ್ಗವನ್ನು ಶಿಫಾರಸು ಮಾಡುವುದು ಅದು ಲೌಕಿಕ ಭೋಗ ಮತ್ತು ಸಂನ್ಯಾಸದ ದೇಹ ದಂಡನೆಗಳ-ನಡುವಿನ ಮಾರ್ಗವೆಂಬುದಷ್ಟೇ ಅಲ್ಲ, ಸತ್ಯವನ್ನನುಸರಿಸಿ, ಆದರ್ಶವನ್ನು ಸಾಧಿಸಲು ಅದರಲ್ಲಿ ಸರಿಯಾದ ಮಾರ್ಗದರ್ಶನವಿದೆ ಎಂಬುದರಿಂದ. ಈ ಉದಾರ ಮತ್ತು ಮಧ್ಯಮವಾದ ಚೈತನ್ಯವೇ ಬೌದ್ಧಮತವನ್ನು ಇತರ ಸಂನ್ಯಾಸಿ ವರ್ಗಗಳಿಂದ ಬೇರ್ಪಡಿಸುತ್ತದೆ ಮತ್ತು ಈ ದೃಷ್ಟಿಯಿಂದಲೇ ಬೌದ್ಧಮತವು ಬೇರೆ ಬೇರೆ ಕಾಲದ, ಬೇರೆ ಬೇರೆ ಜನಾಂಗದ ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳಲು ಸಾಧ್ಯವಾಗಿರುವುದು. 'ಮಧ್ಯಮ ಮಾರ್ಗ'ದ ಅನುಸರಣೆಯು ಕನ್‌ಫ್ಯೂಷಿಯಸ್‌ನ 'ನಡುವಣ ತತ್ತ್ವ' ಹಾಗೂ ಗ್ರೀಕರ 'ಮಿತಗಾಮಿ ತತ್ತ್ವ' ಬಹುಮಟ್ಟಿಗೆ ಅನನ್ಯವಾಗಿದೆ ಎಂಬುದನ್ನು ಯಾರಾದರೂಗಮನಿಸಬಹುದು. ಬುದ್ಧನು ನೀತಿ ನಿಯಮಗಳ ಪ್ರಭಾವವನ್ನು ಮತ್ತು ಎಲ್ಲ ಜೀವಿಗಳಿಗೆ ದಯೆಯನ್ನು ಒತ್ತಿ ಹೇಳಿದ್ದು ನಿಜ. ಆದರೆ ಆತ ಆತ್ಮದ ಸ್ವಭಾವ ಮತ್ತು ಆಧ್ಯಾತ್ಮಿಕ ಸಮಸ್ಯೆಗಳ ಬಗ್ಗೆ ಸ್ವಲ್ಪವೂ ವಿಚಾರಮಾಡಲಿಲ್ಲ. ಆಧ್ಯಾತ್ಮವಾದವನ್ನು ತೊರೆದ ಮಾನವತಾವಾದವು ಸಮತೂಕವಿಲ್ಲದ್ದಾಗುತ್ತದೆ. ಇಂದಿನ ಅಮೆರಿಕದ ಮಾನವತಾವಾದವು ಗ್ರೀಕ್, ಬೌದ್ಧ ಮತ್ತು ಕನ್‌ಫ್ಯೂಷಿಯಸ್ ಅಂಶಗಳ ಸಂಕೀರ್ಣವಾಗಿದ್ದು ಕಲಸುಮೇಲೋಗರವಾಗಿದೆ.

ಭಾರತದಲ್ಲಿ ಬುದ್ಧನ ನಂತರ ಬಸವನೇ ಮಾನವತಾ ವಾದದ ಪ್ರವಾದಿ. ಆತನ ಮಾನವತಾವಾದವು ಆಧ್ಯಾತ್ಮಿಕ ಪರಿಜ್ಞಾನದ ಸಂಪರ್ಕವನ್ನು ಪಡೆಯಿತು. ಆದ್ದರಿಂದಲೇ ಮೌಲ್ಯಗಳ ಅಗತ್ಯವನ್ನು ಗ್ರಹಿಸಿತು. ಬಸವನ ಹೇಳಿಕೆಗಳು ಸಾಹಿತ್ಯದ ಶೋಭೆ, ಉನ್ನತ ನೀತಿತತ್ತ್ವ ಮತ್ತು ಯಥಾವತ್ತಾದ ತತ್ತ್ವಶಾಸ್ತ್ರಗಳಿಂದ ತುಂಬಿದ್ದರೂ, ಅವು ಮಧ್ಯಕಾಲೀನ ಪರಮಾರ್ಥ ವಿದ್ಯೆಯಿಂದ ಕೂಡಿವೆ ಎಂಬುದನ್ನು ಮುಚ್ಚುಮರೆಯಿಲ್ಲದೆ ಒಪ್ಪಿಕೊಳ್ಳಬೇಕು. ಹಾಗಿದ್ದರೂ ಕೂಡ ಆತನ ಹೇಳಿಕೆಗಳಿಂದ ಮಾನವತಾ ವಾದದ ಸಾರಾಂಶವನ್ನು ಕಂಡುಕೊಳ್ಳಬಹುದು. ಆತನ ಆಧ್ಯಾತ್ಮಿಕ ಮತವು ಪರಾತ್ಪರ ವಸ್ತು ಮತ್ತು ಸನಾತನ ಮೌಲ್ಯಗಳೇ ಪ್ರಪಂಚದಲ್ಲಿ ನಿಜವಾದ ವಸ್ತುಗಳು ಎಂಬ ದೃಢ ನಂಬಿಕೆಯ ಆಧಾರದ ಮೇಲೆ ನಿಂತಿದೆ. ಆದರೆ ಅವು ಬರೀ ಮಾನುಷವಾದುದಕಿಂತ ಹೆಚ್ಚಾಗಿ ಒಂದೇ ಅಸ್ತಿತ್ವದ ಕ್ರಮವನ್ನು ನಮಗೆ ತಿಳಿಸುವ ಸತ್ಯ ಸ್ಥಿತಿಗಳು. ಈ ಮೌಲ್ಯಗಳು ಮಾನವನಿಂದ ಬುದ್ಧಿ, ಇಚ್ಛೆ ಹಾಗೂ ಭಾವನೆಗಳ ಮನಃಪೂರ್ವಕವಾದ ಸಮರ್ಪಣೆಯಿಂದ ತಿಳಿಯಬಲ್ಲವಾಗಿವೆ ಎಂಬ ನಂಬಿಕೆಯ ಮೇಲೆ ಆತನ ಮಾನವತಾವಾದ ನಿಂತಿದೆ. ಮಾನವ ಜೀವನವು ತನ್ನ ಮೇಲೆ ಪರಿವರ್ತನ ಪ್ರಭಾವ ಬೀರಲು ಯತ್ನಿಸುವ ಆಧ್ಯಾತ್ಮಿಕ ನೆಲೆಗಟ್ಟನ್ನು ಹೊಂದಿದೆ. ಆದ್ದರಿಂದ ಸೃಷ್ಟಿಯ ಚೆಲುವು, ಭವ್ಯತೆ ಮತ್ತು ಚಾತುರ್ಯಗಳ ಕಡೆ ಅವು ಸೃಷ್ಟಿಕರ್ತನ ಮನದ ದಿವ್ಯದರ್ಶನಗಳೆಂಬ ದೃಷ್ಟಿಯಿಂದ, ಭಕ್ತಿಯುತ ಹಾಗೂ ಸ್ವೀಕಾರ ಮನೋಭಾವವನ್ನು ತಳೆಯಬೇಕೆಂದು ಆತನು ಬುದ್ಧಿವಾದ ಹೇಳಿದ್ದಾನೆ. ಬಸವನು ಮಾನವತಾವಾದದ ಪ್ರವಾದಿ. ಏಕೆಂದರೆ ಆತನಲ್ಲಿ ಸ್ವಾರ್ಥದಿಂದ ಲೋಕಹಿತಾರ್ಥದ ಕಡೆಗಿನ ಪ್ರಗತಿಯು ಕಾಯೇನಮುಕ್ತಿಯ ಕಲ್ಪನೆಯಿಂದ ಸ್ಪಷ್ಟಗೊಂಡಿದೆ.

ಆಧುನಿಕ ಯುಗದಲ್ಲಿ **ಮ್ಯೂಜಿನಿಯು** ಮಾನವತಾವಾದದ ದೊಡ್ಡ ಪ್ರವಾದಿ. ಆತನಲ್ಲಿ ನಾವು ಮತೀಯ ಸಿದ್ಧಾಂತದ ಪೂರ್ವಾಧಿಯಿಲ್ಲದ, ಮಧ್ಯಕಾಲೀನ ಪರಮಾರ್ಥವಿದ್ಯೆಯ ತೊಡಕಿಲ್ಲದ ಮತ್ತು ಸಂದೇಹವಾದದ ಸಂಕೋಲೆಗಳಿಂದ ಮುಕ್ತವಾದ ಮಾನವತಾವಾದವನ್ನು ಕಾಣಬಹುದು. ಮ್ಯೂಜಿನಿ ಮತ್ತು ಮಾರ್ಕ್ಸ್ ಇವರು ಸಮಕಾಲೀನರು ಮತ್ತು ಇಬ್ಬರೂ ಫ್ರೆಂಚ್ ಮಹಾಕ್ರಾಂತಿಯ ಪರಿಣಾಮಗಳಿಂದ ಆಕರ್ಷಿತವಾದರು. ಆದರೆ ಆ ಕ್ರಾಂತಿಯ ಬಗೆಗಿನ ಅವರ ಅಭಿಪ್ರಾಯಗಳು ಬೇರೆಯಾದವು. ಮಾರ್ಕ್ಸ್‌ನು ಫ್ರೆಂಚ್ ಮಹಾಕ್ರಾಂತಿಯ ನಿಷೇಧಾರ್ಥಕ ಭಾಗವನ್ನು– ಅದರ ಮೂಢನಂಬಿಕೆಗಳ ಹಾಗೂ ಅಲೌಕಿಕ ನಂಬಿಕೆಗಳ ವಿರುದ್ಧ ಹೋರಾಟ, ದೇವರು ಮತ್ತು ಆದರ್ಶ ಸೂಕ್ತಿಗಳ ಅಸ್ತಿತ್ವದ ನಿರಾಕರಣೆ ಮತ್ತು ಉದಾತ್ತ ಧ್ಯೇಯನಿಷ್ಠವಾದ ತತ್ತ್ವಶಾಸ್ತ್ರದ ಮೇಲೆ ಧಾಳಿ ಜೀವನ ಮತ್ತು ಮನಸ್ಸಿನ ಯಾಂತ್ರಿಕ ವಿವರಣೆಯನ್ನು ಅಲ್ಲಗಳೆಯುವಿಕೆ ಇವುಗಳನ್ನು ಸ್ವಾಗತಿಸಿದನು. ಮ್ಯೂಜಿನಿಗೆ ಈ ಕ್ರಾಂತಿಯು ಕ್ರಿಸ್ತನ ಉಪದೇಶದ ಫಲ. ಆದ್ದರಿಂದಲೇ ಆತ ಹೀಗೆ ಹೇಳಿದ್ದಾನೆ :

"ಫ್ರೆಂಚ್ ಮಹಾಕ್ರಾಂತಿಯನ್ನು ಒಂದು ಯೋಜನೆಯೆಂದು ಪರಿಗಣಿಸದೆ, ಅವಸರದ ಕ್ರಮವೆಂದು ಗಣಿಸಬೇಕು. ಅದು ಹೊಸಯುಗದ ಮೊದಲ ಹೆಜ್ಜೆಯಲ್ಲ, ಅವಧಿ ತೀರಿದ ವರ್ಷದ ಕೊನೆಯ ಸೂತ್ರ." ಅವನು 18ನೇ ಶತಮಾನದ ಉಜ್ವಲ ಮಹತ್ಕಾರ್ಯಗಳ ಬಗ್ಗೆ ಕುರುಡಾಗಿರಲಿಲ್ಲ. ಫ್ರೆಂಚ್ ಮಹಾಕ್ರಾಂತಿಯನ್ನು ತಂದ 18ನೇ ಶತಮಾನವು ತನ್ನದೇ ಆದ ನಂಬಿಕೆ, ಜೀವನಧ್ಯೇಯ ಮತ್ತು ಅವುಗಳನ್ನು ಕೃತಿಗಿಳಿಸಲು ಕ್ರಿಯಾತ್ಮಕ ಯೋಜನೆಗಳನ್ನು ಹೊಂದಿತ್ತು ಎಂದು ಆತ ಹೇಳಿದ್ದಾನೆ. ಅದು ಮಾನವನ ಸ್ವಾತಂತ್ರ್ಯ ಮತ್ತು ಶಕ್ತಿಗಳ ಬಗ್ಗೆ ಅಮಿತ ನಂಬಿಕೆಯನ್ನು ಹೊಂದಿತ್ತು. ಅದರ ಜೀವನ ಧ್ಯೇಯವೆಂದರೆ ಯೂರೋಪಿಯನ್ ಜಗತ್ತಿನ ಮೊದಲ ಜೀವಿತಕಾಲದ ಆಸ್ತಿಗಳನ್ನು ಪಟ್ಟಿಮಾಡುವುದು, ಹದಿನೆಂಟು ಶತಮಾನಗಳ ಪರಿಣಾಮಗಳನ್ನು ಸಂಕ್ಷೇಪಿಸುವುದು, ವ್ಯಕ್ತಿಯನ್ನು ಸ್ವತಂತ್ರ, ಚಟುಲ, ಪವಿತ್ರ ಹಾಗೂ ಅಲಂಘನೀಯ ಚೈತನ್ಯವೆಂದು ಸ್ಥಾಪಿಸುವುದು. ಆ ಕ್ರಾಂತಿಯನ್ನು ಪರಿಣಾಮಕಾರಿಯಾಗಿ ಮಾಡಲು ಮತ್ತು ಅದರ ಧ್ಯೇಯಸಾಧನೆಗಾಗಿ ಬಳಸಿದ ಆಯುಧವೆಂದರೆ ಹಕ್ಕುಬಾಧ್ಯತೆ. ಅದರ ಶಕ್ತಿ, ಅದರ ಆಜ್ಞೆ, ಅದರ ಕ್ರಿಯೆಗಳ ಕ್ರಮಬದ್ಧತೆಗಳು ಹಕ್ಕುಸಿದ್ಧಾಂತದಲ್ಲಿ ಅಡಗಿವೆ. ಎಲ್ಲ ದೊಡ್ಡ ಕ್ರಾಂತಿಕಾರಿಕ ವಿಚಾರವೂ ತನ್ನ ಕ್ರಿಯೆಯ ಕೇಂದ್ರಶಕ್ತಿಯಾಗಿ ಒಂದು ಆದರ್ಶವನ್ನು ಹೊಂದಿರಬೇಕಾಗುತ್ತದೆ. ಈ ಆದರ್ಶ ವ್ಯಕ್ತಿಯಲ್ಲಿ ಆಂತರಿಕವಾಗಿ ಕೇಂದ್ರೀಕೃತವಾಗಿ ಕಾಣುತ್ತದೆ. ಅದು ಅಹಂ, ಮಾನವ ಪ್ರಜ್ಞೆ, ನಾನು ಎಂಬ ಭಾವ. ಈ ಕಲ್ಪನೆಯಲ್ಲಿ ಕೇಂದ್ರೀಕೃತವಾದ ಕ್ರಾಂತಿಯು, ತನ್ನ ಶಕ್ತಿಯ ಅರಿವನ್ನು ಪಡೆದು, ಊಳಿಗಮಾನ್ಯ ಪದ್ಧತಿ (Feudalism), ಶ್ರೀಮಂತಪ್ರಭುತ್ವ (Aristocracy) ಮತ್ತು ರಾಜಪ್ರಭುತ್ವ (Monarchy)ಗಳನ್ನು ತೊಡೆದು ಹಾಕಲು ಮುಂದೆ ಸಾಗಿತು.

(ಮುಂದಿನ ಸಂಚಿಕೆಯಲ್ಲಿ ಪೂರ್ಣವಾಗುತ್ತದೆ.)

ವೈರಾಗ್ಯನಿಧಿ ಜ. ಚ. ನಿ.

ಶಿವಶರಣರ ಧ್ಯಾನದಲಿ ನಿತ್ಯನೆಲೆಸಿಹ ನೀನು
ಏಕೆ ಗೌರವಕಾಗಿ ತಹತಹಿಸುತಿರುವೆ ?

ಜನಜನದ ಕಲ್ಯಾಣ ನಿನ್ನ ಉಸಿರಾಗಿರಲು
ಅವರ ಹೊಗಳಿಕೆಗೇಕೆ ಮರುಳಾಗುತಿಪೆಯ ?

ಅಳಿಮನದ ಆನೆಗಳ ಎತ್ತರಕೆ ನಡೆತರಿಸಿ
ಆಸೆ ಆಮಿಷವೇಕೆ ಹುಲುಮನುಜನಂತೆ ?

ನೀನು ಹೊಂದಿಹ ಧರ್ಮ ನೀನು ಈ ಗೈಮೆಗೆ
ಸಾಟಿಯಾರೆಂದೆಂಬ ಹೆಮ್ಮೆ ಇದೆಯೇ ?

ವಿಶ್ವವಿದ್ಯಾಲಯದ ಗೌರವಕೆ ಇಚ್ಛಿಪೆಯಾ
ಸೂರ್ಯಸಿಂಹಾಸನವು ಸ್ವಪ್ರಕಾಶಿತವಹುದೆ ?

ಬೇಡಿದುದು ನೀನಲ್ಲ ಆಸೆ ನಿನ್ನಲ್ಲಿಲ್ಲ
ನಮ್ಮ ಕಣ್ಣಲಿ ನಿನ್ನ ಜ್ಯೋತಿ ಬೆಳಗುತಲಿದೆ

ನಿನ್ನ ಚಿಜ್ಜ್ಯೋತಿಯನು ದಿಗ್ದಿಗಂತದಲಿರಿಸಿ
ಬೇಡುತಿಹೆವೈ ಮನದ ಹೊಲೆಯನಡಗಿಸಲು

ನಿನ್ನ ಅವತಾರವದು ಜನಮನವ ಶುಚಿಗೊಳಿಸಿ
ಜ್ಞಾನ ದಾನವ ನೀಡಿ ಮುದಗೊಳಿಸುತಿಹುದು

ಗ್ರಂಥಕೋಟಿಯ ಬರೆದು ಕಣ್ಣು ತೆರೆಸಿದೆ ನೀನು
ಸತ್ಯಾತ್ಮ ಈ ರಥವ ನಡೆಸು ಮುಂದೆ

ಎಲ್ಲ ಕಾಲಕು ಇಹರೆ ನಿನ್ನಂಥ ವೈರಾಗ್ಯನಿಧಿ ?
ಜೀವನವೆ ಪಾವನವು ನಿನ್ನ ಸಿರಿಯಡಿಯಲಿ !

(ಶ್ರೀ ಜ. ಚ. ನಿ. ಅವರಿಗೆ ಮೈಸೂರು ವಿಶ್ವವಿದ್ಯಾಲಯದವರು ಗೌರವ ಡಾಕ್ಟರೇಟ್ ಪದವಿಕೊಟ್ಟ ಸಂದರ್ಭದಲ್ಲಿ)

— **ಆರ್. ಕೆ ರೋಹಿಡೆಕರ್**, ಮೈಸೂರು–6.

ಶಿಕ್ಷಣತಜ್ಞ ಸೋಲರಿಯದ ಸಾಹಸಿ ಎಂ. ಸಿ. ಮುನಿಸ್ವಾಮಿ

— ಚನ್ನಪ್ಪ ಎರೇಸೀಮೆ.

ಸದ್ದುಗದ್ದಲವಿಲ್ಲದೆ, ಅಬ್ಬರ ಆಡಂಬರಗಳಿಲ್ಲದೆ ಕರ್ತವ್ಯಪ್ರಜ್ಞೆಯಲ್ಲಿ ತನ್ಮಯತೆಹೊಂದಿ ಅಥವಾ ಪೂರ್ಣ ಕರಗಿ, ಅನೇಕ ಯೋಜನೆ ಯೋಜನೆಗಳಿಂದ ಯಶಸ್ವಿಯಾಗಿ ಕಾರ್ಯನಿರ್ವಹಣೆ ಮಾಡಬಲ್ಲ ಕೆಲವೇ ಜನ ಶಿಕ್ಷಣತಜ್ಞರಲ್ಲಿ ಶ್ರೀ ಮುನಿಸ್ವಾಮಿಯವರು ತಮ್ಮದೇ ಆದ ವಿಶಿಷ್ಟಸ್ಥಾನಪಡೆದ ಶಿಕ್ಷಣವೇತ್ತರು. ವಿದ್ಯಾವಿನಯ ಸಂಪನ್ನರಾದ ಶ್ರೀಯುತರ ಜೀವನ ಶ್ರದ್ಧಾಮಯ; ಹಾಳು ಹರಟೆ, ಅನುಚಿತ ಪ್ರಸಂಗಗಳಿಂದ ಯಾವಾಗಲೂ ದೂರ. ಅಂತೆಯೇ ಇವರ ಜೀವಿತಕ್ಕೆ ಮೌಲ್ಯವನ್ನು ಇವರ ಸದ್ಗುಣಗಳು ತಂದಿತ್ತಿವೆ. ಯೋಜನಾಬದ್ಧರಾದ ಕಾರ್ಯನಿರ್ವಹಣೆಯಲ್ಲಿ ಸತತವೂ ಮಗ್ನರಾಗಿ, "ಕಾಯಕವೇ ಕೈಲಾಸ"ವೆಂಬ ಆದ್ಯರ ನುಡಿಯನ್ನು ಜೀವನದಲ್ಲಿ ಓತಪ್ರೋತಗೊಳಿಸಿಕೊಂಡ ಇವರ ಜೀವನಕ್ಕೆ ಇನ್ನೊಂದು ಹೆಸರೇ "ಕಾಯಕ". ಬಾಲ್ಯದಿಂದಲೂ ಕಷ್ಟನಿಷ್ಠುರಗಳೆಂದರೇನೆಂಬುದನ್ನು ಕಂಡುಂಡ ಈ ಅನುಭವಿ ಅವುಗಳ ವಿರುದ್ಧ ಹೋರಾಟವೆಸಗಿ, ವಿಜಯ ಸಾಧಿಸಬೇಕೆನ್ನುವ ಸತತ ಪರಿಶ್ರಮದ ಫಲವೇ ಇಂದು ಅವರನ್ನು ಜವಾಬ್ದಾರಿಯುತ ಅಧಿಕಾರ ಸ್ಥಾನಕ್ಕೇರಿಸಿದೆ. ಕರ್ನಾಟಕ ರಾಜ್ಯದ ಸಹಸ್ರಾರು ಪ್ರಾಥಮಿಕ ಶಾಲೆಗೆ ಲಕ್ಷಾಂತರ ಶಿಕ್ಷಕರ ಬೃಹತ್ಸಮುಸ್ಯಾತ್ಮಕ ಪ್ರಾಥಮಿಕ ಶಿಕ್ಷಣಕ್ಷೇತ್ರದ ನಿರ್ದೇಶಕನ ಹೊಣೆಗಾರಿಕೆಯ ಭಾರವಾದ ನೊಗವನ್ನು ಶ್ರೀಯುತರು ಹೊತ್ತುನಿಂತಿದ್ದಾರೆ.

ವಿವಿಧ ಸಮಸ್ಯೆಗಳ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅಗಾಧ ಜವಾಬ್ದಾರಿಯ ಈ ಯಾಜಮಾನ್ಯಕ್ಕೆ ಬೇಕಾಗುವ ಪ್ರಗತಿಪರದೃಷ್ಟಿ, ಸಮರ್ಥವಾದ ಆಡಳಿತ ನಿರ್ವಹಣಾ ಕೌಶಲ್ಯ, ದಯೆ, ಕಾರುಣ್ಯ, ಶಾಂತ ನಡೆನುಡಿ, ಸ್ಪಷ್ಟನಿಲವು, ಹುರುಪಿನ ಮಾರ್ಗದರ್ಶನಗಳೇ ಮೊದಲಾದ ವಿಶೇಷಗುಣಗಳಿಂದ ಕೂಡಿದ ಶ್ರೀಯುತರು ಇನ್ನೊಬ್ಬರನ್ನು ಸಂತೋಷಗೊಳಿಸುವ ಸ್ನೇಹಪರತೆಯ ವಿಶೇಷ ಗುಣದಿಂದ ಭೂಷಿತರಾಗಿರುವರೆಂಬುದು ಉತ್ಪ್ರೇಕ್ಷೆಯ ಮಾತಲ್ಲ; ಸಹೃದಯತೆಯ ಯಥಾಸತ್ಯ ಶ್ಲಾಘ್ಯ ನುಡಿ. ತೃಪ್ತಿ, ಸಂತೋಷಗಳಿಂದ ತುಂಬಿತುಳುಕುವ ಸಂಸಾರಜೀವನದ ಈ ಸದ್ಗೃಹಸ್ಥರು ಹುಟ್ಟು ಹೋರಾಟಗಾರರಾಗಿ, ಉನ್ನತ ದರ್ಜೆಗೇರಿನಿಂತ ಸಾಹಸ ಜೀವನದ ಸ್ಥೂಲನೋಟವನ್ನು ಈ ಲೇಖನದಲ್ಲಿ ಚಿತ್ರಿಸುವ ಪ್ರಯತ್ನ ಮಾಡಲಾಗಿದೆ.

ಎಂ. ಸಿ. ಮುನಿಸ್ವಾಮಿಯವರ ಪೂರ್ತಿ ಹೆಸರು "ಮಾದಿಹಳ್ಳಿ ಚಿಕ್ಕಯ್ಯನವರ ಮಗ ಮುನಿಸ್ವಾಮಿ" ಎಂದು. ಮಂಡ್ಯ ಜಿಲ್ಲೆಯ "ಮಾದಿಹಳ್ಳಿ" ಎಂಬ ಚಿಕ್ಕ ಗ್ರಾಮದ ಹುಟ್ಟುವ್ಯವಸಾಯಗಾರರ ಕುಟುಂಬದಲ್ಲಿ 7–12–24ನೆಯ ದಿನಾಂಕ ಜನ್ಮತಾಳಿದ ಮುನಿಸ್ವಾಮಿಯವರ ಪಿತೃಗಳು ಹೇಳಿಕೊಳ್ಳುವಂಥ ಶ್ರೀಮಂತರಲ್ಲದಿದ್ದರೂ ಶ್ರದ್ಧಾಮಯ ಶ್ರಮಜೀವನದಿಂದ ಸುಖವಾಗಿ ಜೀವಿಸುತ್ತಿದ್ದ ಸದ್ಗೃಹಸ್ಥರೆಂಬುದನ್ನಲ್ಲಗಳೆಯುವಂತಿಲ್ಲ. ಮಾತಾಪಿತೃಗಳ ಶ್ರದ್ಧಾಮಯ ಜೀವನವೇ ಶ್ರೀಯುತರ ವ್ಯೆಮನಭಾವಗಳಿಗಂಟಿಕೊಂಡು ಬಂತು. ಆ ಆದರ್ಶವನ್ನೇ ಇವರು ಪ್ರಾಥಮಿಕ ಶಿಕ್ಷಣಹಂತದಿಂದ ವಿಶಿಷ್ಟರೀತಿಯಲ್ಲಿ ಪೋಷಿಸಿಕೊಂಡು ಬಂದುದೇ ಇವರ ಜೀವಿತಕ್ಕೆ ಉತ್ತರೋತ್ತರ ಅನೇಕ ಮೌಲ್ಯಗಳನ್ನು ತಂದಿತ್ತಿತು.

ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ

ಕೃಷ್ಣರಾಜಪೇಟೆಯ ಸಂತೇಬಾಚಹಳ್ಳಿ ಪ್ರಾಥಮಿಕ ಶಾಲೆ ಇವರು ಪ್ರಥಮತಃ ವಿದ್ಯಾಭ್ಯಾಸಕ್ಕೆ ಸೇರಿದ ಶಾಲೆ. 1941ರಲ್ಲಿ ಚೆನ್ನರಾಯಪಟ್ಟಣ ತಾಲ್ಲೂಕು ಹಿರೇಸಾವೆಯ ಗೌರ್ನಮೆಂಟ್ ಮಿಡಲ್‌ಸ್ಕೂಲಿನಲ್ಲಿ ವ್ಯಾಸಂಗಮಾಡಿ "ಲೋವರ್ ಸೆಕೆಂಡರಿ" ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಗೊಂಡ ಶ್ರೀಯುತರು ತಮ್ಮ ವಿನಯ, ಉತ್ಸಾಹ, ಸದ್ವರ್ತನೆಗಳಿಂದ ಉಪಾಧ್ಯಾಯವರ್ಗದ ಮತ್ತು ನಾಗರಿಕರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ಸಹಪಾಠಿಗಳಾದ ವಿದ್ಯಾರ್ಥಿಗಳು ಇವರ ಉದಾತ್ತ ಗುಣಗಳಿಂದಲೇ ಇವರನ್ನು ತಮ್ಮ ಮುಖಂಡರನ್ನಾಗಿ ಆರಿಸಿಕೊಂಡಿದ್ದರು. ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದ ಶ್ರೀಯುತರು ಆಟಪಾಟಗಳಲ್ಲಿ ಆಮೋದಪ್ರಮೋದಗಳಲ್ಲಿ ಮೇಲುಗೈ ಪಡೆದಿದ್ದರು. ಬಾಲ್ಯದ ದಿನಗಳ ಈ ಮುಂದಾಳುತನದ ವಿಶಿಷ್ಟಗುಣವೇ 1942ರಲ್ಲಿ ಭಾರತಾದ್ಯಂತ ನಡೆದ ರಾಷ್ಟ್ರೀಯ ಬಂಧವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿತು. ಕಿರಿಯರ ಬಳಗದ ಮುಖಂಡರಾಗಿ, ಉತ್ಸಾಹದ ಬುಗ್ಗೆಯಾಗಿ ಪುಟಿಯುತ್ತಿದ್ದ ಇವರ ಅನೇಕ ರಚನಾತ್ಮಕ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ಪ್ರೌಢರನ್ನು ನಾಚಿಸುವಂತಿದ್ದವು. ಒದಗಬಹುದಾದ ಅನೇಕ ಕಷ್ಟನಿಷ್ಠುರಗಳಿಗೆ ಅಂಜದೆ, ಮುನ್ನುಗ್ಗಿ ತೊಂದರೆಗಳನ್ನನುಭವಿಸಿದರೂ ವಿಮುಖರಾಗದೆ, ಸೋಲರಿಯದ ಸಾಹಸಿಗಳಾಗಿ ಸಾಧನೆ, ಸಹನೆ, ಶಾಂತಿ, ನಿಷ್ಠೆ ಮುಂತಾದ ಅಮೂಲ್ಯ ಗುಣಗಳನ್ನು ಆಗಲೇ ಮೈಗೂಡಿಸಿಕೊಂಡರು. ಇವೇ ಇವರ ಭವಿಷ್ಯಜೀವನದ ಭದ್ರಭವನಕ್ಕೆ ತಳಹದಿಗಳಾದುವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಇಷ್ಟಾದರೂ ಇವರು ತಮ್ಮ ವಿದ್ಯಾಭ್ಯಾಸ ಜೀವನದಿಂದ ವಿಮುಖರಾಗಿರಲಿಲ್ಲವೆಂಬುದು ನೆನಪಿನಲ್ಲಿಡಬೇಕಾದುದು. 1944ರಲ್ಲಿ ಹಾಸನ ಗೌರ್ನಮೆಂಟ್ ಬಾಯ್ಸ್ ಹೈಸ್ಕೂಲಿನಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಕಟ್ಟಿ ಪ್ರಥಮ ದರ್ಜೆಯಲ್ಲೇ ತೇರ್ಗಡೆಯಾದರು. ಇಲ್ಲಿಗೆ ಇವರ ಜೀವನ ಒಂದು ಘಟ್ಟವನ್ನು ಮುಟ್ಟಿತೆಂದು ಹೇಳಬಹುದು.

ಕಾಲೇಜು ಶಿಕ್ಷಣ

1946ರಲ್ಲಿ ಶ್ರೀಯುತರು ಮೈಸೂರಿನ ಯುವರಾಜಾ ಕಾಲೇಜನ್ನು ಸೇರಿ, ಎರಡು ವರ್ಷಗಳು ನಿಷ್ಠೆಯಿಂದ ವಿದ್ಯಾಭ್ಯಾಸಮಾಡಿ "ಇಂಟರ್‌ಮಿಡಿಯೆಟ್" ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜು ಸೇರಿ 1948ರಲ್ಲಿ ಬಿ. ಎಸ್‌ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬೆಂಗಳೂರು ಕಾಲೇಜು ಜೀವನ ಶ್ರೀ ಮುನಿಸ್ವಾಮಿಯವರ ಸುಪ್ತ ಶಕ್ತಿಗಳನ್ನೆಲ್ಲ ಬಡಿದೆಬ್ಬಿಸಲು ಉತ್ತಮ ಸನ್ನಿವೇಶವನ್ನು ಕಲ್ಪಿಸಿತು. ಪ್ರೌಢ ಯೋಚನೆ, ಪ್ರೌಢ ಮಾರ್ಗದರ್ಶನಕ್ಕೆ ಅನುವು ದೊರೆಯಿತು. ಕಾಲೇಜು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾಗಿ ಅನೇಕ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ತಮ್ಮನ್ನೇ ತಾವು ಪ್ರಕಾಶಪಡಿಸಿಕೊಂಡರು. "ಇಂಡೋರ್‌ಗೇಮ್ಸ್"ಗಳಿಗೆಲ್ಲ ಇವರೇ ವಿದ್ಯಾರ್ಥಿ ಮುಖಂಡರಾಗಿದ್ದರು. ಇವರ ಮುಖಂಡತ್ವವೆಂದರೆ ವಿದ್ಯಾರ್ಥಿಪ್ರಪಂಚಕ್ಕೆಲ್ಲ ಅಚ್ಚುಮೆಚ್ಚು ಕಾರಣ : ವಿನಯ, ಸದ್ವರ್ತನೆ, ದೃಢಚಿತ್ತ ಮತ್ತು ನಿಷ್ಪಕ್ಷಪಾತ ನಡೆನುಡಿ. ಉತ್ಸಾಹವೆಂಬುದು ಇವರಲ್ಲಿ ಬತ್ತದ ಬುಗ್ಗೆಯಾಗಿ ಸದಾ ಪುಟಿಯುತ್ತಿತ್ತು. ನಗುನಗುತ್ತ ಮಾತನಾಡುವ ಇವರ ಮಾತುಗಳಲ್ಲಿನ ಮಾರ್ದವ ಎಲ್ಲರನ್ನೂ ಆಕರ್ಷಿಸಿ ವಶಪಡಿಸಿಕೊಳ್ಳುವ ಮೋಡಿಯಿಂದ ಕೂಡಿತ್ತು. ಆದುದರಿಂದಲೇ ಇವರು ಕಾಲೇಜು ಜೀವನದಲ್ಲಿ ಅಜಾತಶತ್ರುವೆನಿಸಿದ್ದರು. ಈ ಅತ್ಯುತ್ತಮ ನಡೆನುಡಿಗಳಿಂದಾಗಿ ಮುಖಂಡತ್ವವೇ ಇವರನ್ನು ಹುಡುಕಿಕೊಂಡು ಬರುತ್ತಿತ್ತು.

ಶಿಕ್ಷಕರಾಗಿ

ಶ್ರೀಯುತರು ಬಿ. ಎಸ್‌ಸಿ. ಡಿಗ್ರಿ ಪಡೆದಮೇಲೆ ಮುಂದಿನ ವಿದ್ಯಾಭ್ಯಾಸವಿಷಯದಲ್ಲಿ ಜಿಜ್ಞಾಸೆಗೊಳಗಾದರು. ಭವಿಷ್ಯ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕೆಂಬ ತುಮುಲ ಇವರನ್ನು ಬಾಧಿಸದಿರಲಿಲ್ಲ. ತಾವೊಬ್ಬ ಇಂಜನಿಯರ್ ಆಗಬೇಕೆಂಬ ಬಯಕೆ ಆ ಕಾಲದಲ್ಲಿ ಇವರಲ್ಲುಂಟಾದುದು ಅಸಹಜವೇನಲ್ಲ. ಸಮಾಜದಲ್ಲಿ ಆ ವೃತ್ತಿ ಆಗ ವಿಶೇಷಾಕರ್ಷಣೆಯಿಂದ ಕೂಡಿದ ವೃತ್ತಿಯಾಗಿತ್ತಲ್ಲವೆ ? ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜಿಗೆ ಸೇರಿದ್ದಾಯಿತು. ಆದರೆ ಮನಸ್ಸು ಕೆಲವೇ ದಿನಗಳಲ್ಲಿ ಈ ವೃತ್ತಿಯಲ್ಲಿ ವಿಶೇಷ ಜ್ಞಾನ ಪಡೆಯುವುದರ ಸಾರ್ಥಕ್ಯದ ಬಗೆಗೆ ತಾನೇ ಪ್ರಶ್ನಿಸಿಕೊಂಡು ಹಿಂಜರಿಯಿತು. ಆ ಕಾಲೇಜಿಗೆ ಶರಣು ಹೊಡೆದರು. ಉಪಾಧ್ಯಾಯ ವೃತ್ತಿ ಇವರನ್ನು ಆಕರ್ಷಿಸಿತು. "ವಿಶಾಲವಾದ ಈ ಕ್ಷೇತ್ರದಲ್ಲಿ ನೀನು ಸಾಧಿಸುವುದು ಬಹಳವಿದೆ" ಎಂದು ಮನಸ್ಸು ಪದೇಪದೇ ಇವರಿಗೆ ಎಚ್ಚರಿಕೆ ಕೊಟ್ಟಿತು. ಬೆಂಗಳೂರಿನ ಫೋರ್ಟ್ ಹೈಸ್ಕೂಲಿನಲ್ಲಿ ವಿಜ್ಞಾನಶಿಕ್ಷಕರಾಗಿ 1949 ಮತ್ತು 50ನೆಯ ಇಸ್ವಿಗಳಲ್ಲಿ ಕೆಲಸ ಮಾಡಿದರು. ಇವರ ವಿಜ್ಞಾನ ಬೋಧನಾಕುಶಲತೆ ವಿದ್ಯಾರ್ಥಿವೃಂದದ ಮನವನ್ನು ಸೂರೆಗೈದವು. ಈ ಅಲ್ಪಾವಧಿಯ ಉಪಾಧ್ಯಾಯ ವೃತ್ತಿ ಆದರ್ಶಶಿಕ್ಷಕರೆಂಬ ಕೀರ್ತಿಗೆ ಭಾಜನರನ್ನಾಗಿ ಮಾಡಿತು. ಆದರೆ ಕಲಿಯಬೇಕಾದ ತರುಣ ವಯಸ್ಸಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಬೇಕೆಂಬ ಒಳಮನಸ್ಸಿನ ತುಡಿತ ಸದಾ ಇವರನ್ನು ಹಿಂಸಿಸುತ್ತಲೇ ಇತ್ತು. ಅಳೆದು ಸುರಿದು ಹಲಕೆಲವರ ಸಲಹೆ ಸೂಚನೆಗಳಿಗೆ ಮನಸೋತು ಕೊನೆಗೆ ಲಾ ಕಾಲೇಜನ್ನು ಸೇರಿ ನ್ಯಾಯಶಾಸ್ತ್ರಾಭ್ಯಾಸದಲ್ಲಿ ತೊಡಗಿದರು. ಶಿಕ್ಷಣಕ್ಷೇತ್ರದಿಂದ ದೂರಹೋಗಲು ಇವರು ಪ್ರಯತ್ನಿಸಿದರೂ ಶಿಕ್ಷಣಕ್ಷೇತ್ರ ಇವರನ್ನು ದೂರಕ್ಕೆ ಬಿಡಲಿಲ್ಲ. 1951ರಲ್ಲಿ ಮೊದಲನೆಯ ಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. 1952 2ನೆಯ ವರ್ಷ ಲಾ ಪರೀಕ್ಷೆಗೆ ಓದುತ್ತಿದ್ದಂತೆಯೆ ರಾಜ್ಯ ಸರಕಾರ ಇವರನ್ನು "ಎಜುಕೇಷನ್ ಪ್ರೊಬೆಷನರ್" ಆಗಿ ನೇಮಕಗೊಳಿಸಿತು. ಇಲ್ಲಿಗೆ ಇವರ ಜೀವನದ ಎರಡು

ಘಟ್ಟಗಳು ಮುಗಿದವು.

ಪ್ರೊಬೆಷನರ್ ಆಗಿ ಮತ್ತು ಅಧಿಕಾರಿಗಳಾಗಿ

1952ರಿಂದ 54ರವರೆಗೆ ಎಜ್ಯುಕೇಷ್ನ ಪ್ರೊಬೆಷನರ್ ಆಗಿ ಶ್ರೀಯುತರು ಪಡೆದ ವಿವಿಧ ಹಂತಗಳ ಜ್ಞಾನಾನುಭವ ಅಪಾರ. ಗುಮಾಸ್ತರರಾಗಿ, ಉಪಾಧ್ಯಾಯರಾಗಿ, ಇನ್ಸ್‌ಪೆಕ್ಟಿಂಗ್ ಆಫೀಸರರಾಗಿ, ಅಧಿಕಾರಿಗಳಾಗಿ ಹೇಗೆ ಕಾರ್ಯ ನಿರ್ವಹಿಸಬೇಕು ? ಆಡಳಿತದ ಕೀಲುಗಳಾವುವು ? ಕಿಂಡಿಗಳಾವುವು ? ಜಾರುಬಂಡೆಗಳಾವುವೆಂಬುದರ ಪೂರ್ಣಅರಿವನ್ನು ಶ್ರೀಯುತರು ಕೂಲಂಕಷವಾಗಿ ಸತತ ಪರಿಶ್ರಮದಿಂದ ಪಡೆದರು. ಪ್ರೊಬೆಷನರ್ ಆಗಿ ಪಡೆಯಬೇಕಾದ ಜ್ಞಾನಾನುಭವಗಳ ಕಾಲಾವಧಿ ಮುಗಿಯುತ್ತಲೇ 1954ರಲ್ಲಿ "ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್" ಆಗಿ ನೇಮಕಗೊಂಡು 10 ತಿಂಗಳು ಕೆಲಸ ಮಾಡಿದರು. ಈ ಕರ್ತವ್ಯನಿರ್ವಹಣೆಯ ಕಾಲ ಕಿರಿದಾದರೂ ಸಾಧಿಸಿದ ಕಾರ್ಯ ಮಹತ್ವದ್ದು. ಸತತ ಹಳ್ಳಿಪಳ್ಳಿಗಳನ್ನು ತಿರುಗಿ ಉಪಾಧ್ಯಾಯರ ಮತ್ತು ಶಾಲೆಗಳ ಕುಂದುಕೊರತೆಗಳ ಬಗೆಗೆ ಇನ್ನಿತರರಿಗೆ ಮಾರ್ಗದರ್ಶಕವಾಗುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದರು. ಉಪಾಧ್ಯಾಯರ ಯೋಗಕ್ಷೇಮಕ್ಕಾಗಿ ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಸ್ಥಾಪಿಸಿನುದು ಇವರ ಪ್ರಯತ್ನಕ್ಕೆ ಹಿಡಿದ ಕನ್ನಡಿ. ಆ ಸೊಸೈಟಿಗಳು ಇಂದಿಗೂ ಆದರ್ಶರೀತಿಯಲ್ಲಿ ಕೆಲಸ ಮಾಡುತ್ತಿವೆ. ಈ ಸೇವಾವಧಿ ಮುಗಿದಮೇಲೆ ಆಗಿನ ರಾಜ್ಯದ ತೀರಮೂಲೆಯ ವಾಯವ್ಯಗಡಿಯಲ್ಲಿರುವ ಪರನಾಡಿನ ಊರಾದ ಆನವಟ್ಟಿಯ ಗ॥ ಹೈಸ್ಕೂಲ್ ಉಪಾದ್ಯಾಯರಾಗಿ 1955ರಲ್ಲಿ ನೇಮಕಗೊಂಡರು. ಆಗ ಅವರು ಆ ಕೆಲಸ ನಿರ್ವಹಣೆಗಾಗಿ ಪ್ರಪ್ರಥಮ ತೆರಳಿದಕಾಲ ಮಳೆಗಾಲ. ಸತತವಾಗಿ ಸೋ ಎಂದು ಮಳೆ ಸುರಿಯುತ್ತಿತ್ತು. ಹೊಸಊರು, ಅವ್ಯವಸ್ಥೆಯಿಂದ ಕೂಡಿದ ಸ್ಥಳೀಯ ಸನ್ನಿವೇಶ. ಇದಾವುದಕ್ಕೂ ಅಧೀರರಾಗದೆ ಅಲ್ಲಿಗೆ ತೆರಳಿದರು. ಒಂದು ವರ್ಷಕಾಲ ಅಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು. ಇವರ ಅಲ್ಲಿನ ಒಂದು ವರ್ಷದ ಸೇವಾವಧಿಯಲ್ಲಿ ಆನವಟ್ಟಿಯ ಸುತ್ತಮುತ್ತಣ ಹಳ್ಳಿಪಳ್ಳಿಗಳನ್ನೆಲ್ಲ ಸಂಚರಿಸಿದರು. ಅನೇಕ ಬೋಧಪ್ರದ ಉಪನ್ಯಾಸಗಳ ಮೂಲಕ ಜನಮನವನ್ನೊಲಿಸಿ, ಧನ ಸಂಗ್ರಹಿಸಿ ಆನವಟ್ಟಿಯಲ್ಲಿ ಹೈಸ್ಕೂಲ್ ಬಡ ಮಕ್ಕಳ ಉಪಯೋಗಕ್ಕಾಗಿ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ತೆರೆಯುವಲ್ಲಿ ಯಶಸ್ವಿಗಳಾದುದು ಉಲ್ಲೇಖನಾರ್ಹವಾದದು. ಆಗ ರಾಜ್ಯಸರಕಾರದವರು ಏರ್ಪಡಿಸಿದ್ದ ಸಂಸ್ಕೃತಿ ಪ್ರಸಾರ ಭಾಷಣಗಳನ್ನು ಕೊಟ್ಟು ಶಿಕ್ಷಣ ವಿಚಾರದಲ್ಲಿ ಜಾಗೃತಿಗೊಳಿಸಿದರು. ಜೊತೆಗೆ ಮಲೆನಾಡು ಭಾಗದ ಅನೇಕ ಕಡೆಗಳಲ್ಲಿ ಸಂಚರಿಸಿ ಮಲೆನಾಡು ಭಾಗದ ಜನ ಜೀವನ ವಿಧಾನ ಪರಿಚಯ ಪಡೆದರು. ಅಲ್ಲಿ ಒಂದು ವರ್ಷ ಕೆಲಸಮಾಡಿದ ಮೇಲೆ ಆನವಟ್ಟಿಯ ಮಲೆನಾಡಿಗಿಂತಲೂ ಹೆಚ್ಚಿನ ಮಲೆನಾಡಿನ ಪ್ರದೇಶವಾದ 'ಜೋಗಫಾಲ್ಸ್'ನ ಹೈಸ್ಕೂಲ್ ಹೆಡ್ಮಾಸ್ಟರರಾಗಿ ಅಲ್ಲಿಯೂ ಒಂದು ವರ್ಷ ಕೆಲಸ ಮಾಡಿದರು. ಆ ಕಾಲದಲ್ಲಿ ಜೋಗ ಫಾಲ್ಸ್ ಅಧಿಕಾರಿಗಳಾಗಿ ಕೆಲಸ ಮಾಡುವುದು ಅಷ್ಟೊಂದು ಸುಲಭಸಾಧ್ಯವಾಗಿರಲಿಲ್ಲ. ಆದರೂ ರುದ್ರ ಮನೋಹರ ಪ್ರಾಕೃತಿಕ ಸನ್ನಿವೇಶದ ಮಡಿಲಲ್ಲಿ ಆ ಒಂದು ವರ್ಷ ಕಾಲಾವಧಿ ಸಂತೋಷದಿಂದ ತಮ್ಮ ಪಾಲಿನ ಸೇವೆಯನ್ನು ಯಶಸ್ವಿಯಾಗಿ ಕೊನೆಗಾಣಿಸಿದರು. ಇಲ್ಲಿಗೆ ಇವರ ಜೀವಿತದ ೨ನೆಯ ಘಟ್ಟ ಪೂರೈಸಿತು.

ಅಧಿಕಾರಿಗಳಾಗಿ

೧೯೫೭ರಲ್ಲಿ ಡಿ. ಪಿ. ಐ. ಆಫೀಸಿನ ಪಠ್ಯಪುಸ್ತಕ ವಿಭಾಗದಲ್ಲಿ ಅಸಿಸ್ಟೆಂಟ ಸೆಕ್ರೆಟರಿಯಾಗಿ ನೇಮಕಗೊಂಡರು. ಆ ಕಾಲವೊಂದು ರಾಜ್ಯದ ಶಿಕ್ಷಣ ಕ್ಷೇತ್ರದ ಪರ್ವಕಾಲ. ಕರ್ನಾಟಕ ವಿವಿಧ ಭಾಗಗಳು ಮೈಸೂರಿನೊಡನೆ ವಿಲೀನಗೊಂಡು ಅನೇಕ ಜಟಿಲ ಸಮಸ್ಯೆಗಳು ಶಿಕ್ಷಣ ಕ್ಷೇತ್ರದಲ್ಲಿ ಉಂಟಾದ ಕಾಲ. ಏಕತ್ರಪೂರ್ವದಲ್ಲಿ ಹಲವಾರು ರಾಜಕೀಯ ಆಡಳಿತಕ್ಕೊಳಗಾಗಿ ವಿವಿಧ ಸಂವಿಧಾನದಿಂದ ಕೂಡಿದ ಕನ್ನಡನಾಡಿನ ಅನೇಕ ಭಾಗಗಳಲ್ಲಿನ ಪಠ್ಯಪುಸ್ತಕಗಳನ್ನು ಒಂದೇ ವಿಧಗೊಳಿಸಿ ಸಮಗ್ರ ವಿಶಾಲ ಕರ್ನಾಟಕಕ್ಕೆ ಏಕರೂಪ ಶಿಕ್ಷಣವನ್ನು ಜಾರಿಗೆ ತರುವುದರ ಮೂಲಕ ಶೈಕ್ಷಣಿಕ ಸುಧಾರಣೆಯಾಗಬೇಕಾಗಿದ್ದ ಕಾಲ. ಆ ಕಾಲದಲ್ಲಿ ಶ್ರೀಯುತರು ಮಾಡಿದ ಸೇವೆ ಸ್ತುತ್ಯಾರ್ಹ. ಈ ಕಾರ್ಯಕ್ಕೆ ಇವರೇ ಸರಿಯೆಂದು ಸರಕಾರವೂ ಭಾವಿಸಿ ಆ ಜವಾಬ್ದಾರಿಯ ಕೆಲಸಕ್ಕೆ ನಿಯಮಿಸಿತ್ತೆನ್ನುವುದು ಸೂಕ್ತ. ಅಗ ಇವರು ಪಠ್ಯಪುಸ್ತಕಗಳ ರಾಷ್ಟ್ರೀಕರಣಕ್ಕಾಗಿ ಹೆಣಗಿದರು. ಹೊಸಪುಸ್ತಕಗಳು ರಚನೆಯಾದುವು. ಉಪಾಧ್ಯಾಯರ ಮಾರ್ಗದರ್ಶನಕ್ಕಾಗಿ ಗೈಡ್ ಬುಕ್ಕುಗಳು ರಚನೆಯಾದುವು. ಈ ಕಾರ್ಯವನ್ನು ಶ್ರೀ ಮುನಿಸ್ವಾಮಿಯವರು ಅತ್ಯಂತ ಹುರುಪಿನಿಂದ ನಿರ್ವಹಿಸಿ ಇಲಾಖೆಯ ಕೃತಜ್ಞತೆಗೆ ಭಾಜನರಾದರೆಂದು ಹೇಳುವ ಅವಶ್ಯಕತೆಯಿಲ್ಲ.

ಈ ರೀತಿಯಲ್ಲಿ ಶ್ರದ್ಧೆ, ಉತ್ಸಾಹ, ಹುರುಪು, ವಿನಯ, ಸದ್ದುಗದ್ದಲವಿಲ್ಲದೆ ಕಾರ್ಯ ಸಾಧಿಸುವ ಕರ್ತವ್ಯ ಗೌರವವನ್ನು ಗಮನಿಸಿ ರಾಜ್ಯಸರಕಾರ ಈ ಪ್ರತಿಭಾ ಸಂಪನ್ನನನ್ನು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಅನುಭವ ಪಡೆದು ಬರಲು ಪಾಶ್ಚಾತ್ಯ ರಾಷ್ಟ್ರಗಳಿಗೆ ಕಳಿಸಿತು. ೧೯೫೯ರಿಂದ ೬೨ರವರೆಗೆ ಶ್ರೀಯುತರು ಅಮೆರಿಕೆಯ ಸಂಯುಕ್ತ ಸಂಸ್ಥಾನದಲ್ಲಿರುವ 'ಹಾರ್ವರ್ಡ್ ಯೂನಿವರ್ಸಿಟಿ'ಯಲ್ಲಿ ವ್ಯಾಸಂಗಮಾಡಿ ಅನೇಕ ಪ್ರಾಯೋಗಿಕ ಅನುಭವವನ್ನು ಸಂಪಾದಿಸಿಕೊಂಡರು. ಅಲ್ಲಿನ ಎಂ. ಈಡಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿಯನ್ನು ಸಂಪಾದಿಸಿಕೊಂಡರು. 'ಸರ್ಟಿಫಿಕೇಟ್ ಆಫ್ ಅಡ್ವಾನ್ಸ್ ಸ್ಟಡೀಸ್' ಸ್ಪೆಷಲೈಜೇಷ್ನ ಇನ್ ಸೈನ್ಸ್ ಟೀಚಿಂಗ್'–ಗಳು ಇವರ ಇನ್ನಿತರ ವಿಶೇಷ ಜ್ಞಾನಾನುಭವಗಳಾದುವು. ಇಲ್ಲಿ ವಿದ್ಯಾಭ್ಯಾಸ ಮಾಡುವ ಕಾಲದಲ್ಲಿ ಶ್ರೀಯುತರು ಪಾಶ್ಚಾತ್ಯ ರಾಷ್ಟ್ರಗಳ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ, ಶಿಕ್ಷಣ ತಜ್ಞರನ್ನು ಭೆಟಿಮಾಡಿ ಶೈಕ್ಷಣಿಕ ಮೂಲ್ಯಗಳ ಬಗೆಗೆ ಚರ್ಚಿಸಿ ಅಪಾರ ಅನುಭವ ರಾಶಿಯನ್ನು ವೈಗೂಡಿಸಿಕೊಂಡರು. ಮಾತೃಭೂಮಿಗೆ ಹಿಂದಿರುಗುವಾಗ ಕೇಂಬ್ರಿಡ್ಜ್, ಆಕ್ಸ್‌ಫರ್ಡ್‌ಗಳಂಥ ಜಗತ್ಪ್ರಸಿದ್ಧ ವಿಶ್ವವಿದ್ಯಾನಿಲಯಗಳನ್ನೂ ಇನ್ನಿತರ ಅನೇಕ ಶಿಕ್ಷಣ ಸಂಸ್ಥೆಗಳನ್ನೂ ಸಂದರ್ಶಿಸಿದರು. ಫ್ರಾನ್ಸಿನಿಂದ ಇಟಲಿಗೆ ಬಂದು ನೇಪಲ್ಸ್ ನಗರದ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ ಈಜಿಪ್ಟ್ ಮಾರ್ಗವಾಗಿ ಮಾತೃಭೂಮಿಗೆ ಬಂದರು. ಪ್ರಥಮತಃ ಡಿ.ಪಿ.ಐ. ಆಫೀಸಿನಲ್ಲಿ ಸೀನ್ನಿಯರ್ ಅಸಿಸ್ಟೆಂಟ್ ಡಿ. ಪಿ. ಐ. ಆಗಿ ನೇಮಕಗೊಂಡು ೧೯೬೪ರವರೆಗೆ ಕೆಲಸಮಾಡಿದರು. ವಿಶಾಲ ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಬದಲಾವಣೆಗಳಾಗುವುದು ಅನಿವಾರ್ಯವಾಗಿದ್ದ ಈ ಕಾಲದಲ್ಲಿ ಶ್ರೀಯುತರ ಪ್ರತಿಭಾ ಪೂರ್ಣ ಸೇವೆ ವಿದ್ಯಾಇಲಾಖೆಗೆ ಅವಶ್ಯವೂ, ಅನಿವಾರ್ಯವೂ ಆಗಿತ್ತು.


1965ರಿಂದ 68ನೆಯ ಇಸ್ವಿಗಳವರೆಗೆ ಶ್ರೀಯುತರು ಚಿತ್ರದುರ್ಗ ಜಿಲ್ಲೆಯ ಡಿ. ಇ. ಓ. (ಜಿಲ್ಲಾ ಎಜ್ಯುಕೇಷನಲ್ ಆಫೀಸರ್) ನೇಮಿಸಲ್ಪಟ್ಟರು. ಈ ಸೇವಾವಧಿಯನು ಯಶಃಪೂರ್ಣವಾಗಿ ಮಾಡಿಮುಗಿಸಿದ ಮೇಲೆ ತಾ॥ 1–7–70ನೆಯ ಇಸ್ವಿಯವರೆಗೆ ಬೆಂಗಳೂರಿನಲ್ಲಿರುವ ಎಜ್ಯುಕೇಷನಲ್ ರೀಸರ್ಚ್ ಬ್ಯೂರೋದಲ್ಲಿ ಡೆಪ್ಯುಟಿ ಡೈರೆಕ್ಟರರಾಗಿ ಸೇವೆಸಲ್ಲಿಸಿದರು. ಈ ಅವಧಿಯ ಶ್ರೀಯುತರ ಪರಿಶ್ರಮ ವಿಶೇಷ, ಅನೇಕ ಪಠ್ಯಪುಸ್ತಕಗಳು, 'ಗೈಡ್‌ಬುಕ್'ಗಳು ಹೊರಬರಲು ಕಾರಣರಾದರು. 1–7–70ರಿಂದ ಶ್ರೀಯುತರು ರಾಜ್ಯದ ಸೆಕೆಂಡರಿ ಪರಿಕ್ಷಾಮಂಡಳಿಯ ಕಾರ್ಯದರ್ಶಿಯಾಗಿ ನೇಮಕಗೊಂಡು ಎರಡು ವರ್ಷಗಳು ಸೇವೆ ಸಲ್ಲಿಸಿ, ಅಲ್ಲಿಂದ ಮುಂದೆ 13–10–73ರವರೆಗೆ ಬೆಂಗಳೂರು ವಿಭಾಗದ ಜಾಯಿಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷ್ನ ಆಗಿ ಯಾವ ಸದ್ದುಗದ್ದಲವಿಲ್ಲದೆ ಯಶಃಪೂರ್ಣಕಾರ್ಯ ಸಾಧಿಸಿದರು. ತಾ॥ 13–10–73ರಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ವಿದ್ಯಾಭ್ಯಾಸ ವಿಭಾಗದ ಮುಖ್ಯ ನಿರ್ದೇಶಕರಾಗಿ [ಅಡಿಷನಲ್ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷ್ನ] ಮುಂದುವರಿಯುತ್ತಿರುವ ಶ್ರೀಯುತರ ಜವಾಬ್ದಾರಿ ಎಂದಿಗಿಂತ ಇಂದು ಅಧಿಕಗೊಂಡಿದೆ. ರಾಜ್ಯದ ಪ್ರಾಥಮಿಕ ಶಿಕ್ಷಣ ಕ್ಷೇತ್ರ ವಿಂದು ಪ್ರತ್ಯೇಕಗೊಂಡಿದೆ. ಆ ಕ್ಷೇತ್ರದಷ್ಟು ಸಮಸ್ಯೆ ಇನ್ನಾವ ಕ್ಷೇತ್ರದಲ್ಲೂ ಇರಲಾರದು, ಸಮಸ್ತಶಿಕ್ಷಣಕ್ಷೇತ್ರಕ್ಕೂ ಮೂಲ ತಳಹದಿಯಾಗಿ ರಾಜ್ಯದ ಮೂಲೆಮೂಲೆ ಹಳ್ಳಿಪಳ್ಳಿಗಳವರೆಗೆ ಹರಡಿರುವ ಸಹಸ್ರ ಸಹಸ್ರ ಸಂಖ್ಯೆಯ ಶಾಲೆಗಳು, ಲಕ್ಷಾಂತರ ಉಪಾಧ್ಯಾಯರುಗಳೇ ಮೊದಮೊದಲಾದವರ ಸಮಸ್ಯೆಗಳನ್ನು ಪರಿಹರಿಸಿ, ಅಲ್ಲಿ ಯಶಸ್ಸಾಧನೆಮಾಡುವ ಹೊಣೆಗಾರಿಕೆ ಹೊತ್ತ ಶ್ರೀ ಎಂ. ಸಿ. ಮುನಿಸ್ವಾಮಿಯವರ ಪ್ರತಿಭೆ, ಕಾರ್ಯಕೌಶಲ, ವಿನಯ, ಮೃದು ಸ್ವಭಾವದ ನಡೆನುಡಿಗಳಿಂದ ಕೂಡಿದ ಇವರು ಸಾಧಿಸಬೇಕಾದ ಸಾಧನೆ ಪರ್ವತದಷ್ಟಿದೆ. ನಿಷ್ಠಾವಂತ ಶಿಕ್ಷಣತಜ್ಞ ಮತ್ತು ಸೋಲರಿಯದ ಸಾಹಸಿ ಎನಿಸಿದ ಇವರು ಕರ್ತವ್ಯಪ್ರಜ್ಞೆಯ ಆಳಗಲಕ್ಕಿಳಿದ ವ್ಯಕ್ತಿ. ಆದುದರಿಂದ ಇಂಥ ಸಮಸ್ಯಾತ್ಮಕ ಗುರುತರ ಜವಾಬ್ದಾರಿಯ ಭಾರವಾದ ನೊಗವನ್ನು ಹೊತ್ತು ನಿಂತಿದ್ದಾರೆ. ಅವರಿಗೆ ತಮಗೊಪ್ಪಿಸಿದ ಕಾರ್ಯವನ್ನು ನಿರ್ವಹಿಸಬಲ್ಲ ತಾಳ್ಮೆ, ದೂರದರ್ಶಿತ್ವ, ಶೈಕ್ಷಣಿಕ ಅನುಭವಗಳು, ಸತತ ಪರಿಶ್ರಮ ಜೀವನಾನುಭವಗಳು ಹುಟ್ಟುಗುಣಗಳಾಗಿವೆ. ಇಂಥ ಶ್ರೀ ಎಂ. ಸಿ. ಮುನಿಸ್ವಾಮಿಯವರು ತಮ್ಮ ಕರ್ತವ್ಯದಲ್ಲಿ ಯಶಸ್ವಿಗಳಾಗುತ್ತಾರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಉದ್ಭಟದೇವ

— ಎಂ. ಚಂದ್ರಶೇಖರ, ಎಂ.ಎ.

ಭೂಮಿಯಲ್ಲಿ ಒಂದು ಪುರವು ರಂಜಿಸುತ್ತಿತ್ತು. ಆ ಊರಿನಲ್ಲಿ ಇದ್ದವರೆಲ್ಲರು ಶಿವಭಕ್ತರು. ಅವರಲ್ಲೆ ಒಬ್ಬ ವಿಶೇಷವಾದ ಭಕ್ತನಿದ್ದನು. ಅವನ ಹೆಸರು ಉದ್ಭಟದೇವ. ಅವನು ಯಾವಾಗಲೂ ಶಿವಪೂಜೆಯಲ್ಲಿ ಆಸಕ್ತ. ಅವನ ಮನಸ್ಸೆಲ್ಲ ಶಿವಮಯ. ಕರ್ಣಂಗಳೆಲ್ಲ ಶಿವನ ಉಪಕರಣಗಳು. ಅವನ ಹೃದಯವೇ ಶಿವನ ಸಜ್ಜೆವನೆ. ಅವನ ಪ್ರಾಣವೇ ಶಿವಲಿಂಗ. ಅವನು ಇರುಳು ಹಗಲು ಶಿವಪೂಜೆ ಮಾಡುತ್ತಿದ್ದ. ಅವನ ನೋಟ ಶಿವನಲ್ಲಿ; ಕೂಟ ಶಿವನಲ್ಲಿ; ಮಾಟ ಶಿವನಲ್ಲಿ; ಬೇಟೆ ಶಿವನಲ್ಲಿ. ಅವನು ಹಾಡುವುದೆಲ್ಲಾ ಶಿವಸ್ತೋತ್ರ ಅವನು ಮಾಡುವುದೆಲ್ಲಾ ಪೂಜಾ ಸ್ತೋತ್ರ. ನೆನೆವುದೆಲ್ಲಾ ಪರಮ ಧ್ಯಾನ. ಹೀಗೆ ಅವನು ಸತತವೂ ಶಿವಾನಂದದಲ್ಲಿದ್ದನು. ಅವನ ಹೆಂಡತಿ ಶಿವಪೂಜಾಸಕ್ತೆ. ಗಂಡಹೆಂಡಿರು ತನುವೆರಡು ಒಂದೇ ಜೀವದಂತಿದ್ದರು. ಅವರಿಬ್ಬರು ಸದಾ ಸುಖದಲ್ಲಿದ್ದರು. ಅವರು ಪಗಡೆಯನ್ನಾಡುವುದರಲ್ಲಿ ಪ್ರವೀಣ್ಯತೆ ಗಳಿಸಿದ್ದರು. ಉತ್ಸಾಹದಿಂದ ಆಡುತ್ತಿದ್ದರು. ಆಟದ ಮಧ್ಯೆ ಶಿವಜ್ಞಾನಿ ಉದ್ಭಟದೇವ ಸಂತೋಷದಿಂದ ನಕ್ಕರೆ ಇವಳು ಸುಯ್ಯುವಳು, ಆಮೋದದಿಂದ ಮುನಿಯುವಳು. ಪಗಡೆಯಾಡುವ ಹಾಸನ್ನು ಕೆಳಗಿಡುವಳು. ಲೇಸಾಯ್ತು ಆಟ ಎನ್ನುತ್ತ ನುಡಿಯುವಳು. ಈ ರೀತಿಯಲ್ಲಿ ಅವರಿಬ್ಬರು ಹಾಸ್ಯ ಪರಿಹಾಸ್ಯ ಮಾಡುತ್ತಿದ್ದರು. ಉದ್ಭಟದೇವನು ಮಾಡುವ ಹಾಸ್ಯ ಒಂದೊಂದು ಸಾರಿ ಅಪಹಾಸ್ಯವಾಗುತ್ತಿತ್ತು. ಆಗ ಅವನ ಹೆಂಡತಿ 'ನನ್ನಲ್ಲಿ ಏತರ ಕುಂದನ್ನು ಕಂಡಿರಿ, ಅಪಹಾಸ್ಯದ ಹುಸಿನಗೆ ಏಕೆ ? ಎಂದು ಕೇಳುವಳು'. ನಿನ್ನ ಕಾರಣದಿಂದ ನಾನು ನಗಲಿಲ್ಲ. ಎನ್ನಯ ಶರಣರ ಸಂಘವನ್ನು ನೆನಪು ಮಾಡಿಕೊಂಡು ನಕ್ಕೆ ಎಂದು ಹೇಳುವನು. "ಸೌರಾಷ್ಟ್ರ ದೇಶದಲ್ಲಿ ಓಹಿಲದೇವನಿದ್ದಾನೆ. ಅವನು ಶ್ರೇಷ್ಠ ಶಿವಭಕ್ತ. ಅವನ ಶಿವಭಕ್ತಿ ಹಿಮಾಲಯ ಪರ್ವತದಷ್ಟು ದೊಡ್ಡದು. ಅವನ ಪರಮೇಶ್ವರನ ಭಕ್ತಿ ಹೋಲಿಕೆಗೆ ನಿಲುಕದ್ದು. ಒಂದು ಸಾರಿ ಒಬ್ಬನೇ ದೇಸಿಗನಂತೆ ಶಿವನನ್ನು ನೋಡಲು ಹೋದನು. ಶಂಕರನ ಕರುಣೆಯನ್ನು ಪಡೆಯಲು ಹೋದನು. ಆಗ ಭಾರಿ ಗಂಟೆಯನ್ನು ಹೊಡೆದನು. ಅದನ್ನು ಅವನ ನಂಟರು ಇಷ್ಟರೆಲ್ಲಾ ನೋಡಿದರು. ಶಿವದರ್ಶನಕ್ಕೆ ಹೋದ ಇವನು ಬಾರಿಸಿದ ಗಂಟೆಯ ಧ್ವನಿಯನ್ನು ಅವರೆಲ್ಲರೂ ಕೇಳಿದರು. ಕೇಳಿ ನಸುನಕ್ಕರು. ಅವರೆಲ್ಲರೂ ಕಟಕಿಯ ಮಾತುಗಳನ್ನಾಡಿದರು." ಈ ಕಥೆಯನ್ನು ನೆನೆಪುಮಾಡಿಕೊಂಡು ನನಗೆ ನಗು ಬಂತು ಎಂದು ಹೇಳಿದನು. ಈ ಕಥೆಯನ್ನು ಕೇಳಿ ಉದ್ಭಟದೇವನ ಹೆಂಡತಿ ನಸುನಕ್ಕಳು. ಆ ಪುರವು ಸಮೇತ ಎಲ್ಲರೂ ಸ್ವರ್ಗಕ್ಕೆ ಹೋಗುವುದಾದರೆ ಅವರ ನಗೆಯು ಸಾರ್ಥಕವಾಗುತ್ತದೆ." ಎಂದಳು ಶಿವಾಲಯದಲ್ಲಿ ಕುಳಿತಿದ್ದ ಎಲ್ಲರೂ ಹೀಗೆ ನಗಬಹುದೇ ಅವನನ್ನು ಅಣಕಿಸಬಹುದೇ ? ಮಾತನಾಡಿ ಅಣಕಿಸಿದರೆ ಏನು ಬಂತು. ? ನೂತನ ಗುಣವನ್ನು ತೋರಬೇಕು ಎಂದು ಹೇಳಿದಳು. ಈ ಮಾತನ್ನು ಕೇಳುತ್ತಲೆ ಶಿವಭಕ್ತನು ಕೋಪಗೊಂಡನು. ಘುಡು ಘುಡಿಸಿದನು. "ಶಿವಭಕ್ತಿಗೆ ಈ ಪುರವನ್ನ ಎತ್ತಿಕೊಂಡು ಹೋಗುವುದು ದೊಡ್ಡದಲ್ಲ" ಎಂದನು. "ಭೂಮಿಯವರೆಲ್ಲ ಆಶ್ಚರ್ಯಪಡುವಂತೆ ನಾನು ಎತ್ತಿಕೊಂಡು ಹೋಗುತ್ತೇನೆ" ಎಂದನು. "ನಾಡಿದ್ದು ಸೋಮವಾರ. ಆ ಸೋಮವಾರದ ದಿನವೇ ಹೀಗೆ ಮಾಡಬೇಕೆಂದು ಆ ಧೀರನು ಮನಸ್ಸು ಮಾಡಿದನು. ಆದರೆ ಅವನ ಹೆಂಡತಿಯು ಅಣಕವಾಡುತ್ತಲೇ ಇದ್ದಳು. ಆದರೆ ಇವನು ನಿರ್ಧರಿಸಿದನು. "ಪುರಕ್ಕೆ ಪುರವನ್ನೆ ತೆಗೆದುಕೊಂಡು ಹೋಗುತ್ತಾನಂತೆ ಉದ್ಭಟದೇವ, ಇದು ಭೂಮಿಯಲ್ಲಿ ವಿಚಿತ್ರವಾದ ಸುದ್ದಿ" ಎಂದು ಎಲ್ಲರೂ ಮಾತನಾಡಿದರು. ಈ ಸುದ್ಧಿಯನ್ನು ಕೇಳಿ ಬಹಳ ಜನ ದಿಕ್ಕುಗೆಟ್ಟರು. ಆದರೆ ಅವನ ಹೆಂಡತಿಯು ಸಂಭ್ರಮಪಟ್ಟಳು. ಜನಗಳೆಲ್ಲ ಆ ಊರಿಗೆ ಬಂದು ತುಂಬಿಕೊಂಡರು. ಕಾರಣ "ನಾವೆಲ್ಲರೂ ಶಿವಗಣಗಳಾಗುತ್ತೇವೆ"ಂದು ಅವರು ಆಸೆ ಮಾಡಿದರು. ಪಾಪಿಗಳೆಲ್ಲಾ ಅಲ್ಲಿಗೆ ಬಂದರು. ನಿಷ್ಪಾಪಿಗಳೆಲ್ಲಾ ಅಲ್ಲಿ ಸೇರಿದರು. ತಾಪತ್ರಯದಿಂದ ಸಾಯುವವರೆಲ್ಲಾ ಅಲ್ಲಿ ಸೇರಿದರು. ಈ ಸುದ್ದಿಯನ್ನು ಕೇಳಿದವರೆಲ್ಲಾ ಅಲ್ಲಿ ಸೇರಿದರು. ಈ ರೀತಿಯಲ್ಲಿ ಆ ಊರಿನಲ್ಲಿ

ಜನಗಳು ಸೇರಿದರು. ಇದನ್ನೆಲ್ಲಾ ಕಂಡ ಸತಿಯು ಸಂಭ್ರಮಪಟ್ಟಳು. ಹೀಗೆ ಅವಳ ಮಾತುಗಳು ಅಲ್ಲಿ ತುಂಬಿರಲು ಆ ಊರಿನವರೆಲ್ಲ ಕೈಲಾಸಕ್ಕೆ ಹೋಗಲು ಸಿದ್ಧರಾದರು. ಅವರನ್ನು ಬೆನ್ನು ಹತ್ತಿದ ಪಾಪ ಕರ್ಮಗಳನ್ನು ನಿವಾರಿಸಿಕೊಳ್ಳಲು ಯತ್ನಿಸಿದರು. ಭಕ್ತರೆಲ್ಲಾ ಅಲ್ಲಿ ಸೇರಿದರು. ಭಕ್ತರಿಗೆ ಸಿಗುವುದು ಮುಕ್ತಿ ಇಲ್ಲವೆ ನಿರಾಶೆ ಆಗಿದ್ದವು. ಈ ಕೆಲಸದಿಂದ ಉದ್ಭಟದೇವನು ಎರಡರಲ್ಲಿ ಒಂದನ್ನು ಸಾಧಿಸುವವನಿದ್ದನು. ಆಗ ಅವನ ಹೆಂಡತಿ ಉದ್ಭಟನ ಹತ್ತಿರಕ್ಕೆ ನಡೆದು ಬಂದಳು. "ಇದೋ ಸೋಮವಾರ ಬಂದುಬಿಟ್ಟದೆ. ಜನಗಳೆಲ್ಲಾ ಸೇರಿ ಬಿಟ್ಟಿದ್ದಾರೆ; ತಡಮಾಡದೆ ನಮ್ಮನ್ನೆಲ್ಲ ಕೈಲಾಸಕ್ಕೆ ಕರೆದುಕೊಂಡು ಹೋಗಿ" ಎಂದು ಹೇಳಿದಳು. ಈ ಮಾತುಗಳನ್ನು ಕೇಳಿದ ಉದ್ಭಟದೇವನು ಅಲ್ಲೇ ಇದ್ದ ಶಿವಾಲಯದೊಳಕ್ಕೆ ಪ್ರವೇಶ ಮಾಡಿದನು. ವಿಭೂತಿಯನ್ನು ಧರಿಸಿಕೊಂಡನು. ರುದ್ರಾಕ್ಷಿಗಳನ್ನು ಸೂಡಿಕೊಂಡನು. ಶಿವಲಿಂಗಕ್ಕೆ ಅಭಿಷೇಕವನ್ನು ಮಾಡಿದನು. ಹೊಸ ಹೂವುಗಳಿಂದ ಪೂಜೆಮಾಡಿದನು. ಧೂಪಾರತಿಗಳನ್ನು ಬೆಳಗಿದನು. ದೀಪಾರತಿಗಳನ್ನು ಬೆಳಗಿದನು. ಶಿವನನ್ನು ಹೊಗಳಿದನು. ಪ್ರೀತಿಯಿಂದ ಅವನಿಗೆ ಆರೋಗಿಸಲು ಬಡಿಸಿದನು. ಆರೋಗಣೆಯಾದಮೇಲೆ ತಾಂಬೂಲವನ್ನು ಕೊಟ್ಟನು. ಆಗ ಬಹಳ ಸಲುಗೆಯಿಂದ ಹತ್ತಿರದಲ್ಲಿ ಕುಳಿತನು. ಶಿವಲೀಲೆಯನ್ನು ನೋಡುತ್ತಾ ಪುಳಕಗೊಂಡನು. ಶಿವಮೂರ್ತಿಯ ವರ್ಣನೆಯನ್ನು ಹಾಡಿನಲ್ಲಿ ತೋಡಿಕೊಂಡನು. ಶಿವನ ಜಡೆಮುಡಿಗಳಿಗೆ ಒಂದು ಪದ್ಯವನ್ನು ಕಟ್ಟಿದನು. ಪುರದವರೆಲ್ಲ "ಶಿವ ಶಿವಾ" ಎಂದು ಆ ಪದ್ಯವನ್ನು ಹೇಳಿದರು. ನರ ಲೋಕಕ್ಕೆಲ್ಲ ಅದ್ಭುತ ಎನ್ನುವಂತೆ ಹೇಳಿದರು. ಶಿವನನ್ನು ಜಡೆಯಿಂದ ಹಿಡಿದು ಉಗುರಿನವರೆಗೂ ಹಾಡುಗಳಲ್ಲಿ ಹೊಗಳಿದನು. ಜನಗಳೂ ಇವನ ಹಾಡುಗಳನ್ನು ಹೇಳಿದರು. ಒಂದೊಂದು ಪದ್ಯಕ್ಕೂ ನೂರು ಯೋಜನಗಳವರೆಗೆ ಆ ಊರಿಗೆ ಊರೇ ಮೇಲಕ್ಕೆದ್ದಿತು. ಒಂದೊಂದು ಪದ್ಯಕ್ಕೂ ನೂರು ನೂರು ಯೋಜನದಷ್ಟು ದೂರ ಪುರವು ಮೇಲಕ್ಕೆ ಏಳುತ್ತಿದೆ. ನೋಡುವವರಿಗೆ ಇದು ಆಶ್ಚರ್ಯ ಆಗುತ್ತಿದೆ. ಆ ಊರಿಗೆ ಊರೇ ಹರಿಗೋಲಿನಂತಿತ್ತು. ಬೇಗ ಬೇಗ ಮೇಲಕ್ಕೆ ಏರುತ್ತಿತ್ತು. ಉದ್ಭಟನು ಆ ಊರು ಎಂಬ ಹರಿಗೋಲನ್ನು ದಾಟಿಸುವ ಅಂಬಿಗನಂತಿದ್ದನು. ಗಗನವೇ ಸಮುದ್ರದಂತೆ ಇತ್ತು. ಶಿವನ ಜಡೆಯಿಂದ ಅವನ ಶ್ರೀ ಚರಣದವರೆಗೆ ನೂರು ಪದ್ಯಗಳನ್ನು ಕಟ್ಟಿದನು. ಇದು ಹೋಗುತ್ತಿರುವ ರೀತಿ ಉದ್ಭಟದೇವನ ಹೆಂಡತಿಗೂ ಅರ್ಥವಾಗಲಿಲ್ಲ. ಹೀಗೆ ಕ್ರಮೇಣ ಮಧ್ಯಾಹ್ನ ಆಯಿತು. ಆಗ ಅವನ ಹೆಂಡತಿಯು "ಎಲ್ಲಿ ನಿಮ್ಮ ಭಾಷೆ ? ಸಂಜೆಯಾಗುತ್ತಾ ಬಂತಲ್ಲ" ಎಂಬ ರೀತಿಯಲ್ಲಿ ನಕ್ಕಳು. ಆಗ ಉದ್ಭಟನು "ಮೇಲಕ್ಕೆ ನೋಡು" ಎಂದನು. ಮೇಲಕ್ಕೆ ನೋಡಿದರೆ ಬೆಳ್ಳಿಯ ಬೆಟ್ಟದ ಹತ್ತಿರಕ್ಕೆ ಬಂದುಬಿಟ್ಟಿದ್ದಾರೆ ! ಗಗನದಲ್ಲಿ ಮೇಲೆದ್ದ ಪುರ ಕೈಲಾಸವನ್ನು ಸೇರಿತು. ಕೈಲಾಸಪುರ ದ್ವಾರದ ಮುಂದೆ ಪುರವು ಬಂದಿಳಿಯಿತು. ಅಲ್ಲಿ ಶಿವ ಪಾರ್ವತಿಯರಿದ್ದರು. ಉದ್ಭಟದೇವನು ಬಂದನು. ಶಿವನಿಗೆ ನಮಸ್ಕರಿಸಿದನು. ಶಿವನು ಅವನನ್ನು ಅಪ್ಪಿಕೊಂಡನು. ನಂದೀಶ್ವರನಿಗೆ ಅವನನ್ನು ತೋರಿಸಿದನು. "ಹೀಗೆ ಪುರಸಹಿತ ಬಂದವರುಂಟೇ ? ಹೆಂಡತಿಯ ಮಾತನ್ನು ಸಲ್ಲಿಸಿದವರುಂಟೇ ?" ಎಂದು ಅವನನ್ನು ಎಲ್ಲರೂ ಹೊಗಳಿದರು. ಅವನಿಗೆ ಗಣಪದವಿಯನ್ನು ಕೊಟ್ಟರು. ಅವನು ಶಿವನ ಜೊತೆಗೆ ಕೈಲಾಸದಲ್ಲಿ ಸುಖವಾಗಿದ್ದನು.



ಮನುಷ್ಯ ಸಾಹಿತ್ಯ ಪ್ರೇಮವುಳ್ಳವನಾಗಬೇಕು. **ಸಾಹಿತ್ಯ,** ಜೀವನಕ್ಕೆ ಆನಂದ ಕೊಡುವುದು, ಒಲವು ಕೊಡುವುದು. ಸಾಮಾನ್ಯ ಜನರ ಯೋಗ ಸಾಧನೆಯ ಸುಲಭ ಮಾರ್ಗ ಸಾಹಿತ್ಯ. ಸಾಹಿತ್ಯ ಎಂದರೆ ಅಶ್ಲೀಲ ಸಾಹಿತ್ಯವಲ್ಲ. ಉದಾತ್ತ ವಸ್ತುಗಳನ್ನೊಳಗೊಂಡ ಸದ್ಗ್ರಂಥಗಳು ಎಂದರ್ಥ. ನಮ್ಮ ದೇಶದಲ್ಲಿ ಪ್ರತಿಭಾವಂತ ಕವಿಗಳು ಆಗಿ ಹೋಗಿದ್ದಾರೆ. ಹಿಂದಿನಕಾಲದ ಉದ್ದಾಮ ಸಾಹಿತಿಗಳ ಸಂಖ್ಯೆಗೂ ಇಂದಿನ ಸಾಹಿತಿಗಳ ಸಂಖ್ಯೆಗೂ ಹೋಲಿಸಿದರೆ ನಿರಾಶೆಯುಂಟಾಗದಿರದು. ಸಾಹಿತ್ಯ ಕ್ಷೇತ್ರದಲ್ಲಿಯೂ ಇತ್ತೀಚೆಗೆ ಜಾತಿ, ಮತ, ಪಂಗಡಗಳ ರಾಜಕೀಯ ತಲೆಹಾಕಿ ಕಲುಷಿತ ವಾತಾವರಣ ಏರ್ಪಟ್ಟಿರುವುದು ತುಂಬ ಶೋಚನೀಯವಾದ ಅಂಶ. ಸಾಹಿತ್ಯವೂ ದೇಶ ಕಟ್ಟುವುದರಲ್ಲಿ ಒಂದು ಮೈಲಿಗಲ್ಲು ಎಂಬುದನ್ನು ನಾವು ಮರೆಯಬಾರದು.

—ಶಿವಕುಮಾರವಾಣಿ ಗ್ರಂಥದಿಂದ. (83)

(5ನೇ ಪುಟದಿಂದ ಮುಂದುವರೆದಿದೆ.)

ಥಾಸಿಯಲ್ಲಾದುದು ಅಭೂತಪೂರ್ವ. ಅರಮನೆಗಳು ನಾಮಾವಶೇಷವಾದ ಮೇಲೆ ಗುರುಮನೆಗಳು ಈ ಕಾರ್ಯ ಮಾಡಿ ಶರಣರ ಅಮೂಲ್ಯ ಭಾವಾವಿಷ್ಟ ಕೃತಿಗಳ ಬಗೆಗೆ ಜನತೆಯನ್ನು ಬಡಿದೆಬ್ಬಿಸುವಂತಿದ್ದ ಈ ಮೆರವಣಿಗೆ ಮಧ್ಯಾಹ್ನ ಮೂರು ಘಂಟೆಗೆ ಮಹಾ ಮಂಟಪದಿಂದ ಹೊರಟಿತು. ಆನೆಯ ಮೇಲೆ ವ್ಯಾಸಪೀಠವನ್ನಿರಿಸಿ ಅದರ ಮೇಲೆ ಬಸವಾದಿ ಶಿವಶರಣರ ವಚನ ಗ್ರಂಥಗಳು, ದೇವಕವಿ ವಿರಚಿತ ಮರುಳಸಿದ್ಧ ಕಾವ್ಯ, ಆನೆಗೋಡಿನ ರೇವಣಸಿದ್ಧ ಕವಿ ವಿರಚಿತ ಮರುಳಸಿದ್ಧ ಸಾಂಗತ್ಯಗಳೇ ಮೊದಲಾದ ಗ್ರಂಥಗಳನ್ನಿರಿಸಲಾಗಿತ್ತು. ಮೆರವಣಿಗೆ ಲಕ್ಷೋಪಲಕ್ಷ ಜನಗಳ ಗಮನವನ್ನು ಸೆಳೆದುದೊಂದು ದಿವ್ಯಪರಂಪರೆಯ ದ್ಯೋತಕವಾಗಿತ್ತು.

ತರಳಬಾಳು ಹುಣ್ಣಿಮೆಯ ಮುಕ್ತಾಯ ಸಮಾರಂಭ

ತಾ. ೨೮–೧–೭೪ರಿಂದ ಜರಗಿದ ತರಳಬಾಳು ಹುಣ್ಣಿಮೆಯ ವೈಭವಪೂರ್ಣ ಕಾರ್ಯಕ್ರಮಗಳು ಶ್ರೀಶ್ರೀ ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳವರು ತಾ. ೬–೨–೭೪ರ ಪೌರ್ಣಿಮಾ ದಿನದಂದು ಏರಿದ ಸಿಂಹಾಸನ ಕಾರ್ಯಕ್ರಮಗಳೊಡನೆ ಲಕ್ಷೋಪಲಕ್ಷ ಭಕ್ತಸಂದೋಹ ಜಯಕಾರದೊಡನೆ ಮುಕ್ತಾಯಗೊಂಡವು. ಆ ದಿನ ಮಧ್ಯಾಹ್ನ ೨–೩೦ ಘಂಟೆಯ ಸಮಯಕ್ಕೆ ಹೆಬ್ಬಾರ ಶ್ರೀ ವೈಷ್ಣವ ಸಭಾ ಭವನದಿಂದ ಶ್ರೀಗಳವರ ಅಡ್ಡಪಲ್ಲಕ್ಕಿಯ ವೈಭವೋಪೇತ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಹೊರಟಿತು. ರಾಷ್ಟ್ರದ ನಾನಾ ಭಾಗಗಳಿಂದ ಆಗಮಿಸಿದ ಭಕ್ತ ಸಂದೋಹ ಅರ್ಧಮೈಲುದ್ದವಾಗಿತ್ತು. ಈ ಅತ್ಯಂತಾಕರ್ಷಕ ಉತ್ಸವದಲ್ಲಿ ಶ್ರೀ ಸಿದ್ಧವೀರಪ್ಪನವರೇ ಮೊದಲಾದ ಮುಖಂಡರು ಪಾಲ್ಗೊಂಡಿದ್ದರು. ಅಲಂಕೃತವಾದ ಆನೆ, ಕುದುರೆ, ಛತ್ರಿ, ಚಾಮರ, ಶಿವನಾಮ ಸ್ಮರಣೆಮಾಡುತ್ತಿದ್ದ ಭಕ್ತ ಸಂದೋಹ, ವಾದ್ಯಗೋಷ್ಠಿ, ಡೊಳ್ಳು, ಕಹಳೆ, ಕರಡಿ ಮಜಲು, ನಂದೀಧ್ವಜ ಮತ್ತು ಗಣವೇಷಧಾರಿಗಳಾದ ಬ್ಯಾಂಡ್‌ನವರ ಆಕರ್ಷನ ಉಡುಪು ಒಂದೊಂದೂ ನಯನ ಮನೋಹರವಾಗಿದ್ದವು.

ಈ ಅಭೂತಪೂರ್ವ ಉತ್ಸವ ನಗರದ ನಾಗರಿಕರನ್ನು ಮುಗ್ಧಗೊಳಿಸಿತು. ಹಿರಿಯೂರಿನ ಕಲಾವಿದನೇಕರು ಜಾನಪದ ನೃತ್ಯ, ಗೋಲಮಾಲ ನೃತ್ಯದ ಸೊಗಸುಗಾರಿಕೆಯನ್ನು ವ್ಯಕ್ತಪಡಿಸಿದರು. ಟ್ರಾಕ್ಟರ್ ಮೇಲಿದ್ದ ವಿಶ್ವಬಂಧು ಮರುಳಸಿದ್ಧರು, ಪ್ರಭುದೇವರು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ ಹರಳಯ್ಯ, ಮಧುವರಸ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ ಮುಂತಾದ ಶರಣ ಶರಣೆಯರ ಬೃಹತ್ ವರ್ಣ ಚಿತ್ರಗಳು ಜನತೆಯಲ್ಲಿ ಮಧುರಬಾಂಧವ್ಯದ ಅಂಕುರಾರ್ಪಣೆ ಮಾಡುತ್ತಿದ್ದವು. ಈ ರೀತಿಯ ಮೆರವಣಿಗೆ ನಗರದಲ್ಲಿ ಹಿಂದೆಂದೂ ಆಗಿರಲಿಲ್ಲವೆಂದೇ ಅನೇಕ ವೃದ್ಧರ ಉದ್ಗಾರವಾಗಿತ್ತು. ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಾಗಿ 6–30 ಘಂಟೆಗೆ ಸರಿಯಾಗಿ ಸರ್ವಜ್ಞ ಮಂಟಪಕ್ಕೆ ಬಂದನಂತರ ಜಗದ್ಗುರುಗಳವರು ತರಳಬಾಳು ಪೀಠಾರೋಹಣ ಮಾಡಿದರು. ರಾಜ್ಯದಮುಖ್ಯ ಮಂತ್ರಿಗಳಾದ ಶ್ರೀ ದೇವರಾಜಅರಸು, ಶ್ರೀ ಕೆ. ಹೆಚ್ ಪಾಟೀಲ್ ಮೊದಲಾದ ಮಂತ್ರಿಮುಖಂಡರು ಆಗಮಿಸಿ ಗೌರವ ಸಲ್ಲಿಸಿದರು. ಪ್ರಥಮತಃ ಮಹದೇವ ಬಣಕಾರ ಅವರಿಂದ ಸ್ವಾಗತವಾಯಿತು. ಮುಖ್ಯಮಂತ್ರಿಗಳು ಮಾತನಾಡಿ,— "ಧರ್ಮಸೂತ್ರವನ್ನು ಪುನರುಜ್ಜೀವಿಸುವ ಮಹಾ ಹೊಣೆಗಾರಿಕೆ ಧರ್ಮಗುರುಗಳಿಗೆ ಸೇರಿದ್ದು. ಅದನ್ನು ರಾಜಕೀಯ ವ್ಯಕ್ತಿಗಳಿಂದ ಸಾಧಿಸುವುದು ಸಾಧ್ಯವಿಲ್ಲದ್ದು. ಆದ್ದರಿಂದ ಧರ್ಮಗುರುಗಳು ಧರ್ಮದ ಪುನರುಜ್ಜೀವನಕ್ಕೆ ಹೆಣಗಿ ಮಾನವ ಮಾನವರಲ್ಲಿ ಅಸಮಾನತೆಯನ್ನು ಹೋಗಲಾಡಿಸುವ ಮಹಾಕಾರ್ಯ ತತ್ಪರರಾಗಬೇಕು" ಎಂದು ತಿಳಿಸಿದರು. ಶ್ರೀ ಕೆ. ಹೆಚ್ ಪಾಟೀಲರು ಶ್ರೀಗಳವರನ್ನು ಮಹಾಶಕ್ತಿಯೆಂದು ಬಣ್ಣಿಸುತ್ತ, "ಕತ್ತಲಲ್ಲಿರುವ ಮಾನವರನ್ನು ಬೆಳಕಿನತ್ತ ಒಯ್ಯಲು ಶ್ರೀಗಳು ಶ್ರಮಿಸುತ್ತಿದ್ದಾರೆಂದೂ ಇಂದು ಸ್ವಾಮಿಜಿಯವರ ಹಿತವಚನ ರಾಜಕೀಯಕ್ಕೂ ಬೇಕಾಗಿದೆ"ಯೆಂದು ತಿಳಿಸಿದರು. ಇದೇ ಸಮಯದಲ್ಲಿ ಶ್ರೀಗಳವರಿಗೆ ಸಾಹಿತ್ಯ ಸಂಸ್ಕೃತಿ ಪ್ರಚಾರಕ್ಕೆಂದು ಶ್ರೀ ಗಂಗಾಧರಪ್ಪನವರು 1 ಲಕ್ಷ ರೂಪಾಯಿ ಕಾಣಿಕೆಯನ್ನರ್ಪಿಸಿದರು. ಶ್ರೀ ಬಸವರಾಜಪ್ಪನವರು ಭಕ್ತಕೋಟಿಯವರ ಪರವಾಗಿ ಶ್ರೀಗಳವರಿಗೆ ಮಾನಪತ್ರ ಸಮರ್ಪಿಸಿದರು. ಜಗದ್ಗುರುಗಳವರ ಆಶೀರ್ವಚನ, ಕಲ್ಯಾಣ ಗೀತೆಯೊಡನೆ ಕಾರ್ಯಕ್ರಮಗಳು ಮುಕ್ತಾಯಗೊಂಡವು. ಈ ರೀತಿಯ ವೈಭವೋಪೇತವಾದ ಉತ್ಸವವನ್ನು ನೆರವೇರಿಸಿಕೊಟ್ಟ ಶ್ರೀ ಶ್ರೀ ತರಳಬಾಳು ಜಗದ್ಗುರುಗಳವರಿಗೆ ಸಿದ್ಧಗಂಗಾ ಪತ್ರಿಕೆ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸಿದ್ಧಗಂಗಾ

Cover Printed at Karnataka Co-operative Publishing House, Ltd., Bangalore

Reg. No. RN/17139/69